ಸಂಪುಟ ೪ ಸಂಚಿಕೆ ೧-೨

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ ಮತ್ತು ಜುಲೈ, ೧೯೮೦

ಲೇಖಕರಿಗೆ ಸೂಚನೆಗಳು

ಮಾನವಿಕ ಭಾರತಿ

೧ ಮಾನವಿಕ ವಿಷಯುಗಳಿಗೆ ಸಂಬಂಧಿಸಿದ ಸ್ವತಂತ್ರ, ಹಾಗೂ ಅನುವಾದಿತ ಲೇಖನಗಳನ್ನು 'ಮಾನವಿಕ ಭಾರತಿ'ಯಲ್ಲಿ ಪ್ರಕಟಿಸಲಾಗುವುದು. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

೨ ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು. ಲೇಖಕರು ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಬೇಕು. ಲೇಖನವನ್ನು ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೩ ಲೇಖನಕ್ಕೆ ಅವಶ್ಯವಾದ ಚಿತ್ರಗಳಿದ್ದರೆ ಅವನ್ನು ಕಲಾಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಯಿಸಿ ಕಳುಹಿಸಬೇಕು.

೪ ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

೫ ಲೇಖಕರಿಗೆ, ಅಚ್ಚಾದ ಅವರ ಲೇಖನದ ೨೫ ಪ್ರತಿಗಳನ್ನು ಒದಗಿಸಲಾಗುವುದು. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

೬ ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಮಾನವಿಕ ಭಾರತಿ', ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬಯಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೭ ಮಿಕ್ಕ ವಿವರಗಳಿಗೆ **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩** ಇವರಿಗೆ ಬರೆಯಬೇಕು.

ಮಾನವಿಕ ಭಾರತಿ

(ಷಾಣ್ಮಾಸಿಕ ಪತ್ರಿಕೆ)

೧೯೮೦

ಸಂಪುಟ : ೪ ಸಂಚಿಕೆ : ೧-೨

(ಸಂಯುಕ್ತ ಸಂಚಿಕೆ)

ಪ್ರಧಾನ ಸಂಪಾದಕರು

ಡಾ. ಎ. ಎಂ. ರಾಜಶೇಖರಯ್ಯ

ಸಹಾಯಕ ಸಂಪಾದಕರು

ಡಾ. ಕೆ. ಜಿ. ಗುರುಮೂರ್ತಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ ಮತ್ತು ಜುಲೈ, ೧೯೮೦

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಷಾಣ್ಮಾಸಿಕ ಪತ್ರಿಕೆ

ಸಂಪುಟ : ೪ ಸಂಚಿಕೆ : ೧-೨

ಜನವರಿ ಮತ್ತು ಜುಲೈ, ೧೯೮೦

(ಸಂಯುಕ್ತ ಸಂಚಿಕೆ)

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩.

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ
ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ-೫೮೦ ೦೦೩

ಈ ಸಂಚಿಕೆಯ ಲೇಖಕರು

** **ಅ. ಸುಂದರ**
ಪ್ರಾಧ್ಯಾಪಕರು
ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ
ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಎಸ್. ಎಲ್. ಶಾಂತಕುಮಾರಿ**
ಅಧ್ಯಾಪಿಕೆ
ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ
ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಮೋಹನ ಹೆಗಡೆ**
ಬಂಡಗದ್ದೆ
ಅಂಚೆ-ಕೆಳದಿ (ಶಿವಮೊಗ್ಗ ಜಿಲ್ಲೆ)

** **ಎಸ್. ಎನ್. ಶಿವರುದ್ರಸ್ವಾಮಿ**
ಅಧ್ಯಾಪಕರು.
ಇತಿಹಾಸ ವಿಭಾಗ·
ಕಲ್ಪತರು ಕಾಲೇಜ, ತಿಪಟೂರು, ೫೭೨ ೨೦೨.

** **ಕೆ.ಜಿ. ಗುರುಮೂರ್ತಿ**
ಪ್ರಾಧ್ಯಾಪಕರು
ಮಾನವ ಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

** **ವ್ಹಿ.ಜಿ. ಪೂಜಾರ**
ಅಧ್ಯಾಪಕರು.
ಕನ್ನಡ ವಿಭಾಗ. ಶ್ರೀ ಪ್ರಭು ಕಾಲೇಜು. ಸುರಪುರ.

** **ಎಚ್ ಬಸಣ್ಣ**
ಪ್ರಿನ್ಸಿಪಾಲ
ಎಸ್. ಬಿ. ರೂರಲ್ ಕಾಲೇಜ, ಹಡಗಲಿ.

** **ಟಿ.ಆರ್. ಚಂದ್ರಶೇಖರ**
ಅರ್ಥ ಶಾಸ್ತ್ರ ವಿಭಾಗ
ವಿಜಯ ನಗರ ಕಾಲೇಜ, ಹೊಸಪೇಟೆ. (ಜಿಲ್ಲಾ-ಬಳ್ಳಾರಿ)

** ಎಂ.ಸಿ. ಕೊಡ್ಲಿ
ಅಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** ವಸಂತ ಪಾಟೀಲ
ಅಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** ಎನ್.ಎಸ್. ಹಿರೇಮಠ
ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** (ದಿವಂಗತ) ಬಿ. ಕುಪ್ಪುಸ್ವಾಮಿ.
ನಿವೃತ್ತ ಮನಃಶಾಸ್ತ್ರ ಪ್ರಾಧ್ಯಾಪಕರು
ಬೆಂಗಳೂರು.

** ಎಚ್.ವ್ಹಿ. ನಾಗೇಶ
ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಜೆ. ಎಸ್. ಎಸ್. ಕಾಲೇಜ, ಧಾರವಾಡ.

** ಎಸ್.ಎ. ಅವರಾದಿ
ಸಂಶೋಧನ ಸಹಾಯಕರು
ಮಾನವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

** ಎನ್.ಕೆ. ಕಡೆತೋಟದ
ಪ್ರಾಧ್ಯಾಪಕರು, ಮಾನವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

** ಎ.ಎಸ್ ಧರಣೇಂದ್ರಯ್ಯ
ಪ್ರಾಧ್ಯಾಪಕರು, ಮನಃಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

ಅನುಕ್ರಮಣಿಕೆ

ಉಪ್ಪಿನ ಪಟ್ಟಣದ ಮೂರು ಗಮನಾರ್ಹ ಶಿಲ್ಪಗಳು

● ಅ. ಸುಂದರ

ಉಪ್ಪಿನ ಪಟ್ಟಣ ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿ ಒಂದು ಸಣ್ಣ ಹಳ್ಳಿ. ಇಲ್ಲಿ ಒಂದು ಗಣಪತಿ ದೇವಾಲಯವು ಇದೆ. ಇಲ್ಲಿ ಈಗಲೂ ಶಾಸ್ತ್ರ ವಿಧಿಗನುಗುಣವಾಗಿ ಪೂಜಾದಿಗಳು ನಡೆಯುತ್ತವೆ.

ಗಣೇಶ ಮೂರ್ತಿಯು ಅಪರೂಪ ಮಾದರಿಯದು. ಕುಳಿತ ಭಂಗಿಯಲ್ಲಿದೆ, ದ್ವಿಭುಜ, ಕೆಲವೇ ಆಭರಣಗಳ ಅಲಂಕರಣ. ಒಂದು ಕೈಯಲ್ಲಿ ಮೊಗ್ಗು ಸಹಿತ ಕಮಲದ ದಂಟು. ಮತ್ತೊಂದು ಕೈಯಲ್ಲಿ ಮೋದಕ ಪಾತ್ರೆಯ ತಳದ ಉದ್ದನೆಯ ದಂಡವನ್ನು ಹಿಡಿದಿದ್ದಾನೆ. ಮಾದರಿಯಲ್ಲಿ ಹಟ್ಟಿಯಂಗಡಿ[೧] (ಕುಂದಾಪುರ ತಾ. ದಕ್ಷಿಣಕನ್ನಡ ಜಿ.)ಯ ಗಣೇಶ ಮೂರ್ತಿಯನ್ನು ಹೋಲುತ್ತದೆ. ದಿ. ಗುರುರಾಜ ಭಟ್ಟರು[೨] ಈ ಶಿಲ್ಪದ ಬಗ್ಗೆ ಬೇರೆಡೆಯಲ್ಲಿ ವರದಿ ಮಾಡಿದ್ದಾರೆ.

ಈ ಭಾಗದಲ್ಲಿಯ ನನ್ನ ಪುರಾತತ್ವ ಅನ್ವೇಷಣೆಯಲ್ಲಿ, ಇಲ್ಲಿ ಒಂದು ಅಪೂರ್ವ ಬ್ರಹ್ಮ ಸ್ತಂಭ, ಎರಡು ಪ್ರಾಚೀನ ಶಿವಲಿಂಗಗಳು (೫–೭ ನೇ ಶತಮಾನ) ಒಂದು ಮಧ್ಯಯುಗದ ಶಿವಲಿಂಗ (ಸು. ೧೦ ನೇ ಶತಮಾನ, ಉತ್ತರ ಭಾಗ), ಇವಲ್ಲದೆ ಒಂದು ಗಣೇಶ ಮತ್ತು ಮಹಿಷಾಸುರ ಮರ್ದಿನಿ ಶಿಲ್ಪಗಳು ದೃಷ್ಟಿಗೆ ಬಿದ್ದವು. ಕೊನೆಯ ಮೂರನ್ನು ಬಿಟ್ಟು ಉಳಿದವುಗಳನ್ನು ನನ್ನ ಹಿಂದಿನ ಒಂದು ಲೇಖನದಲ್ಲಿ[೨] ಸಂಕ್ಷಿಪ್ತವಾಗಿ ವರದಿ ಮಾಡಿದ್ದೇನೆ. ಪಸ್ತುತ ಲೇಖನದಲ್ಲಿ ಗಣೇಶ, ಮಹಿಷಾಸುರಮರ್ಧಿನಿ ಮತ್ತು ಮಧ್ಯಯುಗೀನ ಶಿವಲಿಂಗಗಳ ಬಗ್ಗೆ ವಿವೇಚಿಸಿದ್ದೇನೆ.

ಅಂಡಾಕಾರದ ಪದ್ಮ ಪೀಠದ ಮೇಲೆ ಸುಖಾಸನದಲ್ಲಿ ಕುಳಿತ ಗಣೇಶ ಚತುರ್ಭುಜನಾಗಿದ್ದಾನೆ. ಸ್ಪಷ್ಟವಾಗಿ ನಡುಹಣೆಯ ಮೇಲೆ ಮೂರನೆಯ ಕಣ್ಣು ಇದೆ. ಆದ್ದರಿಂದ ತ್ರಿನೇತ್ರನು. ಕ್ರಮವಾಗಿ ಬಲಗಡೆಯಿಂದ ಕೈಗಳಲ್ಲಿ ದಂತ, ಪರಶು, ಪದ್ಮ ಮೋದಕ ಪಾತ್ರೆ ಇವೆ. ಮೋದಕ ಸಹಿತ ಸೊಂಡಿಲನ್ನು ಮೋದಕ ಪಾತ್ರೆಯ ಮೇಲಿರಿಸಿದೆ.

ಗಣೇಶ (ಚಿತ್ರ ೧; ೧)



ಮೇಲಿನ ಕೈಗಳಲ್ಲಿ ಪರಶು ಮತ್ತು ಅರಳಲಿರುವ ಪದ್ಮವನ್ನು ಮಧ್ಯದ ಎರಡು ಬೆರಳು ಮತ್ತು ಹೆಬ್ಬೆರಳುಗಳಿಂದ ಹಿಡಿದಿದ್ದಾನೆ. ಕಿರೀಟ ಮುಕುಟ, ಭುಜಕೀರ್ತಿ, ತೋಳಬಂದಿ, ಬೆರಳಿಗೆ ಉಂಗುರಗಳು. ಮಣಿಖಚಿತ ಕೈ ಮತ್ತು ಕಾಲ್ಗಡಗಗಳು, ವಕ್ಷಬಂಧ, ತೊಡೆಯುವರೆಗಿನ ಉದ್ದನೆಹಾರ : ಈ ಆಭರಣಗಳನ್ನು ತೊಟ್ಟಿದ್ದಾನೆ. ಮೂರೆಳೆ ಯಜ್ಞೋಪವೀತವನ್ನು ಧರಿಸಿದ್ದಾನೆ. ಧೋತ್ರದ ಮುಂದಿನ ನೆರಿಗೆ ಪೀಠದ ಮೇಲೆ ಇಳಿಬಿದ್ದಿದೆ. ಹಿಂಬದಿಯಲ್ಲಿ ಅಂಡಾಕಾರದ ಪದ್ಮಗಳ ಸಾಲಿನ ಚಿತ್ರದ ಪ್ರಭಾವಳಿಯಿದೆ. ಪೀಠದ ಎಡ ಮುಂಬದಿಯಲ್ಲಿ ಪ್ರಸಾದವನ್ನು ತಿನ್ನುತ್ತಿರುವ ಇಲಿಯಿದೆ.

ಈ ಶಿಲ್ಪದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಕೆಲವು ಅಂಶಗಳಿವೆ. ಮೂರನೇ ಕಣ್ಣನ್ನು ಸ್ಪಷ್ಟವಾಗಿ ತೋರಿಸಿರುವುದು, ಹೊಟ್ಟೆಯ ಮೇಲೆ ನಾಗಬಂಧ ಇಲ್ಲದಿರುವದು, ಪ್ರಭಾವಳಿಯ ಮೇಲೆ ಸಾಮಾನ್ಯವಾಗಿರುವ ಸ್ತಂಭಗಳು ಹೊತ್ತ ಮಕರ ತೋರಣದ ಬದಲು ಕೇವಲ ಪದ್ಮದಳಗಳ ಸಾಲನ್ನು ಬಿಡಿಸಿರುವುದು, ಹಾಗೂ ಪರಶು ಪದ್ಮಗಳ ಸೆಟೆದಿರುವ ಕಿವಿಗಳ ಶೈಲಿ.

ಮಹಿಷಾಸುರ ಮರ್ಧಿನಿ (ಚಿತ್ರ ೧ : ೨)




ಚೌಕೋನದ ಪದ್ಮ ಪೀಠದಮೇಲೆ ಮಹಿಷಾಸುರ ಮರ್ಧಿನಿಯು ಬೋರಲಾಗಿ ಅಡ್ಡಬಿದ್ದ ಮಹಿಷಾಸುರನ ಬೆನ್ನಿನ ಮೇಲೆ ಎರಡು ಪಾದಗಳಿಂದ ಮೆಟ್ಟಿ ನಿಂತಿದ್ದಾಳೆ. ತ್ರಿನೇತ್ರಳು, ಚತುರ್ಭುಜಳು. ಮುಂಬದಿ ಬಲಗೈಯಲ್ಲಿಯ ತ್ರಿಶೂಲದಿಂದ ಅಸುರನ ಬೆನ್ನನ್ನು ಇರಿದಿದ್ದಾಳೆ. ಹಿಂದಿನ ಬಲ ಎಡಗೈಗಳಲ್ಲಿ ಶಂಖ ಚಕ್ರಗಳಿವೆ. ಮುಂದಿನ ಎಡಗೈಯಿಂದ ಕೋಣನ ತಲೆಯುಳ್ಳ ಅಸುರನ ಮುಸುಡಿಯನ್ನು ಮೇಲಕ್ಕೆತ್ತಿ ಅವುಕಿ

ಹಿಡಿದಿದ್ದಾಳೆ. ಕಿರೀಟಮುಕುಟ, ಮಣಿಖಚಿತ ಕಂಠಾಹಾರ, ಚೆನ್ನವೀರ, ಭುಜಕೀರ್ತಿ, ಮಣಿ ಖಚಿತ ಬಳೆಗಳಿಂದ ಅಲಂಕೃತಳಾಗಿದ್ದಾಳೆ. ಪಾದದವರೆಗೆ ವಸ್ತ್ರತೊಟ್ಟಿದ್ದು ಮೊಣಕಾಲಿಂದ ಮೇಲಕ್ಕೆ ಅಡ್ಡನೆರಿಗೆಯುಳ್ಳ ಮತ್ತೊಂದು ಚಿತ್ರಿತ ವಸ್ತ್ರ ಪಟ್ಟಿಯಿದೆ. ಮುಂದೆ ಗಂಟುಹಾಕಿ ಉದ್ದಕ್ಕೆ ನೆರಿಗೆ ಬಿಡಲಾಗಿದೆ. ನೀಳವಾದ ತಲೆಯಕೂದಲು ಸುರಳಿ ಸುರಳಿಯಾಗಿ ಭುಜದಮೇಲೆ ಹರಡಿದೆ. ಅಸುರನು ಕೈಗಳಲ್ಲಿ ಗುರಾಣಿ, ಕತ್ತಿಯನ್ನು ಹಿಡಿದಿದ್ದಾನೆ. ಮೂರ್ತಿಯ ಹಿಂಬದಿಯಲ್ಲಿ ರೇಖಾ ಚಿತ್ರಿತ ವರ್ತುಳ ಪ್ರಭಾವಳಿಯಿದೆ. ಇತರ ಅಸುರರು ಮತ್ತು ದೇವಿಯ ವಾಹನವಾದ ಸಿಂಹವನ್ನು ತೋರಿಸಿಲ್ಲ.

ಅಸುರನು ಬೋರಲಾಗಿ ಬಿದ್ದಿರುವುದು, ಅವನ ಬೆನ್ನನ್ನು ದೇವಿಯು ತನ್ನ **ಎರಡೂ ಪಾದಗಳಿಂದ ತುಳಿದಿರುವುದು,** ಇತರ ಅಸುರರು ಮತ್ತು ಸಿಂಹವಾಹನ ವನ್ನು ತೋರಿಸದಿರುವುದು, ಶಂಖ ಮತ್ತು ಚಕ್ರಗಳ ಪ್ರಭಾವಳಿಯ ಮೇಲಿನ ರೇಖಾ ಚಿತ್ರದ ಮಾದರಿ ಮತ್ತು ಪೀಠದ ಮೇಲಿನ ಪದ್ಮ ಚಿತ್ರಶೈಲಿ ತುಂಬ ಗಮನಾರ್ಹ ವಾಗಿದೆ.

ಆಕರ್ಷಕ ಅಂಗಸೌಷ್ಠವತೆ, ಹಿಂದಿನ ಕೈಗಳಲ್ಲಿ ವಸ್ತುಗಳನ್ನು ಹಿಡಿದಿರುವ ರೀತಿ, ಆಭರಣಗಳ ಮತ್ತು ಪ್ರಭಾವಳಿಯ ಶೈಲಿಯು ಇವೆರಡು ಶಿಲ್ಪಗಳು ಒಬ್ಬ ಶಿಲ್ಪಿ ಯಿಂದಲೆ ರೂಪಿತಗೊಂಡವೆಂದು ಸೂಚಿಸುತ್ತವೆ. ಪ್ರಭಾವಳಿ ಮತ್ತು ಮೂರ್ತಿಗಳ ಮಧ್ಯೆ ಸಮನಾಗಿ ಕೊರೆದಿಲ್ಲದಿದ್ದರಿಂದ ಮತ್ತು ದೇವಿಯ ವಸ್ತ್ರದ ಬದಿಯ ಗಂಟನ್ನು ಪೂರ್ತಿಯಾಗಿ ಕೆತ್ತಿಲ್ಲದಿದ್ದರಿಂದ ಶಿಲ್ಪಗಳು ಸ್ವಲ್ಪಮಟ್ಟಿಗೆ ಅಪೂರ್ಣವಾಗಿವೆ. ತುಲನಾತ್ಮಕವಾಗಿ ಶಿಲ್ಪದ ಶೈಲಿಯಲ್ಲಿ ಸ್ಥಳೀಕ ಪ್ರಭಾವವೂ ಇದೆ.


ಏಕ ಶಿಲೆಯ ಲಿಂಗ (ಚಿತ್ರ ೩)





ಪ್ರಭಾವಳಿಗಳ ಆಕಾರ, ಇವುಗಳಮೇಲಿನ ಪದ್ಮದಳಗಳ ಮೂರ್ತಿಗಳ ಲಕ್ಷಣಗಳು ಮತ್ತು ಶೈಲಿಗಳ ಮೇಲಿಂದ ಈ ಶಿಲ್ಪಗಳು ೯ ನೇ ಶತಮಾನದ ಆದಿಭಾಗದವುಗಳೆಂದು ಹೇಳಬಹುದು.

ಏಕ ಶಿಲೆಯ ಲಿಂಗ (ಚಿತ್ರ ೩:೩)



ಊರ ಹೊರಗಡೆ ಸ್ವಲ್ಪ ದೂರದಲ್ಲಿ ಒಂದು ಶಿವಲಿಂಗವು ಇದೆ. ಇದು ಒಂದೇ ಕಲ್ಲಿನದು . ಚೌಕೋನದ ಪೀಠವು ಮೂರು ಅಡ್ಡ ಮಡಿಕೆಗಳಿಂದ ಬಿಡಿಸಲಾಗಿದೆ. ಕೆಳಗಿನ ಮಡಿಕೆ ಪದ್ಮದಳಗಳಿಂದ ಅಲಂಕೃತವಾಗಿದೆ. ಇದು ಒಂದು ಅಪರೂಪದ ಲಕ್ಷಣ. ಪದ್ಮದ ಜಗಲಿಯ ಮೇಲೆ ಲಿಂಗ ಪೀಠವಿದ್ದಂತೆ ತೋರಿಸಿದೆ. ಪೀಠದ ಮೇಲ್ಭಾಗದಲ್ಲಿ ವರ್ತುಳಾಕಾರದ ತಗ್ಗು ಇದೆ. ಪೀಠಕ್ಕೆ ತಕ್ಕಂತೆ ತಗ್ಗುಕೂಡ ಚೌಕೋನವಾಗಿರಬೇಕಿತ್ತು. ಲಿಂಗದ ಮೇಲಿನ ಬ್ರಹ್ಮಸೂತ್ರವು ಸಮಕಾಲೀನ ಲಿಂಗಗಳ ಮೇಲಿನ ಬ್ರಹ್ಮಸೂತ್ರಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಮುಂಭಾಗದಲ್ಲಿ ಬಾಣಾಕಾರದಲ್ಲಿದೆ. ಮಧ್ಯ ನಾಡಿಯನ್ನು ಪೀಠದ ತನಕ ಬಿಡಿಸಿಲ್ಲ. ಈ ಲಿಂಗದ ಶೈಲಿಯು ಇದರ ಕಾಲಮಾನ ಸುಮಾರು ೧೦ ನೇ ಶತಮಾನದ ಉತ್ತರ ಭಾಗದ್ದೆಂದು ಸೂಚಿಸುತ್ತದೆ.

ಶಿಲ್ಪಗಳ ವೈಶಿಷ್ಟ್ಯ ಮತ್ತು ಮಹತ್ವ:

ಸಾಮಾನ್ಯವಾಗಿ ಗಣೇಶ ಶಿಲ್ಪದಲ್ಲಿ ಸು. ೯ ನೇ ಶತಮಾನದ ಮಧ್ಯಭಾಗದಿಂದ ಹೊಟ್ಟೆಯಮೇಲೆ ನಾಗಬಂಧವು ಕಾಣಿಸಿಕೊಳ್ಳುತ್ತದೆ. ಮೂಷಕ ವಾಹನವು ಅಪರೂಪವಾಗಿ ಸುಮಾರು ೧೧ ನೇ ಶತಮಾನದಿಂದ ತೋರಿಸಿರುವುದನ್ನು ಶಿಲ್ಪಗಳಲ್ಲಿ ಕಾಣಬಹುದು. ಮೇಲಿನ ಶಿಲ್ಪದಲ್ಲಿ ನಾಗಬಂಧವಿಲ್ಲ ಆದರೆ ಮೂಷಕ ವಾಹನವಿದೆ.

ಮಹಿಷಾಸುರನ ಬೆನ್ನಿನಮೇಲೆ ತನ್ನ ಎರಡೂ ಪಾದಗಳನ್ನು ಮೆಟ್ಟಿಯೂರಿ ನಿಂತಿರುವುದು ಮಹಿಷಮರ್ದಿನಿ ಶಿಲ್ಪದ ವಿಶಿಷ್ಟತೆಯಾದರೆ, ನಾಗಬಂಧವಿಲ್ಲದೆ ಮೂಷಕ

ವನ್ನು ಮಾತ್ರ ತೋರಿಸಿರುವುದು ಗಣೇಶ ಶಿಲ್ಪದ ವೈಶಿಷ್ಟ್ಯ. ಎರಡನೆಯದು ಈ ಪ್ರದೇಶದಲ್ಲಿಯ ಗಣೇಶ ಶಿಲ್ಪ ವಿಕಾಸದ ಒಂದು ಹಂತವನ್ನು ತೋರಿಸುತ್ತದೆ ಎಂದು ಕಾಣುತ್ತದೆ. ಈ ಭಾಗದ ಪ್ರಾಚೀನ ಗಣೇಶ ಶಿಲ್ಪಗಳಲ್ಲಿ ನಾಗಬಂಧ ಮತ್ತು ಇಲಿ ಇರುವುದಿಲ್ಲ.[೪] ಸುಮಾರು ೯–೧೦ ನೇ ಶತಮಾನದಲ್ಲಿ ನಾಗಬಂಧವು ಕಾಣಿಸಿಕೊಳ್ಳುತ್ತದೆ. ಮೇಲೆ ವರ್ಣಿಸಿದ ಶಿಲ್ಪದಲ್ಲಿ ಇಲಿಯನ್ನು ಮಾತ್ರ ತೋರಿಸಿರುವುದರಿಂದ ಗಣೇಶ ಶಿಲ್ಪದಲ್ಲಿ ಕಾಲಾಂತರದಲ್ಲಿ ಅನುಕ್ರಮವಾಗಿ ಇಲಿ ಮತ್ತು ನಾಗಬಂಧವನ್ನು ಪ್ರತ್ಯೇಕವಾಗಿ ತೋರಿಸಿರುವ ಸಂಪ್ರದಾಯವು ಶುರುವಾಗಿ ಕ್ರಮೇಣ ಸುಮಾರು ೧೨–೧೩ ನೇ ಶತಮಾನದಿಂದ ಇವೆರಡನ್ನು ತೋರಿಸುವ ಪದ್ಧತಿಯು ಬೆಳೆಯಿತೆಂದು ಸದ್ಯಕ್ಕೆ ಹೇಳಬಹುದು.

ಏಕಶಿಲೆಯ ಲಿಂಗವೂ ಗಮನಾರ್ಹವಾಗಿದೆ. ಸಾಮಾನ್ಯವಾಗಿ ಪೀಠ ಮತ್ತು ಲಿಂಗ ಬೇರೆ ಬೇರೆಯಾಗಿದ್ದು ಲಿಂಗವನ್ನು ಪೀಠದಲ್ಲಿ ಜೋಡಿಸಲ್ಪಟ್ಟಿರುತ್ತದೆ. ಆದರೆ ಈ ಶಿವಲಿಂಗದಲ್ಲಿ ಎರಡೂ ಒಂದೇ ಕಲಿನಲ್ಲಿ ಕೆತ್ತಿದ್ದು ಅಪರೂಪದ ಶಿಲ್ಪವಾಗಿದೆ. ಇದೇ ತರಹದ್ದು ನಾನು ನೋಡಿದ್ದರಲ್ಲಿ ಮುಧೋಳಿನಲ್ಲಿ[೫] ಏಕಶಿಲೆಯ ಒಂದು ಶಿವ ಲಿಂಗವಿದೆ.

ಸಾಮಾನ್ಯವಾಗಿ ಲಿಂಗಗಳ ಬಾಣಾಕಾರದ ಬ್ರಹ್ಮಸೂತ್ರ ಸುಮಾರು ೯ ನೇ ಶತಮಾನದ ವರೆಗೂ ಈ ಭಾಗದಲ್ಲಿ ಅಪರೂಪವಾಗಿ ಕಾಣುತ್ತದೆ. ಆದ್ದರಿಂದ ಪ್ರಾಚೀನ ತರಹದ ಬ್ರಹ್ಮಸೂತ್ರವನ್ನು ಸುಮಾರು ೧೧ನೇ ಶತಮಾನದ ಶುರುವಿನವರೆಗೂ ಹೊಸ ಮಾದರಿಗಳೊಡನೆ ಉಳಿದಿತ್ತು ಎಂದು ಹೇಳಬಹುದು.

ಟಿಪ್ಪಣಿಗಳು

೧. ಸುಂದರ, ಅ; ೧೯೭೭. "ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನತಮ ಸಾಂಸ್ಕೃತಿಕ ಅವಶೇಷಗಳು" **ಸುದರ್ಶನ;** ಡಾ. ಟಿ. ಎಂ. ಎ. ಪೈ. ಫೆಲಿಸಿಟೇಶನ್ ವಾಲ್ಯುಂ. ಮುಲ್ಕಿ. ಪುಟ ೧೦೩. ಚಿತ್ರ ೪.

೨. ಗುರುರಾಜ ಭಟ್. ಪಿ; ೧೯೭೫ : **ಸ್ಟಡೀಸ್ ಇನ್ ತುಳುವ ಹಿಸ್ಟ್ರಿ ಅಂಡ್ ಕಲ್ಚರ್**, ಪ್ಲೇಟ್ ೨ (a).

೩. ಸುಂದರ, ಎ; ೧೯೭೫–೭೬ "ಸಮ್ ಇಂಪಾರ್ಟೆಂಟ ಆರ್ಕಿಯಾಲಾಜಿಕಲ್ ಡಿಸ್ಕವರಿಸ್ ಇನ್ ವೆಸ್ಟರ್ನ ಕನ್ನಾಟಕ", ಪುಟ ೧೬, ಪ್ಲೇಟ VI ; 4.

೪. ಸುಂದರ, ಅ; ೧೯೭೫ : "ಕ್ಷೇತ್ರ ಗೋಕರ್ಣ ಮತ್ತು ಇಡಗುಂಜಿಯ ಶಿಲಾಗಣೇಶ ಮೂರ್ತಿಗಳು ಹಾಗು ಗಣೇಶ ಶಿಲ್ಪದ ಪ್ರಾಚೀನತೆ" **ಕರ್ನಾಟಕ ಭಾರತಿ**, ಸಂಕ್ರಮಣ ಸಂಚಿಕೆ, ಪುಟಗಳು ೮೦–೯೧.

೫. ಸುಂದರ, ಎ: ೧೯೭೬ : "ದಿ ಆರ್ಕಿಟೆಕ್ಚುರಲ್ ಆಂಡ್ ಸ್ಕಲ್ಪ್ಚರಲ್ ರಿಮೇನ್ಸ್ ಇನ್ ಮುಧೋಳ್", **ಜರ್ನಲ್ ಆಫ್ ದಿ ಕರ್ನಾಟಕ ಯುನಿವರ್ಸಿಟಿ** (ಸೋಷಿಯಲ್ ಸೈನ್ಸ್‌ಸ್) ವಾಲ್ಯೂಂ XII ಪುಟ ೧-೭, ಪ್ಲೇಟ್ IV, ಚಿತ್ರ ೨.

ಕೃತಜ್ಞತೆ

ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಫೈನಾನ್ಸಿಯಲ್ ಅಸಿಸ್ಟೆನ್ಸ್ ಟು ಯುನಿವರ್ಸಿಟಿ ಟೀಚರ್ಸ್ ಎಂಬ ಯೋಜನೆಯಲ್ಲಿ ದೊರೆತ ಧನ ಸಹಾಯದಿಂದ ಈ ಪ್ರದೇಶದಲ್ಲಿ ಪುರಾತತ್ವ ಅನ್ವೇಷಣೆ ಕೈಗೊಂಡಿದ್ದೆ. ಈ ಅನ್ವೇಷಣೆಯಲ್ಲಿ ಸ್ಥಳಿಕರಾದ ಶ್ರೀ ಉಪಾಧ್ಯಾಯರು ಸಹಾಯಮಾಡಿದ್ದಾರೆ. ನನ್ನ ಲೇಖನದ ಉತ್ತಮ ಪ್ರತಿಯನ್ನು ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರ ಬರೆದು ಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಡಂಬಳದ ದಿನೇಶಾಲಯ

● ಡಾ. ಎಸ್. ಎಲ್. ಶಾಂತಕುಮಾರಿ

ಧಾರವಾಡ ಜಿಲ್ಲೆಯ ಮುಂಡರಗಿ ತಾಲೂಕಿನಲ್ಲಿರುವ ಡಂಬಳವು ಈಗ ಒಂದು ಚಿಕ್ಕ ಊರು. ಹಿಂದೆ ಧರ್ಮವೊಳಲು, ಧರ್ಮಪುರವೆಂದು ಕರೆಯಲ್ಪಡುತ್ತಿದ್ದ ಇದು ಒಂದು ಹೆಸರಾಂತ ಧಾರ್ಮಿಕ ಕ್ಷೇತ್ರವಾಗಿತ್ತು. ಸದ್ಯದಲ್ಲಿ ದೊಡ್ಡಬಸಪ್ಪ ದೇವಾಲಯ, ಡಬ್ಬಗುಡಿ ಎಂದು ಪ್ರಚಲಿತದಲ್ಲಿರುವ ಪ್ರಾಚೀನ ಮಾಧವೇಶ್ವರ ದೇವಾಲಯ, ಸಿದ್ಧಲಿಂಗೇಶ್ವರ ದೇವಾಲಯ, ಹನುಮಂತ ದೇವಾಲಯ ಮತ್ತು ಇದರ ಪ್ರಾಕಾರದಲ್ಲೇ ಹಿಂಬದಿಯಲ್ಲಿರುವ ಈಶ್ವರ ದೇವಾಲಯಗಳು ಇಲ್ಲಿವೆ. ಇಲ್ಲಿ ದೊರೆತಿರುವ ಸುಮಾರು ಹತ್ತು ಶಾಸನಗಳಿಂದ ಹಿಂದೆ ಇಲ್ಲಿ ಬೌದ್ಧ ವಿಹಾರ, ಜಿನಬಸದಿ, ಭೋಗ ದೇವಾಲಯ, ಅಜ್ಜಮೇಶ್ವರ ದೇವಾಲಯ ಮುಂತಾದ ದೇವಾಲಯಗಳಿದ್ದ ಬಗ್ಗೆ ತಿಳಿದುಬರುತ್ತದೆ.

ಈ ದೇವಾಲಯಗಳಲ್ಲದೆ ಹಿಂದೆ ಇಲ್ಲಿ ಇನ್ನೂ ಒಂದು ದೇವಾಲಯವಿದ್ದಿತೆಂಬುದು ಇತ್ತೀಚೆಗೆ ನಾನು ಇಲ್ಲಿ ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದೆ. ಅದೇ ದಿನೇಶಾಲಯ ಅಥವಾ ಸೂರ್ಯದೇವಾಲಯ. ಇಲ್ಲಿ ಹೊಸದಾಗಿ ದೊರೆತ ಒಂದು ಶಾಸನ[೧]ದಿಂದ ಈ ವಿಚಾರವು ತಿಳಿದುಬಂದಿದೆ. ಈ ಶಾಸನವು ನಾಲ್ಕೂ ಕಡೆ ಒಡೆದಿದ್ದು, ಶಾಸನದ ಮಧ್ಯದ ಅಲ್ಪ ಭಾಗ ಮಾತ್ರ ಉಳಿದಿದೆ. ಸುದೈವದಿಂದ ಈ ಅಲ್ಪಭಾಗದಲ್ಲಿಯೇ ಈ ಮಹತ್ವದ ಅಂಶವು ಅಡಗಿದೆ. ಈ ಶಾಸನದ ಪಾಠ ಹೀಗಿದೆ—

೧) ....ಸ್ಥಳನಿವೇಸ..........
೨) ....ಮೂನೂರುಮದ........

---

೧. ಡಂಬಳದಲ್ಲಿಯ ಪ್ರಾಚ್ಯವಸ್ತು ಸರ್ವೇಕ್ಷಣದವರು ಡಂಬಳದಿಂದ ಲಕ್ಕುಂಡಿಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಕಳುಹಿಸಲ್ಪಟ್ಟವೆಂದು ಹೇಳಲಾದ ಶಾಸನ ಮುಂತಾದವನ್ನು ಅಭ್ಯಸಿಸುವಾಗ ಈ ಶಾಸನವು ದೊರೆಯಿತು.

೩) ....ದ ಪದ್ಮೋಪಜೀವಿ ಶ್ರೀಮ.....
೪) ....ವರ್ಮ್ಮಳ ಕೀರ್ತ್ತಿ ದಾನಿ ಬಳಗಾಚಿಕುಳ......
೫) ....ಲೆಂಕನಾಕಿಗಂ ಧರ್ಮ್ಮದಮೇರು ಮೇರು ....
೬) ....ದೆನಲ್ಪೊರೆಪೆತ್ತುದು ಭಾಷ್ಕ (ಸ್ಕ)ರಾಲಯ॥ ಜನ....
೭) ....ನೆಸುಣ್ಬಂಗೆಡೆಗೊಣ್ಡ ಕಲ್ವೆಸದಿನತ್ಯುತ್ತುಂಗವಮಂ ಭಕ್ತ...
೮) .....ವಮಂ ಪುಣ್ಯಾತ್ಮಕಂ **ಲೆಂಕನಾಗ** ನ ಭಾಭಾಸುರ ಕೀರ್ತ್ತಿವು....
೯) ...ನ್ನತಿ..ಳ್ದಿದ ಮಹೋನ್ನತಿಯಿಂ ಗೆಲೆ ಚೆಲ್ವಿನೇಳ್ಗೆ.....
೧೦) ....ಸೆ **ಲೆಂಕನಾಗದೇವಂ** ನಯಶಾಳಿ **ಧರ್ಮ್ಮಪುರ** ಮಧು....
೧೧) ....ನಾರ್ಜ್ಜಿಸಿದ ಕೀರ್ತ್ತಿಯ ಮೂರ್ತ್ತಿವೊಲೊಪ್ಪಿತೊ....
೧೨) ....ತಾಜಗೆ ಚೆಲ್ವಾಯ್ತು **ಧರ್ಮ್ಮವೋಳಲ್ತ್ತಿಳಕಾಯ....**
೧೩) ....**ಮಾಡಿಸಿದಂ ಮನೋಹರಂ ದಿನೇಶಾವಾಸಮಂ**....
೧೪) ....ಧರಾಭಾಸಮ॥ ಪರಮ ಶ್ರೀಪತಿ ಚ.....
೧೫) ....ಭೂಪತಿ ಯಲ್ಮಹಾಮಹಿಮೆಯ.......
೧೬) ....ದಾ ರತ್ನ ವೈಶ್ಯಾನ್ವಯಾಂಬರಸಿತ....
೧೭) ....ವಿಮಾನದೊಳ್ಸೆಣಸುತುಂ ನಾ.....
೧೮) ....ನ್ನೊದ ಧಮ್ಮರಿಸುತ್ತಿರ್ದ್ದ......
೧೯) ....ವಿಪ್ಪನ್ನೊಪ್ಪಿ, ಕಾ..............
೨೦) ....ರೆಣ್ಬರುವಮಾ.........
೨೧) ....ದಿಂ ಭಾಸ.........

ಮೇಲೆ ಹೇಳಿದಂತೆ ಶಾಸನವು ಒಡೆದಿರುವುದರಿಂದ ಈ ಶಾಸನದ ಕಾಲವಾಗಲಿ ಅಥವಾ ಆಳುವ ಅರಸನಾಗಲಿ ಅಥವಾ ಅರಸು ಮನೆತನ ಮುಂತಾದ ಯಾವದೇ ಬಗೆಗಿನ ವಿವರಗಳು ತಿಳಿದುಬರುವುದಿಲ್ಲ. ಆದರೆ ಅಕ್ಷರಗಳ ಶೈಲಿಸ್ವರೂಪದ ಆಧಾರದ ಮೇಲೆ ಈ ಶಾಸನವು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಆರಂಭದ ಕಾಲಕ್ಕೆ ಅಥವಾ ಹನ್ನೊಂದನೆಯ ಶತಮಾನದ ಅಂತ್ಯಭಾಗಕ್ಕೆ ಸೇರಿದೆ ಎಂದು ಹೇಳಬಹುದಾಗಿದೆ.

ಧರ್ಮ್ಮಪುರ, ಧರ್ಮ್ಮಪೊಳಲಿನ ಹೆಸರನ್ನೊಳಗೊಂಡಿರುವ ಈ ಶಾಸನವು ಲೆಂಕನಾಕಿಗನೆಂಬುವನ ಬಗ್ಗೆ ಹೇಳುತ್ತಾ ಅವನನ್ನು ಧರ್ಮ್ಮದ ಮೇರು ಎಂದು ಬಣ್ಣಿಸಿದೆ. ಇವನನ್ನು ಲೆಂಕನಾಗದೇವನೆಂದೂ ಇಲ್ಲಿ ಹೇಳಲಾಗಿದೆ. ಶಾಸನವು ಒಡೆದಿರುವುದರಿಂದ ಈ ಲೆಂಕನಾಗನು ಯಾರೆಂದು ಸ್ಪಷ್ಟವಾಗುವುದಿಲ್ಲ. ಆದರೂ ಲೆಂಕ ಎಂಬ ಪದವು ಆಪ್ತಸೇವಕ ಎಂಬುದನ್ನು ಸೂಚಿಸುವುದರಿಂದ ಇವನು ಆಳರಸನ ಒಬ್ಬ ಆಪ್ತಸೇವಕನೆಂದು ಹೇಳಬಹುದು. ಈ ಶಾಸನದಲ್ಲಿ ಭಾಸ್ಕರಾಲಯದ ವರ್ಣನೆ

ಹಾಗೂ ಇದರಲ್ಲಿ ಬರುವ **ಮಾಡಿಸಿದಂ ಮನೋಹರಂ ದಿನೇಶಾವಾಸಮಂ** ಎಂಬ ವಾಕ್ಯದಿಂದ ಇಲ್ಲಿ ಒಂದು ಸೂರ್ಯದೇವಾಲಯವಿದ್ದುದು ಸ್ಪಷ್ಟವಾಗುತ್ತದೆ. ಆದರೆ ಶಾಸನವು ಒಡೆದಿರುವುದರಿಂದ ಈ ದೇವಾಲಯದ ಕರ್ತೃ ಯಾರೆಂದು ತಿಳಿದು ಬರುವುದಿಲ್ಲ. ಆದರೆ ಶಾಸನದಲ್ಲಿ ಬರುವ ಲಿಂಕನಾಗನ ವರ್ಣನೆಯನ್ನು ಗಮನಿಸಿದರೆ ಬಹುಶಃ ಇವನೇ ಈ ಆಲಯದ ಕರ್ತೃವಾಗಿರಬಹುದೆಂದು ಊಹಿಸಬಹುದಾಗಿದೆ.

ಈ ಶಾಸನದ ಹೇಳಿಕೆಗೆ ಅನುಗುಣವಾಗಿ ಇಲ್ಲಿ ಇದ್ದಿರಬಹುದಾದ ಸೂರ್ಯನೆಂದು ಹೇಳಬಹುದಾದ ಯಾವ ದೇವಾಲಯವಾಗಲಿ ಅಥವಾ ಅದರ ಅವಶೇಷಗಳಾಗಲಿ ಇಲ್ಲಿ ದೊರೆತಿಲ್ಲ. ಆದರೆ ಸುಮಾರು ಮೂರು ಅಡಿ (ಪ್ರಭಾವಳಿಯೊಂದಿಗೆ) ಎತ್ತರದ ಸೂರ್ಯನ ವಿಗ್ರಹ[೧]ವೊಂದು ಇಲ್ಲಿ ದೊರೆತುದು ಶಾಸನದ ಹೇಳಿಕೆಗೆ ಪುಷ್ಟಿಕೊಡುತ್ತದೆ. ಈ ಮೂರ್ತಿಯ ರಚನೆ, ಅಲಂಕಾರ, ಇತ್ಯಾದಿಗಳನ್ನು ಗಮನಿಸಿದರೆ ಇದು ಹನ್ನೊಂದನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ. ಈ ದೃಷ್ಟಿಯಿಂದ ಈ ಮೂರ್ತಿಯು ಶಾಸನದಲ್ಲಿ ಹೇಳಿದ ಭಾಸ್ಕರಾಲಯದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಮೂರ್ತಿ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಸಮಭಂಗದಲ್ಲಿರುವ ಈ ಮೂರ್ತಿಯು ಶಿಲ್ಪಶಾಸ್ತ್ರಗಳಲ್ಲಿ ಹೇಳಿರುವ ಪ್ರಕಾರ ಕೆತ್ತಿರುವ ಮೂರ್ತಿಯಾಗಿದೆ. ಇದರ ಮುಖ ಭಾಗ ಅಲ್ಪಸ್ವಲ್ಪವಾಗಿ ಕೆತ್ತಿ ಹೋಗಿದ್ದರೂ ಇದರ ಸೌಂದರ್ಯಕ್ಕೆ ಧಕ್ಕೆಯಾಗಿಲ್ಲ. ಮೂರ್ತಿಯು ಶಿಖರದಲ್ಲಿ ಕೆತ್ತನೆ ಕೆಲಸದಿಂದ ಕೂಡಿದ ಕರಂಡ ಮುಕುಟವಿದ್ದು. ತಲೆ ಕೂದಲು ಸುರುಳಿ ಸುರುಳಿಯಾಗಿ ಮೂರ್ತಿಯ ಎರಡೂ ಭುಜಗಳ ಮೇಲೆ ಹರಡಿವೆ. ತಲೆಯ ಹಿಂಬದಿಗೆ ಪ್ರಭಾ ಮಂಡಲವಿದೆ. ಕಿವಿಗಳಲ್ಲಿ ಕರ್ಣಕುಂಡಲಗಳಿದ್ದು ಮೂರ್ತಿಯ ಕುತ್ತಿಗೆಯು ಪದಕ ಮತ್ತು ಹಾರಗಳಿಂದ ಶೋಭಿತವಾಗಿದೆ. ವಕ್ಷದ ಮೇಲೆ ಕುಸುರಿನ ಕೆಲಸದಿಂದ ಕೂಡಿದ ವಕ್ಷ ಬಂಧವಿದೆ. ಯಜ್ಞೋಪವೀತ ಮತ್ತು ವೈಜಯಂತಿ ಮಾಲೆಯಿಂದಲಂಕೃತವಾದ ಈ ಮೂರ್ತಿಯ ನಡುವಿನಲ್ಲಿ ಮೇಖಲಾ ಅಥವಾ ನಡುಪಟ್ಟಿ ಇದೆ.

ಶಾಸ್ತ್ರಗಳಲ್ಲಿ ಹೇಳಿರುವಂತೆ ಸೂರ್ಯನ ಉಡುಪು ತೆಳುವಾಗಿದ್ದು ದೇಹದ ಭಾಗವು ಸ್ಪಷ್ಟವಾಗಿ ಕಾಣಿಸುತ್ತದೆ. ಉಟ್ಟಿರುವ ಉಡಿಗೆಯು ಪಾದಗಳವರೆಗಿದ್ದು ಉಡುಪಿನ ನಿರಿಗೆಗಳ ಕುಚ್ಚುಗಳು ಮೂರ್ತಿಯ ನಡುವಿನ ಎರಡೂ ಬದಿಗೆ ಕಂಡು ಬರುತ್ತವೆ. ಕಾಲುಗಳಲ್ಲಿ ಪಟ್ಟಿಗಳಂತಿರುವ ಅಂದುಗೆಗಳಿದ್ದು ಕಾಲ್ಬೆರಳುಗಳು ಉಂಗುರಗಳಿಂದ ಶೋಭಿತವಾಗಿವೆ.[೨] ಸೂರ್ಯನ ಕಾಲುಗಳ ಬಳಿ ಇಕ್ಕೆಲದಲ್ಲಿ ಗಾಳಿಯ

---

೧. ಇದನ್ನು ಸಹ ಡಂಬಳದಿಂದ ತಂದುದೆಂದು ಹೇಳಲಾಗಿದೆ.

೨. ಸೂರ್ಯನ ಪಾದಗಳ ಕೆಳಗೆ ಕಂಡುಬರುವ ಅರುಣ ಅಥವಾ ರಥಾಶ್ವಗಳನ್ನೊಳಗೊಂಡ ಇವರ ಪೀಠವು ದೊರೆತಿಲ್ಲ.

ಪ್ರತೀಕವಾದ ಸೂರ್ಯನ ಪತ್ನಿಯರಾದ ರಜನಿ, ನಿಕ್ಷುಭರ ಚಿತ್ರಗಳಿವೆ. ತಮ್ಮ ಒಂದೊಂದು ಕೈಯಲ್ಲಿ ಚಾಮರ ಹಿಡಿದು ನಿಂತಿರುವ ಇವರ ಕಿವಿ, ಕತ್ತು, ನಡು, ಕೈಕಾಲು ಹಾಗೂ ಕಾಲ್ಬೆರಳುಗಳು ಆಭರಣಗಳಿಂದ ಅಲಂಕೃತವಾಗಿವೆ.

ಸೂರ್ಯನ ತಲೆಯ ಹಿಂದಿರುವ ಪ್ರಭಾಮಂಡಲಕ್ಕೆ ಸಮನಾಗಿ ಪ್ರಭಾವಳಿಯಲ್ಲಿ ಮಕರಗಳ ಮೇಲೆ ಕುಳಿತ ಉಷಾ-ಪ್ರತ್ಯುಷಾರ ಚಿತ್ರಗಳಿವೆ. ಒಂದು ಕೈಯಲ್ಲಿ ಬಿಲ್ಲು, ಮತ್ತೊಂದು ಕೈಯಲ್ಲಿ ಬಾಣವನ್ನು ಹಿಡಿದಿರುವ ಇವರು ಕತ್ತಲೆಯನ್ನು ಅಟ್ಟುವ ಪ್ರಯತ್ನದಲ್ಲಿರುವಂತಿವೆ. ತಲೆಯ ಮೇಲೆ ಕಿರೀಟ ಧರಿಸಿರುವ ಇವರ ಕಿವಿಗಳಲ್ಲಿ ಕುಂಡಲಗಳು, ಕತ್ತಿನಲ್ಲಿ ಹಾರ, ಕೈಗಳಲ್ಲಿ ಬಳೆಗಳು, ನಡುವಿನಲ್ಲಿ ಪಟ್ಟಿ, ಕಾಲುಗಳಲ್ಲಿ ಅಂದುಗೆಗಳಿದ್ದು ಕಾಣಲು ಇವು ಅತ್ಯಂತ ಸುಂದರವಾಗಿವೆ.

ಉಷಾ-ಪ್ರತ್ಯುಷಾರ ಚಿತ್ರಗಳ ಮೇಲೆ ಪ್ರಭಾವಳಿಯಲ್ಲಿ ಎರಡೂ ಕಡೆಗೆ ದ್ವಾರಪಾಲಕರಾದ ದಂಡ-ಪಿಂಗಳರ ಚಿತ್ರಗಳಿವೆ. ಈ ಚಿತ್ರಗಳು ಅಷ್ಟು ಕಾಣಲು ಸ್ಪಷ್ಟವಾಗಿರದೆ ಕೈಗಳಲ್ಲಿ ಇವರು ಕತ್ತಿ ಹಿಡಿದು ನಿಂತಿರುವಂತೆ ತೋರುತ್ತದೆ. ಇವರ ತಲೆಯ ಮೇಲೆ ಕಿರೀಟವಿದ್ದು, ಕುತ್ತಿಗೆ, ನಡು. ಕೈಕಾಲುಗಳು ಅಭರಣಗಳಿಂದ ಅಲಂಕೃತವಾಗಿವೆ. ಈ ಮೂರ್ತಿಗಳ ಮೇಲುಭಾಗದಲ್ಲಿ, ಪ್ರಭಾವಳಿಯ ಕಮಾನಿನಲ್ಲಿ ಎರಡೂ ಕಡೆಗೆ ನಾಲ್ಕರಂತೆ (ಒಟ್ಟು ಎಂಟು) ಚಿಕ್ಕ ಚಿಕ್ಕ ಚಿತ್ರಗಳಿವೆ. ಮೂರ್ತಿಗಳು ಕಾಣಲು ಸ್ಪಷ್ಟವಾಗಿಲ್ಲವಾದರೂ ಇವು ಅಷ್ಟ ದಿಕ್ಪಾಲಕರ ಚಿತ್ರಗಳೆಂದು ಹೇಳಬಹುದಾಗಿದೆ.

ಇಲ್ಲಿ ಗಮನಾರ್ಹವಾದ ಒಂದು ಅಂಶವೆಂದರೆ—ಶಿಲ್ಪಗಳಲ್ಲಿ ಸಾಮಾನ್ಯವಾಗಿ ಸೂರ್ಯನ ಮೂರ್ತಿಯೊಂದಿಗೆ ರಜನಿ–ನಿಕ್ಷುಭ ಅಥವಾ ದಂಡ–ಪಿಂಗಳ, ಅಥವಾ ಉಷಾ–ಪ್ರತ್ಯುಷಾ ಅಥವಾ ಅಷ್ಟಗ್ರಹಗಳ ಚಿತ್ರಗಳನ್ನು ಕಾಣುತ್ತೇವೆ. ಆದರೆ ಈ ಶಿಲ್ಪದಲ್ಲಿ ರಜನಿ–ನಿಕ್ಷುಭ, ಉಷಾ–ಪ್ರತ್ಯುಷಾ, ದಂಡ–ಪಿಂಗಳ ಮತ್ತು ಅಷ್ಟಗ್ರಹಗಳನ್ನು ಒಟ್ಟಿಗೇ ಕಾಣುವುದು ವಿರಳ. ಕರ್ನಾಟಕದಲ್ಲಂತೂ ಇದು ಅಪರೂಪವೆನ್ನಬಹುದು. ಇದರಿಂದಾಗಿ ಈ ಶಿಲ್ಪವು ಮಹತ್ವಪೂರ್ಣವಾದದ್ದೆಂದು ಹೇಳಬಹುದು.

ಮತ್ತೊಂದು ಗಮನಾರ್ಹವಾದ ಅಂಶವೆಂದರೆ, ಇಲ್ಲಿಯೇ ಇನ್ನೂ ಒಂದು ಸೂರ್ಯನ ವಿಗ್ರಹವು ದೊರೆತಿದ್ದು ಇದರ ಆಕಾರವು ಹೆಚ್ಚು ಕಡಿಮೆ ಮೇಲೆ ವರ್ಣಿಸಲಾದ ಶಿಲ್ಪದಂತೆಯೆ ಇದೆ. ಆದರೂ ಇದರ ಶೈಲಿ, ಆಭರಣಗಳು, ಅಲಂಕಾರಗಳನ್ನು ಗಮನಿಸಿದರೆ ಇದು ಹನ್ನೆರಡನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ. ಉದಾಹರಣೆಗೆ ಈ ಮೂರ್ತಿಯು ಕಾಣಲು, ಮೇಲೆ ವಿವರಿಸಿದ ಮೂರ್ತಿಗಿಂತ ಸ್ವಲ್ಪ ತೆಳುವಾಗಿದ್ದು ಆಭರಣಗಳು ಮತ್ತು ಕೆತ್ತನೆ ಕೆಲಸಗಳು ಮೊದಲನೆಯ ಮೂರ್ತಿಗಿಂತ

ನಾಜೂಕಾಗಿವೆ. ಪ್ರಭಾವಳಿಯಲ್ಲಿ ಕಿಂಡಿಗಳಿದ್ದು ಪ್ರಭಾವಳಿಯು ಗುಂಡಾಕೃತಿಯಲ್ಲಿದೆ. ಆಚೀಚೆ ಪ್ರಭಾವಳಿಯನ್ನು ಹೊತ್ತಿರುವ ಕಂಬಗಳು ಗೆರೆಗಳಿಂದ ಹಾಗೂ ಕೆತ್ತನೆ ಕೆಲಸಗಳಿಂದ ಕೂಡಿವೆ. ಇದು ಮೇಲೆ ವರ್ಣಿಸಲಾದ ಶಿಲ್ಪದಲ್ಲಿ ಅಷ್ಟಾಗಿ ಎದ್ದು ಕಾಣುವುದಿಲ್ಲ. ಬಹುಶಃ ಮೊದಲ ವಿಗ್ರಹವು ಭಗ್ನವಾಗಿ ಪೂಜೆಗೆ ಅನರ್ಹವೆನಿಸಿದಾಗ ಎರಡನೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿರಬಹುದೆಂದು ತೋರುತ್ತದೆ. ಸದ್ಯಕ್ಕೆ ಈಗ ಈ ಮೂರ್ತಿಯೂ ಸಹ ಭಗ್ನ ಸ್ವರೂಪದಲ್ಲಿಯೇ ದೊರೆತಿವೆ.

ಕನ್ನಡ ಪತ್ರಿಕೆಗಳಿಂದ ಜೈನ ಧರ್ಮ ಪ್ರಸಾರ

● ಮೋಹನ ಹೆಗಡೆ

ಜೈನ ಧರ್ಮ ಇಂದು ನಿನ್ನೆಯದಲ್ಲ. ನೂರಾರು, ಸಾವಿರಾರು ವರ್ಷ ಹಳೆಯದು. ಮಹಾವೀರ ಸ್ವಾಮಿಯಿಂದ ಸ್ಥಾಪಿತವಾದ ಪೂಜ್ಯ ಪವಿತ್ರ ಧರ್ಮವಿದು. ಒಂದು ಕಾಲದಲ್ಲಿ ಕೀರ್ತಿಶಿಖರವನ್ನು ಮುಟ್ಟಿದ ಧರ್ಮವಾಗಿತ್ತು. ಅದರ ಸಾಕ್ಷಿಗೆ ಎಂಬಂತೆ ದಕ್ಷಿಣ ಭಾರತದ ಹಾಸನ ಜಿಲ್ಲೆಯ ಶ್ರವಣಬೆಳಗೊಳದಲ್ಲಿ ಔನ್ನತ್ಯದ ದ್ಯೋತಕ ವಾಗಿಯೇ ೫೭ ಅಡಿ ಎತ್ತರದ ಬಾಹುಬಲಿ ಸ್ವಾಮಿಯು ಶಾಂತ, ಉಜ್ವಲ ಮನಸ್ಕನಾಗಿ ನಿಂತಿದ್ದಾನೆ. ಇಂದಿಗೂ ಅಲ್ಲಿ ಜೈನಧರ್ಮ ಪತಾಕೆ ಹಾರಾಡುತ್ತಿದೆ. ಧರ್ಮಮೂಲ ಸ್ರೋತವಾಗಿ ದಕ್ಷಿಣ ಭಾರತದಲ್ಲಿ ಶ್ರವಣಬೆಳಗೊಳ, ಧರ್ಮಸ್ಥಳ, ಹೊಂಬುಜ, ಮೂಡಬಿದ್ರಿ, ಬಾಹುಬಲಿ (ತಾ: ಸೊಲ್ಲಾಪುರ) ಕ್ಷೇತ್ರಗಳು, ಉತ್ತರದಲ್ಲಿ ಅಬೂ, ಪುಂಡರೀಕಗಿರಿ, ಓಸಿಯ, ಗೋರವಾಡ. ನದೋಳ ಮುಂತಾದ ಕ್ಷೇತ್ರಗಳ ಮಹತ್ವ, ಕೀರ್ತಿ, ಕುಗ್ಗಿರದಿದ್ದರೂ ಉಜ್ವಲವಾಗಿಲ್ಲ.

ಜೈನಧರ್ಮ ಜಾಗೃತಿಯುಂಟಾಗಿ, ಶ್ರದ್ಧೆ ಹೆಚ್ಚಿ, ಧರ್ಮಪತಾಕೆ ಹಾರುತ್ತಿರುವಂತೆ, ಅನೇಕ ಪುರಾಣ ಗ್ರಂಥ, ಕಾವ್ಯ, ಧರ್ಮಗ್ರಂಥಗಳೂ, ಪತ್ರಿಕೆಗಳೂ ಈ ದಿಶೆಯಲ್ಲಿ ವಿಜೃಂಭಿಸಿವೆ. ಇವುಗಳ ಮೂಲಕ ಧಾರ್ಮಿಕ ಮನೋಧರ್ಮ ಭಾರತದ ಮೂಲೆ-ಮೂಲೆಯಲ್ಲಿ ಹರಡುತ್ತಿದೆ. ಬೆಳಗುತ್ತಿದೆ ಕಾವ್ಯ, ಗ್ರಂಥಗಳು, ಪ್ರವಚನಗಳು ನಿರೀಕ್ಷಿತ ಪಾತ್ರವಹಿಸಿ ಪರಿಣಾಮ ನೀಡಲಾರವು. ನೀಡಿದರೂ ಕೆಲವರಿಗೆ ಮಾತ್ರ. ಆದರೆ ಪತ್ರಿಕೆಗಳು ನಿಯತವಾಗಿ, ನಿರಂತರವಾಗಿ, ಪುಂಖಾನುಪುಂಖವಾಗಿ ಬರುವದರಿಂದ ಪುನಃಪುನಃ ಜಾಗೃತಿಯನ್ನು ಉಂಟು ಮಾಡುತ್ತವೆ. ಈ ಧಾರ್ಮಿಕ ಪ್ರಸಾರ ಕಾರ್ಯದಲ್ಲಿ ಕೆಲವೇ ಪತ್ರಿಕೆಗಳು ಕರ್ನಾಟಕದಲ್ಲಿ, ಕೆಲವು ಕನ್ನಡೇತರ ನಾಡಿನಲ್ಲಿ ಪಾಲುಗೊಂಡರೂ ಅವುಗಳ ಕಾರ್ಯ ಮಾತ್ರ ಹಿರಿದಾಗಿದೆ. ಇಂಥವೇ ಕೆಲ ಪತ್ರಿಕೆಗಳ, ಕಾರ್ಯ ಸಾಧನೆಯ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

ಶ್ರೀ ಜಿನವಿಜಯ (೧೯೦೫-೬೨), ಬೆಳಗಾವಿ :

ಕಳೆದ ಶತಮಾನದ ೫ನೇ ದಶಕದಿಂದ (ಕ್ರಿ. ಶ. ೧೮೪೩) ೧೯೦೦ರ ವರೆಗೆ ಅನೇಕ ಧರ್ಮೀಯ ತಾತ್ವಿಕ ಕನ್ನಡ ಪತ್ರಿಕೆಗಳು ಹೊರಟಿವೆ. ಆದರೆ ಜೈನ ಧರ್ಮಕ್ಕೆ ಸಂಬಂಧಿಸಿ ದಂತೆ ಯಾವ ಪತ್ರಿಕೆಯ ಹೆಸರೂ ಕಂಡು ಬರುತ್ತಿಲ್ಲ. ಅದ್ದರಿಂದ ಬೆಳಗಾವಿ ಯಿಂದ ದಕ್ಷಿಣ ಮಹಾರಾಷ್ಟ್ರ ಜೈನ ಮಹಾಸಭೆಯ ಮುಖ ಪತ್ರವಾದ "ಶ್ರೀ ಜಿನವಿಜಯ" ಮಾಸಿಕವನ್ನು ಕನ್ನಡದ ಹಾಗೂ ಜೈನ ಧಾರ್ಮಿಕ ಪ್ರಥಮ ಪತ್ರಿಕೆಯೆಂದು ಗಣಿಸಲಾಗಿದೆ.*

ಬೆಳಗಾವಿಯ ಕಲೆಕ್ಟರ ಕಚೇರಿಯಲ್ಲಿ ಇದ್ದ ಶ್ರೀ ಕೆ. ಜಿ. ಅಂಕಲಿಯವರಿಂದ ಈ ಪತ್ರಿಕೆಯು ಸ್ಥಾಪಿಸಲ್ಪಟ್ಟಿತು. ಪತ್ರಿಕೆಯ ಮೂಲಕ ಜೈನ ಧರ್ಮತತ್ವ ಪ್ರಸಾರ, ಪ್ರತಿಪಾದನೆಗೆ ನಾಂದಿ ಹಾಡಿದ ಪತ್ರಿಕೆ ಎನಿಸಿಕೊಂಡಿತು. ಸಂಪಾದಕರಾಗಿ ಶ್ರೀ ಅಣ್ಣಪ್ಪ ಫಡಪ್ಪ ಚೌಗುಲೆ, ಬಿ.ಎ.,ಎಲ್.ಎಲ್.ಬಿ. ಯವರೂ. ಪ್ರಕಾಶಕರಾಗಿ ಶ್ರೀ ಬಾಳಪ್ಪ ತವನಪ್ಪ ಶಿರಪಣರವರು ತಮ್ಮ ಬೆಳಗಾವಿಯ ಶ್ರೀ ಮಹಾವೀರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸುತ್ತಿದ್ದರು. ೨೪ ಪುಟಗಳ ಈ "ಶ್ರೀ ಜಿನವಿಜಯ"ದ ವಾರ್ಷಿಕ ಚಂದಾ ೧ ರೂ. ೮ ಆಣೆ ಇದು ಜಿನಮತಾದರ್ಶ ತತ್ವಗಳು, ವೃತ್ತಾಂತಸಾರಗಳನ್ನು ಒಳಗೊಂಡಿತ್ತು. ೧೯೫೨ ರ ವೇಳೆಗೆ ಶ್ರೀ ಬಿ. ಪಿ. ಶಹಾ, ಉಗಾರರವರು ಸಂಪಾದ ರಾಗಿ ಶ್ರೀ ಅನಂತ ಅ. ಚೌಗುಲೆ (ಅಣ್ಣಪ್ಪಾ ಚೌಗುಲೆ ಅವರ ಪುತ್ರ)ಯವರು ತಮ್ಮದೇ ಆದ ಚಂದ್ರಪ್ರಭ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸುತ್ತಿದ್ದರು.

ಇದರ ೧ನೆಯ ಸಂಚಿಕೆಯಲ್ಲಿ—

ಜಯ ಜಯ ಜಯ ದುರಿತಾಂತಕ
ಜಯ ಜಯ ಜಯ ವಿಮಳ ಭೇದ ಜಯ ಜಯ ನಿ।
ರ್ಮ್ಮಯ ಲಕ್ಷ್ಮೀಪತಿ ಜಯ ಜಯ।
ಜಯ ಚಂದ್ರಪ್ರಭ ಜಿನೇಂದ್ರ ವಿಘಟಿತ ತಂದ್ರಾ॥

ಎಂಬ ಪ್ರಾರ್ಥನಾ ಪದ್ಯದೊಂದಿಗೆ ಆರಂಭವಾಗಿದೆ. ಅದೇ ಮುಂದುವರೆದು,

ಜಿನೇಶ ವಿಜಯೇಶಂ ಸೀತೆತತ್ವನ್ಯಾಯ ಕಥ್ಯತೇ ।
ಗೃಹ್ಣೀಧ್ವಂ ಭೋ ಬುಧಾ ಯೂಯಂ ಪುತ್ರಕಾಮಿವ ಪತ್ರಿಕಾಂ॥[೧]

ಎಂದಿದೆ. ಮಕ್ಕಳೂ ಪತ್ರಿಕೆಯೂ ಒಂದೇ. ಮಕ್ಕಳನ್ನು ನೋಡಿ ಪೋಷಿಸುವದು ಪಾಲಕರ ಕರ್ತವ್ಯ. ಅಂತೆಯೇ ಈ ಪತ್ರಿಕೆಯನ್ನು ಕೊಂಡು ಓದಿ ಪೋಷಿಸುವ ಕಾರ್ಯ, ಕರ್ತವ್ಯ ಓದುಗರದು ಎಂಬರ್ಥ.

---

* ಕೆಲವು ಆಧಾರ ಗ್ರಂಥಗಳು, ಹಲವಾರು ಪತ್ರಿಕಾ ಸಂಗ್ರಹ ಹಾಗೂ ಬ್ರಿಟಿಷ್ ಗ್ರಂಥಾಲಯ ಪತ್ರಿಕಾ ಸೂಚಿ (Catalogue) ಯನ್ನು ಅವಲೋಕಿಸಿ ಈ ತೀರ್ಮಾನಕ್ಕೆ ಬರಲಾಗಿದೆ.

೧ ಶ್ರೀ ಜಿನವಿಜಯ ವರ್ಷ ೪. ಸಂ.-೧೧-೧೨

೧೯೧೯ರಲ್ಲಿ ಕೊಲ್ಹಾಪುರದಲ್ಲಿ ೧೨ನೇ ಜೈನ ಮತ ಸಮ್ಮೇಳನವು ದಾವಣಗೆರೆಯ ಶ್ರೀ ಬ್ರಹ್ಮಪ್ಪ ತವನಪ್ಪನವರ ಅಧ್ಯಕ್ಷತೆಯಲ್ಲಿ ನಡೆದುದರ ವಿವರ ಒಂದೆಡೆ ಇದೆ.[೨] ಪಂಚ ಕಲ್ಯಾಣ, ಪೂಜಾ ಮಹೋತ್ಸವ, ಸಾಮಾನ್ಯ ಲೋಕಶಿಕ್ಷಣ ಮುಂತಾದ ವಿಷಯ ಗಳೆಲ್ಲ ಒಳಗೊಂಡಿದ್ದವು. ಜೈನರ ವಿವಿಧ ತೀರ್ಥ ಕ್ಷೇತ್ರಗಳ ಲೇಖನ, ಪ್ರವಾಸ, ನೀತಿ ಕಥೆಗಳೂ ಕೂಡ ಇದ್ದವು.

ಅಂತೂ ಜಿನವಿಜಯವು ಸುಮಾರು ೫೦ ವರ್ಷಗಳ ಕಾಲ ಮತಾದರ್ಶ ಹರಡು ವಲ್ಲಿ ಮುಖ್ಯ ಪಾತ್ರ ವಹಿಸಿ ಮೆರೆಯಿತು. ೧೯೩೭ರಲ್ಲಿ ಕಾರಣಾಂತರದಿಂದ ನಿಂತು ಪುನಃ ಮುಂದುವರೆದುದು ಕಂಡು ಬರುತ್ತದೆ.

ಜೈನಬಂಧು (೧೯೧೧—?), ಕೊಕ್ಕರ್ಣೆ (ದ. ಕನ್ನಡ)

ಸೂರಾಲ ಅರಮನೆ ನಾಥಿರಾಜಯ್ಯನವರು ಸಂಪಾದಕ, ಪ್ರಕಾಶಕರಾಗಿ ಕೊಕ್ಕರ್ಣೆ ಹಾಗೂ ಬ್ರಹ್ಮಾವರಗಳಿಂದ ಈ ಮಾಸಿಕವನ್ನು ಪ್ರಾರಂಭಿಸಿದರು. ಮಂಗಳೂರಿನ M.T.A. ಶಾರದಾ ಪ್ರೆಸ್ಸಿನಲ್ಲಿ ಮುದ್ರಿತವಾಗುತ್ತಿತ್ತು. ವಾರ್ಷಿಕ ಚಂದಾ ಕೇವಲ ೧-೮-೦ ರೂಪಾಯಿಗಳಾಗಿದ್ದವು.

"ಅರ್ಹತಃ ತ್ರಿಜಗದ್ವಂದ್ಯಾನ್ ತ್ರಿಲೋಕೇಶ್ವರ ಪೂಜಿತಾನ್।
ತ್ರಿಕಾಲ ಸರ್ವಭಾವಜ್ಞಾನ್ ತ್ರಿವಿಧೇನ ನಮಾಮ್ಯಹಂ॥[೨a]

ಎಂಬ ಶ್ಲೋಕವನ್ನು ಹೊತ್ತ ಇದು ವೃಷಭಾದಿ ತೀರ್ಥಂಕರರ ಪೂರ್ವಭವನೀತಿ ಕಾಶೀವಾರ್ಷಿಕೋತ್ಸವದ ವೃತ್ತಾಂತ-ವಿವರಗಳನ್ನು ಪಸರಿಸುತ್ತ ೫-೬ ವರ್ಷ ಉತ್ತಮ ರೀತಿಯಲ್ಲಿ ನಡೆದು ನಿಜವಾಗಿ ಜೈನರಿಗೆ ಬಂಧುವಾಗಿತ್ತು.

ಜಿನ ಮತ ಪ್ರಕಾಶಿಕಾ-(೧೯೧೯-೨೫), ಮೈಸೂರು

೧೯೧೯ರ ವೇಳೆಗೆ ಜಿನ ಮತ ಪ್ರಕಾಶಿಕಾ ಎಂಬ ಕನ್ನಡ+ಸಂಸ್ಕೃತ ದ್ವಿಭಾಷೆಯ ಮಾಸಪತ್ರಿಕೆಯು ಮೈಸೂರಿನಿಂದ ಹೊರಡುತ್ತಿತ್ತು. ಕೆಲಕಾಲ ಮಾತ್ರ ನಡೆದ ಇದು ಜೈನ ಮತ ತತ್ವ ಪ್ರಸಾರಮಾಡುವ ಉದ್ದೇಶ ಹೊಂದಿತ್ತು. ಇದರ ಸಂಚಿಕೆಗಳು ಬ್ರಿಟಿಷ ಗ್ರಂಥಾಲಯದ ಹೊರತಾಗಿ ಇನ್ನೆಲ್ಲೂ ಅಲಭ್ಯವಾದ ಕಾರಣ ಹೆಚ್ಚಿನ ಮಾಹಿತಿ ಸಿಗುತ್ತಿಲ್ಲ. ಇವರ ಪ್ರತಿಗಳು ನಮ್ಮಲ್ಲಿಲ್ಲದಿರುವದು ಶೋಚನೀಯ. ಲಂಡನ್ ಬ್ರಿಟಿಷ್ ಗ್ರಂಥಾಲಯದಲ್ಲಿ ಕೂಡ ಇದರ ಕೆಲವೇ ಸಂಚಿಕೆಗಳಿವೆ.[೩]

---

೨ ಶ್ರೀ ಜಿನವಿಜಯ, ವರ್ಷ ೪. ಸಂ. ೧೧-೧೨

೨a ಜೈನಬಂಧು. ೧೯೧೪ ವರ್ಷ ೨ ಸಂ, ೫-೬

೩ B. L. ಪತ್ರಿಕಾಸೂಚಿ. 14100. d-33.

ಸನಾತನ ಜೈನ (೧೯೨೫-೩೧), ಮೈಸೂರು

ಮಂಡ್ಯದ ಶ್ರೀ ದರ್ಣಪ್ಪಯ್ಯನವರು "ಸನಾತನ ಜೈನ" ಎಂಬ ಮಾಸಿಕ ಪತ್ರಿಕೆಯನ್ನು ಜೈನ ಧರ್ಮೋದ್ಧಾರದ ಧ್ಯೇಯೋದ್ದೇಶಗಳನ್ನಿರಿಸಿಕೊಂಡು ಮೈಸೂರಿನಿಂದ ಹೊರಡಿಸಿದರು. ಪತ್ರಿಕೆ ಅಲಭ್ಯವಾದ ಕಾರಣ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಅಂತೂ ೧೯೩೧ ರವರೆಗೆ ನಡೆದುದು ಕಂಡುಬರುತ್ತದೆ.

ವಿವೇಕಾಭ್ಯುದಯ (೧೯೩೩-   ), ಮಂಗಳೂರು.

ಮಂಗಳೂರಿನಲ್ಲಿ ಆಗ ಜೈನ ಪತ್ರಿಕಾ ಪ್ರಜ್ಞೆ ಹುಟ್ಟಿರಬೇಕು. ಶ್ರೀ D. ಪುಟ್ಟಸ್ವಾಮಿಯವರು "ವೀರಭವನ"ದಿಂದ ಮಹಾವೀರ ಶಕ ೨೬೨೪ (ಕ್ರಿ. ಶ. ೧೯೩೩) ರಲ್ಲಿ ವಿವೇಕಾಭ್ಯುದಯ ಮಾಸಿಕವನ್ನು ಹೊರಡಿಸತೊಡಗಿದರು. ಪೊನ್ನನ ಶಾಂತಿ ಪುರಾಣದ ಭಾಗ ಕಥಾರೂಪ ನೀತಿಪರ ಲೇಖನಗಳು, ಜಿನಮತದ ವಿವಿಧ ಉಕ್ತಿಗಳಿದ್ದು ನಿಜವಾಗಿ ಧರ್ಮ ವಿವೇಕ ಅಭ್ಯುದಯ ಸಾಧಿಸುವದಾಗಿತ್ತು. ಮೊದಲು ಸರಸ್ವತೀ ಪ್ರಿಂಟಿಂಗ್ ವರ್ಕ್ಸ್‌ನಿಂದ ೧೯೬೫ರ ವೇಳೆಗೆ ಅಳಿಕೆಯ K. ಗಣೇಶ ಪೈರವರ ಶ್ರೀ ಗಣೇಶ ಮುದ್ರಣಾಲಯದಿಂದ ಮುದ್ರಿತವಾಗಿ ಹೊರಡುತ್ತಿತ್ತು. ಇಂದಿಗೂ ಪ್ರಕಟವಾಗುತ್ತಿದೆ.

ಚೈತನ್ಯ ಕುಸುಮಾವಳಿ (೧೯೨೪-೩೪), ಧರ್ಮಸ್ಥಳ.

ಧರ್ಮಸ್ಥಳ ಕ್ಷೇತ್ರದಿಂದ "ಚೈತನ್ಯ ಕುಸುಮಾವಳಿ" ಹೆಸರಿನ ಮಾಸಿಕವು ಹೊರಡುತ್ತಿತ್ತು. ಬಹುಶಃ ಶ್ರೀಮಂಜುನಾಥ ಸ್ವಾಮಿಯ ಕೃಪಾಶ್ರಯವಿತ್ತೆಂದು ತೋರುತ್ತದೆ. ಧರ್ಮಸ್ಥಳ ಹಾಗೂ ಸುತ್ತು ಮುತ್ತಣ ಸ್ಥಳ-ದೇವರುಗಳ ಪರಿಚಯ ನೀಡುವ ಲೇಖನಗಳಿದ್ದುವೆಂದು ಗೊತ್ತಾಗಿದೆ. ಸಂಪಾದಕರು ಯಾರೆಂದು ಗೊತ್ತಾಗಿಲ್ಲ. ಕೆಲವೇ ಸಂಚಿಕೆಗಳು ಹೊರಟು ಅದೇ ವರ್ಷವೇ ನಿಂತಿತು[೧]

ಸರ್ವಾರ್ಥ ಸಿದ್ಧಿ (೧೯೩೫)—ಕಾರ್ಕಳ.

ಕಾರ್ಕಳದ ಶ್ರೀ K. ಶಿಂಗಳಾಚಾರ್ಯರು ತಮ್ಮ ಶ್ರೀ ಲಕ್ಷ್ಮೀನರಸಿಂಹ ಪ್ರೆಸ್‌ನಲ್ಲಿ "ಸರ್ವಾರ್ಥಸಿದ್ಧಿ" ಎಂಬ ಮಾಸಿಕವನ್ನು ಸ್ಯಾದ್ವಾದ ಭಿಷಗ್ಮಣಿ ವೈದ್ಯರಾಜ ಪಂಡಿತ M. ಪಿಲ್ಲಪ್ಪ L.M.A.M, ರವರ ಸಂಪಾದಕತ್ವದಲ್ಲಿ ಹೊರಡಿಸಿದರು.

"ನಮಃ ಶ್ರೇಯೋಜಿನೇಂದ್ರಾಯ ಯತ್ಪಾದಾಶ್ರಯ ವರ್ತಿನೇ।
ಶ್ರೇಯಾಂಸಿ ಬಹು ವಿಘ್ನಾನೀ ತ್ಯಕ್ತೇರಥೋರ್ನೀ ನಿರಾಶ್ರಯಃ॥[೨]

---

೧ ಬ್ರಿಟಿಷ್ ಗ್ರಂಥಾಲಯದಲ್ಲಿ ಪತ್ರಿಕಾ ಕ್ಯಟಲಾಗಿನಲ್ಲಿ ಹೆಸರನ್ನು ನೋಡಿ ೧೯೭೮ ಜುಲೈದಲ್ಲಿ ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಈ ಕುರಿತು ಕೇಳಲಾಯಿತು. ಅವರು ತಮ್ಮ ಸಂಬಂಧಿಗಳಲ್ಲೊಬ್ಬ ಹಿರಿಯರಿಂದ ಕೇಳಿ ತಿಳಿದು ನನಗೆ ಹೇಳಿದುದನ್ನೇ ಇಲ್ಲಿ ಬರೆದಿದ್ದೇನೆ.

೨ "ಸರ್ವಾರ್ಥಸಿದ್ಧಿ" ೧೯೩೭ ವರ್ಷ ೩ ಸಂಚಿಕೆ ೭.

ಎಂದು ಪತ್ರಿಕೆಯ ಮುಖಪ್ರಾರ್ಥನೆಯ ಶ್ಲೋಕವಿದೆ. ಇದರಲ್ಲಿ ಹಲವಾರು ಗ್ರಂಥೋಕ್ತ ಭಾಗಗಳಿದ್ದವು. ೧-೨ ವರ್ಷದಲ್ಲೇ ಪತ್ರಿಕೆ ನಿಂತಿರಬೇಕು.

ವೀರವಾಣೀ (೧೯೩೭), ಸೊಲ್ಲಾಪುರ.

ಶ್ರೀ ಲೋಕನಾಥ ಶಾಸ್ತ್ರಿಯವರು "ವೀರವಾಣೀ" ಮಾಸಿಕ ಪತ್ರವನ್ನು ಮೂಡಬಿದ್ರೆಯಿಂದ ೧೯೩೭ ಜೂನ್‌ದಿಂದ, ಧರಣೇಂದ್ರ ಕುಮಾರ ಶಾಸ್ತ್ರಿಯವರು ಮುಂಬಯಿಯ ಸಹಾಯಕ ಕಾರ್ಯಾಲಯದಿಂದ ಹೊರಡಿಸತೊಡಗಿದರು. ಪಂಡಿತ V. P. ಶಾಸ್ತ್ರಿಯವರು ಮುಖ್ಯ ಸಂಪಾದಕರಾಗಿದ್ದರು. ನಿರ್ದೇಶಕ, ಪ್ರಕಾಶಕರೂ ಅವರೇ ಆಗಿ ತಮ್ಮ ಕಲ್ಯಾಣ ಇಲೆಕ್ಟ್ರಿಕ್ ಮುದ್ರಣಾಲಯದಲ್ಲಿ, ಸೊಲ್ಲಾಪುರದ ಮಂಗಳ ವಾರ ಪೇಟೆಯಿಂದ ಪ್ರಕಟಿಸುತ್ತಿದ್ದರು. ಪತ್ರಿಕಾ ಪ್ರಸಾರಕ್ಕೆ ಇದು ಸಹಾಯಕವಾಗಿತ್ತು.

"ವೀರವಾಣಿ ಕುವರಿ ನಿಮ್ಮೆಡೆಗೆ ।
ಬರುತಿರಲ್ ತೊದಲ್ನುಡಿಯ ನಾಡುತಲಿಂದು ।
ಪರಿಸಿರಿ ಚಿರಂಜೀವಿಯಾಗಲೆಂದು ।
ಕರೆದೆತ್ತಿರಿ ಮೋದವ ಬೀರಲಿ ಮೇದಿನಿಗೆ ॥

ಎಂದು ಬಿ. ಆರ್. ಕೃಷ್ಣಯ್ಯಂಗಾರರು ಓದುಗರಿಗೆ ಪತ್ರಿಕೆಯನ್ನು ಕುರಿತು ನಿವೇದಿಸಿಕೊಂಡಿದ್ದಾರೆ. ಅನೇಕ ಬಿರುದಾಂಕಿತರೂ, ವಿದ್ಯಾಭೂಷಣರೂ ಆದ, ಶೇಠ ರಾವಜೀ ಸಖಾರಾಮ ದೋಶಿಯವರೇ ಇದರ ಆಶ್ರಯದಾತರು. ಇದರಲ್ಲಿ ಭಟ್ಟಾರಕರ ಕರ್ತವ್ಯ. ಸ್ತ್ರೀಯರಿಗಾಗಿ ಮಹಿಳಾ ಮನೋವಿಕಾಸ ವಿಭಾಗ, ವಿಚಿತ್ರ ವಾರ್ತೆಗಳು ಇದ್ದವು. ೧೯೩೯ ರ ವೇಳೆಗೆ "ಆಯುರ್ವೇದ" ವಿಭಾಗವು ಆರಂಭಿಸಲ್ಪಟ್ಟದ್ದು ಕಂಡು ಬರುತ್ತದೆ. ಜನರಸಾಸ್ವಾದನೆಗಾಗಿ ಜೈನಸಾಹಿತ್ಯರಸಗಟ್ಟಿಯಾದ ಯಶೋಧರ ಚರಿತೆ ಧಾರಾವಾಹಿಯಾಗಿ ಕಂಡು ಬಂದಿದೆ. ಶ್ರವಣ ಬೆಳಗೊಳದ ಬಾಹುಬಲಿಯ ಮಹಾಮಸ್ತಕಾಭಿಷೇಕವು ಅತೃಪ್ತಿಕರವಾಗಿ ನಡೆದುದರ ವಿಮರ್ಶೆಯೂ ಬಂದಿದೆ.[೧] ಇಷ್ಟೊಂದು ವಿಶೇಷತೆಯ ವೀರವಾಣಿಯು ಸುಮಾರು ೪೦ ವರ್ಷ ನಡೆಯಿತು.

ವಿಶ್ವಬಂಧು (೧೯೫೧-೬೨) ಸೊಲ್ಲಾಪುರ:

ಸರ್ವೋದಯ ತೀರ್ಥದ ಸಮರ್ಥಕ ವಾರ ಪತ್ರಿಕೆಯು[೨] ವರ್ಧಮಾನ ಶಾಸ್ತ್ರಿಯವರ ಸಂಪಾದಕತ್ವದಲ್ಲಿ ವೀರ ಸಂ॥ ೨೪೫೦ (೧೯೫೧ ಎಪ್ರಿಲ) ರಂದು ಸೊಲ್ಲಾಪುರದಲ್ಲಿ ಆರಂಭವಾಯಿತು. ಕಲ್ಯಾಣ ಭವನದ ಕಲ್ಯಾಣ ಪವರ ಪ್ರೆಸ್ಸಿನಲ್ಲಿ ಮುದ್ರಿಸಲ್ಪಡುತ್ತಿತ್ತು. ಸಾಹಿತ್ಯ ಸಮಾಲೋಚನೆ, ಜೈನ ಸಮಾಚಾರ ಸಂಗ್ರಹ, ವಿವಿಧ ವೃತ್ತಗಳು, ಇದರ ಸ್ಥಿರ ಶೀರ್ಷಿಕೆಗಳು. ಆಕಳು ಹುಲಿಗಳು ಜಾತಿ ಧರ್ಮವನ್ನು ಬಿಟ್ಟು ಸ್ನೇಹ

೧. ವೀರವಾಣಿ ವೇದ ೩, ಅಂಗ ೧೨. ೧೯೪೦ ಮೇ.
೨. ಮುಂದೆ 'ವಿಶ್ವಬಂಧು' ಮಾಸಿಕ ಪತ್ರವಾಗಿ ಬದಲಾಯಿತು.

ದಿಂದಿದ್ದುದು, ಅವುಗಳ ಮರಿ-ಕರುಗಳು ಪರಸ್ಪರ ಮಾತೆಯರ ಹಾಲು ಕುಡಿಯುವ ಆದರ್ಶ ಸಂಕೇತವು ಇದರ ಮುಖಪುಟದಲ್ಲಿದೆ ಶ್ರೀ ದೇವೇಂದ್ರ ಕೀರ್ತಿ ಪಟ್ಟಾಚಾರ್ಯ ಆದರ್ಶ ಸ್ವಾಮಿಜಿ, ಹೊಂಬುಜ ಹಾಗೂ ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಗಳ ಘನ ಆಶ್ರಯ ಇದಕ್ಕಿತ್ತು. ಸುಮಾರು ೧೯೬೨ ರ ನಂತರ ಪತ್ರಿಕೆ ನಡೆದ ಕುರುಹು ಕಂಡು ಬರುತ್ತಿಲ್ಲ.

ಜಿನವಾಣಿ (೧೯೫೧), ಮೈಸೂರು :

ಶ್ರೀ ದಿಗಂಬರ ಜೈನ ಸಾಹಿತ್ಯ ಪ್ರಚಾರ ಸಂಘದವರು ಮೈಸೂರಿನಿಂದ ಮಹಾವೀರಶಕ ೨೪೭೭ ರಲ್ಲಿ (ಕ್ರಿ.ಶ. ೧೯೫೧) ಜಿನವಾಣಿ ಮಾಸಿಕವನ್ನಾರಂಭಿಸಿದರು. ಎಂ.ಸಿ. ಪದ್ಮನಾಭ ಶರ್ಮ ನ್ಯಾಯತೀರ್ಥರವರು ಸಂಪಾದಕರು: ನಾಗಶರ್ಮರವರು ಪ್ರಕಾಶಕರು, ಟಿ. ಸಿ. ಬ್ರಹ್ಮಸೂರಯ್ಯನವರ ಜೈಹಿಂದ್ ಪ್ರೆಸ್‌ನಲ್ಲಿ ಮುದ್ರಿತವಾಗುತ್ತಿತ್ತು. ಮುಂದೆ ಬಿ. ಎನ್. ಅಳುಹಿ ಮಣವಾಳನ್‌ರವರ ಶ್ರೀ ವಿಜಯಲಕ್ಷ್ಮೀ ಪ್ರೆಸ್‌ಗೆ ಸ್ಥಳಾಂತರವಾಯಿತು. ಈ ಪ್ರೆಸ್ಸು ಈಗಿನ ಡಿ. ಸುಬ್ಬಯ್ಯ ರಸ್ತೆಯಲ್ಲಿತ್ತು. ಜೈನ ಸಾಹಿತ್ಯ ಸುದ್ದಿ ಸಮಾಚಾರಗಳನ್ನು ಇಂದಿಗೂ ಇದು ಪ್ರಕಟಿಸುತ್ತಿದೆ.

ಗುರುದೇವ (೧೯೫೬), ಹೊಂಬುಜ ಕ್ಷೇತ್ರ :

ಶಿವಮೊಗ್ಗೆಯ ಹೊಂಬುಜ ಪ್ರಸಿದ್ಧ ಜೈನ ಯಾತ್ರಾಸ್ಥಳ. ಇಲ್ಲಿಯ ಮಠಾಧೀಶರಾದ ಶ್ರೀ ದೇವೇಂದ್ರ ಕೀರ್ತಿ ಸ್ವಾಮೀಜಿಯವರಿಂದ "ಗುರುದೇವ" ಪ್ರಾರಂಭಿಸಲ್ಪಟ್ಟಿತು. ಶ್ವೇತಾಂಬರ ಪಂಥದ ಧರ್ಮನಿಷ್ಠ, ತತ್ವಪ್ರಸಾರಕವಾಗಿ ಪುರಾಣ ವಿಷಯ, ನೀತಿ ಕಥೆ, ಕವನಗಳನ್ನು ಪ್ರಕಟಿಸುತ್ತಿದೆ. ಭಾರತಾದ್ಯಂತವೂ ಹರಡಿದ ಜನಪ್ರಿಯ ಪತ್ರಿಕೆಗಳಲ್ಲೊಂದು ಈ "ಗುರುದೇವ".

"ಸನ್ಮತಿ" (೧೯೫೭), ಬಾಹುಬಲಿ:

ದಕ್ಷಿಣ ಭಾರತ ದಿಗಂಬರ ಜೈನ ಮಹಾಸಭೆಯು ಕೊಲ್ಹಾಪುರದ ಬಾಹುಬಲಿ ಕ್ಷೇತ್ರದಿಂದ ಶ್ರೀ ಬಾಬುರಾವ್ ಸಿ. ಪಾಟೀಲ ಹಾಗೂ ಕೇಡಬಾಳದ ಮಿರ್ಜಿ ಅಣ್ಣಾರಾಯರ ಸಂಪಾದಕತ್ವದಲ್ಲಿ ನಡೆಯುತ್ತಿದೆ.

"ಉನ್ನತಂ ಮಾನಸಂ ಯಸ್ಯ ಭಾಗ್ಯಂ ತಸ್ಯ ಸಮುನ್ನತಂ" ಎಂಬುದೇ ಸನ್ಮತಿಯ ಮುಖವಾಣಿ. ವಿವಿಧ ಜೈನ ಸಂಘ ವೃತ್ತಾಂತ ಇತ್ತೀಚೆಗೆ ಬಾಲವಿಹಾರ ವಿಭಾಗವೂ ಆರಂಭವಾಗಿದೆ. ಕನ್ನಡವಲ್ಲದೇ, ಮರಾಠಿ, ಹಿಂದೀ ಗುಜರಾಥಿ ಮುಂತಾದ ಭಾಷೆಗಳಲ್ಲಿಯೂ ಹೊರಡುತ್ತಿದೆ.

ವೀರ ಭಾರತಿ (೧೯೫೮), ಬೆಂಗಳೂರು:

ಕರ್ನಾಟಕ ಜೈನ ಮಹಾಸಭೆಯ ಮುಖಪತ್ರವಾಗಿ ಹೊರಟ ಪತ್ರಿಕೆಯಿದು. ಶ್ರೀ ಎಚ್. ಎಸ್. ನೇಮಿನಾಥಯ್ಯನವರು ಮುಖ್ಯ ಸಂಪಾದಕರು; ದೇವೇಂದ್ರಕುಮಾರ ಪಾಟೀಲರು ಸಹಾಯಕರಾಗಿ ಶ್ರೀ ಎಂ.ಜಿ.ಶಹಾರವರು ಸಂರಕ್ಷಕರಾಗಿದ್ದಾರೆ. "ಅಹಿಂಸಾ

ಪರಮೋಧರ್ಮಃ", "ಯತೋಧರ್ಮಸ್ತಥೋಜಯಃ" ಎಂಬುದೇ ವೀರ ಭಾರತಿಯ ವೀರವಾಣಿ. ಪ್ರಚಲಿತ ಪ್ರಪಂಚ. ವಾರ್ತಾ ವಿವರ ಮೊದಲಾದವುಗಳು ಸ್ಥಿರಶೀರ್ಷಿಕೆಗಳು. ಉತ್ತಮ ಮಟ್ಟದಲ್ಲಿ ಪತ್ರಿಕೆ ಹೊರಡುತ್ತಿದೆ.

೧೯೫೮ ರ ನಂತರ ಸುಮಾರು ೧೪ ವರ್ಷಗಳ ಕಾಲ ಯಾವ ಹೊಸ ಪತ್ರಿಕೆಗಳ ಆವಿಷ್ಕಾರವೂ ಈ ದಿಶೆಯಲ್ಲಿ ಕಂಡು ಬರುತ್ತಿಲ್ಲ.

"ರತ್ನತ್ರಯ" (೧೯೭೨), ಕೊಲ್ಹಾಪುರ :

ದಿಗಂಬರ ಜೈನ ಮಹಾರಾಷ್ಟ್ರ ಸಂಘದಿಂದ "ರತ್ನತ್ರಯ" ಎಂಬ ಮರಾಠೀ—ಕನ್ನಡ ದ್ವಿಭಾಷಾ ತ್ರೈಮಾಸಿಕ ಹೊರಟದ್ದು ಕಂಡುಬರುತ್ತದೆ. ಇದರಲ್ಲಿ ಕೆಲವೇ ಕನ್ನಡ ಲೇಖನಗಳಿಗೆ ಅವಕಾಶವಿತ್ತುದು ಕಂಡುಬರುತ್ತಿದೆ.

ಇದೇ ಜೈನ ಮಠದವರು "ಆಶೀರ್ವಾದ" ಎಂಬ ಇನ್ನೊಂದು ಕನ್ನಡ ಪತ್ರಿಕೆಯನ್ನು ಹೊರಡಿಸುವ ಯೋಚನೆಯ ಉಲ್ಲೇಖ ಕೂಡ ಒಂದು ಸಾಚಿಕೆಯಲ್ಲಿ ಬಂದಿದೆ.

"ಸಮವಸರಣ" (೧೯೭೭), ಕಾರ್ಕಳ:

ಶ್ರೀ ಎನ್. ಡಿ. ಯಾದವರ ಸಂಪಾದಕತ್ವದಲ್ಲಿ ಷಾಣ್ಮಾಸಿಕ ಪತ್ರಿಕೆ ಹೊರಟಿದೆ. ಸಮವಸರಣ ಎಂದರೆ ತೀರ್ಥಂಕರರಿಗೆ ಕೈವಲ್ಯ ಜ್ಞಾನ ಪ್ರಾಪ್ತಿಯಾದೊಡನೆ ದೇವೇಂದ್ರನು ಅವರಿಗಾಗಿ ರಚಿಸುವ "ಸಭಾಮಂಟಪ" ಎಂದರ್ಥ. ಎಂತಹ ಸುಂದರವಾದ ಅರ್ಥ. ಇದರ ನಂತರ ಯಾವ ಹೊಸ ಜೈನ ಮತೀಯ ಪತ್ರಿಕೆಯೂ ಹೊರಟುದರ ಉಲ್ಲೇಖವಿಲ್ಲ.

ಯಾವುದೇ ಪತ್ರಿಕಾ ಸಂಚಾಲನ ಕಾರ್ಯಕ್ಕೆ ಆರ್ಥಿಕ ತೊಂದರೆ, ಓದುಗರ ಕೊರತೆ, ಕೊಳ್ಳುವವರ ಕೊರತೆ ಅಡ್ಡಿ ಮಾಡುತ್ತದೆ. ಧಾರ್ಮಿಕ ಸಾಹಿತ್ಯ, ವಿಚಾರ, ವಿಮರ್ಶೆಗಳು ಹೆಚ್ಚಿನ ಪ್ರಮಾಣದಲ್ಲಿ ಪತ್ರಿಕೆಗಳ ಮೂಲಕ ಜನರ ಮನ ಸೆಳೆಯಬೇಕು. ಉತ್ತಮ ಮಟ್ಟದ ಪತ್ರಿಕೆಗಳು ಕೆಲವೇ ಇದ್ದರೂ ಅವುಗಳ ಸೇವಾ ಕಾರ್ಯ, ಉದ್ದೇಶ ಸಫಲವಾಗಿ ಶ್ಲಾಘನೀಯ ಎನಿಸಿಕೊಳ್ಳುವದರಲ್ಲಿ ನಿಸ್ಸಂದೇಹ. ಈ ದಿಶೆಯಲ್ಲಿ ಕನ್ನಡ ಪತ್ರಿಕೆಗಳು ಬಹಳ ಶ್ರಮಿಸಬೇಕು.

ಓಂ ಣಮೋ ಅರಹಂತಾಣಂ !

ಜೈನ ಪತ್ರಿಕಾ ಅನುಬಂಧ

ಅ.ನಂ.	ಪತ್ರಿಕೆಗಳು	ಪ್ರಕಟನಾ ಸ್ಥಳ	ಸಂಪಾದಕರು	ನಡೆದ ಕಾಲ
೧.	ಶ್ರೀ ಜಿನ ವಿಜಯ	ಬೆಳಗಾವಿ	ಅಣ್ಣಪ್ಪಾ ಫ. ಚೌಗುಲೆ	೧೯೦೫-೬೨
೨.	ಜೈನ ಬಂಧು	ಕೊಕ್ಕರ್ಣೆ—ಬ್ರಹ್ಮಾವರ	ಸೂರಾಲ ಅರಮನೆ ನಾಭಿರಾಜಯ್ಯ	೧೯೧೧-?
೩.	ಜಿನ ಮತ ಪ್ರಕಾಶಿಕೆ	ಮೈಸೂರು	?	೧೯೧೯-೨೫
೪.	ಸನಾತನ ಜೈನ	ಮಂಡ್ಯ	ಶ್ರೀ ಧರಣಪ್ಪಯ್ಯ	೧೯೨೫-೩೧
೫.	ವಿವೇಕಾಭ್ಯುದಯ	ಮಂಗಳೂರು	D. ಪುಟ್ಟಸ್ವಾಮಿ	೧೯೩೩-?
೬.	ಚೈತನ್ಯ ಕುಸುಮಾವಳಿ	ಧರ್ಮಸ್ಥಳ	?	೧೯೩೪-೩೪
೭.	ಸರ್ವಾರ್ಥ ಸಿದ್ಧಿ	ಕಾರ್ಕಳ	M. ಎಲ್ಲಪ್ಪ L.A.M.	೧೯೩೫-?
೮.	ವೀರವಾಣೀ	ಸೊಲ್ಲಾಪುರ	V.D. ಶಾಸ್ತ್ರಿ	೧೯೩೭-?
೯.	ವಿಶ್ವಬಂಧು	„	ಪಂ. ವರ್ಧಮಾನಶಾಸ್ತ್ರಿ	೧೯೫೧-೬೨
೧೦.	ಜನವಾಣಿ	ಮೈಸೂರು	M. C. ಪದ್ಮನಾಭ ಶರ್ಮ	೧೯೫೧-?
೧೧.	ಗುರುದೇವ	ಹೊಂಬುಜ	ಮಠಾಚಾರ್ಯರು	೧೯೫೬-?
೧೨.	ಸನ್ಮತಿ	ಬಾಹುಬಲಿ	ಬಾಬುರಾವ C. ಪಾಟೀಲ ಮಿರ್ಜಿ ಅಣ್ಣಾರಾಯರು	೧೯೫೭-?
೧೩.	ವೀರಭಾರತಿ	ಬೆಂಗಳೂರು	H. S. ನೇಮಿನಾಥಯ್ಯ	೧೯೫೮-?
೧೪.	ರತ್ನತ್ರಯ	ಕೊಲ್ಲಾಪುರ	?	೧೯೭೨-?
೧೫.	ಸಮವಸರಣ	ಕಾರ್ಕಳ	N. D. ಯಾದವ	೧೯೭೭-?

ಅರಿಕೆ : (ಈ ವಿಷಯದಲ್ಲಿ ಕಾಣಿಸಿದ ಮೇಲಿನ ವಿಷಯಗಳೇ ಅಂತಿಮವಲ್ಲ. ಸ್ಮೃತಿಪಟಲದಿಂದ ಜಾರಿ ಅನೇಕವು ಉಳಿದಿರಬಹುದು. ಅಂತಹವುಗಳನ್ನು ವಿಷಯ ಜ್ಞಾನಿಗಳು ತಿಳಿಸಿದಲ್ಲಿ ನಾನು ಚಿರಋಣಿ)

ಗ್ರಂಥ ಋಣ

೧. ಪತ್ರಿಕಾ ಸಂಗ್ರಹ

೨. ಕೆಲ ಹಿರಿಯರ ನಂಬಲರ್ಹ ಹೇಳಿಕೆಗಳು, ಮೂಲಗಳು

ಖಾಜ-ಇ-ಜಹಾನ್, ಮಹಮೂದ್ ಗಾವಾನ್

● ಎಸ್. ಎನ್. ಶಿವರುದ್ರಸ್ವಾಮಿ

ಮೂರು ತಲೆಮಾರಿನವರೆವಿಗೆ ಅವ್ಯಾಹತವಾಗಿ ಇಪ್ಪತ್ತೆಂಟು ವರ್ಷಗಳ ಕಾಲ ಅತ್ಯಂತ ನಿಷ್ಠೆಯಿಂದ ಸೇವೆಸಲ್ಲಿಸಿದ ಮಹಾನ್ ವ್ಯಕ್ತಿ ಮಹಮೂದ್ ಗಾವಾನನ ಅಂತ್ಯ ಅತ್ಯಂತ ದುರಂತಮಯವಾಗಿ ಕೊನೆಗೊಂಡಿತು. ಬಹಮನೀ ಇತಿಹಾಸದಲ್ಲೇಕೆ. ಭಾರತದ ಇತಿಹಾಸದಲ್ಲೇ ಅವನಂತಹ ದಕ್ಷ, ಸಮರ್ಥ, ಹಾಗೂ ನಂಬಿಗಸ್ತ ಆಡಳಿತಗಾರರು ತೀರ ವಿರಳ. ಗಾವಾನನು ಬಹುಮನೀರಾಜ್ಯದ ಪ್ರಧಾನಿಯಾಗಿ ೧೪೬೬ರಿಂದ ೧೪೮೧ ರ ವರೆಗೆ ಇದ್ದು ಕೊನೆಯಲ್ಲಿ ಮೋಸದ ಪಿತೂರಿಗೆ ಗುರಿಯಾಗಿ ತನ್ನ ಅರಸನ ಕತ್ತಿಯ ಮೊನೆಗೆ ಮೈಯೊಪ್ಪಿಸಬೇಕಾಗಿ ಬಂದುದು ವಿಧಿಯ ವಿಕಟ ಅಟ್ಟಹಾಸ ! ಇದಕ್ಕೆ ಸಮಾನಾಂತರ ಉದಾಹರಣೆ- ವಿಜಯನಗರದ ಪ್ರಸಿದ್ಧ ಚಕ್ರವರ್ತಿ ಕೃಷ್ಣದೇವ ರಾಯನ ಪ್ರಧಾನಿ ತಿಮ್ಮರಸನ ಕರುಣಾಜನಕ ಅಂತ್ಯ.

ಬಹಮನೀ ರಾಜ್ಯ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ ಹತ್ತುವರ್ಷಗಳ ನಂತರ ೧೩೪೭ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಸ್ಥಾಪಕ ಹಸನ್ ಗಂಗು ಎಂಬುವವನು ಬಹಮನೀ ರಾಜ್ಯವನ್ನು ಕಲಬುರ್ಗಿಯಲ್ಲಿ ಸ್ಥಾಪಿಸಿದ. ರಾಜಧಾನಿ ಕಾಲಕ್ರಮದಲ್ಲಿ ಬೀದರಕ್ಕೆ ಬದಲಾಯಿತು. ಬಹಮನೀ ಮತ್ತು ವಿಜಯನಗರ ಸಾಮ್ರಾಜ್ಯಗಳೆರಡೂ ಪರಸ್ಪರ ಕಲಹ-ದ್ವೇಷದಲ್ಲಿ ತೊಡಗಿ ಮುಂದೊಂದು ದಿನ ನಾಶವಾದವು.

ಖ್ವಾಜ-ಇ-ಜಹಾನ್, ಮಹಮೂದ್ ಗಾವಾನ್ ಕ್ಯಾಸ್ಪಿಯನ್ ಸಮುದ್ರದ ದಡದಲ್ಲಿರುವ ಗಿಲಾನ್ ರಾಜ್ಯದ ಗಾವಾನ್ ಎಂಬ ಹಳ್ಳಿಯಲ್ಲಿ ಕ್ರಿ. ಶ. ೧೪೧೧ ರಲ್ಲಿ ಜನಿಸಿದ. ಅವನ ತಂದೆ ಜಲಾಲುದ್ದೀನ್ ಮಹಮ್ಮದ್ ಅಲ್ಲಿನ ಅರಸ ಸುಲ್ತಾನ್ ಅಲ್ಲಾವುದ್ದೀನನ ಗುರು. ಅವನ ಪೂರ್ವಿಕರನೇಕರು ಮಂತ್ರಿಗಳಾಗಿ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಅಲ್ಲಿನ ಆಸ್ಥಾನದ ಪಿತೂರಿಗಳಿಂದಲೂ, ಪಕ್ಷದ್ವೇಷಗಳಿಂದಲೂ ಗಾವಾನನು ಹುಟ್ಟಿದ ನಾಡನ್ನು ತೊರೆದು ಊರಿಂದ ಊರಿಗೆ, ದೇಶದಿಂದ ದೇಶಕ್ಕೆ ವ್ಯಾಪಾರಮಾಡುತ್ತಾ ಅಲೆದ. ಅವನು ೧೪೫೩ ರಲ್ಲಿ ದಿಲ್ಲಿಯಲ್ಲಿ ವ್ಯಾಪಾರ

ಮಾಡಲು ಭಾರತಕ್ಕೆ ಬಂದನೆಂದೂ, ಅದಕ್ಕಿಂತ ಮೊದಲೇ ಆಡಳಿತದ ಕಲೆಯಲ್ಲಿ ನುರಿತಿದ್ದನೆಂದೂ ಷರ್ವಾಣಿ ತಿಳಿಸುತ್ತಾರೆ. ಆದರೆ ವಿಧಿ ಅವನನ್ನು ಬೀದರಕ್ಕೆ ತಂದಿತು. ಈ ಗಿಲಾನಿ ವರ್ತಕನ ಸದ್ವರ್ತನೆ ಮತ್ತು ಪ್ರತಿಭೆಯಿಂದ ಆಕರ್ಷಿತನಾದ ಬಹಮನೀ ಅರಸ ಎರಡನೇ ಅಲ್ಲಾವುದ್ದೀನ ಅಹ್ಮದನು ಈತನನ್ನು ಅಧಿಕಾರಿಯನ್ನಾಗಿ ನೇಮಿಸಿಕೊಂಡ.

ಅಲ್ಲಾವುದ್ದೀನ್ ಅಹ್ಮದನ ಕೊನೆಯ ದಿನಗಳು ಬಹುಕಷ್ಟಮಯವಾಗಿದ್ದವು. ಅವನ ಕಾಲಿನಲ್ಲಿ ಭೀಕರ ಗಾಯವಾಗಿ ಆತನು ಅರಮನೆಯಲ್ಲೇ ಚಿಕಿತ್ಸೆ ಪಡೆಯಬೇಕಾಯಿತು; ದರ್ಬಾರಿನಲ್ಲೂ ಕಾಣಿಸಿಕೊಳ್ಳುತ್ತಿರಲಿಲ್ಲ. ಇದರ ಪರಿಣಾಮವಾಗಿ ಅಲ್ಲಾವುದ್ದೀನ್ ಸತ್ತನೆಂಬ ಪೊಳ್ಳು ವಾರ್ತೆ ಎಲ್ಲೆಲ್ಲೂ ಹಬ್ಬಿತು. ಪರಿಸ್ಥಿತಿಯ ಲಾಭ ಪಡೆಯಲು ಅವನ ಭಾವನಾದ ಜಲಾಲ್‌ಖಾನ್ ೧೪೫೫ರಲ್ಲಿ ದಂಗೆಯೆದ್ದು ತೆಲಂಗಾಣದ ಸ್ವತಂತ್ರ ಅರಸನೆಂದು ಸಾರಿಕೊಂಡ. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಅಹ್ಮದ್ ಗಾವಾನನನ್ನು ನೇಮಿಸಿದ. ಅವನು ಈ ಸಮಯದಲ್ಲಿ ದೂರದೃಷ್ಟಿಯಿಂದ ನಡೆದುಕೊಂಡನು. ಜಲಾಲನನ್ನು ಸೋಲಿಸಿದರೂ ಅರಸನಿಂದ ಕ್ಷಮಾದಾನವನ್ನು ನೀಡಿಸಿದ. ಈ ಘಟನೆಯೊಂದಿಗೆ ಮೊದಲಬಾರಿಗೆ ಬೆಳಕಿಗೆ ಬಂದ. ಅನಂತರ ತೀವ್ರ ಗತಿಯಲ್ಲಿ ಮೇಲೇರಿದ. ಮುಂದೆ ನಾಡಿನ ಪ್ರಧಾನಿಯೂ ಆದ. ತನ್ನ ದುರಂತದ ಅಂತ್ಯದವರೆವಿಗೂ ಆ ಪದವಿಯಲ್ಲಿ ಮುಂದುವರೆದ. ಅಹ್ಮದ್ ಅನೇಕ ಜನಹಿತ ಕಾರ್ಯಗಳನ್ನು ಕೈಗೊಂಡು ಏಪ್ರಿಲ್ ೧೪೫೮ ರಂದು ಮೃತನಾದ. ಅವನ ಸಾಧನೆಗಳನ್ನು ಕುರಿತು ಮರಾಠಿ ಬರಹಗಾರ ಗುಣಚಂದ್ರ (೧೪೫೦) ಬರೆದ ಗ್ರಂಥದಲ್ಲಿ ಹೊಗಳಿದ್ದಾನೆ.

ಅಲ್ಲಾವುದ್ದೀನನ ನಂತರ ಅವನ ಹಿರಿಯ ಮಗ ಹುಮಾಯೂನನು (೧೪೫೮–೬೧) ಅಧಿಕಾರಕ್ಕೆ ಬಂದ. ಕಿರುಕಾಲದ ಅವನ ಆಳ್ವಿಕೆ ಅಶಾಂತಿಯಿಂದ ಕೂಡಿತ್ತು; ಅವನೂ ಕೂಡ ಬಹುಕ್ರೂರವಾಗಿ ನಡೆದುಕೊಂಡ. ಆದ್ದರಿಂದ 'ಜಾಲಿಮ್' ಅಥವಾ ಕ್ರೂರಿ ಎಂಬ ಹೆಸರು ಪ್ರಾಪ್ತವಾಯಿತು. ಅವನು ಮಹಮೂದ್ ಗಾವಾನನ್ನು ಮುಖ್ಯ ಸೇನಾಧಿಕಾರಿಯನ್ನಾಗಿ ನೇಮಿಸಿದ. ಮಾಲಿಕ್-ಉತ್-ತುಜ್ಜಾರ್ ಎಂಬ ಬಿರುದನ್ನು ಕೊಟ್ಟು ಬಿಜಾಪುರದ ರಾಜ್ಯಪಾಲನನ್ನಾಗಿ ನೇಮಿಸಿದ.

ಹುಮಾಯೂನನ ನಂತರ ಅವನ ಕಿರಿಯ ವಯಸ್ಸಿನ ಎಂಟು ವರ್ಷದ ಮಗ ನಿಜಾಮ್ ಷಾ ಬಹಮನೀ ರಾಜ್ಯದ ಸಿಂಹಾಸನವನ್ನೇರಿ, ಕೇವಲ ಎರಡು ವರ್ಷ ಆಳಿದ. ಈ ಕಾಲದಲ್ಲಿ ಆಡಳಿತವೆಲ್ಲವು ಮೂರು ಜನ ಸದಸ್ಯರುಗಳನ್ನು ಒಳಗೊಂಡ ಆಡಳಿತ ಮಂಡಲಿಯ ಕೈಯಲ್ಲಿತ್ತು– ನಿಜಾಮ್ ಷಾನ ತಾಯಿ ನರ್ಗೀಸ್ ಬೇಗಂ, ಮಹಮೂದ್ ಗಾವಾನ್ ಮತ್ತು ಖಾಜ ಜಹಾನ್ ಟರ್ಕ– ಈ ಮೂವರಲ್ಲಿ ರಾಣಿಯೇ ಪ್ರಧಾನಳು. ರಾಣಿ ಸಾರ್ವಜನಿಕವಾಗಿ ಹೊರಗೆ ಕಾಣಿಸಿಕೊಳ್ಳದೇ ಹೋದರೂ ಮಂಡಲಿಯ ಸಹವರ್ತಿಗಳೊಂದಿಗೆ ಮತ್ತು ವಿಶೇಷ ದೂತರ ನೆರವಿನಿಂದ ದಿನನಿತ್ಯದ ವಾರ್ತೆಯನ್ನು

ತಿಳಿಯುತ್ತಿದ್ದಳು. ಬಾಲಕ ಅರಸ ನಿತ್ಯವು ದರ್ಬಾರಿನಲ್ಲಿ ಕಾಣಿಸಿಕೊಂಡು ಜನರ ಕುಂದು ಕೊರತೆಗಳನ್ನು ವಿಚಾರಿಸುವ ವ್ಯವಸ್ಥೆಯನ್ನು ಏರ್ಪಡಿಸಿದಳು. ಹುಮಾಯೂನ್‌ನ ಕಾಲದಲ್ಲಿ ಕ್ರೂರ ದಬ್ಬಾಳಿಕೆಗೆ ಗುರಿಯಾಗಿದ್ದವರೆಲ್ಲರಿಗೂ ಸಾಮೂಹಿಕ ಸಾಂತ್ವನ ನೀಡಲಾಯಿತು. ಇಂತಹ ಕ್ರಮವನ್ನು ಕೈಗೊಂಡ ಕೀರ್ತಿ ಮಹಮೂದ್ ಗಾವಾನನಿಗೆ ಸಲ್ಲುತ್ತದೆ.

ಆಡಳಿತ ಮಂಡಳಿಯು ಸತತ ಸಾಧನೆಯಿಂದಾಗಿ ರಾಜ್ಯದಲ್ಲಿ ಮಹತ್ತರ ಸುಧಾರಣೆಗಳುಂಟಾದವು. ಇದನ್ನರಿಯದ, ಬಾಲಕನ ಆಳ್ವಿಕೆಯ ದುರ್ಲಾಭ ಪಡೆಯಲು ಒರಿಸ್ಸಾದ ಅರಸ ಕಪಿಲೇಂದ್ರ, ತೆಲಿಂಗಾನದ ನೆರವಿನಿಂದ ಬಹಮನೀಯ ಮೇಲೆ ದಂಡೆತ್ತಿ ಬಂದ. ಅವನ ಸೇನೆ ಬೀದರನವರೆವಿಗೂ ಧಾವಿಸಿತು. ಮಹಮೂದ್ ಗಾವಾನ್ ಮತ್ತು ಖ್ವಾಜ ಜಹಾನರ ಸಮರ್ಥ ನಾಯಕತ್ವದಲ್ಲಿ ಬಹಮನೀಯ ಸೇನೆ ಕಪಿಲೇಂದ್ರನನ್ನು ಸೋಲಿಸಿ ಹಿಂದಕ್ಕೆ ಓಡಿಸಿತು. ಈ ಘಟನೆ ಮುಗಿಯುತ್ತಿದ್ದಂತೆಯೇ ಮಾಳ್ವದ ಸುಲ್ತಾನ ಮಹಮೂದ್ ಖಿಲ್ಜೀ ಯುದ್ಧವನ್ನು ಸಾರಿದ. ಬಹಮನೀಯ ಉತ್ತರದ ಪ್ರದೇಶವೆಲ್ಲವು ಅವನ ಕೈವಶವಾಗಿ ಕೆಲಕಾಲ ಬೀದರವೂ ಆಕ್ರಮಿಸಲ್ಪಟ್ಟಿತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮಹಮೂದ್ ಗಾವಾನ್ ಅನ್ಯಮಾರ್ಗವಿಲ್ಲದೆ ಗುಜರಾತಿನ ಸುಲ್ತಾನ ಮಹಮೂದ್ ಬೆಗರನ ನೆರವನ್ನು ಯಾಚಿಸಿದ. ಗುಜರಾತ್ ಮತ್ತು ಬಹುಮನೀಯ ಸೈನ್ಯಗಳು ಜೊತೆಗೂಡಿ ಮಾಳ್ವದ ಸೇನೆಯನ್ನು ಸೋಲಿಸಿ ಹಿಂದಕ್ಕಟ್ಟಿದವು. ಮತ್ತೊಮ್ಮೆ ೧೪೬೨ರಲ್ಲಿ ಮಹಮೂದ್ ಖಿಲ್ಜೀ ಬಹಮನೀಯ ಮೇಲೆ ಯುದ್ಧವನ್ನು ಸಾರಿದರೂ, ಜಯವನ್ನು ಸಂಪಾದಿಸದೆ ಹಿಂದಿರುಗಬೇಕಾಯಿತು.

ನಿಜಾಮ್ ಷಾ ಬಹಮನೀ ೧೪೬೩ರ ಜುಲೈ ೩೦ರಲ್ಲಿ ದಿಬ್ಬಣದ ದಿವಸವೇ ಮರಣ ಹೊಂದಿದ. ಅವನ ತಮ್ಮ ಮೂರನೇ ಮಹಮ್ಮದ್ ಷಾ ಅರಸನಾಗಿ ಅಭಿಷಿಕ್ತಗೊಂಡ. ಆಡಳಿತ ಮಂಡಲಿಯ ನಿರ್ವಹಣೆ ೧೪೬೬ರ ವರೆವಿಗೂ ಮುಂದುವರಿಯಿತು. ಖ್ವಾಜ ಜಹಾನ್ ಟರ್ಕ್‌ನ ಬಗ್ಗೆ ಅನುಮಾನ ತಾಳಿದ ರಾಣಿ ದರ್ಬಾರ್ ಭವನದಲ್ಲೇ ಅವನಿಗೆ ಮರಣದಂಡನೆಯನ್ನು ನೀಡಿದಳು. ರಾಣಿ ಗಾವನನನ್ನು ಪ್ರಧಾನಿಯನ್ನಾಗಿ ನೇಮಿಸಿ, 'ಖ್ವಾಜ ಜಹಾನ್' ಮತ್ತು 'ಅಮೀರ್–ಉಲ್ ಉಮರಾ' ಎಂಬ ಬಿರುದುಗಳನ್ನು ನೀಡಿ ಗೌರವಿಸಿದಳು. ಗಾವಾನನು ಕಿರಿಯ ಅರಸನ ವಿದ್ಯೆಗಾಗಿ ಎಲ್ಲ ವ್ಯವಸ್ಥೆಯನ್ನು ಏರ್ಪಡಿಸಿದ. ಮಹಮ್ಮದ್ ಷಾ ಹದಿನೈದು ವರ್ಷ ತುಂಬುವವರೆವಿಗೂ ಅವಳು ಅಧಿಕಾರ ಸೂತ್ರವನ್ನು ಹಿಡಿದಿದ್ದು, ಅನಂತರ ಗಾವಾನನ ಕೈಯಲ್ಲಿರಿಸಿ, ತೆರೆಯ ಹಿಂದೆ ಸರಿದಳು. ಆದರೂ ರಾಜ್ಯದ ಆಡಳಿತದ ಮೇಲೆ ತನ್ನ ಹದ್ದಿನ ಕಣ್ಣನ್ನು ಇಟ್ಟಿದ್ದಳು.

ಮಹಮೂದ್ ಗಾವಾನನು ಸುಮಾರು ಹದಿನೈದು ವರ್ಷಗಳ ಕಾಲ ನಾಡಿನ ಏಳಿಗೆಗಾಗಿ ಸತತವಾಗಿ ದುಡಿದ. ಅವನು ರಾಜ್ಯದ ಆಡಳಿತದ ಶಕ್ತಿಯಾಗಿದ್ದನು. ಅವನು ವಿಜಯನಗರ ಮತ್ತು ಒರಿಸ್ಸಾ ರಾಜ್ಯಗಳೊಂದಿಗೆ ಹೋರಾಡಿ ಒರಿಸ್ಸಾದಿಂದ ಗೋವಾದವರೆವಿಗೂ ಬಹಮನೀ ರಾಜ್ಯವನ್ನು ವಿಸ್ತರಿಸಿದ. ಅವನ ಸೈನಿಕ ಸಾಧನೆಯಿಂದಾಗಿ ಹುಬ್ಬಳ್ಳಿ, ಬೆಳಗಾಂ ಮತ್ತು ಬಾಗಲ್ಕೋಟೆ ಬಹಮನೀಯ ಆಧಿಪತ್ಯಕ್ಕೆ ಒಳಪಟ್ಟವು. "ಗೋವಾ ಶತ್ರುಗಳ ದ್ವೀಪ"ವಾಗಿತ್ತೆಂದು ಗವಾನನೇ ಹೇಳುತ್ತಾನೆ. ಅವನೆಲ್ಲ ಸಾಧನೆಗಳು ಅವನಿಗೆ 'ಲಷ್ಕರಿ' ಎಂಬ ಬಿರುದನ್ನು ತಂದುಕೊಟ್ಟವು.

ಗಾವಾನನು ರಾಜಧಾನಿಯಾದ ಬೀದರನ್ನು ಸುಂದರಗೊಳಿಸಿದ. ಉನ್ನತವಾದ ಕಟ್ಟಡಗಳನ್ನು ನಿರ್ಮಿಸಿದ. ೧೪೭೦ರಲ್ಲಿ ಬಹಮನೀ ರಾಜ್ಯವನ್ನು ಸಂದರ್ಶಿಸಿದ ರಷ್ಯಾದ ಯಾತ್ರಿಕ ಅಥನಸಿಯಾಸ್ ನಿಕಿತಿನ್ ಎಂಬುವವನು ಬೀದರನ್ನು "ಮಹಮ್ಮದೀಯ ಹಿಂದುಸ್ಥಾನದಲ್ಲೇ ಪ್ರಮುಖ ಪಟ್ಟಣವೆಂದು" ಹೊಗಳಿದ್ದಾನೆ. ಇಂತಹ ಸಂಪದ್ಭರಿತ ಪಟ್ಟಣದಲ್ಲಿ 'ಮದ್ರಸ' ಅಥವಾ ಮುಸ್ಲಿಂ ಕೇಂದ್ರವನ್ನು ಸ್ಥಾಪಿಸಿ, ಆ ನಗರಕ್ಕೆ ಜೀವಕಳೆ ತುಂಬಿದ ಕೀರ್ತಿ ವಿದ್ಯಾ ಪಕ್ಷಪಾತಿಯಾದ ಮಹಮೂದ್ ಗಾವಾನಿಗೆ ಸಲ್ಲುತ್ತದೆ. ಮದ್ರಸಕ್ಕೆ ತಾಗಿದಂತೆಯೇ ಗ್ರಂಥ ಭಂಡಾರವನ್ನು ಸ್ಥಾಪಿಸಿದ. ಇದಕ್ಕೆ ತನ್ನಲ್ಲಿದ್ದ ೨೦೦೦ ಗ್ರಂಥಗಳನ್ನು ದಾನ ಮಾಡಿದ. ತನ್ನ ಖರ್ಚಿನಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಿಸಿದ. ಅವನು ಕಟ್ಟಿಸಿದ ವಿದ್ಯಾಲಯ ಇಂದಿಗೂ ಬೀದರಿನಲ್ಲಿ ಉಳಿದಿದೆ. ಈ ವಿದ್ಯಾಕೇಂದ್ರದಲ್ಲಿ ಸಾಹಿತಿಗಳು, ತತ್ವಶಾಸ್ತ್ರಜ್ಞರು ಮತ್ತು ವಿಜ್ಞಾನಿಗಳು ಇದ್ದರು. ಅಧ್ಯಾಪಕರಿಗೆ ವಿದ್ಯಾರ್ಥಿಗಳಿಗೆ ಉಚಿತ ವಸತಿ ಮತ್ತು ಊಟವನ್ನು ಏರ್ಪಡಿಸಿದ್ದನು. ಅವನ ಆಡಳಿತದ ಸುಧಾರಣೆಗಳು ದೆಕನಿಯರಾ ಆಸ್ಥಾನಿಕರಲ್ಲಿ ದ್ವೇಷಾಸೂಯೆ ಹುಟ್ಟಿಸಲು ಕಾರಣವಾಯಿತು. ಇದು ಅವನ ಜೀವ ಹತ್ಯೆಯಲ್ಲಿ ಪರ್ಯವಸಾನವಾಯಿತು.

ಬಹಮನೀ ಆಸ್ಥಾನಿಕರಲ್ಲಿ ಪ್ರಬಲವಾದ ಎರಡು ಬಣಗಳಿದ್ದವು. ಅವುಗಳೇ ಪರದೇಸಿಯರು ಅಥವಾ ವಿದೇಶಿಯರು ಮತ್ತು ದೆಕನಿಯರು ಅಥವಾ ಸ್ಥಳೀಯ ಮುಸ್ಲಿಮರು. ಈ ಎರಡು ಬಣಗಳ ಮುಸ್ಲಿಮರು ಹೊರಗಿನಿಂದ ಬಂದು ಭಾರತದ ನೆಲದ ಮೇಲೆ ನೆಲೆಸಿದವರೇ. ದೆಕನಿಯರ ಪೂರ್ವಿಕರು ನೂರು ವರ್ಷಗಳ ಹಿಂದೆ ದಕ್ಷಿಣ ಭಾರತಕ್ಕೆ ಬಂದು ನೆಲೆಸಿ, ಇಲ್ಲಿಯ ಜನರೊಂದಿಗೆ ಬೆರೆತುಹೋದವರು. ಈ ವೇಳೆಗೆ ಬಹಮನೀ ಆಸ್ಥಾನದಲ್ಲಿ ಪರದೇಸೀಯರು ಮಹಮೂದ್ ಗವಾನನ ನೇತೃತ್ವದಲ್ಲಿ ಪ್ರಬಲರಾದರು. ಇದನ್ನು ನೋಡಿ ಸಹಿಸಲಾರದ ಸ್ಥಳೀಯ ಮುಸ್ಲಿಮರು ಕರುಬ ತೊಡಗಿದರು. ಗಾವಾನನ ನಾಶಕ್ಕೆ ಸಂಚುಹೂಡಿದರು. ತೆಲಿಂಗಾನದ ತರಫ್ದಾರ, ಹಸನ್ ನಿಜಾಮ್-ಉಲ್‌ಮುಲ್ಕ ಬಹ್ರಿ ಬಹಮನೀ ಆಸ್ಥಾನದಲ್ಲಿ ದೆಕನಿಯರ ಪಕ್ಷದ ನಾಯಕನಾಗಿದ್ದನು. ನಾಡಿನ ಸೌಖ್ಯಕ್ಕಾಗಿ ಮತ್ತು ನ್ಯಾಯದ ದೃಷ್ಟಿಯಿಂದ

ಪರದೇಸೀಯ ಮತ್ತು ದೆಕನಿಯರ ನಡುವೆ ಯಾವ ಅಸಮಾನತೆಗೂ ಗಾವಾನನು ಅವಕಾಶ ಕೊಟ್ಟಿರಲಿಲ್ಲ. ಸ್ಥಳೀಯ ಮುಸ್ಲಿಮರು ಸಾಕಷ್ಟು ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದರೂ, ಹಸನ್ ನಿಜಾಮ್ ಉಲ್–ಮುಲ್ಕನು ಈ ಜನಪ್ರಿಯ ಪ್ರಧಾನಿಯ ಪತನಕ್ಕಾಗಿ ಅವಕಾಶವನ್ನು ಕಾಯುತ್ತಿದ್ದನು.

ಮಹಮೂದ್ ಗಾವಾನನು ನಾಡಿನ ಆಡಳಿತವನ್ನು ಉತ್ತಮಗೊಳಿಸಿದ. ಆರ್ಥಿಕ ಶಾಖೆಯನ್ನು ಪುನರುಜ್ಜೀವನಗೊಳಿಸಿದ; ನ್ಯಾಯಾಡಳಿತವನ್ನು ಉತ್ತಮಗೊಳಿಸಿದ; ವಿದ್ಯೆಗೆ ಪ್ರೋತ್ಸಾಹ ನೀಡಿದ, ಭೂಮಿಯನ್ನು ಅಳೆದು ನಿಗದಿಯಾದ ನ್ಯಾಯವಾದ ಕಂದಾಯದಿಂದ ರಾಜ್ಯದ ಬೊಕ್ಕಸವನ್ನು ತುಂಬಿದ. ಬಹಮನೀಯ ನಾಲ್ಕು ಪ್ರಾಂತ್ಯಗಳನ್ನು ಎರಡು ಭಾಗಗಳನ್ನಾಗಿ ಮಾಡಿ, ಆಯಾ ಸರ್ಕಾರಗಳು ನಡೆಯುವುದಕ್ಕೆ ಹಲವಾರು ಕಾನೂನುಗಳನ್ನು ನಿರೂಪಿಸಿದ. ಇದರಿಂದ ಪ್ರಾಂತ್ಯಾಧಿಕಾರಿಗಳ ಅಥವಾ ತರಫ್ದಾರ ಅಧಿಕಾರವನ್ನು ಮೊಟಕು ಮಾಡಿದ. ಅವರೆಲ್ಲರೂ ಕೇಂದ್ರ ಸರಕಾರಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಮುಳ್ಳಾಗಿದ್ದರು. ಅವನೆಲ್ಲ ಸುಧಾರಣೆಗಳು ಸರ್ಕಾರದ ಕಾರ್ಯಕ್ಷಮತೆಯನ್ನು ಹೆಚ್ಚಿಸಿದವು. ಆದರೆ ಆಡಳಿತದ ಸುಧಾರಣೆಗಳು ಸ್ಥಳೀಯ ಮುಸ್ಲಿಮರಲ್ಲಿ ಸಾಕಷ್ಟು ಅಪ್ರಿಯತೆಯನ್ನು ಉಂಟುಮಾಡಿದವು. ಅನೀತಿವಂತನಾದ ಹಸನ್ ಮತ್ತು ಅವನ ಅನುಯಾಯಿಗಳು ಗಾವಾನನ ಹತ್ಯೆಗೆ ಸಂಚು ಹೂಡಿದರು. ಅವನಿಂದಲೇ ದೆಕನಿಯರಲ್ಲಿ ಬಹು ಜನರು ಉನ್ನತಾಧಿಕಾರವನ್ನು ಪಡೆದಿದ್ದರೂ, ಅವರು ಅವನ ಹತ್ಯೆಗೆ ಸಂಚುಹೂಡಿದುದು ನಾಡಿನ ದೌರ್ಭಾಗ್ಯವಾಯಿತು. ಗಾವಾನನ ಬಲಗೈ ಎನಿಸಿದ ಯೂಸುಫ್ ಆದಿಲ್ ಖಾನ್‌ನನ್ನು ತೆಲಿಂಗಾಣಕ್ಕೆ ಯುದ್ಧಕ್ಕೆ ಕಳುಹಿಸಿದ ಮೇಲೆ ಫಿತೂರಿಗಾರರಿಗೆ ದಾರಿ ಸುಗಮವಾಯಿತು. ಫಿತೂರಿಗಾರರು ಗಾವಾನನ ಆಪ್ತ ಕಾರ್ಯದರ್ಶಿಯನ್ನು, ಖಾಲಿ ಕಾಗದದ ಮೇಲೆ, ಅವನ ಖಾಸಗಿ ಮುದ್ರೆಯನ್ನು ಒತ್ತುವಂತೆ ಪ್ರೇರೇಪಿಸಿದರು. ಅನಂತರ ಆ ಕಾಗದದ ಮೇಲೆ, ರಾಜನ ಕುಡಿತದ ಚಟ ಮತ್ತು ಕ್ರೂರತನದಿಂದ ಜನರು ಬೇಸತ್ತಿದ್ದಾರೆಂದು, ಅವಕ್ಕೋಸ್ಕರ ಓರಿಸ್ಸಾದ ರಾಜನಿಗೆ ಬಹಮನೀಯ ಮೇಲೆ ಯುದ್ಧಕ್ಕೆ ಆಹ್ವಾನಿಸಿದಂತೆ ಬರೆದು, ಆ ಪತ್ರವನ್ನು ರಾಜನು ಕುಡಿದ ಮತ್ತಿನ ಸಮಯದಲ್ಲಿ ಓದಲಾಯಿತು ಒಡನೆಯೇ ಒತ್ತಿ ಬಂದ ಕೋಪದಲ್ಲಿ ತನ್ನನ್ನು ತಾನೇ ಮರೆತ. ಗಾವಾನನನ್ನು ಆಸ್ಥಾನಕ್ಕೆ ಕರೆಸಲಾಯಿತು. ಮಿತ್ರರು ಎಚ್ಚರಿಸಿದರೂ ಅವನು ಗಮನವೀಯಲಿಲ್ಲ. ರಾಜ ಯಾವೊಂದು ವಿಚಾರಣೆಯನ್ನೂ ನಡೆಸದೆ "ರಾಜನಿಗೆ, ನಾಡಿಗೆ ದ್ರೋಹ ಬಗೆದ ಪಾಪಿಗೆ ಶಿಕ್ಷೆ ಏನು?"—ಎಂದು ಕೇಳಿದ. ಗಾವಾನನು ಮರುಮಾತಿಲ್ಲದ ಮುಗ್ಧನಾಗಿ ಉತ್ತರಿಸಿದ.

"ಶಿರಚ್ಛೇದನ."

ಅರಸ ಮಹಮ್ಮದ್‌ನು ಪತ್ರವನ್ನು ತೋರಿಸಿದ.

"ಅಯ್ಯೋ ದೇವರೇ! ಮುದ್ರೆ ನನ್ನದು. ಆದರೆ ಬರವಣಿಗೆ ನನ್ನದಲ್ಲ ಈ ವಿಷಯ ನನಗೇನು ತಿಳಿಯದು"—ಎನ್ನುತ್ತಾ ಕುಸಿದ. ಸಭಾಭವನವನ್ನು ಬಿಟ್ಟು ಹೋಗುವಂತೆ ಗಾವಾನನಿಗೆ ಅರಸ ಆಜ್ಞಾಪಿಸಿದ. ಅವನು ಹೊರಹೋಗುತ್ತಿದ್ದಂತೆಯೇ ಹಿಂದಿನಿಂದ ಇರಿದು ಕೊಲ್ಲಲಾಯಿತು. ಗವಾನನು ೧೪೮೧ ರ ಜುಲೈ ೫ ರಂದು ಅಮಾನುಷವಾಗಿ ಕೊಲೆಗೀಡಾದ. ಸುಮಾರು ಇಪ್ಪತ್ತೆಂಟು ವರ್ಷಗಳ ಕಾಲ ಸತತವಾಗಿ ಅತ್ಯಂತ ದಕ್ಷತೆಯಿಂದ ನಿಷ್ಠೆಯಿಂದ ಉದಾರವಾಗಿ ಸೇವೆ ಸಲ್ಲಿಸಿದ ಮಹಾನ್ ವ್ಯಕ್ತಿಗೆ ಸಂದ ಕಾಣಿಕೆ ಇದು! ಖ್ವಾಜಾ ಜಹಾನ್ ಮತ್ತು ಗಾವಾನ್–ಇಬ್ಬರಿಗೂ ಒಂದೇ ತೆರನಾದ ಶಿಕ್ಷೆ. ಮೊದಲನೆಯವನಿಗೆ ಮಾಡಿದ ಪಾಪಕ್ಕೆ ಶಿಕ್ಷೆಯಾದರೆ ಗಾವಾನನಿಗೆ ಸಲ್ಲಿಸಿದ ಸೇವೆಗೆ ಶಿಕ್ಷೆಯಾಯಿತು. ಇದು ವಿಧಿಯ ವಿಪರ್ಯಾಸ! ಕೊನೆಯಲ್ಲಿ ಫಿತೂರಿ ಬಯಲಾಗಿ ಮಹಮ್ಮದ್ ದುಃಖಸಾಗರದಲ್ಲಿ ಮುಳುಗಿದ. ಆದರೇನು ಕಾಲ ಮಿಂಚಿ ಹೋಗಿತ್ತು. ಗಾವಾನನ ದೇಹವನ್ನು ಸಕಲ ರಾಜಮರ್ಯಾದೆಗಳೊಂದಿಗೆ ಬೀದರ್‌ನಲ್ಲಿ ಸಮಾಧಿ ಮಾಡಲಾಯಿತು. ಇದೇ ದುಃಖದಲ್ಲಿ ದೊರೆ ಮಹಮ್ಮದ್ ಒಂದು ವರ್ಷದ ನಂತರ ತೀರಿಕೊಂಡ. ಸಾಯುವ ಗಳಿಗೆಯಲ್ಲಿ ಗಾವಾನನು ತನ್ನ ಹೃದಯ ಕೀಳುತ್ತಿದ್ದಾನೆಂದು ಅರಚುತ್ತಿದ್ದ. ಗಾವಾನನ ಸಾವಿನೊಂದಿಗೆ "ಬಹಮನೀ ರಾಜ್ಯದ ಸಂಘಟನ ಶಕ್ತಿ ನಾಶವಾಯಿತು."—ಎಂಬ ಮೆಡೋಸ್ ಟೇಲರರ ಉಕ್ತಿ ನಿಜಕ್ಕೂ ಅರ್ಥಪೂರ್ಣವಾದುದು. ಅವನ ಸಾವಿನೊಂದಿಗೆ ಬಹಮನೀ ರಾಜ್ಯದ ಪತನ ಆರಂಭವಾಯಿತು.

ಗ್ರಾಮನಾಮಗಳು : ಒಂದು ಮಾನವಶಾಸ್ತ್ರೀಯ ಅಭ್ಯಾಸ

● ಡಾ. ಕೆ. ಜಿ. ಗುರುಮೂರ್ತಿ

ಇಂದು ಶಾಸನ ತಜ್ಞರ, ಭಾಷಾಶಾಸ್ತ್ರಜ್ಞರ ಮತ್ತು ಮಾನವಶಾಸ್ತ್ರಜ್ಞರ ಗಮನ ಸೆಳೆದಿರುವ ಅನೇಕ ವಿಷಯಗಳಲ್ಲಿ ಸ್ಥಳನಾಮಗಳ ಅಭ್ಯಾಸ ಒಂದು. ಸ್ಥಳನಾಮಗಳ ಅಭ್ಯಾಸದೊಳಗೆ ನಗರಗಳ, ಊರುಗಳ, ಗುಡ್ಡ–ಬೆಟ್ಟಗಳ, ಹಳ್ಳ–ನದಿಗಳ, ಕಾಲುವೆ ಸರೋವರಗಳ, ಓಣಿ–ಬೀದಿಗಳ, ಅಗ್ರಹಾರಗಳ, ದೇವಾಲಯಗಳ, ನಾಡಿನ ಹೀಗೆ ಅನೇಕ ಸ್ಥಳಗಳ ವಿಷಯಗಳು ಸೇರಿವೆ. ಈ ಸ್ಥಳಗಳಿಗೆ ಬಂದ ಹೆಸರು ಯಾವುದು ? ಅದರ ಮೂಲವೇನು ? ಯಾರು ಕೊಟ್ಟರು ? ಏಕೆ ಕೊಟ್ಟರು ? ಮೂಲ ಭಾಷೆ ಯಾವುದು ? ಈ ಹೆಸರು ಕೊಟ್ಟ ಉದ್ದೇಶವೇನು ? ಅರ್ಥವೇನು ? ಸದ್ಯದ ಅದರ ನಿಜಾರ್ಥ ಅದಕ್ಕೆ ಇದೆಯೇ ? ಮುಂತಾದವುಗಳ ಅಭ್ಯಾಸ ನಮ್ಮ ಚರಿತ್ರೆ, ಸಂಸ್ಕೃತಿ. ಪ್ರಭಾವ. ಅಭಿರುಚಿ ಮುಂತಾದವುಗಳನ್ನು ಅರ್ಥಮಾಡಿಕೊಳ್ಳಲು, ಅಭ್ಯಾಸ ಮಾಡಲು ಸಹಾಯವಾಗುತ್ತದೆ. ಇಂತಹ ಅಭ್ಯಾಸಕ್ಕೆ ಜನಪದ, ಶಾಸನಗಳು, ಚರಿತ್ರೆ ಮತ್ತು ಸರಕಾರಿ ಹಾಗೂ ಖಾಸಗಿ ದಾಖಲೆಗಳ ಸಹಾಯ ಅಗತ್ಯವಾಗಿ ಬೇಕಾಗುತ್ತದೆ. ಈ ಅಭ್ಯಾಸ ಬಹುವಿಶಾಲವಾದದ್ದು ಮತ್ತು ಬಹು ಮಹತ್ವದ್ದು.

ಭಾರತ ದೇಶದಲ್ಲಿ ಈ ಸ್ಥಳನಾಮಗಳ ಅಭ್ಯಾಸದ ಚರಿತ್ರೆ ಸಾಕಷ್ಟು ಹಳೆಯ ದಾದರೂ ಪಾಶ್ಚಿಮಾತ್ಯ ದೇಶಗಳಂತೆ, ಅದರಲ್ಲೂ ಉತ್ತರ ಅಮೇರಿಕೆಯಲ್ಲಿಯಂತೆ, ಹೆಚ್ಚಾಗಿ ನಡೆದಿಲ್ಲ. ಅಲ್ಲಿ ಪ್ರತಿ ನಗರ–ಹಳ್ಳಿ, ಅಥವಾ ಪ್ರದೇಶದ ಹೆಸರಿನ ಬಗ್ಗೆ ತಜ್ಞರು ಸಾಕಷ್ಟು ಸಂಶೋಧನೆ ಮಾಡಿ ಪ್ರಕಟಿಸಿರುವರು. ಇಂದು ಅಮೇರಿಕೆಯ ಯಾವ ಸ್ಥಳದ ಬಗ್ಗೆಯಾದರೂ ವಿವರಗಳು ಪುಸ್ತಕ ಭಂಡಾರದಲ್ಲಿ ಲಭ್ಯವಿವೆ. ಇದೇ ಮಟ್ಟದ ಅಭ್ಯಾಸಗಳು ನಮ್ಮ ದೇಶದಲ್ಲಿ ನಡೆದರೆ ನಮ್ಮ ದೇಶದ ಚರಿತ್ರೆಯೂ ಬಹು ರಮ್ಯ ಹಾಗೂ ಆಳವಾಗುತ್ತದೆ.

ಈ ದಿಶೆಯಲ್ಲಿ ರೆ. ಕಿಟಲ್, ರೈಸ್ ಮುಂತಾದ ಪಾಶ್ಚಿಮಾತ್ಯರು ಬರೆದು ಆಗಲೇ ಕೆಲಸ ಪ್ರಾರಂಭಿಸಿ ಬಹಳ ದಿನಗಳಾದವು. ತದನಂತರ ಶ್ರೀ ಶಂ. ಭಾ. ಜೋಶಿ,

ಹುಯಿಲುಗೋಳ ಮುಂತಾದವರು ಬರೆದರು. ಇತ್ತೀಚೆಗೆ ಇಂತಹ ಅಭ್ಯಾಸದ ಅತ್ಯಾವಶ್ಯಕತೆಯನ್ನು ಮನಗಂಡು ಮೈಸೂರು ನಗರದಲ್ಲಿ ಸ್ಥಳನಾಮಗಳ ಅಭ್ಯಾಸದ ಭಾರತ ಮಟ್ಟದ ಅಕಾಡೆಮಿಯೊಂದು ಸ್ಥಾಪಿತವಾಗಿದೆ. ಇಲ್ಲಿ ತಜ್ಞರು ಸ್ಥಳನಾಮಗಳ ಅಭ್ಯಾಸವನ್ನೇ ಮುಖ್ಯವಾಗಿ ತೆಗೆದುಕೊಂಡು ಇದರಿಂದ ಭಾಷೆ, ಸಂಸ್ಕೃತಿ, ಬದಲಾವಣೆ, ಚರಿತ್ರೆ, ವಲಸೆಹೋಗುವುದು ಮುಂತಾದವುಗಳ ಬಗೆಗೆ ತಿಳಿಯಲು ಶ್ರಮಿಸುತ್ತಿದ್ದಾರೆ. ಈ ಅಕಾಡೆಮಿಯ ಅಧ್ಯಕ್ಷರಾದ ಡಾ॥ ದೇ. ಜ. ಗೌಡರು ನೀಡಿರುವ ವಿವರಣೆಯಂತೆ ಇಂತಹ ಬೃಹತ್ ಕಾರ್ಯ ಮಾಡುವುದು ಕೇವಲ ಒಂದೆರಡು ಸಂಸ್ಥೆಗಳಿಂದ, ವ್ಯಕ್ತಿಗಳಿಂದ ಸಾಧ್ಯವಿಲ್ಲ. ಇಂತಹ ಸಂಸ್ಥೆಗಳು ಜಿಲ್ಲೆಗೊಂದರಂತೆ ಸ್ಥಾಪಿತವಾಗಿ, ಅಲ್ಲಿಯ ಸಾವಿರಾರು ಹಳ್ಳಿಗಳನ್ನು, ಸ್ಥಳಗಳನ್ನು ಅಭ್ಯಾಸಮಾಡಿದರೆ ಮಾತ್ರ ಮುಂಬರುವ ೧–೨ ದಶಕಗಳಲ್ಲಿ ಈ ಕೆಲಸವನ್ನು ಸೂಕ್ತವಾಗಿ ಮಾಡಿ ಮುಗಿಸಬಹುದು. ಅಲ್ಲದೆ ಕೇವಲ ಕನ್ನಡದ ವಿದ್ಯಾರ್ಥಿಗಳು, ಭಾಷಾಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮಾತ್ರ ಮಾಡಿದರೆ ಮುಗಿಯುವ, ಸೂಕ್ತರೀತಿಯಲ್ಲಿ ಆಗುವ ಕೆಲಸ ಇದಲ್ಲ. ಎಲ್ಲಾ ರಂಗದಲ್ಲಿಯ ತಜ್ಞರು, ಮುಖ್ಯವಾಗಿ ಆಯಾ ಸ್ಥಳದಲ್ಲಿರುವ ನಾಗರಿಕರು, ಅಧಿಕಾರಿಗಳು, ಮುಂದಾಳುಗಳು ಈ ಬಗ್ಗೆ ಗಮನಹರಿಸಿದರೆ ಮಾತ್ರ ಸುಲಭಸಾಧ್ಯವಾಗಿ ಮಾಡಬಹುದಾದ ಕಾರ್ಯವಿದು (೧೯೮೦ರ ಧಾರವಾಡದ ಭಾಷಣ). ಡಾ॥ ದೇ. ಜ. ಗೌಡರವರ ಈ ಹಾರೈಕೆಯಿಂದಾಗಿ ಇಲ್ಲಿ ನಾನು ಕೇವಲ ಗ್ರಾಮನಾಮಗಳನ್ನು ಮಾತ್ರ ತೆಗೆದುಕೊಂಡು ಅಭ್ಯಾಸಮಾಡುವ ಒಂದು ಪ್ರಯತ್ನ ನಡೆಸಿದ್ದೇನೆ. ಅಭ್ಯಾಸಕ್ಕೆ ತೆಗೆದುಕೊಂಡ ಗ್ರಾಮಗಳು ನನಗೆ ಪರಿಚಯವಿರುವನಾದಾವ ಮಧ್ಯಕನ್ನಡ ಜಿಲ್ಲೆಗಳಾದ ಧಾರವಾಡ, ಚಿತ್ರದುರ್ಗ ಮತ್ತು ಶಿವಮೊಗ್ಗಕ್ಕೆ ಸೇರಿದವು. ನನ್ನ ಅಭ್ಯಾಸದ ದೃಷ್ಟಿ ಕೂಡ ಜನಪದ ಮತ್ತು ಮಾನವಶಾಸ್ತ್ರೀಯವಾದದ್ದು ಎಂಬುದನ್ನು ಓದುಗರು ಗಮನವಲ್ಲಿಟ್ಟುಕೊಳ್ಳಬೇಕು.

ಮಧ್ಯಕರ್ನಾಟಕದಲ್ಲಿ ಬರುವ ಗ್ರಾಮನಾಮಗಳು ಬಹುತೇಕವಾಗಿ ಹಟ್ಟಿ, ಹಳ್ಳಿ, ಕೇರಿ, ಊರು, ಹಾಳು, ಗೋಳ, ಮಡ, ಗೋಡು, ವಾಡ, ಗಾಂ, ಗಿರಿ, ಪುರ, ಕೊಂಡ, ಕಟ್ಟೆ, ಕೋಟೆ, ದುರ್ಗ ಮುಂತಾದವುಗಳಿಂದ ಕೊನೆಗೊಳ್ಳುತ್ತವೆ. ಈ ಕೊನೆಯ ಶಬ್ದದಿಂದ ನಮ್ಮ ಗ್ರಾಮನಾಮದ ಅಭ್ಯಾಸಕ್ಕೆ ಅನೇಕ ವಿಷಯಗಳು ಸಿಗುತ್ತವೆ. ಮೊದಲನೆಯದಾಗಿ ಈ ಪ್ರದೇಶ ಅಥವಾ ಹಳ್ಳಿ ಯಾವ ನಾಡಿನಲ್ಲಿದೆ, ಅದರ ಪ್ರಜಾಸಂಖ್ಯೆ ಎಷ್ಟು, ಅದು ಅಸ್ತಿತ್ವಕ್ಕೆ ಬಂದ ಕಾಲ ಯಾವುದು, ಅದು ಯಾವ ರಾಜರ, ಆಳ್ವಿಕೆಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು, ಮುಂತಾದವು ತಿಳಿಯುತ್ತವೆ. ಇಂದಿಗೂ ತಿಳಿಯುವಂತೆ "ಹಟ್ಟಿ" ಕೇವಲ ೨–೩ ಮನೆಗಳ ತಾಣ, ಅಲ್ಲಿ ಒಂದೇ ಜಾತಿಯವರೇ ವಾಸಮಾಡಿರಬಹುದು. ಹಳ್ಳಿಯು ೮–೧೦ ಮನೆಯ ತಾಣ. "ಕೇರಿ" ಒಂದು ಜಾತಿಯ ಅಥವಾ ೧೦–೧೨ ಮನೆ

ಗಳ ತಾಣ: "ಊರು" ಸ್ವಲ್ಪ ದೊಡ್ಡದು; "ಪುರ" ಮತ್ತು "ನಗರ"ಗಳು ಬಹು ದೊಡ್ಡವು.

ಇದರಂತೆ "ವಾಡ" ಮತ್ತು "ಗಾಂ"ಗಳು (ಧಾರವಾಡ, ಬೆಳಗಾಂ, ಶಿಗ್ಗಾಂ) ಮರಾಠಿ ಭಾಷೆಯಿಂದ ಬಂದುದರಿಂದ ಇವು ಮರಾಠರ ಆಳ್ವಿಕೆಯ ಕಾಲಕ್ಕೆ ಅಸ್ತಿತ್ವಕ್ಕೆ ಬಂದಿರಬಹುದು. ಹಾಳು (ಕೋಟೆಹಾಳು, ಬಾವಿಹಾಳು, ಮಾರಿಹಾಳು, ಜೋಳದಾಳು, ಕೈದಾಳು, ಮುರನಾಳು, ಕಾತರಾಳು, ಗೋಪನಾಳು) ಎಂಬುವು "ಹಾಳು" ಬಿದ್ದ ಗ್ರಾಮದ, ಅಂದರೆ ಯಾವುದಾದರೂ ಯುದ್ಧ ಅಥವಾ ಇಂತದ್ದೇ ವಿನಾಶಕಾರಿ ಘಟನೆಗೆ ಸಂಬಂಧಿಸಿದ ಗ್ರಾಮಗಳಿವು. ಮರಡಿ, ಗುಡ್ಡ ಮತ್ತು ಗಿರಿ (ಎತ್ತಿನ ಗುಡ್ಡ, ದೇವರ ಗುಡ್ಡ, ಚೆನ್ನಗಿರಿ) ಮುಂತಾಗಿ ಕೊನೆಗೊಳ್ಳುವ ಗ್ರಾಮಗಳು ಎತ್ತರವಾದ ಪ್ರದೇಶದಲ್ಲಿ ಇರುವ ತಾಣಗಳು. ಮಡ (ಹೂವಿನಮಡ, ಗೋಪಿನಮಡ) ಎಂಬುದು ಒಂದು ಬಗೆಯ ತಾಣ. ಗೋಡು (ಆನಗೋಡು, ಅತ್ತಿಗೋಡು, ಬನ್ನಿಕೋಡು, ಅಸಗೋಡು) ನಿಂದ ಕೊನೆಗೊಳ್ಳುವ ಗ್ರಾಮಗಳು ಆಯಕಟ್ಟಿನ ಪ್ರದೇಶದಲ್ಲಿರುವುದನ್ನು; ಕೊಂಡ (ಮಾಯಕೊಂಡ, ಆನೆಕೊಂಡ, ಜಾನಕೊಂಡ) ಎಂಬುವು ಅಲ್ಲಿದ್ದ ಕೊಂಡಗಳನ್ನು; ಕಟ್ಟೆ (ಗಂಗನಕಟ್ಟೆ, ಕರೆಕಟ್ಟೆ, ಹುಣಸೇಕಟ್ಟೆ) ಈ ಗ್ರಾಮಕ್ಕೆ ಹತ್ತಿರದ ಕೆರೆ ಕಟ್ಟೆಗಳಿಂದ ಬಂದಿದೆ. ಕೋಟೆ (ಬಾಗಿಲಕೋಟೆ, ತಾಳಿಕೋಟೆ)ಗಳು ಅಲ್ಲಿಯ ಕೋಟೆಗಳನ್ನು, ದುರ್ಗ (ಚಿತ್ರದುರ್ಗ, ರಾಮದುರ್ಗ, ಹೊಸದುರ್ಗ)ಗಳು ಚಲಿಸಲು ಕಷ್ಟಕರವಾದ (ದುರ್ + ಗಮ) ಪ್ರದೇಶದಲ್ಲಿ ಅಥವಾ ತಾಣದಲ್ಲಿರುವ ಊರುಗಳು ಎಂಬುದನ್ನು ತೋರಿಸುತ್ತವೆ. ಇದನ್ನೇ ಆಧಾರವಾಗಿಟ್ಟುಕೊಂಡು ಅಭ್ಯಾಸಮಾಡಿದರೆ ಈ ಊರುಗಳು, ನಾಡಿನ ಚರಿತ್ರೆಯ ಮೇಲೆ ಹೆಚ್ಚಿನ ಬೆಳಕನ್ನು ಬೀರಬಹುದು.

ಕೆಲವು ಗ್ರಾಮ ನಾಮಗಳು ಪ್ರಾಸಬದ್ಧವಾಗಿ ಬರುತ್ತವೆ. ಉದಾಹರಣೆಯಾಗಿ ಕೊಂಡಜ್ಜಿ ಮತ್ತು ಕಾಡಜ್ಜಿ; ಚಿತ್ರದುರ್ಗ, ಹೊಸದುರ್ಗ ಮತ್ತು ಭರಮಣ್ಣನಾಯಕನ ದುರ್ಗ; ಮಾಯಕೊಂಡ; ಆನೆಕೊಂಡ ಮತ್ತು ಜಾನಕೊಂಡ ಮುಂತಾದವನ್ನೆ ತೆಗೆದು ಕೊಳ್ಳಬಹುದು. ಈ ಗ್ರಾಮನಾಮಗಳು ಪ್ರಾಸಬದ್ಧವಾಗಿ ಬರುವುದು ಮಾತ್ರವಲ್ಲ ಈ ಗ್ರಾಮಗಳು ಅಕ್ಕಪಕ್ಕದಲ್ಲಿರುವುದರಿಂದ ಇವು ಒಂದೇ ಕಾಲದಲ್ಲಿ, ಒಬ್ಬರ ಆಳ್ವಿಕೆಯ ಕಾಲದಲ್ಲಿ ಅಸ್ತಿತ್ವಕ್ಕೆ ಬಂದುವುಗಳೆಂದೂ ನಂಬಬಹುದು.

ಗ್ರಾಮಗಳ ಪೂರ್ವಾರ್ಧ ನಾಮದಿಂದಲೂ ಅನೇಕ ವಿಷಯಗಳು ತಿಳಿದು ಬರುತ್ತವೆ. ಇವು ಮುಖ್ಯವಾಗಿ ಈ ಗ್ರಾಮ ಅಸ್ತಿತ್ವಕ್ಕೆ ಬಂದ ಉದ್ದೇಶ ತಿಳಿಸುತ್ತವೆ. ಉದಾಹರಣೆ-ಸಂತೆ(ಯ) ಬೆನ್ನೂರು, ಮಲೆ(ಯ) ಬೆನ್ನೂರು, ಮೋಟೇಬೆನ್ನೂರು

ರಾಣೆಬೆನ್ನೂರು- ಇವು ಈ ಊರುಗಳಿರುವ ಜಾಗವನ್ನೇ ತೋರಿಸುತ್ತವೆ. ಅಂದರೆ ಸಂತೆ ಸೇರುತ್ತಿದ್ದ ಜಾಗದ ಬೆನ್ನಿಗೆ ಇದ್ದ ಅಥವಾ ಮಲೆಯ (ಗುಡ್ಡದ) ಬೆನ್ನಿಗಿರುವ ಊರು ಹೀಗೆ. ಸುಲ್ತಾನಿಪುರ. ಕರೀಂ ನಗರ, ಮುಸಿರಾಬಾದ್‌ಗಳು ಮುಸಲ್ಮಾನರ ಆಳ್ವಿಕೆಯ ಸಂಬಂಧವನ್ನು; ಮಳಲಕೆರೆ- ಮರಳಿನಿಂದ. ಲೋಕಿಕೆರೆ–ಲೋಕನಾಥೇಶ್ವರಿಯ ಗುಡಿಯಿಂದ, ಮೆದಿಕೆರೆ–ಮೆದುವಿನಿಂದ, ಹೊದಿಗೆರೆ–ಪೊದೆಯಿಂದ: ಹನುಮನಹಳ್ಳಿ, ಭರಮಣ್ಣನಾಯಕನದುರ್ಗ. ಅಜ್ಜಿಹಳ್ಳಿ. ಗೌರಮ್ಮನ ಹಳ್ಳಿ. ಹುಚ್ಚವ್ವನಹಳ್ಳಿಗಳು ಈ ಹಳ್ಳಿಗಳನ್ನು ಆಯಾ ಹೆಸರಿನ ವ್ಯಕ್ತಿಗೆ ದತ್ತಕವಾಗಿ, ದಾನವಾಗಿ ನೀಡಿದ್ದನ್ನು: ಗೊಲ್ಲರಹಟ್ಟಿ, ಕುರುಬರಹಟ್ಟಿ, ವಡ್ಡರಹಟ್ಟಿ, ಇವು ಅಲ್ಲಿಯ ನಿವಾಸಿಗಳ ಜಾತಿಯನ್ನು ತಿಳಿಸುತ್ತವೆ.

ಅನೇಕ ಸಣ್ಣ ಗ್ರಾಮಗಳಾದ ಗೊಲ್ಲರಹಟ್ಟಿ, ಗೆದ್ದಲಟ್ಟಿ. ಕುರುಬರಟ್ಟಿ, ಮುಂತಾದ ಹಳ್ಳಿಗಳು ಸಣ್ಣವಿದ್ದು ಇದಕ್ಕೆ ಪ್ರತ್ಯೇಕ ಅಸ್ತಿತ್ವವಿಲ್ಲದೆ ಹತ್ತಿರದ ಯಾವುದಾದರೊಂದು ದೊಡ್ಡ ಗ್ರಾಮಕ್ಕೆ ಹೊಂದಿಕೊಂಡಿರುತ್ತವೆ. ಮುಂದೆ ಸರಕಾರದ ದಾಖಲೆಗೆಂದು ಅಥವಾ ಜನಬಳಕೆಯ ಅನುಕೂಲಕ್ಕೆ ಅವನ್ನು ಪಕ್ಕದ ದೊಡ್ಡಹಳ್ಳಿಯ ಗ್ರಾಮ ತಾಣದೊಳಗೆ ಸೇರಿಸಿ ಅದೇ ಹೆಸರಿನಿಂದ ಕರೆದಿರುವುದು ಕಂಡುಬರುತ್ತದೆ. ಇಲ್ಲಿ ಉದಾಹರಣೆಯಾಗಿ ಹೊಸ್ನೂರ-ಗೊಲ್ಲರಟ್ಟಿ, ತಣಿಗೆರೆ—ಕುರುಬರಟ್ಟಿ ಮುಂತಾದವು. ಅನೇಕ ಗೊಲ್ಲರ ಅಥವಾ ಕುರುಬರ ಹಳ್ಳಿಗಳಿದ್ದು ನಿರ್ದಿಷ್ಟವಾಗಿ ತಿಳಿಯಲು ಈ ಹತ್ತಿರದ ಯಾವುದಾದರೊಂದು ಊರಿನೊಂದಿಗೆ ಹೇಳುವುದು ಹೊಸ ಹೆಸರನ್ನೇ ತಂದಿತು. ಇಂದು ಈ "ಹಟ್ಟಿ"ಗಳು ಬೆಳೆದು, ತಾವು ಅನ್ವರ್ಥನಾಮ ಪಡೆದ ಊರುಗಳಿಗಿಂತಲೂ ದೊಡ್ಡದಾಗಿರುವ ನಿದರ್ಶನಗಳಿವೆ. ಆದರೂ, ಇಂದಿಗೂ ಜನ ಬಳಕೆಯಲ್ಲಿ ಇದನ್ನು ದೊಡ್ಡ ಊರ ಹೆಸರಿನಿಂದಲೇ ಕರೆಯುವುದು ಕಂಡುಬರುತ್ತದೆ. ಇಂತಹ ಹಳ್ಳಿಗಳ ಹುಟ್ಟಿಗೆ ಕಾರಣಗಳೆಂದರೆ ಹಿಂದಿನ ಕಾಲದಲ್ಲಿ ಅಲೆಮಾರಿಗಳಾದ ಗೊಲ್ಲರು, ಕುರುಬರು, ಲಂಬಾಣಿಗಳು ತಮ್ಮ ಪ್ರವಾಸ ಕಾಲದಲ್ಲಿ ಒಂದು ಊರಿಗೆ ಬಂದಾಗ ಸಾಮಾನ್ಯವಾಗಿ ಊರಿನಿಂದ ಸ್ವಲ್ಪದೂರದಲ್ಲಿ ಕೆಲಕಾಲ ನೆಲೆಸಿದ್ದು, ಮುಂದಕ್ಕೆ ಹೋಗಿಬಿಡುತ್ತಿದ್ದರು. ಅಲ್ಲೇ ಬಂದು ನೆಲೆಸಿದಾಗ ಆ ತಾತ್ಪೂರ್ತಿಕ ನೆಲೆಗಳಿಗೆ ಈ ಹೆಸರು ಬಂದವು.

ಇದೇ ರೀತಿಯಲ್ಲಿ ಬರುವ ಇತರೆ ಗ್ರಾಮನಾಮಗಳೆಂದರೆ ದೊಡ್ಡ-ಸಣ್ಣ ಮತ್ತು ಹಿರೆ ಮತ್ತು ಚಿಕ್ಕ ಪೂರ್ವನಾಮ ಹೊಂದಿದ ಹೆಸರುಗಳು. ಉದಾಹರಣೆಗೆ ಮಂಗಳೂರು- ಚಿಕ್ಕಮಂಗಳೂರು, ಬೆನ್ನೂರು- ಚಿಕ್ಕಬೆನ್ನೂರು, ಹಿರೇತೊಗಲೇರಿ–ಚಿಕ್ಕತೊಗಲೇರಿ, ಜಾಜೂರು–ಚಿಕ್ಕಜಾಜೂರು. ಹಿರೇಕೆರೂರು–ಚಿಕ್ಕಕೆರೂರು. ಹಿರೇಕುಂದುವಾಡ-ಚಿಕ್ಕಕುಂದುವಾಡ, ಮುಂತಾದವು. ಈ ಊರುಗಳು ಒಂದರ ಪಕ್ಕದಲ್ಲಿ, ಕೆಲವೇ ಮೈಲಿಗಳ ಅಥವಾ ಕೇವಲ ಕೆಲವೇ ಫರ್ಲಾಂಗುಗಳ ಅಂತರದಲ್ಲಿರಬಹುದು

ಅಥವಾ ಹೆಚ್ಚು ದೂರದಲ್ಲಿರಬಹುದು. ಇದಕ್ಕೆ ನಿರ್ದಿಷ್ಟವಾದ ಕಾರಣ ಕೊಡಬರುವುದಿಲ್ಲವಾದರೂ ಹಿಂದೆ ಯಾವುದೋ ಕಾಲದಲ್ಲಿ ಪ್ಲೇಗು, ಕಾಲರಾ, ಮೈಲಿಬೇನೆ ಮುಂತಾದ ರೋಗದ ಮತ್ತು ದುಷ್ಟಶಕ್ತಿಗಳ ಹೆದರಿಕೆಯಿಂದ ಒಂದು ಊರಿನ ಜನ ಪೂರ್ವದ ವಾಸಸ್ಥಳ ಬಿಟ್ಟು ಹೊಸ ತಾಣಕ್ಕೆ ಬಂದಿರಬಹುದು. ತದನಂತರ ಕೆಲವು ಮನೆತನಗಳು ಹಳೆಯಗ್ರಾಮಕ್ಕೆ ಹಿಂದಕ್ಕೆ ಹೋಗಿದ್ದರಿಂದ ಒಂದೇ ಹೆಸರಿನ ಎರಡು ಊರುಗಳು ಹುಟ್ಟಿಕೊಂಡವು. ಜನಸಂಖ್ಯೆಯಲ್ಲಿ ಸ್ಥಳಗಾತ್ರದಲ್ಲಿ ದೊಡ್ಡದು ದೊಡ್ಡ ಊರು, ಚಿಕ್ಕದು ಚಿಕ್ಕದೆಂದು ಹೆಸರು ಪಡೆದಿರಬಹುದು. ಇಂತಹ ಹೆಸರುಗಳ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಇಂದಿನ ನಗರಗಳ ಬೆಳವಣಿಗೆಯನ್ನು ಗಮನಿಸಬಹುದು. ದೊಡ್ಡಗ್ರಾಮ ಬೆಳೆದಂತೆ ಕೆಲವಾರು ಮನೆತನಗಳು ತಮ್ಮ ಹೊಲಕ್ಕೆ ಹತ್ತಿರವಾಗಿ ಸಣ್ಣ ಊರು ಕಟ್ಟಿಕೊಂಡು, ಅದೇ ಹೆಸರಿನಿಂದ ಮುಂದುವರೆದಾಗಲು ಈ ಹೆಸರು ಬಂದಿರುವದು ಸಾಧ್ಯವಿದೆ. ಇಂದು ಈ ದೊಡ್ಡ ಹೆಸರಿನ ಊರು ಆಕಾರ ಮತ್ತು ಜನಸಂಖ್ಯೆಯಲ್ಲಿ ಚಿಕ್ಕದು, ಚಿಕ್ಕದು ದೊಡ್ಡದಾಗಿಯೂ ಬೆಳೆದಿರಬಹುದಾದರೂ ಅನೇಕ ಹಳೆಯ ಹೆಸರುಗಳು ಮುಂದುವರೆದ ಉದಾಹರಣೆಗಳಿವೆ.

ಇದೇ ರೀತಿ ಒಂದು ಗ್ರಾಮನಾಮದಿಂದ ಅದು ಯಾವ ರಾಜರ ಆಳ್ವಿಕೆಗೆ ಸೇರಿದ್ದು ಎಂಬುದನ್ನು ತಿಳಿಯಬಹುದು. ಉದಾಹರಣೆಗೆ "ಬಾಡ" ಎಂಬ ಗ್ರಾಮ ನಾಮ ಮುಸಲ್ಮಾನರ, ಅದರಲ್ಲೂ ಬಿಜಾಪುರದ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಬಂದ ಹೆಸರೆಂದು ಹೇಳಬಹುದು. (ಅನೇಕ ಸಂದರ್ಭಗಳಲ್ಲಿ ಈ ಹೆಸರುಗಳು ಹಿಂದಿನ ಅಗ್ರಹಾರಗಳಿಗೆ ನೀಡಲಾಗಿದೆ ಎಂಬುದು ನನ್ನ ಅಭಿಪ್ರಾಯ. ಇದಕ್ಕೆ ಧಾರವಾಡ ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿರುವ ಬಾಡ ನಾಮದ ಗ್ರಾಮಗಳೇ ಸಾಕ್ಷ್ಯ). ಮುಸಲ್ಮಾನಿಯಲ್ಲಿ "ಬಾತ್" ಎಂದರೆ ಬಾಡಿಗೆ. ಅಗ್ರಹಾರಗಳಾಗಿದ್ದ ಈ ಗ್ರಾಮಗಳನ್ನು ಗೆದ್ದ ಮುಸಲ್ಮಾನರು ಹಾಳುಗೆಡವಿ ಇದನ್ನು ತಮ್ಮ ಜಾತಿಯವರಿಗೆ ದತ್ತಿ ನೀಡಲಾಯಿತು. ಇದಕ್ಕೆ ಆ ಗುತ್ತಿಗೆದಾರ ನಾಡಿನ ಆಳ್ವರಸರಿಗೆ ಕೆಲವೊಂದು ಸೇವೆಗಳನ್ನು ಮಾಡಬೇಕಿದ್ದಿತು.

ಒಂದು ಪ್ರದೇಶದಲ್ಲಿನ ಕೆಲವಾರು ಪ್ರಾಸಬದ್ಧ ಅಥವಾ ಪ್ರಾಸವಲ್ಲದ ಹೆಸರುಗಳಲ್ಲಿ ಯಾವುದಾದರೊಂದು ಪುರಾಣ ಅಥವಾ ಕಾಲ್ಪನಿಕ ಕತೆಗೆ ಹಚ್ಚಿ ಹೇಳುವ ಗ್ರಾಮ ನಾಮಗಳ ಸಾಲುಗಳಿವೆ. ಉದಾಹರಣೆಗೆ ದಾವಣಗೆರೆ ತಾಲ್ಲೂಕಿನ ಆನಗೋಡು, ಉಳಪಿನಕಟ್ಟೆ, ಸೊಂಡೇಕೊಳ, ಆನೆಕೊಂಡ ಮುಂತಾದವನ್ನು ಶ್ರೀ ರೇವಣಸಿದ್ಧನ ಪುರಾಣಕ್ಕೆ ಸಂಬಂಧಿಸಿದ ಕತೆಯಾಗಿ ಹೇಳುತ್ತಾರೆ. ಪುರಾಣ ಕತೆಯಂತೆ ಪವಾಡ ಪುರುಷನಾದ ರೇವಣಸಿದ್ಧನನ್ನು ಅನ್ಯಧರ್ಮಿಯಾದ ಆ ನಾಡಿನ ನಾಯಕ ಹಿಡಿದು ತರಲು ತನ್ನ ಭಟರನ್ನು ಕಳುಹಿಸುತ್ತಾನೆ. ಅವರಿಂದ ತಪ್ಪಿಸಿಕೊಳ್ಳುತ್ತಿದ್ದ ರೇವಣಸಿದ್ಧನಿಗೆ ಮದಿಸಿದ ಆನೆಯೊಂದನ್ನು ಬೆನ್ನಟ್ಟಿಸುತ್ತಾರೆ. ಕೊನೆಗೆ ರೇವಣಸಿದ್ಧನೇ ಆ

ಆನೆಯನ್ನು ಹಿಡಿದು ಅದರ ಕೋಡು, ಸೊಂಡಿಲು ಮುರಿದು ಎಸೆಯುತ್ತಾನೆ. ಅದೇ ಮುಂದೆ ಆನಗೋಡು, ಸೊಂಡೇಕೊಳ ಗ್ರಾಮಗಳಾದವು. ಮುಂದೆ ಆನೆಯನ್ನು ನೆಲದಲ್ಲಿ ತುಳಿಯುತ್ತಾನೆ. ಅದೇ ಆನೆಕೊಂಡ ಗ್ರಾಮವಾಯಿತು. ಆನೆಯಿಂದ ಮತ್ತು ರಾಜಭಟರಿಂದ ತಪ್ಪಿಸಿಕೊಂಡು ಹೋಗುತ್ತಿದ್ದ ರೇವಣಸಿದ್ಧನಿಗೆ ಕಾಲಲ್ಲಿ ಮುಳ್ಳು ನೆಟ್ಟು ಅದನ್ನು ಕುಳಿತು ತೆಗೆದುಕೊಂಡ ಜಾಗ ಉಳಪಿನಕಟ್ಟೆ ಗ್ರಾಮವಾಗಿದೆ.

ಇದೇ ರೀತಿ ಚೆನ್ನಗಿರಿ ತಾಲೂಕಿನ ಸೂಳೆಕೆರೆ (ಇಂದು ಶಾಂತಿಸಾಗರವಾಗಿದೆ) ಯಿಂದ ನೀರುಣ್ಣುವ ಊರುಗಳಾದ ಕುಂಬಳೂರು, ಕತ್ತಲಗೆರೆ, ಮಲೆಬೆನ್ನೂರು ಮುಂತಾದವುಗಳಿಗೆ ಸಂಬಂಧಿಸಿದ ಒಂದು ಕತೆಯಿದೆ. ಇದು ಕೆರೆಯ ಹೆಸರಿಗೂ ಸಂಬಂಧಿಸಿದ್ದು. ಇಂದು ಸೂಳೆಕೆರೆ ಕಟ್ಟೆಯ ಒಂದು ಬದಿಯ ಗುಡ್ಡದ ಮೇಲೆ ಸಿದ್ಧಪ್ಪನ ದೇವಾಲಯವಿದೆ. ಇದು ಆ ನಾಡಿನ ನಾಯಕನ ಆರಾಧ್ಯ ದೇವರು. ನಾಯಕನ ಮಗಳು ಬಸವಿಯಾಗಿ ಉಳಿದು ಸಿದ್ಧಪ್ಪನ ಸೇವೆ ಮಾಡಿಕೊಂಡಿರುತ್ತಾಳೆ. ಅವಳ ಭಕ್ತಿಗೆ ಮೆಚ್ಚಿದ ಸಿದ್ಧಪ್ಪ ಅವಳನ್ನು ವರಿಸುತ್ತಾನೆ. ಆತ ಆಕೆಗೆ ಹಾಕಿದ ಒಂದೇ ಶರತ್ತೆಂದರೆ ಅವರ ಸಂಬಂಧ ಯಾರಿಗೂ ತಿಳಿಯಕೂಡದು. ಕೆಲದಿನಗಳ ನಂತರ ಈಕೆ ಬಸಿರಾದಾಗ ಆಕೆಯ ತಂದೆ ಇದಕ್ಕೆ ಕಾರಣರಾರೆಂದು ಕೇಳಿದಾಗ, ತಾನು ಸಿದ್ಧಪ್ಪನಿಗೆ ಕೊಟ್ಟ ಭಾಷೆಯಿಂದಾಗಿ ಆಕೆ ನಿಜ ಹೇಳುವದೇ ಇಲ್ಲ. ಕುಪಿತನಾದ ಆಕೆಯ ತಂದೆ ತನ್ನ ಮಗಳನ್ನು ಸೂಳೆಯೆಂದು ಕರೆದು, ಆಕೆಯನ್ನು ತುಂಡರಿಸಿ, ಹತ್ತಿರದ ಕೊಳ್ಳದಲ್ಲಿ ಹಾಕಲು ಹೇಳುತ್ತಾನೆ. ತನ್ನ ಪ್ರೇಯಸಿಗೆ ತನ್ನಿಂದ ಆದ ಅಧೋಗತಿಯನ್ನು ತಿಳಿದ ಸಿದ್ಧಪ್ಪ ಆಕೆಯ ಹೆಸರು ಚಿರಂತನವಾಗಿ ಉಳಿಯುವಂತೆ ಮಾಡಲು ಆಕೆಯ ದೇಹವಿದ್ದ ಜಾಗಕ್ಕೆ ಕಟ್ಟೆಯೊಂದನ್ನು ಕಟ್ಟಿ (ಇಂದಿನ) ಕೆರೆ ಮಾಡಿದ (ಇದೇ ಮುಂದೆ ಸೂಳೆಕೆರೆ ಎಂದು ಉಳಿಯಿತು). ಈ ಹಳ್ಳಗುಂಟೆ ನೀರಿನಲ್ಲಿ ತೇಲಿಹೋದ ಆಕೆಯ ವಿವಿಧ ಅಂಗಾಂಗಳನ್ನು ಹುಡುಕಿ ಆಕೆಯ ತಲೆ ಸಿಕ್ಕ ಕಡೆ ಕತ್ತಲಗೆರೆ, ಮಲೆಸಿಕ್ಕ ಕಡೆ ಮಲೇ ಬೆನ್ನೂರ, ಬೆನ್ನು ಸಿಕ್ಕ ಕಡೆ ಬೆನ್ನೂರು ಹೀಗೆ ಅನೇಕ ಊರುಗಳನ್ನು ನಿರ್ಮಿಸಿ ಈ ಕೆರೆ ಯಿಂದ ಪ್ರಯೋಜನ ಪಡೆಯುವಂತೆ ಮಾಡಿದ. ಇಂತಹ ಕತೆಗೆ ಹೆಣೆದುಕೊಂಡ ಅನೇಕ ಊರುಗಳಿವೆ. ಇವುಗಳ ಶಾಸ್ತ್ರೋಕ್ತ ಅಭ್ಯಾಸ ಸ್ಥಳನಾಮಗಳನ್ನಷ್ಟೇ ಅಲ್ಲ. ಆ ನಾಡಿನ ಚರಿತ್ರೆಯನ್ನೂ, ಜನರಲ್ಲಿನ ನಂಬಿಕೆಗಳನ್ನೂ, ಬಸವಿ-ದೇವದಾಸಿ, ಸೂಳೆ ಗಾರಿಕೆಯ ಬಗ್ಗೆಯೂ ಜನರಲ್ಲಿದ್ದ ಅಭಿಪ್ರಾಯ ಮುಂತಾದವನ್ನು ತಿಳಿಸುತ್ತದೆ.

ಕೆಲವೊಂದು ಗ್ರಾಮನಾಮಗಳ ಬಗ್ಗೆ ಅಲ್ಲಿ ಸಂಬಂಧಿಸಿರುವ ಚಾರಿತ್ರಿಕ ಘಟನೆಯ ಸಂಬಂಧವಿರುವ ಅನೇಕ ಉದಾಹರಣೆಗಳಿವೆ. ಚನ್ನಗಿರಿ ತಾಲೂಕಿನ "ಎರಕಾಟನ ಹಳ್ಳಿ" ಗ್ರಾಮಕ್ಕೂ ಇಂಥ ಒಂದು ಕತೆ ಇದೆ. ಇಂದು ಕಂದಾಯ ಇಲಾಖೆಯ ದಾಖಲೆಯಲ್ಲಿ "ಎರಕಾಟನಹಳ್ಳಿ"ಯಾಗಿರುವ ಈ ಕುಗ್ರಾಮದ ಹೆಸರಿನ ಬಗ್ಗೆ ಅಲ್ಲಿಯ ಜನ ಮರಾಠ ಚರಿತ್ರೆಯ ಸಂಬಂಧದ ಕತೆ ಹೇಳುತ್ತಾರೆ. ಈ ಕತೆಯಂತೆ ಆ

ಹಳ್ಳಿ ಎರ ಮತ್ತು ಕಾಟ ಎಂಬ ಗೊಲ್ಲರಿಗೆ (ಕುರುಬರಿಗೆ) ನೀಡಿದ್ದ ಹಳ್ಳಿ. ಕಾಡಾಗಿದ್ದ ಈ ಪ್ರದೇಶದಲ್ಲಿ ತಮ್ಮ ಕುರಿ ಮೇಯಿಸುತ್ತಿದ್ದ ಇವರಿಗೆ ಒಂದು ದಿನ ಅಪರಿಚಿತ ಹೆಣವೊಂದು ಸಿಗುತ್ತದೆ. ಯಾರದೆಂದು ತಿಳಿಯದಿದ್ದರೂ ಅದನ್ನು ಹೂಳಿ, ಗುರುತಿಗೆ ಒಂದು ಕಲ್ಲು ನೆಡುತ್ತಾರೆ. ನಂತರ ತಿಳಿದಂತೆ ಇದು ಮರಾಠ ಸರದಾರ ಶಹಜಿಯ ದೇಹ. ಬಿಜಾಪುರದ ಸುಲ್ತಾನರ ಸರದಾರನಾಗಿದ್ದ ಶಹಜಿಯ ಶಿರಾ ದಕ್ಷಿಣದ ಠಾಣೆ ಹೊದಿಗೆರೆಯಾಗಿದ್ದಿತು (ಹೊಡಿಗೆರೆ, ಪೊದಿಗೆರೆ). ಆ ಕಾಲಕ್ಕೆ ಬಿಜಾಪುರ, ಮೈಸೂರು ಮತ್ತು ಕೆಳದಿ ನಾಡುಗಳಿಗೆ ಆಯಕಟ್ಟಿನ ಭಾಗ ಹೊದಿಗೆರೆ. ಇಲ್ಲಿಗೆ ಬಂದಾಗ (ಬರುವಾಗ) ಶಹಜಿ ತೀರಿಕೊಂಡರು (ಹುಲಿಯ ಬೇಟೆಯಲ್ಲಿ ಎಂದು ಮರಾಠ ಚರಿತ್ರೆಕಾರರು; ಬಸವಾಪಟ್ಟಣದ ನಾಯಕನೊಡನೆ ಯುದ್ಧದಲ್ಲಿ ಎಂದು ಮುಸಲ್ಮಾನ ಚರಿತ್ರೆಕಾರರೂ. ಎರೇಹೊಲದ ಬೇಟೆಯಲ್ಲಿ ಕುದುರೆ ಕಾಲು ಸಿಕ್ಕು. ಕುದುರೆ ಬಿದ್ದುದರಿಂದ ಅವನೂ ಬಿದ್ದು ಸತ್ತನೆಂದು ಜನಪದ ಕತೆಗಳೂ ಇವೆ). ಮುಂದೆ ಆ ಶವ ಶಹಜಿಯದೆಂದು ತಿಳಿದಾಗ್ಗೆ ಅದಕ್ಕೆ ಸಂಸ್ಕಾರ ಮಾಡಿದ ಈ ಗೊಲ್ಲರಿಗೆ (ಕುರುಬರಿಗೆ) ಆ ನಾಡಿನ ದೊರೆ (ಬಿಜಾಪುರದ ಸುಲ್ತಾನ, ಹೊದಿಗೆರೆ ನಾಯಕ, ಬಸವಾಪಟ್ಟಣದ ನಾಯಕ, ಶಹಜಿಯ ಮಗ ತಾನಾಜಿ ಹೀಗೆ ಅನೇಕ ಹೆಸರುಗಳು ಕೇಳಿಬರುತ್ತವೆ) ಮೊದಲಿಗೆ ಶವ ಸಿಕ್ಕ ಕಾಡಾಗಿದ್ದ ಪ್ರದೇಶವನ್ನು ಅವರಿಗೇ ಹುಲ್ಲುಗಾವಲಿಗೆ ದತ್ತಿಯಾಗಿ ನೀಡುತ್ತಾನೆ. ಮುಂದೆ ಅವರು ಅಲ್ಲಿ ನೆಲಸಿದ್ದರಿಂದ ಎರ--ಕಾಟರ ಹಳ್ಳಿಯಾಗಿ, ಸದ್ಯ "ಎರಕಾಟರ ಹಳ್ಳಿ"ಯಾಗಿದೆ. ಇಂದೂ ಆ ಊರಿನ ಬಹು ಜನಸಂಖ್ಯೆ ಗೊಲ್ಲರದು. ಅವರು ಇಂದು ತಮ್ಮ ಮೂಲವೃತ್ತಿಯಾದ ಕುರಿ ಕಾಯುವುದನ್ನು ಬಿಟ್ಟು ವ್ಯವಸಾಯಗಾರರಾಗಿದ್ದಾರೆ. ಹೀಗೆ ಒಂದು ಗ್ರಾಮ ತನ್ನ ಚರಿತ್ರೆಯಿಂದಲೂ ಹೆಸರು ಪಡೆಯುತ್ತದೆ. ಇಂತಹ ಅಭ್ಯಾಸಕ್ಕೆ ಚರಿತ್ರೆ, ಜನಪದ, ಪುರಾಣ ಮುಂತಾದ ಎಲ್ಲಾ ಸಾಕ್ಷ್ಯಗಳನ್ನೂ ಬಳಸಬೇಕಾಗುತ್ತದೆ.

ದಾವಣಗೆರೆ ತಾಲ್ಲೂಕಿನ ತೊಗಲೇರಿ ಎನ್ನುವ ಗ್ರಾಮನಾಮಕ್ಕೆ ಸಂಬಂಧಿಸಿದ ಒಂದು ದಂತಕತೆಯೇ ಇದೆ. "ತೊಗಲ ಏರಿ"ಯಿಂದ ಬಂದ ಈ ಹೆಸರಿನ ಕತೆಯಂತೆ ಟಿಪ್ಪುಸುಲ್ತಾನನ ಆಳ್ವಿಕೆಯ ಕಾಲದಲ್ಲಿ ಅವನ ಸೈನಿಕರು ಇಂದಿನ ದಾವಣಗೆರೆ ತಾಲ್ಲೂಕು, ಸುಲ್ತಾನಿಪುರದಲ್ಲಿ ಬೀಡುಬಿಟ್ಟಿದ್ದರು. ತಮ್ಮ ಆಹಾರಕೆ ಅವರು ಅಲ್ಲಿಯ ರೈತಪ್ರಜೆಯೊಬ್ಬನ ಎತ್ತನ್ನೇ ಕೊಯ್ದು ತಿಂದರು. ರೈತ ತನ್ನ ಈ ದೂರನ್ನು ಸೈನ್ಯದ ತುಕಡಿಯ ನಾಯಕನ ಕಡೆ ತಂದಾಗ, ಆತ ಇದಕ್ಕೆ ಪರಿಹಾರವಾಗಿ ಕೆಲ ನಾಣ್ಯಗಳನ್ನು ನೀಡಲು ಆದೇಶ ನೀಡಿದ. ತನ್ನ ಎತ್ತು "ದೊಡ್ಡದಿತ್ತು" "ಪರಿಹಾರ ಕಡಿಮೆಯಾಯಿತು" ಎಂದು ವಾದಿಸಿದಾಗ ಸಿಟ್ಟಿಗೆದ್ದ ಅಧಿಕಾರಿ ಈತನಿಗೆ "ಅವನ ಎತ್ತಿನ ಚರ್ಮದ ಅಗಲದಷ್ಟೇ ಭೂಮಿ"ಯನ್ನು ಪರಿಹಾರವಾಗಿ ನೀಡಲು ತನ್ನ ಸ್ಥಳೀಯ ಅಧಿಕಾರಿಗೆ ಆದೇಶ ನೀಡಿ ಮುಂದೆ ಹೋಗುತ್ತಾನೆ.

ಗಾದ ಅನ್ಯಾಯವನ್ನು ಸಹಿಸದ ಅಯ್ಯನವರೊಬ್ಬರು (ಬ್ರಾಹ್ಮಣ ಎಂದೂ ಬರುತ್ತದೆ) ಈ ಸೇನಾಧಿಕಾರಿಗೆ ಬುದ್ಧಿ ಕಲಿಸಲು ರೈತನಿಗೆ ಒಂದು ಉಪಾಯ ಹೇಳಿಕೊಟ್ಟರು. ಅದರಂತೆ ರೈತ "ತನ್ನ ಎತ್ತಿನ ಚರ್ಮವನ್ನು ಸಣ್ಣನೆಯ ಪಟ್ಟಿಯಾಗಿ ಕೊಯ್ಯುವುದು ಮತ್ತು ಅದರಿಂದ ಅಳೆದ ಜಾಗ ತನ್ನದು" ಎನ್ನುವುದು. ಸ್ಥಳೀಯ ಮುಖ್ಯ ಅಧಿಕಾರಿಗೆ ಈ ಕುಹಕ ತಿಳಿಯದೆ ಆದೇಶದಂತೆ ನೆಲ ಅಳೆಯಲು ಪ್ರಾರಂಭಿಸಿದ. ಈ ಚರ್ಮದ ಎಳೆ ಆರು ಮೈಲು ಉದ್ದವಿದ್ದು ಸುಲ್ತಾನಿಪುರದಿಂದ ದಕ್ಷಿಣಕ್ಕೆ ಆರು ಮೈಲು ಬಸವಾಪುರಕ್ಕೆ ಬಂದಿತು. ಅಲ್ಲಿಂದ ಪಶ್ಚಿಮಕ್ಕೆ ಆರು ಮೈಲಿ ಕಂದಗಲ್ಲು, ಅಲ್ಲಿಂದ ಉತ್ತರಕ್ಕೆ ಆರು ಮೈಲಿ ಇಂದಿನ ತೊಗಲೇರಿ ಗ್ರಾಮ (ಅಲ್ಲಿಂದ ಪೂರ್ವಕ್ಕೆ ಸುಲ್ತಾನಿಪುರ ಆರು ಮೈಲು). ಹೀಗೆ ಅಳತೆಮಾಡುತ್ತಾ ಬಂದ ಇವರನ್ನು ಇಂದಿನ ತೊಗಲೇರಿ ಗ್ರಾಮದ ಹತ್ತಿರದ ದಿಬ್ಬದ ಮೇಲೆ, ಅದೇ ಸೇನಾಧಿಕಾರಿ ಆಕಸ್ಮಿಕವಾಗಿ ಸಂಧಿಸಿ, ಅವರ ಅಳತೆಯ ಉದ್ದೇಶ ತಿಳಿದು, ಕುಪಿತನಾಗಿ, ನಿಂತ ಜಾಗದಲ್ಲೇ ತನ್ನ ಮುಖರ್ಜಿ ಸ್ಥಳೀಯ ಅಧಿಕಾರಿಯನ್ನು ಮನೆಗಪ್ಪಣೆ ಮಾಡಿದ, ಅಯ್ಯನವರಿಗೆ ಗಡಿಪಾರು ಮಾಡಿದ. ಈ ರೈತನನ್ನು ಕೊಲ್ಲಿಸಿ ಅವನ ನಾಲ್ಕು ಜನ ಮಕ್ಕಳನ್ನು ಈ ನಾಲ್ಕೂ ಗಡಿ ಊರುಗಳಿಗೆ ಗಡಿಪಾರು ಮಾಡಿದ (ಇಂದಿಗೂ ಚೂರಿ ಎಂಬ ಅಡ್ಡ ಹೆಸರಿನ ಜನ ಈ ನಾಲ್ಕೂ ಊರಲ್ಲಿದ್ದಾರೆ. ಅವರೆಲ್ಲರ ಮನೆ ದೇವರು, ಬೊಲ ಅಥವಾ ಬೆಡಗುಗಳೂ ಒಂದೇ ಇವೆ). ಅಂದು ಈ ತೊಗಲೇರಿಯ ಪ್ರದೇಶದಲ್ಲಿ ಊರಿರಲಿಲ್ಲ. ಆದರೂ ಅವರು ತೊಗಲಿನ ಎಳೆ ಹಾಕಿಕೊಂಡು ನಿಂತಿದ್ದ ಎತ್ತರದ ಜಾಗದಲ್ಲೇ ಊರು ಕಟ್ಟಿಕೊಂಡು ಇರುವಂತೆ ಆಜ್ಞೆ ಇತ್ತನು. ಆದ್ದರಿಂದ ಈ ಏರಿ ಮೇಲಿನ ಊರು ತೊಗಲೇರಿ (ತೊಗಲು+ಏರಿ) ಆಯಿತು.

ಅನೇಕ ಗ್ರಾಮ ನಾಮಗಳು ವಿಚಿತ್ರವಾಗಿದ್ದು ಅವುಗಳ ಹೆಸರಿಗೆ ಯಾವ ಅರ್ಥವೂ ತಿಳಿಯುವುದಿಲ್ಲ. ಉದಾಹರಣೆಯಾಗಿ ಕಂದಗಲ್ಲು, ಜಿಗಳಿ, ಮತ್ತಿ, ಹದಡಿ, ಶಾಗಲೆ, ಕುರ್ಕಿ, ಬಾತಿ ಮುಂತಾದ ಅನೇಕ ಹೆಸರುಗಳನ್ನು ತೆಗೆದುಕೊಳ್ಳಬಹುದು. ಅನೇಕ ಈ ಗ್ರಾಮ ನಾಮಗಳು ಆ ಗ್ರಾಮಸ್ಥರಿಗೆ ಅಥವಾ ಸರಕಾರಕ್ಕೆ ಅಸಹ್ಯವಾದ್ದರಿಂದ ಅವನ್ನು ಬದಲಾಯಿಸಲು ಸರಕಾರಕ್ಕೆ ವಿನಂತಿಸಿಕೊಂಡ ಅನೇಕ ಉದಾಹರಣೆಗಳಿವೆ. ಚಿತ್ರದುರ್ಗ ತಾಲ್ಲೂಕಿನ ಇಂದಿನ ಲಕ್ಷ್ಮೀಸಾಗರ ಹಳೆಯ ಕಳ್ಳಿಣಿಸೆ, ಬೂದೀಹಾಳು ಇಂದು ಶಿವಪುರ, ಸೂಳೇಕೆರೆ ಇಂದು ಶಾಂತಿಸಾಗರವಾಗಿದೆ. ಅನೇಕ ಊರುಗಳ ಹೆಸರುಗಳು ದೊಡ್ಡವು ಮತ್ತು ಕನ್ನಡಬಾರದ. ಪ್ರಮುಖವಾಗಿ ಆಂಗ್ಲ ಮತ್ತು ಮುಸಲ್ಮಾನ ಅಧಿಕಾರಿಗಳಿಗೆ ಉಚ್ಚರಿಸುವಲ್ಲಿ ತೊಂದರೆ ತಂದಿದ್ದರಿಂದ ಅವನ್ನು ವಿಕೃತ ಅಥವಾ ಮೊಟಕು ಮಾಡಿದರು. ಬಸವಾಪುರದ ಕಲ್ಲಪ್ಪನಹಳ್ಳಿ ಬಿ. ಕಲ್ಲಪ್ಪನಹಳ್ಳಿ ಯಾಯಿತು. ಇದೇ ರೀತಿ ಭರಮಣ್ಣನಾಯಕನದುರ್ಗ ಇಂದು ಬಿ. ದುರ್ಗವಾಗಿ ಮೊಟಕಾಗಿದೆ. ಚಿತ್ರದುರ್ಗವು ಚಿತಲ್‌ದುರ್ಗ್ ಆಯಿತು.

ಇನ್ನು ಹೊಸದಾಗಿ ಹುಟ್ಟಿಕೊಂಡ ಗ್ರಾಮಗಳಿಗೆ ಹೊಸ ಹಾಗೂ ಆಧುನಿಕ ಹೆಸರುಗಳೂ ಬಂದಿವೆ. ಇದಕ್ಕೆ ಚಾರಿತ್ರಿಕ ಕಾರಣಗಳಿಲ್ಲದಿಲ್ಲ. ಉದಾಹರಣೆಗೆ, ಕಾಡು ಕಡಿದು ಬಯಲಾದ ನೆಲವನ್ನು ಗಾಂಧಿಜಿಯವರ ಆದೇಶದಂತೆ ಸ್ವಾತಂತ್ರ್ಯಾನಂತರ ಹರಿಜನ, ಗಿರಿಜನರಿಗೆ ನೀಡಿದಾಗ ಹುಟ್ಟಿಕೊಂಡ ಈ ಹೊಸ ಊರುಗಳಿಗೆ ಗಾಂಧೀಜಿಯವರ ಹೆಸರನ್ನೇ ಇಟ್ಟು ಗಾಂಧೀಗ್ರಾಮ ಎಂದೂ, ಸೇವಾಗ್ರಾಮವೆಂದೂ ಕರೆಯಲಾಗಿದೆ. ಇದೇ ರೀತಿ ಈ ಮೂರು ಜಿಲ್ಲೆಗಳಲ್ಲಿ ಭದ್ರಾ ಜಲಾಶಯದಿಂದಾಗಿ ನೀರಾವರಿ ಕಾಲುವೆ ತೋಡಲು ಕೂಲಿ ಅಥವಾ ಕಾಂಟ್ರ್ಯಾಕ್ಟ್ ಕೆಲಸಕ್ಕೆ ಬಂದ ಆಂಧ್ರದ ರೆಡ್ಡಿ ಅಥವಾ ಇರುಳರು ತಮಗೆ ಸಿಕ್ಕ ನೆಲದಲ್ಲಿ ಹೊಲ ಕೊಂಡು ಅಲ್ಲಿಯೇ ಕ್ಯಾಂಪ್ ಮಾಡಿದ್ದರಿಂದ ಅಲ್ಲಿ ಕ್ರಮೇಣ ಒಂದು ಊರೇ ಬೆಳೆಯಿತು. ಉದಾಹರಣೆಗೆ, ಇಂತಹ ಊರನ್ನು ತಮ್ಮ ಅನುಕೂಲಕ್ಕೆ ವೆಂಕಟೇಶ್ವರಪುರ, ಬಾಲಾಜಿಪುರಗಳೆಂದೂ ಹೆಸರು ನೀಡಲಾಗಿದೆ. ಇನ್ನೊಂದು ಮೋಜಿನ ಸಂಗತಿ ಎಂದರೆ ಮರಾಮತ್ ಇಲಾಖೆಯವರು ಕಾಲುವೆ ಕೆಲಸ ನಡೆಸಿದಾಗ ಹೆದ್ದಾರಿಯ ಪಗ್ಗಲಲ್ಲಿ ಹಾಕಿದ್ದ ಕ್ಯಾಂಪ್‌ಗಳು ಇಂದು ಅದೇ ಹೆಸರಿನಿಂದ ಊರಾಗಿವೆ. ಇಂತಹ ಅನೇಕ ಕ್ಯಾಂಪ್‌ಗಳಿದ್ದುದರಿಂದ ಅವನ್ನು ಆಯಾ ಮೈಲಿಕಲ್ಲಿನ ಕ್ಯಾಂಪ್‌ಗಳು ಅಥವಾ ಯಾವುದಾದರೂ ಹತ್ತಿರದ ದೊಡ್ಡ ಊರ ಕ್ಯಾಂಪ್ ಎಂದು ಕರೆದುದರಿಂದ ಇಂದು ಅವು ಗೆನ್ನಟ್ಟಿ ಕ್ಯಾಂಪ್, ಕೋಡೀಹಳ್ಳಿ ಕ್ಯಾಂಪ್, ಹತ್ತನೇ ಮೈಲಿಕಲ್ ಕ್ಯಾಂಪ್ ಮುಂತಾಗಿ ಹೆಸರೊತ್ತು ನಿಂತಿವೆ.

ಪವಾಡಗಳು ಹಾಗೂ ತಾಂತ್ರಿಕ ವಿದ್ಯೆಗಳು*

● ವ್ಹಿ. ಜಿ. ಪೂಜಾರ

ಮಂತ್ರವಿದ್ಯೆ ಸಾಮಾನ್ಯವಾಗಿ ವಿಶಿಷ್ಟಪ್ರತಾಚರಣೆಗಳಿಂದ ಆಯಾ ದೇವರು ಅಥವಾ ಭೂತಗಳ ವಶೀಕರಣ ಇಲ್ಲವೆ ಒಲುಮೆಯಿಂದ ಸಾಧಿಸುವಂತಹದೆಂದು ಸಾಂಪ್ರದಾಯಿಕ ನಂಬುಗೆ. ಪವಾಡಕ್ಕೆ ಇಂತಹ ವಿಶಿಷ್ಟ ಸಾಧನೆಗಳನ್ನು ಇಲ್ಲವೆ ವಶೀಕರಣ ತಂತ್ರವನ್ನು ಹೇಳಲಾಗುವುದಿಲ್ಲ. ಅದೊಂದು ನೈಸರ್ಗಿಕ ಶಕ್ತಿಯಂತೆ ಅಸಾಮಾನ್ಯ ವಿಭೂತಿ ಪುರುಷರಲ್ಲಿ ಬೆಳೆದು ಬರುವಂತಹದೆಂಬ ನಂಬುಗೆ. ಆ ವಿಭೂತಿ ಪುರುಷರು ಪವಾಡಗಳನ್ನು ಎಸಗಬೇಕೆಂದು ಪೂರ್ವಭಾವಿ ಸಿದ್ಧತೆಗಳನ್ನೇನು ಮಾಡಿಕೊಂಡಿರಲಾರರು. ಅವು ಆಕಸ್ಮಿಕವಾಗಿ ದುಃಖಿತರ, ಸಂಕಟಕ್ಕೊಳಗಾದವರ ರಕ್ಷಣೆಗಾಗಿ ಮಾನವೀಯ ಅನುಕಂಪವುಳ್ಳ ಮಹಾಪುರುಷರಿಂದ ಘಟಿಸುವ ಅತೀಂದ್ರಿಯ ಸಿದ್ಧಿಯ ದೈವೀ ಕಾರ್ಯಗಳು ಎಂದು ಜನತೆಯ ನಂಬುಗೆ.

ಅಂಥವುಗಳಲ್ಲಿ ಉದಾಹರಣೆಗಾಗಿ ಕೆಲವನ್ನಿಲ್ಲಿ ನೋಡಬಹುದು. ಶ್ರೀ ಶಂಕರಾಚಾರ್ಯರು ಬಾಲವಟುವಾಗಿದ್ದಾಗ ಒಂದು ಮನೆಗೆ ಭಿಕ್ಷೆಗೆಂದು ಹೋಗುತ್ತಾರೆ. ಆ ಮನೆಯೊಡತಿ ತನ್ನ ದಾರಿದ್ರ್ಯವನ್ನು ಅವರಿಗೆ ವಿವರಿಸಿ ಕಣ್ಣೀರಿಡುವಳು. ಅವರನ್ನು ಹಾಗೆಯೇ ಕಳುಹಿಸಲು ಮನಸ್ಸಿಲ್ಲದೆ ಒಂದು ಒಣನೆಲ್ಲೀಕಾಯಿಯನ್ನು ನೀಡುವಳು. ಅವರು ಅದನ್ನೆ ಹರ್ಷದಿಂದ ಸ್ವೀಕರಿಸಿ ಲಕ್ಷ್ಮಿಯನ್ನು ಸ್ತುತಿಸಲು, ಆ ದರಿದ್ರಳ ಮನೆಯಲ್ಲಿ ಲಕ್ಷ್ಮಿಯು ತನ್ನ ಕರಕಮಲದಿಂದ ಬಂಗಾರದ ನೆಲ್ಲಿಕಾಯಿಯ ಮಳೆಯನ್ನೇ ಸುರಿಸುವಳು.[೧] ಇದರಂತೆಯೇ ಬಸವಣ್ಣನವರಲ್ಲಿಗೆ ಒಬ್ಬ ಶರಣನು ಬಂದು ಹಲಸಿನ ಹಣ್ಣು ಬೇಡಲು, ಅವರು ಗೋಡೆಯಮೇಲೆ ಬರೆದ ಚಿತ್ರದ ಗಿಡದಿಂದ ಅವನ್ನು

---

* ಈ ಲೇಖನ ಬರೆಯಲು ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಿದವರು ಗುರುಗಳಾದ ಡಾ. ಬಿ. ಬಿ. ಹೆಂಡಿ. ಅವರು.

೧. ಶ್ರೀ ಶಂಕರ ವಿಜಯ ಪ್ರ. ೪, ಪು. ೬೩–೬೭) ಲೇ. ಆನಂದ ಗಿರಿಯಾಚಾರ್ಯ.

ಸೃಷ್ಟಿಸಿಕೊಡುವರು.[೨] ಈ ರೀತಿಯ ಪವಾಡಗಳು ನಮ್ಮ ಪ್ರಾಚೀನ ಕಾವ್ಯ, ಪುರಾಣಗಳಲ್ಲಿ ಕಿಕ್ಕಿರಿದು ವರ್ಣಿತವಾದುದನ್ನು ವೀಕ್ಷಿಸಬಹುದು.

ಮಂತ್ರ ವಿದ್ಯೆಗಳಲ್ಲಿ ಒಳ್ಳೆಯ ಮಂತ್ರವಿದ್ಯೆ (White magic) ಕುಹಕ ಮಂತ್ರವಿದ್ಯೆ (Black magic) ಎಂದು ಎರಡು ವಿಧಗಳಿವೆ.[೩] ಒಳ್ಳೆಯ ಮಂತ್ರವಿದ್ಯೆ ಜನತೆಗೆ, ಸಮಾಜಕ್ಕೆ ಯಾವಾಗಲೂ ಹಿತವಾದುದನ್ನೇ ಮಾಡುವಂತಹದು. ಉದಾ- ರೋಗ ನಿವಾರಣೆ, ಅನಿಷ್ಟ ಪರಿಹಾರ ಇತ್ಯಾದಿ. ಕುಹಕ ಮಂತ್ರವಿದ್ಯೆ ಜನತೆಗೆ, ಸಮಾಜಕ್ಕೆ ಯಾವಾಗಲೂ ಅಹಿತವನ್ನುಂಟು ಮಾಡುವಂತಹದು. ಉದಾ- ರೋಗ ಬರಿಸುವುದು, ಕಷ್ಟಗಳನ್ನು ತಂದೊಡ್ಡುವುದು ಇತ್ಯಾದಿ. ಇವೆರಡೂ ಮಂತ್ರವಿದ್ಯೆಗಳಲ್ಲಿ ಮಂತ್ರವಾದಿಯ ಸ್ವಾರ್ಥ, ಸ್ವಲಾಭ, ಸ್ವಪ್ರತಿಷ್ಠೆಗಳಿರುತ್ತವೆ.

ಪವಾಡವು ಬಹುಮಟ್ಟಿಗೆ ಒಳ್ಳೆಯ ಮಂತ್ರವಿದ್ಯೆಯಂತೆ ಮೇಲು ನೋಟಕ್ಕೆ ಕಂಡರೂ,[೪] ಇದನ್ನು ಒಂದು ಮಂತ್ರವಿದ್ಯೆಯೆಂದು ಪರಿಗಣಿಸಲಿಕ್ಕಾಗದು. ಏಕೆಂದರೆ ಇದರಲ್ಲಿ ಪವಾಡಪುರುಷನ ಸ್ವಾರ್ಥವಾಗಲೀ, ಮಂತ್ರವಿದ್ಯೆಗಳಲ್ಲಿರುವಂತೆ ಮಾಟದ ಅಂಶವಾಗಲೀ, ವ್ರತಾಚರಣೆಯ ನಿಯಮ ನಿಬಂಧನೆಗಳಾಗಲಿ ಇರುವುದಿಲ್ಲ.

'ಮಾಟ'ವೆಂದರೆ ಮಾಡಿದ್ದು ಅಥವಾ ಮಾಡಿಸಿದ್ದು.[೫] ಒಳ್ಳೆಯ ಮಂತ್ರವಾದಿಯಿಂದ ಮಾಡಿಸಿ ಪಡೆದ ತಾಯಿತ, ಯಂತ್ರರಕ್ಷೆಗಳು ತಮ್ಮನ್ನು ರೋಗ ರುಜಿನ, ಕಷ್ಟ ಕಾರ್ಪಣ್ಯಗಳಿಂದ ರಕ್ಷಿಸುತ್ತವೆಯೆಂದು ಜನತೆ ಆತನಲ್ಲಿ ನಂಬಿಕೆ ಇಟ್ಟರೆ, ಕುಹಕ ಮಂತ್ರವಾದಿಯಿಂದ ಮಾಟಮಾಡಿಸಿ ಪಡೆದ ವಸ್ತುಗಳು (ಉದಾ- ಲಿಂಬೇಹಣ್ಣು, ಬಾಳೆಹಣ್ಣು, ಅರಮೆಯಗೊಂಬೆ, ಕೀರ-ಸೂಜಿ ಇತ್ಯಾದಿ) ತಮ್ಮ ವೈರಿ ಜನರಿಗೆ ರೋಗ ರುಜಿನಗಳನ್ನುಂಟು ಮಾಡಿ ನಾನಾ ಕಷ್ಟಗಳನ್ನು ತಂದೊಡ್ಡಿ ಅವರನ್ನು ನಾಶಪಡಿಸುತ್ತವೆಯೆಂದು ಜನ ಆತನ ಮೇಲೆ ನಂಬಿಕೆ ಇಡುವುದುಂಟು.

ಇವುಗಳಂತೆಯೇ ಭಕ್ತರು, ಶ್ರದ್ಧಾವಂತ ಮತಾನುಯಾಯಿಗಳು ಪವಾಡಗಳ ಮೇಲೆ ನಂಬಿಕೆ ಇಟ್ಟಿರುತ್ತಾರೆ. ಆದರೆ ಈ ನಂಬಿಕೆ ಆ ರೀತಿಯದಲ್ಲ. ಸಾಮಾನ್ಯ

---

೨. ಶಿವತತ್ತ್ವ ಚಿಂತಾಮಣಿ ಸಂ. ೩೨, ಪ. ೮,

೩. Witchcraft (Page-113) Captain F. D. Calaabavala.

೪. 'Magic is a sort of thaumaturgic miracle, and is looked upon as something abnormal'
–(Encyclopaedia of Religion and Ethics, Vol-8)

೫. ಜಾನಪದ ಅಧ್ಯಯನ (ಪು. ೨೫೭) ಲೇ. ಡಾ. ದೇ. ಜವರೇಗೌಡ.

ವಾಗಿ ಪವಾಡಗಳು ಧಾರ್ಮಿಕ ಮಹಾಪುರುಷರಿಗೆ, ಧರ್ಮದ ತತ್ವಗಳಿಗೆ ಅಂಟಿಕೊಂಡಿರುವುದರಿಂದ[೬] ಇವು ಜನತೆಗೆ ಸಮಾಜಕ್ಕೆ ಹಿತವಾದುದನ್ನೇ ಮಾಡುತ್ತವೆಯೆಂಬ ಭಾವನೆಯಿಂದ ಜನತೆ ಇವುಗಳ ಮೇಲೆ ದೃಢವಾದ ನಂಬಿಕೆಯಿಟ್ಟು ಪವಾಡ ಪುರುಷರನ್ನು ಪೂಜ್ಯರಾಗಿ ಕಾಣುವುದುಂಟು. ಮಂತ್ರವಾದಿಗಳು ವೈಯಕ್ತಿಕ, ಸ್ವಾರ್ಥ, ಸ್ವಲಾಭ ಸಂವೃದ್ಧಿಗಾಗಿ ಜನತೆಗೆ, ಸಮಾಜಕ್ಕೆ ಕೆಟ್ಟದ್ದನ್ನು ಮಾಡಲು ಹಿಂದೆ ಮುಂದೆ ನೋಡರು. ಆದುದರಿಂದ ಜನ ಅವರನ್ನು ಕೀಳಾಗಿ ಗಣಿಸುವುದುಂಟು.

ಸಾಮಾನ್ಯವಾಗಿ ಮಂತ್ರ-ಮಾಟ, ಪವಾಡಗಳಿಗೆ ಜನತೆಯ ಬೆಂಬಲ ಹಾಗೂ ನಂಬುಗೆಗಳೇ ಭದ್ರ ಬುನಾದಿಯಾಗಿವೆ. ಅವು ಇವುಗಳ ಆಧಾರದ ಮೇಲೆಯೇ ನಿಂತುಕೊಂಡು ಇಂದಿನವರೆಗೂ ಪ್ರಚಲಿತದಲ್ಲಿದ್ದುದನ್ನು ಗಮನಿಸಬಹುದು. ಮಂತ್ರ-ಮಾಟಗಳು ಕೇವಲ ಪರಪೀಡನೆಯ ಶಕ್ತಿಯಿಂದ ಜನತೆಯಲ್ಲಿ ಪ್ರಭಾವ ಬೀರಿದರೆ, ಪವಾಡ ಶಕ್ತಿ ಇಂತಹ ಹೆದರಿಕೆಯಿಂದ ಪ್ರಭಾವ ಬೀರದೆ ಜನತೆಯಲ್ಲಿ ಭಕ್ತಿ. ಶ್ರದ್ಧೆಗಳನ್ನು ಹುಟ್ಟಿಸುವುದರ ಮೂಲಕ ಪ್ರಭಾವ ಬೀರುತ್ತದೆ.

ಇನ್ನಿತರ ತಾಂತ್ರಿಕ ವಿದ್ಯೆಗಳಾದ ಇಂದ್ರಜಾಲ, ಮಹೇಂದ್ರಜಾಲ, ನಯನಬಂಧ ಕೈಚಳಕ, ಗಗನಗಾಮಿಕ ವಿದ್ಯೆ, ರಸವಿದ್ಯೆ, ಮಾಯಾವಿದ್ಯೆ ಇತ್ಯಾದಿಗಳಂತೆ ಪವಾಡಗಳೂ ಚಮತ್ಕಾರಿಕ. ಅತಿಮಾನುಷ ಸಂಗತಿಗಳಿಂದೊಡಗೂಡಿದರೂ ಅವುಗಳದೇ ಆದ ಒಂದು ವೈಶಿಷ್ಟ್ಯವಿರುವುದನ್ನು ಕಾಣಬಹುದು. ಮೇಲೆ ಹೇಳಿದಂತೆ ಅವು ಈ ಎಲ್ಲ ವಿದ್ಯೆಗಳಂತೆ ಒಂದು ಪರಿಮಿತವಾದ ನಿಯಮ ನಿಬಂಧನೆಗಳಿಗೆ ಒಳಪಟ್ಟಂತಹವಲ್ಲ. ಜಾದೂಗಾರ ಅಥವಾ ಕೈಚಳಕವಿದ್ಯೆ ಬಲ್ಲವ ಬೇವಿನತೊಪ್ಪಲಿನಿಂದ ಚೇಳನ್ನು ಮಾಡುವ ವಿದ್ಯೆಯನ್ನು ಕಲಿತರೆ ಅದನ್ನಷ್ಟೇ ಮಾಡಬಲ್ಲ. ಆದರೆ ಅದನ್ನು ಬಿಟ್ಟು ಮೊಲವನ್ನಾಗಲೀ, ನಾಯಿಯನ್ನಾಗಲೀ ಅಥವಾ ಇನ್ನೂ ಏನನ್ನೂ ಮಾಡಲಾರ. ಪವಾಡವು ಮಾತ್ರ ಈ ರೀತಿ ಪೂರ್ವಯೋಜನೆ ಇಲ್ಲದೆ, ಯಾವುದೇ ಒಂದು ವಿದ್ಯೆಯ ಪರಿಮಿತಿಗೆ ಒಳಪಡದೆ ವ್ಯಾಪಕವಾದುದು; ಅನಿರ್ದಿಷ್ಟವಾದುದು. ವಿಶೇಷವಾಗಿ ಇದರಲ್ಲಿ ಆಧ್ಯಾತ್ಮಿಕ ಸಾಧನೆಯ ಶಕ್ತಿ ಇದೆಯೆಂಬ ನಂಬುಗೆ ದಟ್ಟವಾಗಿ ಇದೆ. ಈ ಶಕ್ತಿ ಪರಂಪರಾಗತ ನಂಬುಗೆಯ ಒಂದು ಪ್ರಕಾರವಾಗಿದೆಯಲ್ಲದೆ. ದೈವೀ ಅಂಶವನೊಳಗೊಂಡಂತಹುದು ಎಂದು ಜನತೆ ಸಾಂಪ್ರದಾಯಿಕವಾಗಿ ನಂಬಿಕೊಂಡು ಬಂದಿದೆ. ಈ ತರಹದ ನಂಬುಗೆಯಾಗಲೀ ಆಧ್ಯಾತ್ಮಿಕ ಶಕ್ತಿಯಾಗಲಿ ಈ ಮೇಲಿನ ವಿದ್ಯೆಗಳಲ್ಲಿಲ್ಲ ಎಂಬುದನ್ನು ಅರಿಯಬಹುದು.

೬. 'Miracles occur as a rule in connection with persons and objects of religious significance, such as saints, sacrements, relics, holy images, and the like'
—(Encyclopaedia Britanica, Vol–12)

ಗ್ರಂಥ ಋಣ

೧. ಶ್ರೀ ಶಂಕರ ವಿಜಯ : ಲೇ. ಆನಂದಗಿರಿಯಾಚಾರ್ಯ.

೨. ಶಿವತತ್ತ್ವ ಚಿಂತಾಮಣಿ : ಸಂ. ಎಸ್. ಬಸಪ್ಪ

೩. Witchcraft : Captain F. D. Calaabavala.

೪. ಜಾನಪದ ಅಧ್ಯಯನ : ಲೇ. ಡಾ. ದೇ. ಜವರೇಗೌಡ.

೫. Encyclopaedia of Religion & Ethic. Vol.-8,
—Edited by : James Hastings (1930)

೬. Encyclopaedia Britanica Vol-12,
—Metamorphic, New Jersey.

(ಹಣಕಾಸು ತುರ್ತು ಪರಿಸ್ಥಿತಿಯು) ಹದಗೆಡುತ್ತಿರುವ ಆರ್ಥಿಕ ಸ್ಥಿತಿಗೆ ಸೂಕ್ತ ಪರಿಹಾರ ನೀಡಬಲ್ಲದೇ?

● ಡಾ. ಎಚ್. ಬಸಣ್ಣ

ಭಾರತ ದೇಶ ರಾಜಕೀಯ ಸ್ವಾತಂತ್ರ್ಯಗಳಿಸಿದ ನಂತರ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವ ಉದ್ದೇಶದಿಂದ ಪಂಚವಾರ್ಷಿಕ ಯೋಜನೆಗಳನ್ನು ರಚಿಸಿ ಕಾರ್ಯಾಚರಣೆ ಮಾಡಿ ಗಣನೀಯ ರೀತಿಯಲ್ಲಿ ಆರ್ಥಿಕಾಭಿವೃದ್ಧಿಯನ್ನು ಗಳಿಸಿದೆ. ಆದರೂ ನಮ್ಮ ಆರ್ಥಿಕ ಸ್ಥಿತಿ ಈ ಯೋಜನಾ ಅವಧಿಯಲ್ಲಿ ಬಡತನ, ಕೊರತೆ, ಭ್ರಷ್ಟಾಚಾರ, ನಿರುದ್ಯೋಗ ಸಮಸ್ಯೆ ಬಡವರ ಮತ್ತು ಬಲ್ಲಿದರ ಮಧ್ಯೆ ಅಂತರ, ಹಣದುಬ್ಬರ, ಹದಗೆಡುತ್ತಿರುವ ಕೈಗಾರಿಕಾ ಶಾಂತಿ (Industrial peace), ನೌಕರರಲ್ಲಿ ಅಶಿಸ್ತು, ಕೆಟ್ಟ ರೀತಿಯ ಆರ್ಥಿಕ ಆಡಳಿತ (Bad Financial Man gement), ಮೊದಲಾದ ಸಮಸ್ಯೆಗಳನ್ನುಂಟು ಮಾಡಿದೆ. ನಮ್ಮ ದೇಶದ ರಾಜಕೀಯ ರಂಗದಲ್ಲಿ ಕಾಣುತ್ತಿರುವ ಅಸ್ಥಿರತೆ, ಅಶಿಸ್ತು, ಅನ್ಯಾಯ, ಅನೀತಿಗಳು ಆರ್ಥಿಕ ರಂಗದಲ್ಲಿ ಸಹ ಪ್ರತಿಬಿಂಬಿಸಿವೆ. ಈ ಚಿಂತಾಜನಕ ಸ್ಥಿತಿಯಿಂದ ಬಿಡುಗಡೆ ಹೊಂದಲು ಸೂಕ್ತ ಪರಿಹಾರ ಮಾರ್ಗಗಳನ್ನು ರಚಿಸಿ ಕಾರ್ಯಾಚರಣೆಗೆ ತರುವುದು ಅತ್ಯಾವಶ್ಯಕ.

ಹಣದುಬ್ಬರ : ಭಾರತದ ಎಲ್ಲಾ ಆರ್ಥಿಕ ಸಮಸ್ಯೆಗಳು ಹಣದುಬ್ಬರದ ಮೂಲಕ ದುರ್ಬಲ ವರ್ಗದವರನ್ನು ಕಾಡುತ್ತಿವೆ ಮತ್ತು ಆರ್ಥಿಕಾಭಿವೃದ್ಧಿಗೆ ಅಡಚಣೆಯನ್ನುಂಟು ಮಾಡುತ್ತಿವೆ. ಆದುದರಿಂದ ಹಣದುಬ್ಬರವನ್ನು ಹತೋಟಿಗೆ ತರುವುದು ಅತಿ ಮುಖ್ಯ. ಭಾರತದಲ್ಲಿ ಸಾಕಷ್ಟು ದವಸದ ದಾಸ್ತಾನು ಮತ್ತು ವಿದೇಶಿ ವಿನಿಮಯದ ಶೇಖರಣೆ ಇದ್ದರೂ ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಿಲ್ಲ. ಆರ್ಥಿಕ ಸದ್ಯದ ಪರಿಸ್ಥಿತಿ ಹಣದುಬ್ಬರದ ಜ್ವಾಲೆಗೆ ಮತ್ತಷ್ಟು ಪುಷ್ಟಿ ಕೊಡುತ್ತಿದೆ. ದವಸದ ಉತ್ಪಾದನೆ ಅಧಿಕವಾದಂತೆ ಅದನ್ನು ಅಧಿಕ ಮಟ್ಟದಲ್ಲಿ ಸರ್ಕಾರ ಸಂಗ್ರಹಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ ಧಾನ್ಯ ಸಂಗ್ರಹಕ್ಕಾಗಿ (Food procurement) ಹೆಚ್ಚಿನ ಹಣವನ್ನು ವೆಚ್ಚ ಮಾಡಬೇಕು. ಈ ಹಣದ ಅಧಿಕ ಪಾಲು ಹೆಚ್ಚು ವೆಚ್ಚ ಮಾಡುವ ಪ್ರವೃತ್ತಿಯುಳ್ಳ ಜನರ ಕೈ ಸೇರುವುದರ ಕಾರಣ ಹಣದುಬ್ಬರ ಹೆಚ್ಚಾಗುತ್ತಿದೆ. ಸರ್ಕಾರಿ

ವಲಯದಲ್ಲಿನ ಕೈಗಾರಿಕೆಗಳು ಅಸಮರ್ಥತೆ (Inefficient) ಮತ್ತು ಪೈಪೋಟಿಯನ್ನು ತಪ್ಪಿಸಲಾಗದಂತಿರುವುದರಿಂದ ಉತ್ಪಾದನಾ ವೆಚ್ಚ ಅಧಿಕವಾಗಿದೆ. ಆದುದರಿಂದ ಈ ಕೈಗಾರಿಕೆಗಳ ಉತ್ಪಾದನೆಯ ವೆಚ್ಚ ಅಧಿಕಗೊಂಡು ಹಣ ಪ್ರಸರಣವನ್ನು ಅಧಿಕಗೊಳಿಸುತ್ತಿದೆ.

ಪರಿಹಾರ ಮಾರ್ಗಗಳು :

ಭೂತಲಿಂಗಂ ಪರಿಹಾರ : ಅತಿ ಪ್ರಸರಣದಿಂದ ಕೂಡಿ ಹದಗೆಟ್ಟಿರುವ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಭೂತಲಿಂಗಂ ಅವರು ಅನೇಕ ಪರಿಹಾರ ಮಾರ್ಗಗಳನ್ನು ಸೂಚಿಸಿರುತ್ತಾರೆ. ಮೊದಲನೆಯದಾಗಿ, ದೇಶದಲ್ಲಿ ಕಾನೂನು ಮತ್ತು ಕ್ರಮಬದ್ಧತೆಯನ್ನು ಪೂರ್ವಸ್ಥಿತಿಗೆ ಮತ್ತೆ ತಂದು (Testored) ಜನರಿಗೆ ಸಂರಕ್ಷಣಾ ಜ್ಞಾನ (sense of security) ವನ್ನೊದಗಿಸಬೇಕು. ಎರಡನೆಯದಾಗಿ, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ವಿಳಂಬನೆ, ಇದ್ದಿಲು, ಕಬ್ಬಿಣ, ಉಕ್ಕು ಮೊದಲಾದವುಗಳ ಪೂರೈಕೆಯಲ್ಲಿ ಕೊರತೆಗಳನ್ನು ದಕ್ಷ ಆಡಳಿತದಿಂದ ಹೋಗಲಾಡಿಸಬೇಕು. ಮೂರನೆಯದಾಗಿ, ನಮ್ಮ ವಿದೇಶಿ ವಿನಿಮಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಆಮದುಗಳನ್ನು ಹೆಚ್ಚಿಸಬೇಕು. ನಾಲ್ಕನೆಯದಾಗಿ, ದವಸ ದಾಸ್ತಾನು ಮಳಿಗೆಗಳಿಂದ ಅಧಿಕ ಪ್ರಮಾಣದಲ್ಲಿ ಧಾನ್ಯವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಬೇಕು. ಐದನೆಯದಾಗಿ, ಹಣದ ಪೂರೈಕೆಯಲ್ಲಿ ಹೆಚ್ಚಳ ಆಗದಂತೆ ಹತೋಟಿ ಜಾರಿಗೆ ತರಬೇಕು. ಸಾರ್ವಜನಿಕ ವೆಚ್ಚದಲ್ಲಿ ಹತೋಟಿ: ತೆರಿಗೆಗಳಲ್ಲಿ ಹೆಚ್ಚಳವಿಲ್ಲದ ಉತ್ತಮ ಆಡಳಿತ, ಅಧಿಕ ಪ್ರಮಾಣದಲ್ಲಿ ಆಮದು ಮತ್ತು ದೀರ್ಘಾವಧಿಯಲ್ಲಿ ರಫ್ತು ಮಾಡಲು ಸಾಪೇಕ್ಷಿಕ್ಷ ಅನುಕೂಲ (comparative advantage) ವಿಲ್ಲದಿರುವ ವಸ್ತುಗಳ ಆಸರೆಯನ್ನು (prop) ತೆಗೆದು ವಿದೇಶಿ ವಿನಿಮಯದಲ್ಲಿ ಬೆಳವಣಿಗೆಯನ್ನು ತಡೆಯುವುದು: ನಿಜವಾದ ಉತ್ಪಾದನಾ ಕಾರ್ಯಗಳಿಗೆ ತೊಂದರೆಯನ್ನುಂಟು ಮಾಡದೇ ಬ್ಯಾಂಕುಗಳ ಪತ್ತಿನಲ್ಲಿ ಹತೋಟಿ (restraint) ಜಾರಿಗೆ ತರಬೇಕು. ಒಂದು ವೇಳೆ ಈ ಮಾರ್ಗಗಳು ಹಣದುಬ್ಬರವನ್ನು ಹತೋಟಿಗೆ ತರಲು ಜಯಪ್ರದವಾಗದಿದ್ದಲ್ಲಿ ಆಘಾತ (drastic) ಮಾರ್ಗವಾದ ಆದಾಯದ ಅಥವಾ ಕೂಲಿಯ ಸ್ವಲ್ಪ ಭಾಗವನ್ನು ಘನೀಭವನ (freeze)ಗೊಳಿಸಬೇಕೆಂದು ಭೂತಲಿಂಗಂ ಅವರು ಅಭಿಪ್ರಾಯ ಪಟ್ಟಿರುತ್ತಾರೆ.

ಪಿ. ಆರ್. ಬ್ರಹ್ಮಾನಂದರ ಹಣಕಾಸಿನ ತುರ್ತು ಸ್ಥಿತಿ :

ಖ್ಯಾತ ಅರ್ಥಶಾಸ್ತ್ರಜ್ಞರಾದ ಪಿ. ಆರ್. ಬ್ರಹ್ಮಾನಂದ ಅವರು ಪ್ರಸ್ತುತ ಹಣದುಬ್ಬರ ಸ್ಥಿತಿಯನ್ನು ನಿಯಂತ್ರಿಸಲು ದಶಾಂಶ ಯೋಜನೆ (Ten Point Plan) ಯನ್ನು ಜಾರಿಗೆ ತಂದು ಹಣಕಾಸು ತುರ್ತು ಪರಿಸ್ಥಿತಿಯನ್ನು ದೇಶದ ಅಧ್ಯಕ್ಷರು

ಘೋಷಿಸಬೇಕೆಂದು ಸೂಚಿಸಿರುತ್ತಾರೆ. ಇವರ ದಶಾಂಶ ಯೋಜನೆಯಿಂದ ಕೂಡಿದ ಹಣಕಾಸು ತುರ್ತು ಪರಿಸ್ಥಿತಿಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸೋಣ.

೧) ರಾಷ್ಟ್ರಾಧ್ಯಕ್ಷರು ಹಣಕಾಸು ತುರ್ತು ಪರಿಸ್ಥಿತಿಯನ್ನು ಘೋಷಿಸುವ ಸಲುವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಬೇಕು.

೨) ಖಾಸಗಿ ವಲಯ ಮತ್ತು ಸಾರ್ವಜನಿಕ ವಲಯಗಳ ವೇತನಗಳನ್ನು ಶೇಕಡಾ ೧೦ರಷ್ಟು ಅನುಕ್ರಮವಾಗಿ ತಾತ್ಕಾಲಿಕ ಕಡಿತ (temporary cut) ಮಾಡಬೇಕು. ಬಡತನದ ರೇಖೆ (Poverty line)ಯ ಮೇಲೆ ಐದು ಪಟ್ಟು ಆದಾಯ ಇರುವ ಎಲ್ಲಾ ಕೆಲಸಗಾರರ ಆದಾಯವನ್ನು ಕಡಿತಕ್ಕೆ ಒಳಪಡಿಸಬೇಕು.

೩) ಪಾಲುದಾರರಿಗೆ ಹಂಚುವ ಲಾಭಾಂಶ (dividend) ಮತ್ತು ಲಾಭದಲ್ಲಿ ಈ ತಕ್ಷಣದಿಂದಲೇ ಶೇಕಡಾ ೧೫ರಷ್ಟು ತಡೆಹಿಡಿಯಬೇಕು.

೪) ನಗದು ಹಣದ ಮೇಲೆ ಮುಖ್ಯವಾಗಿ ಕಪ್ಪು ಹಣದ ಮೇಲೆ ಸಿಡಿಲಿನಂತೆ (crash) ಎರಗಿ ಕಡಿತಮಾಡಬೇಕು. ಐವತ್ತು ರೂಪಾಯಿ ಮತ್ತು ಅಧಿಕ ಮೌಲ್ಯದ ನೋಟುಗಳನ್ನು ಅನಾಣ್ಯೀಕರಣ (demonetisation) ಮಾಡುವುದು ಒಳಿತು.

೫) ಬ್ಯಾಂಕು ದರವನ್ನು ಶೇಕಡಾ ೯ ರಿಂದ ೧೨ಕ್ಕೆ ಮತ್ತು ದೀರ್ಘಾವಧಿ ಠೇವಣಿಯನ್ನು ಶೇಕಡಾ ೧೫ಕ್ಕೆ ಹೆಚ್ಚಿಸಬೇಕು.

೬) ಸರ್ಕಾರದ ಮತ್ತು ವಾಣಿಜ್ಯವಲಯಗಳಲ್ಲಿನ (Commercial sector) ವೆಚ್ಚಗಳನ್ನು ಶೇಕಡಾ ೧೦ರಷ್ಟು ಕಡಿಮೆಮಾಡಬೇಕು.

೭) ಪೂರೈಕೆ ಕೊರತೆ ಇರುವ ಆಯ್ಕೆ ಮಾಡಿದ ವಸ್ತುಗಳ ರಫ್ತನ್ನು ನಿಷೇಧಿಸಬೇಕು.

೮) ಖಾಸಗಿ ಮತ್ತು ಸರ್ಕಾರಿ ವಲಯಗಳಲ್ಲಿ ಕಟ್ಟಡದ ಕೆಲಸಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕು.

೯) ಕೈಗಾರಿಕಾ ಶಾಂತಿಗೆ (Industrial peace) ನೆಲೆ ಕಲ್ಪಿಸಲು ಈ ತಕ್ಷಣವೇ ತ್ರಿಪಕ್ಷ ಮಾತುಕತೆ (Tripartite dialogue) ನಡೆಸಬೇಕು.

೧೦) ಅತ್ಯಾವಶ್ಯಕ ವಸ್ತುಗಳ ಹೆಚ್ಚು ಉತ್ಪಾದನೆ ಮತ್ತು ಅವುಗಳ ತ್ವರಿತ ಗತಿಯ ಸಾರ್ವಜನಿಕ ವಿತರಣಾ ವಿಧಾನ (Public distribution sytem)ವನ್ನು ರೂಪಿಸಿ ಜಾರಿಗೆ ತರುವ ಕ್ರಮಗಳನ್ನು ಕೈಗೊಳ್ಳಬೇಕು.

ದಶಾಂಶ ಯೋಜನೆಯ ಮೌಲ್ಯ ಮಾಪನ :

ಹಣಕಾಸು ತುರ್ತು ಪರಿಸ್ಥಿತಿಯನ್ನು ಜಾರಿಗೆ ತರಲು ರಾಷ್ಟ್ರಾಧ್ಯಕ್ಷರು ಸುಗ್ರೀವಾಜ್ಞೆಯನ್ನು ಹೊರಡಿಸುವುದು ಸಂವಿಧಾನಕ್ಕೆ ವಿರೋಧವಾಗದು. ಆದರೆ, ಆ ಮಟ್ಟಕ್ಕೆ ಹೋಗುವಂತೆ ನಮ್ಮ ಆರ್ಥಿಕ ಪರಿಸ್ಥಿತಿ ಇನ್ನೂ ಕೈಮೀರಿಲ್ಲ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ವೇತನಗಳು ಗಣನೀಯವಾಗಿ ಗಗನಕ್ಕೇರಿರುತ್ತವೆ. ಹಣಕಾಸು ಸ್ಥಿತಿ ಹತೋಟಿಗೆ ಬರುವವರೆಗೂ ವೇತನಗಳನ್ನು ಯಾವ ರೀತಿಯಲ್ಲೂ ಅಧಿಕಗೊಳಿಸದಂತೆ ಸರ್ಕಾರ ಜವಾಬ್ದಾರಿವಹಿಸಬೇಕು. ವೇತನಗಳಲ್ಲಿ ಕಡಿತ ಮಾಡುವದನ್ನು ಕೆಲಸಗಾರರು ಪ್ರತಿಭಟಿಸುವುದರಿಂದ, ಅಧಿಕ ವೇತನಗಳನ್ನು ಬೇಡುವುದನ್ನು ತಡೆಯುವುದು ಸುಲಭ ಮತ್ತು ಯೋಗ್ಯ. ಬಡತನದ ರೇಖೆಗೆ ಮೇಲಿರುವ ಜನರ ಆದಾಯಗಳನ್ನು ಕಡಿತಕ್ಕೆ ಗುರಿ ಮಾಡುವುದಕ್ಕೆ ಬದಲಾಗಿ ಬಡತನದ ರೇಖೆಯ ಕೆಳಗಿನ ಜನರ ಆದಾಯ ಅಧಿಕಗೊಳ್ಳುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಉಚಿತ ಮತ್ತು ಸೂಕ್ತ.

ಪಾಲುದಾರರಲ್ಲಿ ಹಂಚುವ ಲಾಭ ಮತ್ತಿತರ ಲಾಭಗಳನ್ನು ತಡೆಯುವುದರಿಂದ ಮಧ್ಯಮ ವರ್ಗದವರಲ್ಲಿ ಉಳಿತಾಯ ಪ್ರವೃತ್ತಿ ಕುಗ್ಗುವ ಸ್ಥಿತಿಯುಂಟಾಗುತ್ತದೆ. ಆದ್ದರಿಂದ ಲಾಭಾಂಶದಲ್ಲಿ ಕಡಿತ ಮಾಡಿದ ಹಣಕ್ಕೆ ಅಧಿಕ ಬಡ್ಡಿಕೊಟ್ಟು ನಿರ್ದಿಷ್ಟ ಕಾಲದ ನಂತರ ಅಸಲು ಬಡ್ಡಿಯನ್ನು ಯಾವ ತೊಂದರೆಯೂ ಇಲ್ಲದೆ ಹಿಂತಿರುಗಿಸುವ ವ್ಯವಸ್ಥೆ ಮಾಡಬೇಕು.

ಸರ್ಕಾರ ರಿಜರ್ವ ಬ್ಯಾಂಕ್ ಮೂಲಕ ಠೇವು ಹಣದ ಪ್ರಮಾಣ ಹೆಚ್ಚಿಸಿ ಕಪ್ಪು ಹಣವು ಚಲಾವಣೆಯಿಂದ ದೂರಿಡುವಂತೆ ಮಾಡಬೇಕು. ಆದಾಯ ತೆರಿಗೆ, ಅಬ್ಕಾರಿ ಸುಂಕಗಳು ಮೊದಲಾದ ತೆರಿಗೆ ಇಲಾಖೆಗಳ ಆಡಳಿತವನ್ನು ಭದ್ರಗೊಳಿಸಿ, ಕಳ್ಳ ಸಾಗಾಣಿಕೆಗಳನ್ನು ತಡೆದು ಕಾಳಸಂತೆಯಲ್ಲಿ ಗಳಿಸುವ ವಿದೇಶಿ ವಿನಿಮಯವನ್ನು ಹತೋಟಿಗೆ ತರಬೇಕು. ಅಧಿಕ ಬೆಲೆಯುಳ್ಳ ನೋಟುಗಳನ್ನು ಅನಾಣ್ಯೀಕರಿಸುವುದರಿಂದ ಅಶಿಕ್ಷಿತ ಬಡಜನರಿಗೆ ತೊಂದರೆಯಾಗುವುದು. ಕಪ್ಪು ಹಣವನ್ನು ಗಳಿಸುತ್ತಿರುವ ನಗರ ವಾಸಿಗಳು ಈ ಕ್ರಮಗಳಿಂದ ಸುಲಭ ರೀತಿಯಲ್ಲಿ ಪಾರಾಗುವರು. ತೆರಿಗೆ ಹೊರೆ ಅಧಿಕವಾಗಿರುವುದರಿಂದ ಭಾರತದಲ್ಲಿ ತೆರಿಗೆ ಪಾವತಿಯಲ್ಲಿ ನುಣುಚಿಕೊಳ್ಳುವಿಕೆ (Evasion) ಭಾರಿ ಮಟ್ಟದಲ್ಲಿ ನಡೆಯುತ್ತಿದೆ. ವೇತನ ಪಡೆಯುವವರು ಮಾತ್ರ ತೆರಿಗೆಯನ್ನು ಸರಿಯಾದ ರೀತಿಯಲ್ಲಿ ಪಾವತಿ ಮಾಡುತ್ತಿದ್ದಾರೆ. ಆದ್ದರಿಂದ ವೇತನ ಪಡೆಯುವವರಿಗೆ ಪ್ರತ್ಯೇಕದರದಲ್ಲಿ ಆದಾಯ ತೆರಿಗೆಯನ್ನು ಅನ್ವಯಿಸುವಂತೆ ಮಾಡಬೇಕು.

ಬ್ಯಾಂಕು ದರಗಳನ್ನು ದುರ್ಬಲ ಮತ್ತು ಮಧ್ಯಮ ವರ್ಗದವರಿಗೆ ಅನುಕೂಲವಾಗುವಂತೆ ನಿಗದಿಪಡಿಸಬೇಕು. ಬಡ್ಡಿದರದಲ್ಲಿ ತಾರತಮ್ಯ ವಿಧಾನ (Differential Rate of Interest Policy) ಬೇಕು. ದೀರ್ಘಾವಧಿಯ ಠೇವಣಿಯ ಬಡ್ಡಿದರ ಹೆಚ್ಚಿಸುವುದರಿಂದ ದುರ್ಬಲ ಮತ್ತು ಮಧ್ಯಮ ವರ್ಗದವರಲ್ಲಿ ಉಳಿತಾಯ ಪ್ರವೃತ್ತಿ ಅಧಿಕಗೊಳ್ಳುವುದು.

ಸರ್ಕಾರಿ ಮತ್ತು ಖಾಸಗಿ ರಂಗದಲ್ಲಿ ಅತ್ಯಂತ ಅಧಿಕ ಮಟ್ಟದಲ್ಲಿ ಹಣ ಪೋಲಾಗುತ್ತಿದೆ. ಈ ರಂಗಗಳಲ್ಲಿ ಪೋಲಾಗುತ್ತಿರುವ ದುಂದು ವೆಚ್ಚವನ್ನು ಹತೋಟಿಗೆ ತರುವುದರಿಂದ ಶೇಕಡಾ ೨೦% ರಷ್ಟು ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವಿದೆ. ಸಾರ್ವಜನಿಕ ಯೋಜನೆಗಳಿಗಾಗಿ ಮೀಸಲಾಗಿಟ್ಟ ವೆಚ್ಚದಲ್ಲಿ ಶೇಕಡಾ ೪೦ ರಷ್ಟು ಸಂಬಂಧಪಟ್ಟ ಜನರಲ್ಲಿಯೇ ಮಾಮೂಲಾಗಿ ವಿತರಣೆಯಾಗುತ್ತದೆ. ಈ ಪ್ರವೃತ್ತಿಯನ್ನು ಹೋಗಲಾಡಿಸಿದರೆ ನಮ್ಮ ಆರ್ಥಿಕತೆಯ ಮೇಲೆ ಗುಣಕ ರೀತಿಯಲ್ಲಿ ಪರಿಣಾಮ (multiplied effect) ಉಂಟಾಗುತ್ತದೆ. ಸರ್ಕಾರಿ ರಂಗದಲ್ಲಿರುವ ಉದ್ಯಮಗಳು ವಾಣಿಜ್ಯ ಸೂತ್ರಗಳ ಆಧಾರ (Business Principles)ದ ಮೇಲೆ ವ್ಯವಹರಿಸಬೇಕು. ಈ ಉದ್ಯಮಗಳು ಈಗ ಸಾರ್ವಜನಿಕ ಹಣಕಾಸಿನ ಮೇಲೆ ಹೊರೆಯಾಗಿವೆ. ಅಂತರ್ ರಾಷ್ಟ್ರೀಯ ವ್ಯಾಪಾರ ನೀತಿಯನ್ನು ಸೂಕ್ತ ರೀತಿಯಲ್ಲಿ ರಚಿಸಿಕೊಂಡು ಅಭಾವ ವಸ್ತುಗಳನ್ನು ಸಕಾಲಕ್ಕೆ ಆಮದು ಮಾಡಿಕೊಳ್ಳುವುದಕ್ಕೆ ಮತ್ತು ಭಾರತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪೂರೈಕೆಯುಳ್ಳ ವಸ್ತುಗಳನ್ನು ರಫ್ತು ಮಾಡಲು ಅವಕಾಶಗಳನ್ನೊದಗಿಸಿ ಕೊಡಬೇಕು. ಈ ಕಾರ್ಯಕ್ರಮ ಭಾರತದಲ್ಲಿ ಅತಿ ಪ್ರಸರಣವನ್ನು ತಡೆಯಲು ಮತ್ತು ರಫ್ತು ಯೋಗ್ಯವಾದ ವಸ್ತುಗಳ ಉತ್ಪಾದನೆಯನ್ನು ಅಧಿಕಗೊಳಿಸಲು ಅನುಕೂಲವಾಗುತ್ತಿದೆ. ನಮ್ಮ ದೇಶದ ಅಂತರ್‌ರಾಷ್ಟ್ರೀಯ ವ್ಯಾಪಾರ ನೀತಿ ಸಾಕಷ್ಟು ಪರಿಣಾಮಕಾರಿಯಾಗಿ ಕಾರ್ಯಗತವಾಗಿಲ್ಲ. ಆದ್ದರಿಂದ ಈ ಬಗ್ಗೆ ಸರಕಾರ ಗಮನ ಹರಿಸಬೇಕು.

ಖಾಸಗಿ ಮತ್ತು ಸರಕಾರಿ ವಲಯಗಳಲ್ಲಿ ಕಟ್ಟಡದ ಕೆಲಸಗಳನ್ನು ತಡೆಯುವುದರಿಂದ ಮನೆಗಳ ಕೊರತೆ ನಗರಗಳಲ್ಲಿ ಅಧಿಕವಾಗುತ್ತದೆ. ಮತ್ತು ನಿರುದ್ಯೋಗ ಸಮಸ್ಯೆ ಹೆಚ್ಚುತ್ತದೆ. ಕಟ್ಟಡದ ಕೆಲಸ ತಡೆಯುವುದರ ಬದಲಾಗಿ ಈ ವೆಚ್ಚ ಪೋಲಾಗದಂತೆ ಕಾರ್ಯಗತ ಮಾಡುವುದು ಅವಶ್ಯಕ.

ಕೈಗಾರಿಕಾ ಶಾಂತಿಯು ಉತ್ಪಾದನೆಯನ್ನು ಅಧಿಕಗೊಳಿಸಲು ಬೇಕಾಗಿರುವ ಪೂರ್ವಭಾವಿ ಸಿದ್ಧತೆಗಳಲ್ಲಿ ಒಂದು ಬಹುಮುಖ್ಯವಾದ ಅಂಶ. ವಿವಿಧ ಕ್ಷೇತ್ರಗಳಲ್ಲಿ ಸಂಘಟಿತ ಕೂಲಿಕಾರರು (Organised labour) ಎಲ್ಲ ದೇಶದ ಆರ್ಥಿಕ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೇ ತಮ್ಮ ವೇತನಗಳನ್ನು ಅಧಿಕಗೊಳಿಸುವಲ್ಲಿ ಗಮನಾರ್ಹವಾಗಿ ಜಯಿಸಿದ್ದಾರೆ. ಈ ದಿಶೆಯಲ್ಲಿ ಅವರು ತಮ್ಮ ಆಯುಧವಾದ "ಸಂಪನ್ನು" ಬಳಸುವುದರಲ್ಲಿ ದೇಶ ಕಲ್ಯಾಣವನ್ನು ಮತ್ತು ಅಸಂಘಟಿತ ಬಡಜನರ ಕಲ್ಯಾಣವನ್ನು ಗಮನದಲ್ಲಿಟ್ಟಿಲ್ಲ. ಆದ್ದರಿಂದ ನಮ್ಮ ಆರ್ಥಿಕ ಸ್ಥಿತಿ ಸುಧಾರಿಸುವವರೆಗೂ ಐದು ವರುಷದ ಮಟ್ಟಿಗಾದರೂ ಸಂಪುಗಳನ್ನು, ಬೀಗ ಮುದ್ರೆಗಳನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಈ ಬಗ್ಗೆ ತ್ರಿಪಕ್ಷ ಮಾತುಕತೆ ನಡೆಸಿ ಸೂಕ್ತ ರೀತಿಯಲ್ಲಿ ಒಪ್ಪಂದಕ್ಕೆ ಬರಬೇಕು.

ನಮ್ಮ ಉತ್ಪಾದನಾ ನೀತಿಯನ್ನು ಬದಲಾಯಿಸಿ ಅತ್ಯಾವಶ್ಯಕ ವಸ್ತುಗಳ ಉತ್ಪಾದನೆಯನ್ನು ತಕ್ಕಮಟ್ಟದಲ್ಲಿ ಅಧಿಕಗೊಳಿಸಲು ಬೇಕಾಗಿರುವ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ವಿತರಣಾ ವಿಧಾನವು ಜನತಾ ಬಜಾರಗಳ ಮಟ್ಟಕ್ಕೆ ಇಳಿದು ಸಾರ್ವಜನಿಕ ಹಣವನ್ನು ಪೋಲು ಮಾಡದಂತೆ ಪರಿಣಾಮಕಾರಿಯಾಗಿ ಕಾರ್ಯವೆಸಗಬೇಕು. ಇದು ಸಾಧ್ಯವಿಲ್ಲದಲ್ಲಿ ಈ ವಿಧಾನವನ್ನು ಕೈಬಿಡುವುದು ಉಚಿತ. ಭಾರತದಲ್ಲಿ ಹೊಸ ವಿಧಾನಗಳು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಂಡಿಲ್ಲ. ಸಾಕಷ್ಟು ಸೂಕ್ತ ರೀತಿಯಲ್ಲಿ ಅವುಗಳ ಬಗ್ಗೆ ಮಾಹಿತಿಗಳನ್ನು ಜನರಿಗೆ ಮನದಟ್ಟು ಮಾಡುವ ಕ್ರಮಗಳನ್ನು ಕೈಗೊಂಡಿಲ್ಲ. ಆದ್ದರಿಂದ ವಾರ್ತಾ ಇಲಾಖೆಯು ಬಿರುಸಿನಿಂದ ವ್ಯವಹರಿಸಿ ಹೊಸ ಆರ್ಥಿಕ ಯೋಜನೆಗಳ ಗುಣಾವಗುಣಗಳನ್ನು ಕುರಿತು ಜನರಿಗೆ ಮನದಟ್ಟಾಗುವಂತೆ ತಿಳುವಳಿಕೆ ಕೊಡಲು ಆದ್ಯತೆ ನೀಡಬೇಕು.

ಭಾರತದಲ್ಲಿ ಇತ್ತೀಚೆಗೆ ದೇಶಾದ್ಯಂತ ವಿವಾದಕ್ಕೀಡಾದ ಸಮಸ್ಯೆ ಎಂದರೆ ಕಾರ್ಮಿಕರ ಬೋನಸ್. ಕಡುಬಡತನದ ಕೋಟ್ಯಾಂತರ ಜನರು ಕುಡಿಯಲು ಸ್ವಚ್ಛ ನೀರು, ವಾಸಿಸಲು ಯೋಗ್ಯ ಜೋಪಡಿ, ಎರಡಾವರ್ತಿ ಊಟ, ಮೈಮುಚ್ಚಲು ಅಗ್ಗವಾದ ಬಟ್ಟೆ ಸಹ ಇಲ್ಲದೇ ಇದ್ದಾರೆ. ಈ ಪರಿಸ್ಥಿತಿಯಲ್ಲಿ ದೇಶದಾದಾಯದಿಂದ ಅತ್ಯಧಿಕ ಪಾಲನ್ನು ಸಂಘಟಿತ ಕಾರ್ಮಿಕರು, ವೇತನದಾರರು ಒತ್ತಾಯದ ಮೂಲಕ ಪಡೆಯುವುದು ಅನುಚಿತ. ಇದು ರಾಜಕೀಯ ನಿರ್ಣಯವೇ ಹೊರತು ಯಾವ ಆರ್ಥಿಕ ಸೂತ್ರದ ಆಧಾರದ ಮೇಲೆ ಕೈಗೊಂಡಿಲ್ಲ. ಈ ವಿಷಯವನ್ನು ಸರಕಾರ ಚರ್ಚೆ ಮಾಡಲು ಸಹ ಅವಕಾಶ ಕೊಡಬಾರದು. ಕಾರ್ಯ ದಕ್ಷತೆಯನ್ನು ಹಾಗೂ ಉತ್ಪಾದನಾ ಶಕ್ತಿಯನ್ನು ಅಧಿಕಗೊಳಿಸದೇ ಬೋನಸ್ ಬೇಡುವುದು ಮತ್ತು ಪಡೆಯುವುದು ದೇಶಕ್ಕೆ ಅನ್ಯಾಯವೆಸಗಿದಂತೆ.

ಭಾರತದ ಸದ್ಯದ ಸಂಕಷ್ಟ ಆರ್ಥಿಕ ಪರಿಸ್ಥಿತಿಯನ್ನು ಹೋಗಲಾಡಿಸಲು ತೀವ್ರತರ ಕ್ರಾಂತಿಕಾರಕ ಮಾರ್ಗಗಳನ್ನು ಜಾರಿಗೆ ತರುವುದು ಅಸಾಧ್ಯ. ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಮಾರ್ಗಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯಗತ ಮಾಡುವುದರಿಂದ ಸಾಕಷ್ಟು ಪರಿಣಾಮ ದೊರೆಯಲಿದೆ. ಆದ್ದರಿಂದ ಭೂತಲಿಂಗಂ ಅವರು ಸೂಚಿಸಿರುವ ಅಂಶಗಳನ್ನು ಕಾರ್ಯಗತ ಮಾಡಲು ಸಾಧ್ಯವಿರುವುದರಿಂದ ಈ ದಿಶೆಯಲ್ಲಿ ಸರಕಾರ ಗಮನಹರಿಸಿ ನಮ್ಮ ಆರ್ಥಿಕ ವಿಧಾನಗಳನ್ನು ಶಕ್ತಿಗೊಳಿಸಬೇಕು. ಡಾ॥ ಬ್ರಹ್ಮಾನಂದರು ಸೂಚಿಸಿರುವ ಹಣಕಾಸು ತುರ್ತುಸ್ಥಿತಿ ಕಾರ್ಯಾಚರಣೆಗೆ ತರಲು ಸಾಕಷ್ಟು ತೊಂದರೆಗಳಿಂದ ಕೂಡಿರುವುದರಿಂದ ಅದು ಪರಿಣಾಮಕಾರಿಯಾಗಲಾರದು.

ಭಾರತದಲ್ಲಿ ಆರ್ಥಿಕ ಅಸಮಾನತೆ ಮತ್ತು ಬಡತನ

● ಟಿ. ಆರ್. ಚಂದ್ರಶೇಖರ

ಅಸಮಾನತೆ, ಬಡತನ, ಶೋಷಣೆ, ನಿರುದ್ಯೋಗ ಇತ್ಯಾದಿ ಪದಗಳು ಇಂದು ತುಂಬಾ ಸುದ್ದಿಯಲ್ಲಿವೆ. ಶಬ್ದಕೋಶದಲ್ಲಿ ಇವುಗಳ ಅರ್ಥ ವಿವಿಧ ಬಗೆಯಾದರೂ ಪರಿಣಾಮದಲ್ಲಿ ಮಾತ್ರ ಒಂದೇ ವ್ಯಾಪ್ತಿಗೆ ಸೇರುತ್ತವೆ. ರಾಜಕೀಯವಾಗಿ ಈ ಪದಗಳನ್ನು ಅಸ್ತ್ರಗಳನ್ನಾಗಿ ಬಳಸಿ ಜನಕಲ್ಯಾಣಕ್ಕೆ ಗೈದ ಉದಾಹರಣೆಗಳು ಇತಿಹಾಸದಲ್ಲಿವೆ. ಹಾಗೆಯೇ ಸ್ವಾರ್ಥಕ್ಕಾಗಿ, ಅಧಿಕಾರಕ್ಕಾಗಿ ದುರುಪಯೋಗವಾಗಿರುವ ಉದಾಹರಣೆಗಳೂ ಇವೆ. ಜನತೆಯ ಆಶೆ–ಆಕಾಂಕ್ಷೆಗಳನ್ನು ಉದ್ದೀಪಿಸುವ, ಭಾವನೆಯನ್ನು ಕೆರಳಿಸುವ ಸಾಮರ್ಥ್ಯ ಈ ಪದಗಳ ಅಂತರ್ಯದಲ್ಲಿ ಹುದಿಗಿದೆ.

ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು, ತತ್ವಜ್ಞಾನಿಗಳು ಈ ಪದಗಳನ್ನು ಸೂಕ್ಷ್ಮ ವಿಶ್ಲೇಷಣೆಗೆ, ಒಳಪಡಿಸಲು ಯತ್ನಿಸಿದ್ದಾರೆ. ತಾತ್ವಿಕರೂಪ ಕೊಟ್ಟು ಒಂದು ಸೂತ್ರದಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಈ ಪದಗಳ ಒಂದು ವಿಶಿಷ್ಟ ಲಕ್ಷಣವೆಂದರೆ– ಯಾವುದೇ ನಿರ್ದಿಷ್ಟ ಶಾಸ್ತ್ರದ ಚೌಕಟ್ಟಿಗೆ ಮೀಸಲಾಗದೆ ವಿಶಾಲವಾದ ಹರವು ಮತ್ತು ವ್ಯಾಪ್ತಿ ಪಡೆದಿವೆ. ಈ ಸಮಸ್ಯೆಗಳ ಬಗ್ಗೆ ಅಧ್ಯಯನ ಸಂಶೋಧನೆ ತಾತ್ವಿಕ ಚಿಂತನೆಗಳಿಗೆ ವಿಶ್ವದ ಬಡ ರಾಷ್ಟ್ರಗಳು ಫಲವತ್ತಾದ ಕಾರ್ಯಕ್ಷೇತ್ರ ಒದಗಿಸಿವೆ.

ಒಂದು ಅಸಮ ವ್ಯವಸ್ಥೆಯಲ್ಲಿ ಅಸಮಾನತೆ ಬಡತನ ಇವು ಜೊತೆಯಾಗಿ ನಡೆದಿರುತ್ತವೆ. ಶೋಷಣೆ ಅಸಮ ವ್ಯವಸ್ಥೆಯ ಒಂದು ಶಾಶ್ವತ ಲಕ್ಷಣ. ಆರ್ಥಿಕ ಶೋಷಣೆ, ಬೌದ್ಧಿಕ ಗುಲಾಮಗಿರಿ, ಸಾಮಾಜಿಕ ಶೋಷಣೆ, ಸಾಮ್ರಾಜ್ಯಶಾಹಿ ಶೋಷಣೆ ಹೀಗೆ ಹಲವು ಮುಖಗಳುಳ್ಳ ಸಮಸ್ಯೆ ಶೋಷಣೆ. ಹೀಗೆ ಶೋಷಣೆ ಹಲವು ರೂಪತಾಳಿ ವ್ಯಕ್ತಿಯನ್ನು ಬಡತನದ ರೂಪಕ್ಕೆ ತಳ್ಳಿ ಅದು ಸಮಾಜದ ಸರ್ವಕಾಲಿಕ ಲಕ್ಷಣವಾಗುವಂತೆ ಮಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ.

ನಿರುದ್ಯೋಗ ಕೂಡ ಬಡ ದೇಶಗಳಲ್ಲಿ ಹತ್ತು ಹಲವು ಬಗೆಯಾಗಿ ತುಂಬಾ ಗೂಢವಾದ ಮತ್ತು ಸಂಕೀರ್ಣವಾದ ಸಮಸ್ಯೆಯಾಗಿದೆ. ಒಂದು ಅಸಮ ಸಮಾಜದಲ್ಲಿ

ನಿರುದ್ಯೋಗ ವ್ಯಕ್ತಿಗೆ ಸೀಮಿತವಾಗಿರದೆ. ಇಡೀ ಕುಟುಂಬವನ್ನು ಒಳಗೊಂಡು ಅದರ ವಿಶ್ಲೇಷಣೆ ಮತ್ತು ಪರಿಮಾಣ ರೂಪದ ಅಂದಾಜು ಅಳತೆಯನ್ನು ಕ್ಲಿಷ್ಟ ಮಾಡಿದೆ. ಬಡತನ ಅಸಮಾನತೆಗಳಿಗೆ ನಿರುದ್ಯೋಗವನ್ನು ಕಾರಣವಾಗಿಸುವುದು ಸಮರ್ಪಕ ವಿಚಾರವಲ್ಲ. ಏಕೆಂದರೆ ಬಡವರೆಲ್ಲರೂ ನಿರುದ್ಯೋಗಿಗಳಲ್ಲ, ನಿರುದ್ಯೋಗಿಗಳೆಲ್ಲರೂ ಬಡವರಲ್ಲ. ಬದುಕುವುದೇ ದೊಡ್ಡ ಶ್ರಮವಾಗಿರುವಾಗ ಬಡವರಿಗೆ ನಿರುದ್ಯೋಗದ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಕೂಲಿ ವ್ಯವಸ್ಥೆ ತುಂಬಾ ಪೇಲವವಾಗಿರುವ 'ಸ್ವಯಂ ಉದ್ಯೋಗ' ಮತ್ತು ಕುಟುಂಬ ಕೇಂದ್ರಿತ ಶ್ರಮವ್ಯಾಪಕವಾಗಿರುವ ಭಾರತದಂತಹ ಆರ್ಥಿಕತೆಯಲ್ಲಿ ನಿರುದ್ಯೋಗ ಸಮಸ್ಯೆಯ ವಿಶ್ಲೇಷಣೆ ತುಂಬಾ ಗೊಂದಲಮಯವಾಗುತ್ತದೆ. ಶ್ರೀಮಂತ ರಾಷ್ಟ್ರಗಳಿಗಿಂತ ಬಡದೇಶಗಳಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಿದೆ. ಶ್ರೀಮಂತ ದೇಶಗಳಲ್ಲಿ ನಿರುದ್ಯೋಗ 'ಚಕ್ರೀಯ' ಲಕ್ಷಣದಿಂದ ಕೂಡಿದ್ದರೆ ಬಡ ದೇಶಗಳಲ್ಲಿ ದೋಷಪೂರ್ಣ ಆರ್ಥಿಕ ರಚನೆಯಲ್ಲಿ ಸಮ್ಮಿಳಿತಗೊಂಡಿದೆ.

ಬಡತನ, ಅಸಮಾನತೆ ಮತ್ತು ನಿರುದ್ಯೋಗ ಸಮಸ್ಯೆಗಳು ಇಂದು ವಿಶ್ವದಲ್ಲಿ ವ್ಯಾಪಕ ಅಧ್ಯಯನಕ್ಕೆ ಒಳಗಾಗಿವೆ. ವಿವಿಧ ಬಗೆಯಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಅರ್ಥಶಾಸ್ತ್ರದ ಸಂಪ್ರದಾಯ ದೃಷ್ಟಿಯಾದ "ಮೊದಲು ಉತ್ಪಾದನೆ ನಂತರ ವಿವರಣೆ" ಎಂಬ ವಾದದಿಂದ ಪ್ರಾರಂಭಿಸಿ, ಮಾರ್ಕ್ಸ್‌ವಾದಿಗಳ ಸಮಾಜವಾದವನ್ನೊಳಗೊಂಡು ಬೃಹತ್ ಸಾಹಿತ್ಯ ನಿರ್ಮಾಣವಾಗಿದೆ. ಬಡವ-ಬಲ್ಲಿದರ ನಡುವಿನ ಅಸಮಾನತೆ ನಿವಾರಣೆಗೆ ಕಾರ್ಮಿಕ ಕ್ರಾಂತಿ ಮತ್ತು ಸಮಾಜವಾದದ ಸ್ಥಾಪನೆಯೊಂದೇ ಮಾರ್ಗ ಎಂದು ಮಾರ್ಕ್ಸ್ ಹೇಳಿದರೆ, ಮಹಾತ್ಮಾ ಗಾಂಧಿ ಶಾಂತಿಯುತ ಅಂತ್ಯೋದಯದಿಂದ ಈ ಕಾರ್ಯ ಸಾಧ್ಯ ಎಂಬ ವಿಚಾರ ಮುಂದಿಟ್ಟರು. ರಷ್ಯದಲ್ಲಿ ಲೆನಿನ್, ಚೀನದಲ್ಲಿ ಮಾವೋ, ಕ್ಯೂಬಾದಲ್ಲಿ ಕ್ಯಾಸ್ಟ್ರೋ ಭಾರತದಲ್ಲಿ ಇಂದಿರಾ ಗಾಂಧಿ, ರೋಡೇಶಿಯಾದಲ್ಲಿ ಮುಗಾಬೆ ಇತ್ಯಾದಿ ನಾಯಕರು ವಿವಿಧ ರೀತಿಯಲ್ಲಿ ಈ ಸಮಸ್ಯೆಯನ್ನು ಎದುರಿಸಿದ್ದಾರೆ.

ಅಸಮಾನತೆ-ಒಂದು ಚಾರಿತ್ರಿಕ ಹಿನ್ನೆಲೆ:

ಮನುಷ್ಯನ ನಾಗರಿಕತೆಯ ವಿಕಾಸದ ಜೊತೆಯಲ್ಲೇ ಹರಿದುಕೊಂಡು ಬರುತ್ತಿರುವ ಅಸಮಾನತೆಯ ಸಮಸ್ಯೆ ಇಂದು ದೈತ್ಯರೂಪ ತಾಳಿದೆ. ನಮ್ಮ ದೇಶದ ನಾಗರಿಕತೆಯು ಮೂಲಕ ಅಸಮಾನತೆಯ ಚರಿತ್ರೆಯನ್ನು ಒಯ್ಯಬಹುದಾಗಿದೆ. ಆರ್ಥಿಕ ಪ್ರಗತಿಯ ಪ್ರಾರಂಭದ ದಶೆಯಲ್ಲಿ ಅಸಮಾನತೆ ತೀವ್ರವಾಗುವ ಅಂಶ ಇಂದಿನ ಶ್ರೀಮಂತ ರಾಷ್ಟ್ರಗಳ ಆರ್ಥಿಕ ಇತಿಹಾಸದ ಅಧ್ಯಯನದಿಂದ ತಿಳಿಯುತ್ತದೆ. ಆದರೆ ೨೦ನೇ ಶತಮಾನದಲ್ಲಿ ಬಡತನ ಅಸಮಾನತೆಯ ತೀವ್ರತೆ ಮತ್ತು ಪ್ರಮಾಣದಲ್ಲಿ ಭಾರಿ

ಸುಧಾರಣೆ ಶ್ರೀಮಂತ ರಾಷ್ಟ್ರಗಳಲ್ಲಿ ಸಂಭವಿಸಿದೆ. ಆದರೆ ವಿಶ್ವದ ೨/೩ ರಷ್ಟು ಆಳ್ಬಲ ಹೊತ್ತಿರುವ ಏಷ್ಯ–ಆಫ್ರಿಕಾ ದೇಶಗಳು ಭಯಾನಕ ಪ್ರಮಾಣದ ಬಡತನ–ಅಸಮಾನತೆ ಎದುರಿಸುತ್ತಿವೆ. ಬಡತನ–ಅಸಮಾನತೆಗಳ ಪ್ರಮಾಣ ಮತ್ತು ತೀವ್ರತೆ ಬಂಡವಾಳಶಾಹಿ ಅಭಿವೃದ್ಧದೇಶ ಮತ್ತು ಸಮಾಜವಾದಿ ರಾಷ್ಟ್ರಗಳಲ್ಲಿ ಕಡಿಮೆ. ಆದರೆ ವಿಕಾಸಶೀಲ ರಾಷ್ಟ್ರಗಳಲ್ಲಿ ದಟ್ಟವಾದ ಬಡತನ. ತೀವ್ರ ತರವಾದ ಅಸಮಾನತೆ ತಾಂಡವ ವಾಡುತ್ತಿದೆ. ವಿಶ್ವಬ್ಯಾಂಕಿನ ಒಂದು ಅಧ್ಯಯನದ ಪ್ರಕಾರ ಅಭಿವೃದ್ಧಿ ದೇಶಗಳಲ್ಲಿ ಕೆಳಗಿನ ಸ್ತರದ ಶೇಕಡಾ ೪೦ರಷ್ಟು ಜನ ದೇಶದ ಒಟ್ಟು ಆದಾಯದಲ್ಲಿ ಶೇ. ೧೬ರಷ್ಟು ಅನುಭವಿಸುತ್ತಿದ್ದರೆ, ಸಮಾಜವಾದಿ ರಾಷ್ಟ್ರಗಳಲ್ಲಿ ಅದೇ ಶೇ. ೪೦ರಷ್ಟು ಜನ ದೇಶದ ಆದಾಯದ ಶೇ. ೨೫ರಷ್ಟನ್ನು ಅನುಭವಿಸುತ್ತಿದ್ದಾರೆ. ಆದರೆ ಬಡದೇಶಗಳಲ್ಲಿ ಕೆಳಗಿನ ಸ್ತರದ ಶೇ. ೪೦ರಷ್ಟು ಜನ ದೇಶದ ಆದಾಯದಲ್ಲಿ ಶೇ. ೧೨.೫ರಷ್ಟು ಪಾಲು ಪಡೆದಿದ್ದಾರೆ.[೨]

ವಸಾಹತುಶಾಹಿ ಮತ್ತು ಸಾಮ್ರಾಜ್ಯವಾದಿ ನೀತಿಯನ್ನನುಸರಿಸಿದ ಬ್ರಿಟಿಷ್ ಆಡಳಿತದಿಂದ ಭಾರತಕ್ಕೆ ಒದಗಿದ ವಿಪತ್ತನ್ನು ಶ್ರೀ ದಾದಾಭಾಯಿ ನವರೋಜಿಯವರು ತಮ್ಮ ಒಂದು ಗ್ರಂಥದಲ್ಲಿ ವಿಶದಪಡಿಸಿದ್ದಾರೆ. ಅವರ ಅಧ್ಯಯನದ ಪ್ರಕಾರ ೧೮೩೫ ರಿಂದ ೧೮೭೨ರವರೆಗೆ ಭಾರತದಿಂದ ಸುಮಾರು ೪೬ ಕೋಟಿ ಪೌಂಡ್ ಸಂಪತ್ತು ಬ್ರಿಟಿಷ್ ದೇಶಕ್ಕೆ ಹರಿಯಿತು. ಇಂದಿನ ಭಾರತದ ದುಸ್ಥಿತಿಗೆ ಈ ಸಂಪತ್ತಿನ ಲೂಟಿಯೂ ಕಾರಣವಾಗಿದೆ.[೩]

ವಸಾಹತು ನೀತಿಯಿಂದ ಲೂಟಿಗೊಳಗಾದ ಅಪಾರ ಸಂಪತ್ತು ಬ್ರಿಟಿಷ್‌ರಿಂದ ನಮಗೆ ಲಭ್ಯವಾಯಿತೆಂದು ಹೇಳಲಾಗುವ ಸಂಪರ್ಕ ಸೌಲಭ್ಯ, ಶಿಕ್ಷಣ, ಆಧುನಿಕ ವಿಚಾರಗಳು ಹೋಲಿಕೆ ಸಮರ್ಪಕವಾದುದೇನಲ್ಲ. ಈ ಸಂಪತ್ತು ಲೂಟಿಗೊಳಗಾಗದಿದ್ದಿದ್ದರೆ ನಾವೇ ಈ ಸವಲತ್ತುಗಳನ್ನು ಸಾವಕಾಶವಾಗಿ ರೂಢಿಸಿಕೊಳ್ಳಬಹುದಿತ್ತು.

ಹೀಗೆ ಬಡತನ ಅಸಮಾನತೆಗಳು ಇಂದು ನಿನ್ನೆ ಹುಟ್ಟಿಕೊಂಡ ರೋಗಗಳೇನಲ್ಲ. ಇವು ಮಾನವನ ಇತಿಹಾಸದಷ್ಟೇ ಪ್ರಾಚೀನವಾದ ಸಮಸ್ಯೆಗಳು.

ಅಸಮಾನತೆ ಬಗ್ಗೆ ಒಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಬಹುದು. ಅಸಮಾನತೆ ಕೇವಲ ಒಂದು ಸಾಪೇಕ್ಷ ಪದ. ಪರಿಪೂರ್ಣಸಮಾನತೆ ಒಂದು ಮಿಥ್ಯ. ಬಡತನವೂ ಕೂಡ ಸಾಪೇಕ್ಷ ಪದ. ಆರ್ಥಿಕವಾಗಿ, ಭೌತಿಕವಾಗಿ ಶ್ರೀಮಂತನಾದ ವ್ಯಕ್ತಿ, ಬೌದ್ಧಿಕವಾಗಿ, ಸಾಂಸ್ಕೃತಿಕವಾಗಿ ದಿವಾಳಿಯಾಗಿರಬಹುದು. ಆದರೆ ಭಾರತದಂತಹ ದೇಶದಲ್ಲಿ ಬಡತನ ಅಸಮಾನತೆಗಳನ್ನು ಭೌತಿಕ ದೃಷ್ಟಿಕೋನದಿಂದ ನೋಡುವುದೇ ಉಚಿತ. ಈ ಆರ್ಥಿಕ ಅಸಮತೆಯನಿವಾರಣೆಯಾಗದೆ ದೇಶದಲ್ಲಿ ಸಾಮಾಜಿಕ ಸೌಹಾರ್ದತೆ, ಆರ್ಥಿಕ ಪ್ರಗತಿ ಮತ್ತು ವೈಚಾರಿಕ ವರ್ಧನೆ ಸಾಧ್ಯವಿಲ್ಲ.

ಈ ಲೇಖನದಲ್ಲಿ ಭಾರತದ ಆರ್ಥಿಕ ಅಸಮಾನತೆಯ ಅಧ್ಯಯನ ನಡೆಸಲು ಪ್ರಯತ್ನಿಸಲಾಗಿದೆ. ಈ ಸಮಸ್ಯೆಗಳ ಬಗ್ಗೆ ಭಾರತದಲ್ಲಿ ವ್ಯಾಪಕ ಚಿಂತನ, ಮಂಥನ ನಡೆದಿದೆ. ಈ ಕೆಲವು ಸಂಶೋಧನ ಅಧ್ಯಯನಗಳ ಆಧಾರದಿಂದ ಈ ಲೇಖನ ಸಿದ್ಧಪಡಿಸಲಾಗಿದೆ.

ಭಾರತದಲ್ಲಿ ಅಸಮಾನತೆ :

ತೀವ್ರವಾದ ಆರ್ಥಿಕ ಅಸಮಾನತೆ ಮತ್ತು ವ್ಯಾಪಕವಾದ ಬಡತನದಿಂದ ನರಳುತ್ತಿರುವ ಅರ್ಥ ವ್ಯವಸ್ಥೆಯಾದ ಭಾರತದಲ್ಲಿ ಅವುಗಳ ಲಕ್ಷಣ, ಕಾರಣ, ನಿವಾರಣೆಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. ಈ ಬಗ್ಗೆ ನಡೆಯುತ್ತಿರುವ ವಾದ ವಿವಾದಗಳೆಲ್ಲ ನಮ್ಮ ಅರ್ಥ ವ್ಯವಸ್ಥೆಯ ಒಂದು ವಿಷಮ ಲಕ್ಷಣದ ಸುತ್ತ ನಡೆಯುತ್ತಿವೆ ಎಂಬುದು ಮುಖ್ಯವಾದ ಅಂಶ. ಕಳೆದ ೨೫ ವರ್ಷದ (೧೯೫೦ ರಿಂದ ೧೯೭೫) ಯೋಜಿತ ಅವಧಿಯಲ್ಲಿ ಭಾರತ ಗಣನೀಯವಲ್ಲದಿದ್ದರೂ, ಸಾಧಾರಣ ಎನ್ನಬಹುದಾದ ಶೇ. ೪.೫ ರಷ್ಟು ರಾಷ್ಟ್ರೀಯ ಆದಾಯದಲ್ಲಿ ವಾರ್ಷಿಕ ಸರಾಸರಿ ಏರಿಕೆ, ತಲಾ ಆದಾಯದಲ್ಲಿ ಶೇ. ೧ ರಿಂದ ೧.೫ ರಷ್ಟು ಏರಿಕೆ ಸಾಧಿಸಿದ್ದರೂ ಕೂಡ, ದೇಶದ ಬಡತನದ ಪ್ರಮಾಣವಾಗಲಿ, ಅಸಮಾನತೆಯ ಅಂತರವಾಗಲಿ ಕಡಿಮೆಯಾಗದಿರುವುದು ತುಂಬಾ ಕಳವಳಕಾರಿ ಅಂಶವಾಗಿದೆ.[೪] ಒಂದು ಕಡೆ ದೇಶದ G.N.P.ಯಲ್ಲಿ ಏರಿಕೆ. ಮತ್ತೊಂದು ಕಡೆ ಬಡತನದ ಪ್ರಮಾಣದಲ್ಲಿ ಏರಿಕೆ. ಈ ವೈಪರೀತ್ಯದಿಂದಾಗಿ ದೇಶದಲ್ಲಿ ವ್ಯಾಪಕವಾದ ಅಸಮಾನತೆ ತಲೆದೋರಿತು. "ಸಮಾಜವಾದ" ಗುರಿಯನ್ನು ಇಟ್ಟುಕೊಂಡು ಹೊರಟ ದೇಶದಲ್ಲಿ ಇದು ಸಂಭವಿಸಿತು ಎಂಬುದು ಚಿಂತಿಸಬೇಕಾದ ವಿಷಯ.[೫] ಈ ಕಾರಣಗಳಿಂದ ಹಲವಾರು ಅರ್ಥಶಾಸ್ತ್ರಜ್ಞರು ನಾವು ಆಯ್ಕೆ ಮಾಡಿಕೊಂಡಿರುವ ಅರ್ಥವ್ಯವಸ್ಥೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಇಂದು ಆರ್ಥಿಕ ಪ್ರಗತಿಯ ಜೊತೆಗೆ ಪ್ರಗತಿ, ಫಲದ ಸಮಾನ ಹಂಚಿಕೆಯೂ ನಡೆಯಬೇಕು ಎಂಬುದು ವೈಚಾರಿಕ ಕ್ಷೇತ್ರದಲ್ಲಿ ಮನ್ನಣೆ ಪಡೆದಿದೆ. ಆರ್ಥಿಕ ಪ್ರಗತಿಯ ಗಾತ್ರ ಮುಖ್ಯವಲ್ಲ. ಆದರ ಪ್ರಗತಿಯ ಗುಣ ಮುಖ್ಯ. ಪ್ರಗತಿಯ ಫಲ ಸರ್ವರಿಗೂ ಸಮಾನವಾಗಿ ದೊರಕಬೇಕು ಎಂಬುದು ಇಂದಿನ ವಿಶ್ವದಲ್ಲಿ ಮೌಲ್ಯವಾಗುವ ಹಂತಕ್ಕೆ ನಡೆದಿದೆ. ಪ್ರಗತಿಯ ಫಲ ಸಾವಕಾಶವಾಗಿ, ಸ್ವಯಂ ದೇಶದ ಸರ್ವರ ಪಾಲಿಗೂ ಇಳಿಯುವ ಅವಧಿಯವರೆಗೆ ಕಾಯುವ ತಾಳ್ಮೆಯಾಗಲಿ ಮತ್ತು ಇದನ್ನು ಸಮರ್ಥಿಸುವ ಸಂಪ್ರದಾಯವಾದಿ ಜಡ ದೃಷ್ಟಿಯಾಗಲಿ ಇಂದಿನ ಜನಾಂಗದಲ್ಲಿ ಮಾಯವಾಗಿವೆ. ಆರ್ಥಿಕ ಪ್ರಗತಿಯ ಫಲ ಉದ್ದೇಶ ಪೂರ್ವಕವಾಗಿ ಬಡಜನತೆಯ ಕಡೆ ಹರಿಯುವಂತೆ ಆರ್ಥಿಕ ಯೋಜನೆಯನ್ನು ರೂಪಿಸುವ ಅವಶ್ಯಕತೆ ಇಂದು ಬಂದಿದೆ. "ಮೊದಲು ಉತ್ಪಾದನೆ ನಂತರ ವಿತರಣೆ" ಎಂಬ ಕ್ರೂರ ತತ್ತ್ವವನ್ನು ಬಿಟ್ಟು ಉತ್ಪಾದನೆ ವಿತರಣೆ ಎರಡರ ಸಮಗ್ರೀಕೃತ್ತ ಯೋಜನೆಯ ನಿರ್ಮಾಣದ ಬಗ್ಗೆ ನಾವು ಯೋಚಿಸಬೇಕು. ಈ ನೀತಿಗಳನ್ನು ೧೯೭೦ ರಿಂದೀಚೆಗೆ ಯೋಜನೆಗಳಲ್ಲಿ ಅಳವಡಿಸಲು ಪ್ರಯತ್ನಿಸಲಾಯಿತು.

ಅಸಮಾನತೆ-ಸಾಮಾಜಿಕ ದೃಷ್ಟಿಯಲ್ಲಿ:

ಮೇಲು-ಕೀಳು, ಶ್ರೀಮಂತ-ದಲಿತ, ಶಿಕ್ಷಿತ-ಅಶಿಕ್ಷಿತ, ನಗರವಾಸಿ-ಗ್ರಾಮವಾಸಿ, ಆಸ್ತಿವಂತ ನಿರ್ಗತಿಕ ಇತ್ಯಾದಿ ವಿವಿಧ ಬಗೆಯಲ್ಲಿನ ಅಸಮಾನತೆ ನಮ್ಮ ಸಮಾಜದಲ್ಲಿ ತಾಂಡವವಾಡುತ್ತಿದೆ. ದುರಂತವೆಂದರೆ ಸಾಮಾಜಿಕವಾಗಿ ಕೀಳು ವರ್ಗಕ್ಕೆ ಸೇರಿದ ವ್ಯಕ್ತಿ ಸಾಮಾನ್ಯವಾಗಿ ಅಶಿಕ್ಷಿತ, ಗ್ರಾಮವಾಸಿ, ಕೃಷಿ ಅವಲಂಬಿತ ಮತ್ತು ನಿರ್ಗತಿಕನಾಗಿರುತ್ತಾನೆ. ಆದರೆ ಮೇಲು ವರ್ಗಕ್ಕೆ ಸೇರಿದಾತ ಶಿಕ್ಷಿತನೂ ನಗರವಾಸಿಯೂ ಆಧುನಿಕರಂಗ ಅವಲಂಬಿಸಿರುವವನು, ಆಸ್ತಿವಂತನೂ ಆಗಿರುತ್ತಾನೆ.[೬] ಅಸಮಾನತೆ ಎಂಬುದು ಹಲವಾರು ವೈಪರೀತ್ಯಗಳನ್ನು ಒಳಗೊಂಡಿರುವ ಒಂದು ದೈತ್ಯ ಸಮಸ್ಯೆ. ನಮ್ಮ ದೇಶದ ಸಾಮಾಜಿಕ ವ್ಯವಸ್ಥೆ ಹಲವಾರು ಕರಾಳ ಮತ್ತು ಅನಿಷ್ಟ ಪದ್ಧತಿಗಳಿಗೆ ಮೂಲವಾಗಿದೆ. ಉದಾಹರಣೆಗೆ ಅಸ್ಪೃಶ್ಯತೆ, ಜಲನರಹಿತ ವ್ಯವಸ್ಥೆ, ಬೌದ್ಧಿಕ ಗುಲಾಮಗಿರಿ, ನೀತಿರಹಿತಜೀವನ ಇತ್ಯಾದಿ ಅನೂಚಾನವಾಗಿ ಅಸಮಾನತೆಯನ್ನು ಪೋಷಿಸಿಕೊಂಡು ಬಂದಿರುವ ಜಾತಿ ವ್ಯವಸ್ಥೆಯ ವಿಶೇಷ ಲಕ್ಷಣವೆಂದರೆ ಅದರ ಹೊಂದಾಣಿಕೆ ಸ್ವಭಾವ ಜಡವೂ ಅಲ್ಲದ ಚಲನಶೀಲವೂ ಅಲ್ಲದ, ಆಧುನಿಕ ವಿಜ್ಞಾನ-ತಾಂತ್ರಿಕತೆ ತಂದ ಬದಲಾವಣೆಗಳನ್ನು ನುಂಗಿಕೊಂಡು, ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಈ ವ್ಯವಸ್ಥೆ ಪವಾಡ ಸದೃಶ್ಯವಾದದು.

ಇತ್ತೀಚೆಗೆ ದೇಶದ ಉದ್ದಗಲಕ್ಕೂ ಸ್ಫೋಟಗೊಂಡಿರುವ ಹಿಂಸೆ, ಕ್ರೂರತನ ಅತ್ಯಾಚಾರಗಳು, ಕೊಲೆಗಳು ಸಾಮಾನ್ಯ ಮನುಷ್ಯನನ್ನು ತಲ್ಲಣಗೊಳಿಸಿವೆ. ಒಂದು ರೀತಿಯಲ್ಲಿ ಇದು ಸಮಾಜದ ಅವನತಿಯ ಲಕ್ಷಣವನ್ನು ತೋರುತ್ತಿದೆ. ಲಂಚಕೋರತನ ಇಂದು ಎಲ್ಲರೂ ಒಪ್ಪಿಕೊಂಡು ಪೋಷಿಸಿಕೊಂಡು ಬರುತ್ತಿರುವ ಒಂದು ಸಾಧಾರಣ ಅಂಶವಾಗಿದೆ. ಮಹಿಳಾ ಸಂಕುಲವಂತೂ ಈ ಬರ್ಬರತೆಯಿಂದ ತುಂಬಾ ಘಾಸಿಕೊಂಡಿದೆ. ಈ ಸಾಮಾಜಿಕ ಅವನತಿಗೆ, ನಿರುದ್ಯೋಗ, ಹೆಚ್ಚುತ್ತಿರುವ ಬಡತನ ಮೂಲ ಕಾರಣವಾಗಿವೆ.

ಭಾರತದಲ್ಲಿ ಬಡತನದ ಪ್ರಮಾಣ:

ಇಲ್ಲಿ ನಾವು ವಿವಿಧ ಅರ್ಥಶಾಸ್ತ್ರಜ್ಞರು, ಆರ್ಥಿಕ ಸಂಸ್ಥೆಗಳು, ಸರಕಾರ ನಡೆಸಿದ ಅಧ್ಯಯನಗಳ ಆಧಾರದಿಂದ ರೂಪಿಸಿರುವ ಪಟ್ಟಿಗಳನ್ನು ಕೊಟ್ಟಿದ್ದೇವೆ. ಪ್ರತಿಪಟ್ಟಿಯನ್ನು ಸ್ಥೂಲವಾಗಿ ವಿವರಿಸಿದೆ.

ಮೊದಲು ಕೃಷಿರಂಗದ ಭೂ-ಒಡೆತನದಲ್ಲಿನ ಅಸಮಾನತೆಯನ್ನು ಮತ್ತು ಗ್ರಾಮೀಣ ಸಂಪತ್ತಿನ ಒಡೆತನದಲ್ಲಿಯ ಅಸಮಾನತೆಯನ್ನು ಪರೀಕ್ಷಿಸುವ.

ಭೂ-ಹಿಡುವಳಿಗಳ ಗಾತ್ರ	ಹಿಡುವಳಿಗಳ ಸಂಖ್ಯೆ ಶೇಕಡಾವಾರ		ಒಟ್ಟು ಪ್ರದೇಶದಲ್ಲಿ ಪ್ರತಿ ವರ್ಗದಪಾಲು ಶೇಕಡಾವಾರು	
ಚಿಕ್ಕ ಹಿಡುವಳಿಗಾರರು [೧ ಹೆಕ್ಟೇರಿಗಿಂತ ಕಡಿಮೆ]	೫೦%	೭೦%	೯%	೨೧%
ಸಣ್ಣ ರೈತರು [೧ ರಿಂದ ೨ ಹೆಕ್ಟೇರುಗಳು]	೨೦%		೧೨%	
ಮಧ್ಯಮ ವರ್ಗದ ರೈತರು. [೨ರಿಂದ೪ ಹೆಕ್ಟೇರುಗಳು]	೧೫%		೧೮%	
ದೊಡ್ಡ ರೈತರು. [೪ರಿಂದ೧೦ ಹೆಕ್ಟೇರುಗಳು]	೧೫%		೬೧%	

ಮೂಲ : The Inequality. Land reforms and Fiscal policy (J. N. Thiwary) Indian Economic Journal, vol. 25., No. 2, Oct. Dec. 1977, p. 59.

ವಿವರಣೆ: ೧. ಒಟ್ಟು ದೇಶದ ರೈತರಲ್ಲಿ ಶೇ. ೭೦ ರಷ್ಟು ಚಿಕ್ಕ ಮತ್ತು ಸಣ್ಣ ರೈತರು ಒಟ್ಟು ಸಾಗುವಳಿ ಪ್ರದೇಶದಲ್ಲಿ ಈ ವರ್ಗದ ಪಾಲು ಮಾತ್ರ ಕೇವಲ ಶೇ. ೨೧.

೨. ಆದರೆ ಶೇ. ೧೫ ರಷ್ಟಿರುವ ದೊಡ್ಡ ಭೂ-ಮಾಲೀಕರು ಶೇ. ೬೧ ರಷ್ಟು ಸಿಂಹಪಾಲು ಭೂಮಿಯನ್ನು ಪಡೆದಿದ್ದಾರೆ.

೧೯೬೮ ರಿಂದೀಚೆಗೆ ಕೃಷಿ ಕ್ಷೇತ್ರದಲ್ಲಿ ಜಾರಿಗೆ ಬಂದ ಎಲ್ಲಾ ತಾಂತ್ರಿಕ ಸುಧಾರಣೆಗಳನ್ನು ಬಳಸುವ ಸಾಮರ್ಥ್ಯ, ಪ್ರಭಾವ, ಅಧಿಕಾರ ಇರುವ ಈ ಶ್ರೀಮಂತ ಭೂ-ಮಾಲೀಕ ವರ್ಗ ಹಸಿರು ಕ್ರಾಂತಿಯ ಫಲಗಳನ್ನೆಲ್ಲಾ ತನ್ನದಾಗಿರಿಸಿಕೊಂಡಿತು. ಭೂ-ಒಡೆತನದಲ್ಲಿರುವ ಅಸಮಾನತೆಯನ್ನು ನೀಗಲು ಸರಕಾರ ಭೂ-ಸುಧಾರಣೆ ಶಾಸನಗಳನ್ನು ಜಾರಿಗೆ ತಂದಿದೆ. ೧೯೭೪ ರಲ್ಲಿ ಎಲ್ಲಾ ರಾಜ್ಯ ಸರಕಾರಗಳೂ ತುಂಬಾ ಬಿಗಿಯಾದ ಭೂಮಿತಿ ಶಾಸನಗಳನ್ನು ಜಾರಿ ಮಾಡಿದ್ದಲ್ಲದೆ ಅವುಗಳನ್ನು ಕಾರ್ಯರೂಪದಲ್ಲಿ ತರಲು ಪ್ರಾರಂಭಿಸಿದವು. ಆದರೆ ಸರಕಾರದ ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲಿಲ್ಲ.

ಭೂಮಿತಿ ಶಾಸನಗಳ ಸಾಧನೆಗಳ ಬಗ್ಗೆ ಐದನೇ ಪಂಚವಾರ್ಷಿಕ ಯೋಜನೆ ಕರಡು ಹೇಳುವ ಮಾತುಗಳು ಇವು:

"ಈವರೆಗೆ ನಡೆದಿರುವ ಕಾರ್ಯಗಳ ವಿಳಂಬಕ್ಕೆ ಕಾರಣ ಅಧಿಕ ಭೂಪ್ರಮಾಣದ ಮಿತಿಗಳು, ಕಾನೂನಿನ ಅಡಿಯಲ್ಲಿರುವ ಲೋಪಗಳು, ಬೇನಾಮಿ ವರ್ಗಾವಣೆ, ಮತ್ತು ರೆವಿನ್ಯೂ ಅಧಿಕಾರಿಗಳ ಅದಕ್ಷತೆ. ಇಲ್ಲಿಯವರೆಗೆ ಕೇವಲ ೧೦ ಲಕ್ಷ ಹೆಕ್ಟೇರ್ ಹೆಚ್ಚುವರಿ ಭೂಮಿ ಘೋಷಿತವಾಗಿದೆ. ಮತ್ತು ೫೩ ಲಕ್ಷ ಹೆಕ್ಟೇರ್ ಪ್ರದೇಶವನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ಮತ್ತು ಸಣ್ಣ ಹಿಡುವಳಿದಾರರಿಗೆ ಹಂಚಲಾಗಿದೆ.[೭]

ಭೂಮಿತಿ ಶಾಸನಗಳ ಇತಿಮಿತಿ ಬಗ್ಗೆ ಶ್ರೀ ದಾಂಡೇಕರ್ ಮತ್ತು ರಾತ್‌ರವರ ಅಭಿಪ್ರಾಯ ಹೀಗಿದೆ.

"ಅಧಿಕ ಜನಸಂಖ್ಯೆಯಿಂದ ಕೂಡಿರುವ ಈ ದೇಶದಲ್ಲಿ ಮೊದಲೇ ಕೊರತೆಯಿಂದಿರುವ ಭೂಮಿಯನ್ನು ವಿತರಣೆ ಮಾಡಿ ಗ್ರಾಮೀಣ ಬಡತನ ಅಸಮಾನತೆಯನ್ನು ನಿವಾರಿಸುತ್ತೇವೆ ಎಂಬವಾದದಲ್ಲಿ ಹುರುಳಿಲ್ಲ".

ಶ್ರೀ ಬಿ. ಎಸ್. ಮಿನ್ಹಾಸ್ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಬಡತನದ ನಿವಾರಣೆಗೆ ವ್ಯಾಪಕವಾದ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸಬೇಕು ಎನ್ನುತ್ತಾರೆ.

ಗ್ರಾಮೀಣ ಕುಟುಂಬಗಳ ಸಂಪತ್ತಿನ ಮಾಲಿಕತ್ವದ ಚಿತ್ರ :

ಮಾಲಿಕತ್ವದ ಗುಂಪುಗಳು	ಕುಟುಂಬಗಳ ಸಂಖ್ಯೆ ಶೇಕಡವಾರ		ಒಟ್ಟು ಗ್ರಾಮೀಣ ಕುಟುಂಬಗಳ ಸಂಪತ್ತಿನಲ್ಲಿ ಪ್ರತಿ ಗುಂಪಿನ ಶೇಕಡಪಾಲು	
	೧೯೬೧	೧೯೭೧	೧೯೬೧	೧೯೭೧
೧. ರೂ. ೫೦೦ ರ ವರೆಗೆ	೧೭.೯	೧೧.೩೮	೦.೮	೦.೨೩
೨. ರೂ. ೫೦೦ ರಿಂದ ೧೦೦೦	೧೨.೨	೮.೩೫	೧.೭	೦.೫೩
ಕಡುಬಡವರು [೧+೨]	೩೦.೧	೧೯.೭೩	೨.೫	೦.೭೬
೩. ರೂ.೧೦೦೦ ದಿಂದ ೨೫೦೦	೨೨.೯	೧೫.೪೯	೭.೧	೨.೩೦
ಬಡವರು ರೂ.೫೦೦ ರಿಂದ ೨೫೮೦ [೧+೨+೩]	೫೩.೦೦	೩೫.೨೨	೯.೬೦	೩.೦೬
೪. ರೂ. ೨೫೦೦-೫೦೦೦	೧೯.೦೦	೧೬.೦೯	೧೨.೭೦	೫.೧೭
ರೂ. ೫೦೦೦-೧೦,೦೦೦	೧೫.೦೭	೧೭.೩೨	೧೯.೩೦	೧೧.೬೧
ರೂ. ೧೦,೦೦೦-೨೦,೦೦೦	೮.೧೩	೧೫.೪೦	೨೧.೪೦	೧೯.೧೨
ರೂ. ೨೦,೦೦೦ ಮತ್ತುಮುಂದೆ	೫.೦೧	೧೪.೯೭	೩೭.೦೦	೬೧.೦೪

ಮೂಲ : Inddian Institute of Public Opinion
India's, Two Nations, August 1978, Vol XX., No.1.

ಮೇಲಿನ ಪಟ್ಟಿ ಈ ದೇಶದ ಗ್ರಾಮೀಣ ಪ್ರದೇಶದಲ್ಲಿನ ಸಂಪತ್ತಿನ ಅಸಮತೆಯನ್ನು ತೋರಿಸುತ್ತದೆ. ಒಟ್ಟು ಗ್ರಾಮೀಣ ಕುಟುಂಬಗಳಲ್ಲಿ ಶೇ. ೩೫ ರಷ್ಟಿರುವ ಬಡವರು, ದೇಶದ ಒಟ್ಟು ಗ್ರಾಮೀಣ ಸಂಪತ್ತಿನಲ್ಲಿ ಕೇವಲ ಶೇ. ೩ ರಷ್ಟನ್ನು ಪಡೆದಿದ್ದಾರೆ. ಆದರೆ ರೂ. ೨೦,೦೦೦ ಮತ್ತು ಅದಕ್ಕೂ ಅಧಿಕ ಸಂಪತ್ತಿರುವ ಕುಟುಂಬಗಳು ಶೇ. ೧೫ ರಷ್ಟಿದ್ದು, ಒಟ್ಟು ಸಂಪತ್ತಿನಲ್ಲಿ ಶೇ. ೬೧ ರಷ್ಟು ಸಿಂಹಪಾಲ ಪಡೆದಿದ್ದಾರೆ. ಹೀಗೆ ಭೂಒಡೆತನ ಮತ್ತು ಸಂಪತ್ತಿನ ಒಡೆತನದಲ್ಲಿ ನಾವು ಅಸಮಾನತೆಯನ್ನು ಕಾಣುತ್ತೇವೆ. ಸ್ವಾತಂತ್ರ್ಯ ಬಂದ ಮೇಲೂ ಈ ಪ್ರವೃತ್ತಿ ಅಚಲವಾಗಿ ನಡೆದಿದೆ ಎಂಬುದು ತುಂಬಾ ವಿಷಾದದ ಸಂಗತಿ.

ಈ ವಿಶ್ಲೇಷಣೆಯು ನಮ್ಮ ಗ್ರಾಮೀಣ ಪ್ರದೇಶದಲ್ಲಿಯ ಬಡತನ ಮತ್ತು ಅಸಮಾನತೆಯ ತೀವ್ರತೆಯನ್ನು ತೋರಿಸುತ್ತದೆ.

ಭಾರತದಲ್ಲಿ ಬಡತನ–ಕೆಲವು ಅಂದಾಜುಗಳು:

ಭಾರತದಲ್ಲಿಯ ದಾರಿದ್ರ್ಯದ ಗಾತ್ರವನ್ನು ನಿರ್ಧರಿಸಲು ಹಲವಾರು ಅರ್ಥಶಾಸ್ತ್ರಜ್ಞರು ಮತ್ತು ಸರಕಾರದ ಸಮಿತಿಗಳು ವಿವಿಧ ರೀತಿಯಲ್ಲಿ ಪ್ರಯತ್ನ ನಡೆಸಿದ್ದಾರೆ. ಈ ಬಗ್ಗೆ ೧೯೬೦–೭೦ ರ ಅವಧಿಯನ್ನು ಆಧಾರವಾಗಿಟ್ಟುಕೊಂಡು ನಡೆಸಿದ ಕೆಲವು ಅಧ್ಯಯನಗಳು ನಮಗೆ ಬಡತನದ ಗಂಭೀರ ಲಕ್ಷಣಗಳನ್ನು ತೋರಿಸುತ್ತವೆ. ಶಾಸ್ತ್ರೀಯತೆ, ವಿಷಯದ ವ್ಯಾಪ್ತಿ ಮತ್ತು ಖಚಿತತೆಯ ದೃಷ್ಟಿಯಿಂದ ಈ ಅಧ್ಯಯನಗಳು ಅತ್ಯಮೂಲ್ಯವಾಗಿವೆ. 'ಬಡತನ'ವನ್ನು ಅಳೆಯಲು ಬಳಸಿದ ಸಾಧನದ ದೃಷ್ಟಿಯಿಂದಲೂ ಈ ಪ್ರಯತ್ನಗಳು ತುಂಬಾ ಶಾಸ್ತ್ರೀಯ ಮಾರ್ಗವನ್ನನುಸರಿಸಿ ವೈಜ್ಞಾನಿಕ ಸಾಹಿತ್ಯ ಸೃಷ್ಟಿಸಿದ್ದಾವೆ.

೧೯೬೦-೭೧ರ ದಶಕದಲ್ಲಿ ಭಾರತದ ದಾರಿದ್ರ್ಯ

ಅಧ್ಯಯನದ ಮೂಲ	ಗ್ರಾಮೀಣ				ನಗರ			
	೧೯೬೦-೬೧		೧೯೬೮-೬೯		೧೯೬೦-೬೧		೧೯೬೮-೬೯	
	ಮಾಪಕ ಮಾಸಿಕ ವೆಚ್ಚ ರೂ.ಗಳಲ್ಲಿ	ಮಾಪಕದ ಕೆಳಗೆ ಇರುವ ಜನರ ಶೇಕಡ ಸಂಖ್ಯೆ	ಮಾಪಕ ಮಾಸಿಕ ವೆಚ್ಚ ರೂ.ಗಳಲ್ಲಿ	ಮಾಪಕದ ಕೆಳಗೆ ಇರುವ ಜನರ ಶೇಕಡ ಸಂಖ್ಯೆ	ಮಾಪಕ ಮಾಸಿಕವೆಚ್ಚ ರೂ.ಗಳಲ್ಲಿ	ಮಾಪಕದ ಕೆಳಗೆ ಇರುವ ಜನರ ಶೇಕಡ ಸಂಖ್ಯೆ	ಮಾಪಕ ಮಾಸಿಕ ವೆಚ್ಚ ರೂ.ಗಳಲ್ಲಿ	ಮಾಪಕದ ಕೆಳಗೆ ಇರುವ ಜನರ ಶೇಕಡ ಸಂಖ್ಯೆ
ಶ್ರೀ ಬಿ.ಎಸ್.ಮಿನ್ಹಾಸ್	ರೂ. ೧೬.೬೦	೪೬.೦೦	—	೩೭.೦೦				
ಶ್ರೀ ಪ್ರನಾಬ್‌ಬರ್ಧನ್	ರೂ. ೧೫.೦೦	೩೮.೦೦	ರೂ. ೨೮.೪೦	೫೪.೦೦				
ಶ್ರೀ ದಾಂಡೇಕರ್ ಮತ್ತು ರಾತ್	ರೂ. ೧೪.೨೦	೩೩.೦೦	ರೂ. ೨೭.೦೦	೪೦.೦೦	ರೂ. ೨೨.೬೦	೪೮.೬	ರೂ ೪೦.೫	೫೦.೦೦

ರಾಷ್ಟ್ರೀಯ ಸರಾಸರಿ ತಲಾ ಅನುಭೋಗ ವೆಚ್ಚದ ಮಟ್ಟಕ್ಕಿಂತ ಕೆಳಗಿರುವವರ ಶೇಕಡವಾರು ಪ್ರಮಾಣ (ಒಂದು ಅಂದಾಜು).

		೬೯.೨೦		೭೮.೦೦		೭೧.೫		೭೨.೦೦

ಮೂಲ: ಎಂ.ಎಲ್. ದಂತವಾಲಾ, ಭಾರತದಲ್ಲಿ ಬಡತನ ಅಂದು-ಇಂದು, ಪುಟ ೩೩.

ಶ್ರೀ ಬಿ. ಎಸ್. ಮಿನ್ಹಾಸ್ ಪ್ರಕಾರ ಅರವತ್ತರ ದಶಕದಲ್ಲಿ ಗ್ರಾಮೀಣ ಬಡತನದ ಸಂಖ್ಯೆ ಕಡಿಮೆಯಾಗಿದೆ. ಆದರೆ ಶ್ರೀ ಪ್ರನಾಬ್‌ಬರ್ಧನ್ ಮತ್ತು ಶ್ರೀ ದಾಂಡೇಕರ್ ಮತ್ತು ರಾತ್ ಪ್ರಕಾರ ಈ ಅವಧಿಯಲ್ಲಿ ಬಡತನದ ಪ್ರಮಾಣ ಅಧಿಕಗೊಂಡಿದೆ. ದಾಂಡೇಕ್‌ರ್/ರಾತ್ ಪ್ರಕಾರ ೧೯೬೦–೬೧ ರಲ್ಲಿದ್ದ ಒಟ್ಟು ಬಡತನದ ಪ್ರಮಾಣ ಶೇ. ೪೧ ಆದರೆ ಒಟ್ಟು ಜನರಲ್ಲಿ ಬಡವರ ಸಂಖ್ಯೆ ೧೯೬೮–೬೯ ರಲ್ಲಿ ಶೇ. ೪೫ ಕ್ಕೆ ಹೆಚ್ಚಿರುವುದು ಕಾಣುತ್ತದೆ. ಈ ಅಧ್ಯಯನದ ಪ್ರಕಾರ ಬಡತನದ ತೀವ್ರತೆ ಗ್ರಾಮೀಣ ಕ್ಕಿಂತ ನಗರ ಪ್ರದೇಶದಲ್ಲಿ ಅಧಿಕ. ಹೀಗೆ ವ್ಯವಸ್ಥಿತ ರೀತಿಯಲ್ಲಿ ಈ ದೇಶದ ಬಡತನದ ಪ್ರಮಾಣ ಅಧಿಕವಾಗುತ್ತಲೇ ನಡೆದಿದೆ. ಯೋಜನೆಯಿಂದ ಯೋಜನೆಗೆ ನಮ್ಮ ಘೋಷಣೆಗಳು ಬದಲಾದುವೇ ಹೊರತು ಜನರ ಜೀವನ ಸ್ಥಿತಿ ಸುಧಾರಿಸಲಿಲ್ಲ.

ಅಡಿಟಿಪ್ಪಣೆ

೧. Amartya Sen: Employment, Technology and Development; Oxford University Press, Delhi, 1975-P.4

೨. -do-

೩. Dadabhai Naoroji : Poverty and Un-British Rule in India, P. 131

೪. Indian Two Nations : I.I. PO., Blue Supplement, p. 2, Vol., XX No. 1, August 1978

೫. Daniel Thorner: The Agrarian Prospect in India, Allied Pub. Ltd., New Delhi, 1976–P.2

೬. E. F. Schumacher : Small is Beautiful, 1977

೭. Indian Political Economy : Ranjit Sau, E. P. W. P. 615 Vol. XII., No. 15, April, 1977

ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗತನ

● ಎಂ. ಸಿ. ಕೊಡ್ಲಿ

ನಮ್ಮ ನಿರುದ್ಯೋಗ ಸಮಸ್ಯೆಯು ನಮ್ಮ ಸ್ವಾತಂತ್ರ್ಯಕ್ಕಿಂತಲೂ ತೀರ ಹಳೆಯದು. ಮೊದಲನೆಯ ಮಹಾಯುದ್ಧದ ನಂತರ ಈ ಸಮಸ್ಯೆಯು ನಮ್ಮ ದೇಶದಲ್ಲಿ ಉದ್ಭವಿಸಿತೆಂದು ನಾವು ಹೇಳಬಹುದು. ಆ ನಂತರ ಈ ಸಮಸ್ಯೆಯು ಕ್ರಮೇಣ ಬೆಳೆಯುತ್ತ ಹೋಯಿತು. ಈಗ ಈ ಸಮಸ್ಯೆಯು ಭೂತಾಕಾರವನ್ನು ತಳೆದಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳು ಈ ಸಮಸ್ಯೆಯನ್ನು ಬಗೆಹರಿಸಲು ಎಷ್ಟೇ ಪ್ರಯತ್ನಪಟ್ಟರೂ, ಒಂದು ಯೋಜನೆಯಿಂದ ಮತ್ತೊಂದು ಯೋಜನೆಗೆ ಈ ಸಮಸ್ಯೆಯು ಕಡಿಮೆಯಾಗುವದರ ಬದಲು ಬೆಳೆಯುತ್ತಾ ನಡೆದಿದೆ.

ತಃಖ್ತೆ ೧

ಪಂಚವಾರ್ಷಿಕ ಯೋಜನೆಗಳು
ಹಾಗೂ ನಿರುದ್ಯೋಗತನ (ಲಕ್ಷಗಳಲ್ಲಿ)

ಯೋಜನೆ	ಯೋಜನೆಗಳ ಪೂರ್ವದಲ್ಲಿ ಇದ್ದ ನಿರುದ್ಯೋಗಿಗಳು	ಯೋಜನೆಯ ಅವಧಿಯಲ್ಲಿ ನಿರುದ್ಯೋಗಿಗಳ ಸಂಖ್ಯೆಗೆ ಸೇರಿದವರು	ಯೋಜನೆಯ ಅವಧಿಯಲ್ಲಿ ಉದ್ಯೋಗ ಪಡೆದವರು	ಯೋಜನೆಯ ಕೊನೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ
೧. ಮೊದಲನೆಯ ಯೋಜನೆ	೩೩	೯೦	೭೦	೫೩
೨. ಎರಡನೆಯ ಯೋಜನೆ	೫೩	೧೧೯	೧೦೦	೭೧

೧	೨	೩	೪	೫	೬
೩.	ಮೂರನೆಯ ಯೋಜನೆ	೭೧	೧೭೦	೧೪೫	೯೬
೪.	ನಾಲ್ಕನೆಯ ಯೋಜನೆ	೧೩೬	೨೭೩	೧೮೦	೨೨೯
೫.	ಐದನೆಯ ಯೋಜನೆ	—	—	—	—
೬.	ಆರನೆಯ ಯೋಜನೆ	೨೦೬	೨೯೫	೪೯೨	೯೦

ನಿರುದ್ಯೋಗದ ಬಗ್ಗೆ ಚರ್ಚಿಸುವಾಗ, ನಿರುದ್ಯೋಗಿಗಳೆಂದರೆ ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಜನಸಾಮಾನ್ಯರ ದೃಷ್ಟಿಯಲ್ಲಿ ನಿರುದ್ಯೋಗಿಯೆಂದರೆ ಉದ್ಯೋಗವಿಲ್ಲದೆ ತಿರುಗುವವನು ಆದರೆ ಒಬ್ಬ ಮನುಷ್ಯನು ಒಂದು ಉದ್ಯೋಗದಲ್ಲಿದ್ದಾಗ್ಯೂ ಅವನಿಗೆ ವರುಷವಿಡೀ ಕೆಲಸವಿರದೆ, ವರುಷದ ಕೆಲವೊಂದು ಭಾಗದಲ್ಲಿ ಮಾತ್ರ ಅವನು ದುಡಿಯುತ್ತಿದ್ದು ಉಳಿದ ಕೆಲವೊಂದು ಭಾಗವನ್ನು ಹಾಗೆಯೇ ಕಳೆಯುತ್ತಿರಬಹುದು. ಉದಾಹರಣಾರ್ಥವಾಗಿ ನಮ್ಮ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಎಷ್ಟೋ ಜನರು ವರುಷವಿಡೀ ದುಡಿಯದೇ ಎಷ್ಟೋ ದಿವಸ ಕೆಲಸವಿಲ್ಲದೆ ಇರುತ್ತಾರೆ. ಇದಕ್ಕೆ ಅರೆನಿರುದ್ಯೋಗವೆಂದು ಅರ್ಥಶಾಸ್ತ್ರಜ್ಞರು ಕರೆಯುತ್ತಾರೆ. ನಮ್ಮ ದೇಶದಲ್ಲಿಯ ನಿರುದ್ಯೋಗ ಸಮಸ್ಯೆಗೆ ಎರಡು ಮುಖಗಳಿವೆಯೆಂದು ನಾವು ಹೇಳಬಹುದು. ಒಂದು ಸಾಮಾನ್ಯ ನಿರುದ್ಯೋಗತನ ಮತ್ತೊಂದು ಸುಶಿಕ್ಷಿತ ಯುವಕರ ನಿರುದ್ಯೋಗತನ. ಸುಶಿಕ್ಷಿತ ಯುವಕ ನಿರುದ್ಯೋಗಿಗಳು ಸಾಮಾನ್ಯ ನಿರುದ್ಯೋಗಿಗಳಿಗಿಂತ ತೀರ ಕಡಿಮೆ ಇದ್ದಾಗ್ಯೂ ಅವರಿಗೆ ಹೆಚ್ಚಿಗೆ ರಾಜಕೀಯ ಪ್ರಜ್ಞೆ ಇರುವದರಿಂದ ಸರಕಾರವು ಅವರ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕಾಗುತ್ತದೆ. ಕೆಲವು ವರುಷಗಳಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಲಿತ ನಿರುದ್ಯೋಗಿಗಳ ಸಮಸ್ಯೆಯನ್ನು ಪರಿಹರಿಸಲು ಅನೇಕ ರಾಜ್ಯ ಸರಕಾರಗಳು ತಾಂತ್ರಿಕ ಶಿಕ್ಷಣ ಪಡೆದ ನಿರುದ್ಯೋಗಿ ಯುವಕರಿಗೆ ಸ್ವಂತ ಉದ್ಯೋಗ ಪ್ರಾರಂಭಿಸಲು ಧನಸಹಾಯ ಒದಗಿಸುತ್ತಿವೆ. ಅದೇ ಪ್ರಕಾರ ಇಂಥ ಧನಸಹಾಯವನ್ನು ಸ್ಟೇಟ ಬ್ಯಾಂಕ ಮತ್ತು ಇನ್ನುಳಿದ ಬ್ಯಾಂಕುಗಳು ನೀಡುತ್ತಿವೆ. ಆದರೂ ಸಹಿತ ಶಿಕ್ಷಣದ ಪ್ರಗತಿಯಾದಂತೆ ನಮ್ಮ ದೇಶದಲ್ಲಿ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಾ ನಡೆದಿದೆ. ಇದಕ್ಕೆ ಸ್ವಂತ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಳ್ಳುವದೇ ಮಾರ್ಗವೆಂದು ಹೇಳಿದರೆ ತಪ್ಪಾಗಲಾರದು.

ಗ್ರಾಮೀಣ ಪ್ರದೇಶಗಳಲ್ಲಿಯ ನಿರುದ್ಯೋಗತನ:

ಗ್ರಾಮೀಣ ಪ್ರದೇಶಗಳಲ್ಲಿಯ ನಿರುದ್ಯೋಗತನವು ದೇಶದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ತೀರ ಮಹತ್ವದ್ದೆಂದು ನಾವು ಹೇಳಬಹುದು. ನಮ್ಮ ದೇಶವು ಹಳ್ಳಿಗಳ ದೇಶ. ಶೇಕಡಾ ೮೦ ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಾರೆ. ಆದ್ದರಿಂದ ನಮ್ಮ ಗ್ರಾಮಗಳು ಆರ್ಥಿಕವಾಗಿ ಅಭಿವೃದ್ಧಿಯಾಗದ ಹೊರತು ದೇಶದ ಆರ್ಥಿಕ ಅಭಿವೃದ್ಧಿಯಾಗಲಾರದು. ನಮ್ಮ ಗ್ರಾಮೀಣ ಪ್ರದೇಶಗಳು ಆರ್ಥಿಕವಾಗಿ ಮುಂದುವರಿಯಬೇಕಾದರೆ ಅವುಗಳಲ್ಲಿಯ ನಿರುದ್ಯೋಗತನ ಮತ್ತು ಅರೆನಿರುದ್ಯೋಗತನ ನಿರ್ಮೂಲನೆಯಾಗಬೇಕು. ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೭೦ ರಷ್ಟು ಜನರು ಬೇಸಾಯವನ್ನವಲಂಬಿಸಿ ಜೀವಿಸುತ್ತಾರೆ. ಈ ಜನರಲ್ಲಿ ಸರ್ವಸಾಧಾರಣ ಅರ್ಧದಷ್ಟು ಜನರು ಅರೆನಿರುದ್ಯೋಗಿಗಳೆಂದು ನಾವು ಹೇಳಬಹುದು. ನಿರುದ್ಯೋಗ ಸಮಸ್ಯೆಯನ್ನು ಅಭ್ಯಸಿಸಲು ನೇಮಿಸಿದ "ಭಗವತಿ ಕಮಿಟಿಯ" ಪ್ರಕಾರ ೧೯೭೧ ರಲ್ಲಿ ನಮ್ಮ ದೇಶದಲ್ಲಿ ಅರೆ ನಿರುದ್ಯೋಗತನವು ಕೆಳಗಿನಂತೆ ಇದ್ದಿತು.

ತಃಖ್ತೆ–೨

ಅರೆನಿರುದ್ಯೋಗಿಗಳ ಅಂದಾಜು (ಲಕ್ಷಗಳಲ್ಲಿ)

ವಾರದಲ್ಲಿ ಕೆಲಸ ಮಾಡಿದ ಅವಧಿ	ಗಂಡಸರು	ಹೆಂಗಸರು	ಒಟ್ಟು
ಗ್ರಾಮೀಣ ಪ್ರದೇಶಗಳಲ್ಲಿ			
೧ ರಿಂದ ೧೪ ತಾಸುಗಳು	೪೪.೪	೪೦.೨	೮೪.೬
೧೪ ರಿಂದ ೨೫ ತಾಸುಗಳು	೧೨೧.೮	೧೧೩.೮	೨೩೫.೬
ಪಟ್ಟಣ ಪ್ರದೇಶಗಳಲ್ಲಿ			
೧ ರಿಂದ ೧೪ ತಾಸುಗಳು	೭.೮	೫.೧	೧೨.೯
೧೪ ರಿಂದ ೨೫ ತಾಸುಗಳು	೧೮.೩	೧೫.೪	೩೩.೭

ಮೇಲಿನ ಅಂಕಿ ಸಂಖ್ಯೆಗಳ ಪ್ರಕಾರ ನಮ್ಮ ದೇಶದಲ್ಲಿ ೧೯೭೧ ರಲ್ಲಿ ವಾರಕ್ಕೆ ೧೪ ತಾಸುಗಳಿಗಿಂತ ಕಡಿಮೆ ಕೆಲಸ ಮಾಡುವ ಜನರು ಗ್ರಾಮೀಣ ಪ್ರದೇಶಗಳಲ್ಲಿ ೮೫ ಲಕ್ಷ ಮತ್ತು ಪಟ್ಟಣ ಪ್ರದೇಶಗಳಲ್ಲಿ ೧೩ ಲಕ್ಷ ಇದ್ದರೆಂದು ತಿಳಿದು ಬರುತ್ತದೆ. ಈ ಜನರನ್ನು ಸೇರಿಸಿಕೊಳ್ಳಲಾಗಿ ನಮ್ಮ ದೇಶದಲ್ಲಿ ೧೯೭೧ ರಲ್ಲಿ ೧೮೭ ಲಕ್ಷ ಜನರು ನಿರುದ್ಯೋಗಿಗಳಿದ್ದರೆಂದು ತಿಳಿಯಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಅವಕಾಶಗಳು:

ನಮ್ಮ ಸರಕಾರವು ಪಂಚವಾರ್ಷಿಕ ಯೋಜನೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಟ್ಟಾಗ್ಯೂ ಭೂರಹಿತ ಕೂಲಿಕಾರರ ಸಂಖ್ಯೆ ವರ್ಷಕ್ಕೆ ೧೫ ಲಕ್ಷದಷ್ಟು ಹೆಚ್ಚುತ್ತಾ ನಡೆದಿದೆ. ೧೯೭೭-೭೮ ರಲ್ಲಿ ನಮ್ಮ ದೇಶದಲ್ಲಿ ೫ ಕೋಟಿ ೩೦ ಲಕ್ಷ ಭೂರಹಿತ ಕೂಲಿಕಾರರಿದ್ದರೆಂದು ತಿಳಿದು ಬರುತ್ತದೆ. ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೨೨ ರಷ್ಟು ಕುಟುಂಬಗಳು ಭೂರಹಿತ ಕೂಲಿಕಾರರ ಕುಟುಂಬಗಳು ಇನ್ನುಳಿದ ಶೇಕಡಾ ೨೫ ರಷ್ಟು ಕುಟುಂಬಗಳು ಒಂದು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿದ ಕೂಲಿಕಾರರ ಕುಟುಂಬಗಳು. ಮತ್ತು ಶೇಕಡಾ ೧೪ ರಷ್ಟು ಕುಟುಂಬಗಳು ೧ ಎಕರೆಯಿಂದ ೨.೫ ಎಕರೆ ಜಮೀನು ಹೊಂದಿದ ಸಣ್ಣ ಹಿಡುವಳಿದಾರರ ಕುಟುಂಬಗಳು. ಅದ್ದರಿಂದ ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೬೧ ರಷ್ಟು ಕುಟುಂಬಗಳು ಕೇವಲ ಸ್ವಲ್ಪ ಜಮೀನನ್ನು ಹೊಂದಿದ ಅಥವಾ ಜಮೀನು ಇಲ್ಲದ ಕುಟುಂಬಗಳೆಂದು ತಿಳಿದುಬರುತ್ತದೆ. ಈ ಶೇಕಡಾ ೬೧ ರಷ್ಟು ಕುಟುಂಬಗಳು ಕೇವಲ ಶೇಕಡಾ ೮ ರಷ್ಟು ಜಮೀನನ್ನು ಸಾಗುವಳಿ ಮಾಡುತ್ತವೆ. ಈ ಕುಟುಂಬಗಳೇ ಗ್ರಾಮೀಣ ಪ್ರದೇಶದ ಬಡಜನರೆಂದು ನಾವು ಹೇಳಬಹುದು. ಚಿಕ್ಕ ಹಿಡುವಳಿದಾರರು ಕ್ರಮೇಣ ಭೂರಹಿತ ಕೂಲಿಕಾರರಾಗಿ ಪರಿವರ್ತನ ಗೊಳ್ಳುತ್ತಾರೆ.

ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ೧೦ ಎಕರೆಗಿಂತ ಹೆಚ್ಚಿಗೆ ಜಮೀನನ್ನು ಸಾಗುವಳಿ ಮಾಡುವ ಕುಟುಂಬಗಳು ಕೇವಲ ಶೇಕಡಾ ೧೩ ರಷ್ಟು ಮಾತ್ರ. ಈ ಕುಟುಂಬಗಳು ಶೇಕಡಾ ೬೪ ರಷ್ಟು ಜಮೀನನ್ನು ಸಾಗುವಳಿ ಮಾಡುತ್ತಾರೆಂದ ಮೇಲೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿಯ ಆರ್ಥಿಕ ಅಸಮಾನತೆ ನಮ್ಮ ಕಲ್ಪನೆಗೆ ಬರಬಹುದು. ಈ ದೊಡ್ಡ ರೈತರು ಭೂರಹಿತ ಕೂಲಿಕಾರರಿಗೆ ಕೆಲಸ ಕೊಡುವವರು. ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಯಿಂದ ಮಾತ್ರ ನಾವು ಗ್ರಾಮೀಣ ಪ್ರದೇಶಗಳಲ್ಲಿಯ ನಿರುದ್ಯೋಗ ಸಮಸ್ಯೆಯನ್ನು ಬಿಡಿಸಲು ಸಾಧ್ಯ. ನಮ್ಮ ದೇಶದಲ್ಲಿ ಔದ್ಯಮಿಕ ಹಾಗೂ ಇನ್ನುಳಿದ ವ್ಯವಸ್ಥಿತ ರಂಗಗಳಲ್ಲಿ ನಾವು ಶೇಕಡಾ ೧೧ ರಷ್ಟು ಮಾತ್ರ ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ಕೊಡಲು ಸಾಧ್ಯವಾಗಿದೆ. ಇನ್ನುಳಿದ ರಂಗಗಳಲ್ಲಿ ಉದ್ಯೋಗವನ್ನು ಕಾಡುಕೊಳ್ಳಬೇಕಾಗುತ್ತದೆ. ಬೆಳೆಯುತ್ತಿರುವ ನಿರುದ್ಯೋಗಿಗಳಿಗೆ ನಾವು ಬೇಸಾಯ ಮತ್ತು ಇನ್ನುಳಿದ ಗ್ರಾಮೀಣ ರಂಗಗಳಲ್ಲಿಯೇ ಉದ್ಯೋಗ ಅವಕಾಶಗಳನ್ನು ಕಲ್ಪಿಸಬೇಕಾಗುತ್ತದೆ. ಅದ್ದರಿಂದ ಚಿಕ್ಕ ಹಿಡುವಳಿದಾರರ ಉತ್ಪಾದನೆಯನ್ನು ಹೆಚ್ಚಿಸುವ ಬೇಸಾಯ ತಂತ್ರದ ಕಡೆಗೆ ನಾವು ಹೆಚ್ಚಿಗೆ ಗಮನ ಕೊಡಬೇಕಾಗಿದೆ. ಉದ್ಯೋಗ ಅವಕಾಶಗಳನ್ನು ಕಲ್ಪಿಸುವದರ ದೃಷ್ಟಿಯಿಂದ ನೀರಾವರಿ ಯೋಜನೆಗಳು ಬಹಳ ಮಹತ್ವದ ಪಾತ್ರ ವಹಿಸಬಲ್ಲವು. ನೀರಾವರಿ ಬೇಸಾಯದಿಂದ ಉದ್ಯೋಗ

ಅವಕಾಶಗಳು ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ ೮೦ ರಷ್ಟು ಹೆಚ್ಚುತ್ತವೆಯೆಂದು ಅಂದಾಜು ಮಾಡಲಾಗಿದೆ.

ಬೇಸಾಯದ ಸುಧಾರಣೆಯಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಜನರ ಕನಿಷ್ಠ ಬೇಡಿಕೆಗಳನ್ನು ಪೂರೈಸುವ ಕಾರ್ಯಕ್ರಮಗಳ ಅಂಗವಾಗಿ, ಶಾಲೆಗಳನ್ನು ಕಟ್ಟುವದು, ಆರೋಗ್ಯ ರಕ್ಷಣೆ, ಮನೆಗಳನ್ನು ಕಟ್ಟುವದು, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಪೂರೈಕೆ, ರಸ್ತೆ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆ.

ನಮ್ಮ ದೇಶದಲ್ಲಿ ಈ ಹಿಂದೆ ಕೈಕೊಂಡ ಗ್ರಾಮೀಣ ಪ್ರದೇಶಗಳಲ್ಲಿಯ ಉದ್ಯೋಗ ಯೋಜನೆಗಳು ಅಷ್ಟು ಫಲಕಾರಿಗಳಾಗಿಲ್ಲ. ಇಂಥ ಯೋಜನೆಗಳಲ್ಲಿ ಸಾಕಷ್ಟು ಹಣವು ಅಪವ್ಯಯವಾಗಿ, ಆ ಹಣವು ಕೂಲಿಕಾರರಿಗೆ ಮುಟ್ಟುವ ಬದಲು ಮತ್ತೆಲ್ಲಿಯೋ ಹೋದ ಪ್ರಸಂಗಗಳು ಸಾಕಷ್ಟಿವೆ. ಸರಕಾರವು ಖರ್ಚು ಮಾಡುವ ಹಣವು ಅತಿ ಬಡವರ ಬಡತನವನ್ನು ಕಡಿಮೆ ಮಾಡಿ ಅವರಿಗೆ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳಲು ಅನುಕೂಲ ಮಾಡಿಕೊಡಬೇಕಾದರೆ ಜಿಲ್ಲಾ ಅಭಿವೃದ್ಧಿ ಆಡಳಿತದಲ್ಲಿ ಕೆಲವೊಂದು ಬದಲಾವಣೆಗಳು ಅವಶ್ಯವಾಗಬಹುದು. ಇಂಥ ಕಾರ್ಯಕ್ರಮಗಳಲ್ಲಿ ದುಡಿಯುವ ಬಡ ಕೂಲಿಕಾರರೂ ಸಹಿತ ರಾಜಕೀಯ ಪ್ರಜ್ಞೆಯನ್ನು ತಂದುಕೊಳ್ಳಬೇಕು. ಅಂದರೆ ಮಾತ್ರ ಇಂಥ ಕಾರ್ಯಕ್ರಮಗಳ ಮೇಲೆ ಖರ್ಚು ಮಾಡುವ ಹಣವು ನಿಜವಾಗಿಯೂ ಬಡವರ ಕಲ್ಯಾಣಕ್ಕಾಗಿ ಉಪಯೋಗವಾಗುತ್ತದೆ.

ಕೇಂದ್ರ ಸರಕಾರದ ಸಂಗ್ರಹದಲ್ಲಿಯ ಆಹಾರ ಧಾನ್ಯಗಳನ್ನು ಉಪಯೋಗಿಸಲು "ಕೆಲಸಕ್ಕಾಗಿ ಆಹಾರ" ಯೋಜನೆಯನ್ನು ೧೯೭೭ ಏಪ್ರಿಲ್ ತಿಂಗಳಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯ ಪ್ರಕಾರ ಕೂಲಿಕಾರರಿಗೆ ಅವರ ಕೂಲಿಯಲ್ಲಿಯ ಕೆಲವೊಂದು ಭಾಗವನ್ನು ಆಹಾರ ಧಾನ್ಯದ ಮುಖಾಂತರ ಕೊಡುವದಾಗಿದೆ. ಇದರಿಂದ ನಾವು ಸುಮಾರು ೪೦ ಕೋಟಿ "ಮಾನವ ದಿನ"ಗಳಷ್ಟು ಉದ್ಯೋಗವನ್ನು ನಿರ್ಮಿಸಲು ಸಾಧ್ಯವೆಂದು ತಿಳಿದುಬರುತ್ತದೆ. ಈ ಕಾರ್ಯಕ್ರಮವು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿಯ ನಿರುದ್ಯೋಗತನ ಮತ್ತು ಅತಿ ನಿರುದ್ಯೋಗತನಗಳನ್ನು ಕಡಿಮೆ ಮಾಡಲು ಸಹಾಯಕವಾಗುವದು.

ಈ ರೀತಿಯಾಗಿ ನಾವು ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಉದ್ಯೋಗ ಯೋಜನೆಗಳನ್ನು ಜಾರಿಗೆ ತರುವದರಿಂದ ಗ್ರಾಮೀಣ ಪ್ರದೇಶಗಳಲ್ಲಿಯ ನಿರುದ್ಯೋಗ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಸಾಧ್ಯ. ಗ್ರಾಮೀಣ ಪ್ರದೇಶದಲ್ಲಿಯ ಬಡವರೆಂದರೆ, ಭೂರಹಿತ ಬೇಸಾಯ ಕೂಲಿಕಾರರು ಮತ್ತು ಸಣ್ಣ ಹಿಡುವಳಿ ಇದ್ದಂತಹ ಬೇಸಾಯಗಾರರು. ಈ ಜನರಿಗೆ ವರ್ಷವಿಡೀ ಉದ್ಯೋಗ ಇಲ್ಲದೆ ಇರುವದ

ರಿಂದ ಅವರ ಆದಾಯವು ಕಡಿಮೆ ಇರುತ್ತದೆ. ಈ ಜನರಿಗೆ ವರ್ಷವಿಡೀ ಉದ್ಯೋಗವನ್ನು ಒದಗಿಸಿದರೆ ಅವರ ಜೀವನ ಮಟ್ಟದಲ್ಲಿ ಸುಧಾರಣೆ ಸಾಧ್ಯ. ಗ್ರಾಮೀಣ ಪ್ರದೇಶದಲ್ಲಿಯ ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷನಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿದರೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿಯ ಬಡತನವು ತೊಲಗುವದರಲ್ಲಿ ಸಂದೇಹವಿಲ್ಲ. ಈ ದೊಡ್ಡ ಪ್ರಮಾಣದ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ನಾವು ಗ್ರಾಮೀಣ ಪ್ರದೇಶಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಲು ಸಾಧ್ಯವೆಂಬುದನ್ನು ಮೇಲೆ ಕಂಡುಕೊಂಡಿದ್ದೇವೆ. ಕೋಟಿಗಟ್ಟಲೆ ಜನರಿಗೆ ವರ್ಷವಿಡಿ ಉದ್ಯೋಗ ಕೊಡಲು ಸಾಕಷ್ಟು ಹಣವು ಖರ್ಚಾಗುತ್ತದೆ. ಇಷ್ಟು ಹಣವನ್ನು ಸರಕಾರ ಎಲ್ಲಿಂದ ತರಬೇಕೆಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಇದು ಒಂದು ಅವಶ್ಯಕ ಕಾರ್ಯಕ್ರಮವಾಗಿರುವದರಿಂದ ಸರಕಾರವು ಈ ಹಣವನ್ನು ಹೇಗಾದರೂ ಸಂಗ್ರಹಿಸಬೇಕು. ಪ್ರೊಫೆಸರ್ ದಾಂಡೇಕರ ಮತ್ತು ಪ್ರೊಫೆಸರ್ ರಥ ಇವರ ಪ್ರಕಾರ ನಮ್ಮ ದೇಶದ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿಯ ಶ್ರೀಮಂತ ವರ್ಗ ತಮ್ಮ ಉತ್ಪನ್ನದ ಸ್ವಲ್ಪ ಭಾಗವನ್ನು ಕೊಟ್ಟಿದ್ದಾದರೆ ಈ ಕಾರ್ಯಕ್ರಮಕ್ಕೆ ಬೇಕಾಗುವ ಹಣವನ್ನು ಸಂಗ್ರಹಿಸಲು ಸಾಧ್ಯವೆಂದು ಹೇಳಿದ್ದಾರೆ.

ಇಂಥ ದೊಡ್ಡ ಪ್ರಮಾಣದ ಕಾರ್ಯಕ್ರಮಗಳಿಂದ ಮತ್ತೊಂದು ಆರ್ಥಿಕ ಸಮಸ್ಯೆಯು ಉದ್ಭವಿಸಬಹುದು. ಅದು ಯಾವುದೆಂದರೆ ಸರಕಾರವು ಇಷ್ಟು ಹಣವನ್ನು ಕೂಲಿಕಾರರಿಗೆ ಕೂಲಿಯ ರೂಪದಲ್ಲಿ ಕೊಟ್ಟಾಗ, ಬಡಕೂಲಿಕಾರರು ಈ ಹಣವನ್ನು ಜೀವನಾವಶ್ಯಕ ವಸ್ತುಗಳನ್ನು ಕೊಳ್ಳಲು ಬಳಸುತ್ತಾರೆ. ಈ ಬಡಜನರು ಕೊಳ್ಳುವ ವಸ್ತುಗಳೆಂದರೆ ಆಹಾರ ಧಾನ್ಯ ಮತ್ತು ಸಾದಾ ಬಟ್ಟೆಗಳು. ಇಂಥ ವಸ್ತುಗಳ ಉತ್ಪಾದನೆಯು ಹೆಚ್ಚದಿದ್ದಲ್ಲಿ ಬೆಲೆಗಳು ಏರುತ್ತವೆ. ಹೀಗೆ ಬೆಲೆಗಳು ಏರುತ್ತ ಹೋದಲ್ಲಿ ಬಡಜನರು ಇನ್ನಷ್ಟು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಕೆಲ ಅರ್ಥಶಾಸ್ತ್ರಜ್ಞರು ಬೇಸಾಯಕ್ಕೆ ಇನ್ನೂ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ಹೇಳುತ್ತಾರೆ. ಜೀವನಾವಶ್ಯಕ ವಸ್ತುಗಳಾದ ಆಹಾರ ಧಾನ್ಯ ಮುಂತಾದವುಗಳು ಬೇಸಾಯದಿಂದಲೇ ಬರುವದರಿಂದ ನಮ್ಮ ಬೇಸಾಯವು ಸುಧಾರಿಸಬೇಕು.

ಇಷ್ಟೆಲ್ಲ ಉದ್ಯೋಗ ಅವಕಾಶಗಳನ್ನು ನಾವು ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಿದರೆ, ನಿರುದ್ಯೋಗ ಸಮಸ್ಯೆ ನಮ್ಮ ಗ್ರಾಮೀಣ ಪ್ರದೇಶಗಳಿಂದ ಸಂಪೂರ್ಣ ತೊಲಗುವದೆಂದು ನಾವು ಭಾವಿಸಬಾರದು. ಈ ಸಮಸ್ಯೆಯು ಇನ್ನೂ ಕೆಲವು ವರುಷಗಳವರೆಗೆ ನಮ್ಮ ದೇಶದಲ್ಲಿ ಇರುತ್ತದೆ. ಈ ಸಮಸ್ಯೆಯು ಬೆಳೆಯುತ್ತಿರುವ ನಮ್ಮ ಜನಸಂಖ್ಯೆಯ ಪ್ರತಿಫಲವೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ಜನಸಂಖ್ಯೆಯನ್ನು ನಾವು ಹತೋಟಿಯಲ್ಲಿ ತರದೆ ಹೋದಲ್ಲಿ ಇದಕ್ಕಿಂತಲೂ ಹೆಚ್ಚಿನ ನಿರುದ್ಯೋಗ ಸಮಸ್ಯೆಯನ್ನು

ನಮ್ಮ ದೇಶವು ಎದುರಿಸಬೇಕಾಗುತ್ತದೆ. ಏಕೆಂದರೆ ಈಗ ಹುಟ್ಟಿದ ಮಕ್ಕಳು ಮುಂದೆ ೧೫ ವರುಷಗಳ ನಂತರ ಉದ್ಯೋಗದ ಮಾರುಕಟ್ಟೆಗೆ ಬರುತ್ತಾರೆ. ಆದ್ದರಿಂದ ನಮ್ಮ ಜನಸಂಖ್ಯೆಯನ್ನು ಈಗ ನಿಯಂತ್ರಣದಲ್ಲಿ ತಂದರೆ ಮುಂದೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಕಡಿಮೆ ಮಾಡಬಹುದು.

ನಮ್ಮ ದೇಶದ ಪ್ರತಿಯೊಬ್ಬ ನಾಗರಿಕನಿಗೂ ದುಡಿಯಲು ಉದ್ಯೋಗ ಅವಕಾಶಗಳ ಹಕ್ಕು ಇರಬೇಕು. ಪ್ರತಿಯೊಬ್ಬ ನಾಗರಿಕನಿಗೂ ಉದ್ಯೋಗ ಅವಕಾಶ ಒದಗಿಸುವದು ಸಮಾಜದ ಹೊಣೆ. ಒಂದು ವೇಳೆ ಸಮಾಜವು ಪ್ರತಿಯೊಬ್ಬ ನಾಗರಿಕನಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ಅಸಮರ್ಥವಾದರೆ ನಿರುದ್ಯೋಗಿ ನಾಗರಿಕನಿಗೆ ಒಂದಿಲ್ಲೊಂದು ರೀತಿಯ ಪರಿಹಾರ ಸಿಗುವಂತಾಗಬೇಕು. ಅಂದರೆ ಮಾತ್ರ ಸಮಾಜದಲ್ಲಿ ಶಾಂತಿ ಸಾಧ್ಯ.

ಗ್ರಂಥ ಋಣ

1 Arora, R. C. : Integrated Rural Development. New Delhi, S. Chand, 1979.

2 G. Thimmaiah (Ed) Studies in Rural Development. Chugh Publications

3 Dandekar, V. M. & Rath, N. ; Poverty in India, Economic And Political Weekly; Vol. 6, No. 1-2,-1971

4 Dr. V.K.R.V. Rao ; "Integrated Rural Urban Development", "Kuruskshetra", Vol XXVIII, No. 23., Sept 1., 1980.

ಇಂದಿನ ಶೈಕ್ಷಣಿಕ ಸಮಸ್ಯೆಗಳು-ಮಾಧ್ಯಮಿಕ ಶಿಕ್ಷಣ

● **ವಸಂತ ಪಾಟೀಲ**

ಹೆಸರೇ ಸೂಚಿಸುವಂತೆ ಮಾಧ್ಯಮಿಕ ಶಿಕ್ಷಣವು ಶಿಕ್ಷಣ ಕ್ರಮದ ಮಧ್ಯಮ ಭಾಗವು. ಇದು ಬಂಧುರವಾಗಿದ್ದರೆ ಅದರ ಪ್ರಥಮದ, ಅಂದರೆ ಪ್ರಾಥಮಿಕ ಶಿಕ್ಷಣ ಹಾಗೂ ಅದರ ಕೊನೆಯ ಭಾಗ. ಅಂದರೆ ಉಚ್ಚ ಶಿಕ್ಷಣವು ತಮ್ಮ ಸ್ಥಿಮಿತಗಳನ್ನು ಕಾಯ್ದುಕೊಳ್ಳಲು ಅನುಕೂಲವಾಗುವದು. ಇಲ್ಲದಿದ್ದರೆ ಶಿಕ್ಷಣ ಕೊಂಡಿ ಕಳಚಿದ ಸರಪಣಿಯಂತಾಗುವದು.

ಸದ್ಯದ ಮಾಧ್ಯಮಿಕ ಶಿಕ್ಷಣದ ಪರಿಸ್ಥಿತಿ ಸರ್ವವಿಧದಲ್ಲಿಯೂ 'ತ್ರಿಶಂಕು' ಸ್ಥಾನದಲ್ಲಿದೆ. ಗುಣಮಟ್ಟದಲ್ಲಿ ಕೆಳಮಟ್ಟಕ್ಕೆ ಇಳಿದರೂ ಬಾಹ್ಯ ಪ್ರದರ್ಶನದಲ್ಲಿ ಮೇಲ್ಮಟ್ಟಕ್ಕೇರಲು ತವಕಿಸುವಂತಿದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಟ್ಟಗಳು ತಮ್ಮ ಗುಣ, ಗುರಿಗಳನ್ನು ಕಾಯ್ದುಕೊಂಡರೆ ಇನ್ನು ಮುಂದಿನ ಉಚ್ಚ ಶಿಕ್ಷಣವು ಐಚ್ಛಿಕವೆನಿಸುವದು. ಉಚ್ಚ ಶಿಕ್ಷಣವು ಸದ್ಯಕ್ಕೆ ಸಿರಿವಂತರಿಗೆ ವಿಲಾಸಿ ಶಿಕ್ಷಣವಾಗಿದ್ದರೆ ಬಡವರಿಗೆ ಕನಸಿನ ಗಂಟಾಗಿದೆ.

ಶಿಕ್ಷಣಕ್ರಮದ ಬಗೆಗೆ ಸಾಮಾನ್ಯವಾಗಿ ಸರ್ವರೂ ಟೀಕಿಸುವವರೇ. ಆದರೆ ಸೂಚ್ಯ ಸಲಹೆಗಳನ್ನಿತ್ತು ಅದನ್ನು ಸುಧಾರಿಸುವತ್ತ ಪ್ರಯತ್ನ ಮಾಡುವವರು ವಿರಳವೆಂದೇ ಹೇಳಬಹುದು. ಸ್ವಾತಂತ್ರ್ಯಾನಂತರ ಭಾರತ ಶಿಕ್ಷಣ ಕ್ರಮವನ್ನು ಸುಧಾರಿಸಲೋಸುಗ ಹಲವು ಆಯೋಗಗಳನ್ನು ನಿಯಮಿಸಿತು. "೧೯೪೮ ರಲ್ಲಿ ಡಾ. ರಾಧಾಕೃಷ್ಣನ್ನರ ಮುಖಂಡತ್ವದಲ್ಲಿ ವಿಶ್ವವಿದ್ಯಾಲಯ ಶಿಕ್ಷಣದ ಬಗೆಗೆ. ೧೯೫೨ರಲ್ಲಿ ಡಾ. ಮುದಲಿಯಾರರ ಮುಖಂಡತ್ವದಲ್ಲಿ ಸಮಗ್ರ ಶಿಕ್ಷಣದ ಬಗೆಗೆ ಮತ್ತು ೧೯೬೪ರಲ್ಲಿ ಕೋಠಾರಿಯವರ ಮುಖಂಡತ್ವದಲ್ಲಿ ಸಮಗ್ರ ಶಿಕ್ಷಣದ ಬಗೆಗೆ ಆಯೋಗಗಳು ನೇಮಕವಾಗಿದ್ದವು."[೧]

೧ ವಸಂತ ಪಾಟೀಲ, "ಇಂದಿನ ಶೈಕ್ಷಣಿಕ ಸಮಸ್ಯೆಗಳು: ಪ್ರಾಥಮಿಕ ಶಿಕ್ಷಣ", ಮಾನವಿಕ ಭಾರತಿ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ಜುಲೈ ೧೯೭೭.

ಆದರೆ ಕೇವಲ ಆಯೋಗಗಳು ಇಚ್ಛಿತ ಫಲಗಳನ್ನು ನೀಡಲಾರವು. ಅವುಗಳ ಮಾರ್ಗದರ್ಶನದಲ್ಲಿ ಮುಂದುವರೆಯಲು ಸರ್ವರೂ ಸನ್ನದ್ಧರಾಗಬೇಕು ಒಮ್ಮನಸ್ಸಿನಿಂದ.

ಅರ್ಥ ಮತ್ತು ಪ್ರಕಾರಗಳು :

ಪ್ರಾಥಮಿಕ ಶಿಕ್ಷಣವನ್ನು ನೀಡುವ ಸಂಸ್ಥೆಗಳಿಗೆ ಪ್ರಾಥಮಿಕ ಶಾಲೆಗಳು ಎನ್ನುವ ತೆರದಿ ಮಾಧ್ಯಮಿಕ ಶಿಕ್ಷಣವನ್ನು ನೀಡುವ ಸಂಸ್ಥೆಗಳಿಗೆ ಸಾಮಾನ್ಯವಾಗಿ ಮಾಧ್ಯಮಿಕ ಶಾಲೆಗಳೆನ್ನುವರು. ಮಾಧ್ಯಮಿಕ ಶಾಲೆಗೆ ಸಾಮಾನ್ಯವಾಗಿ ಇಂಗ್ಲೀಷಿನಲ್ಲಿ "ಹಾಯರ್ ಸ್ಕೂಲು" ಎಂದು ಕರೆದರೂ ಅವುಗಳ ಶಬ್ದಾರ್ಥಗಳ ಒಳಹೊಕ್ಕು ವಿಮರ್ಶಿಸಿದರೆ ಅವುಗಳಲ್ಲಿರುವ ವಿಶೇಷ ಭಿನ್ನತೆಯು ಕಂಡು ಬರುವದು. ಸಂಸ್ಕೃತ ಶಬ್ದವಾದ "ಮಧ್ಯಮ"ದಿಂದ ಮಾಧ್ಯಮಿಕ ಶಬ್ದದ ಬೆಳವಣಿಗೆಯಾಗಿದೆ. "ಮಧ್ಯಮ" ಅಂದರೆ ಎರಡರ ನಡುವಿನ ಸ್ಥಾನವನ್ನು ಅಥವಾ ನಡುವಿನ ಭಾಗವನ್ನು ಸೂಚಿಸುವದು. ಸಮನಾದ ಮೂರು ಭಾಗಗಳಲ್ಲಿ "ಮಧ್ಯಮ"ವು ನಡುವಿನ ಭಾಗವನ್ನು ಆಕ್ರಮಿಸುವದು. ಅಂದರೆ ಗಾತ್ರದ ದೃಷ್ಟಿಯಲ್ಲಿ ಪ್ರಥಮ. ಮಧ್ಯಮ ಮತ್ತು ಅಂತಿಮಗಳು ಸಮನಾಗಿರುವವು ಎಂಬ ಅರ್ಥವನ್ನು ಕೊಡುವದು. ಈ ಅರ್ಥವನ್ನು ಶಿಕ್ಷಣಕ್ಕೆ ಹಚ್ಚಿದರೆ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣಗಳು ಗಾತ್ರ ಹಾಗೂ ಪಾತ್ರಗಳಲ್ಲಿಯೂ ಸರಿಸಮಾನವಾಗಿರುವವು ಎಂದಾಗುವದು. ಆಗ್ಗೆ ಮೂರಕ್ಕೂ ಸಮನಾದ ಪ್ರಾಶಸ್ತ್ಯ ಕೊಡಬೇಕಾಗುವದು. ಈ ಅರ್ಥವನ್ನು ಆಧರಿಸಿ ಭಾರತದಲ್ಲಿಯ ಶಿಕ್ಷಣ ಕ್ರಮವನ್ನು ಪರೀಕ್ಷಿಸಿದರೆ ಆಶ್ಚರ್ಯದ ಅಂಶಗಳು ಕಂಡುಬರುವವು. ಪ್ರಾಥಮಿಕ ಶಾಲೆಗಳಿಗೆ ಹೆಚ್ಚಾಗಿ ಕಟ್ಟಡಗಳಿಲ್ಲದ್ದು. ಪ್ರಾಥಮಿಕ ಶಿಕ್ಷಕರ ಪರಿಸ್ಥಿತಿ ಚಿಂತಾಜನಕವಾಗಿರುವದು ಹಾಗೂ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಇಲ್ಲದಿರುವದು ಮತ್ತು ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಭರಪೂರ ತುಂಬಿರುವದು ಎಲ್ಲರಿಗೂ ವಿದಿತವಾದ ಸಂಗತಿಗಳು. ಅಷ್ಟೇ ಏಕೆ, ಪ್ರಾಥಮಿಕ ಶಿಕ್ಷಣದ ಸಂಬಂಧ ಇಲ್ಲಿಯವರೆಗೂ ಪ್ರತ್ಯೇಕ ಆಯೋಗವನ್ನು ಸಹ ನಿಯಮಿಸಿಲ್ಲ. ಇವರ ಮೇಲಿಂದ ಮೇಲ್ನೋಟಕ್ಕೇನೇ ಪ್ರಾಥಮಿಕ ಶಿಕ್ಷಣವನ್ನು ಕಡೆಗಣಿಸಿದುದು ಸಾಬೀತಾಗುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಇನ್ನು ಗುಣದ ದೃಷ್ಟಿಯಲ್ಲಿ 'ಮಧ್ಯಮ'ವು ಶ್ರೇಷ್ಠ ಮತ್ತು ಕನಿಷ್ಠಗಳ ನಡುವೆ ಬರುವದು. ಈ ಅರ್ಥವನ್ನು ಶಿಕ್ಷಣಕ್ಕೆ ಹಚ್ಚುವದು ತಪ್ಪು. ಏಕೆಂದರೆ ಪ್ರಾಥಮಿಕ ಶಿಕ್ಷಣವು ಕನಿಷ್ಠವಲ್ಲ ಹಾಗೂ ಉಚ್ಚ ಶಿಕ್ಷಣವು ಶ್ರೇಷ್ಠವಲ್ಲ. ಎಲ್ಲವೂ ಆಯಾ ಹಂತಕ್ಕೆ ಸಮ ಪ್ರತಿಷ್ಠೆ ಪಡೆದಿವೆ. ಒಟ್ಟಿನಲ್ಲಿ "ಮಧ್ಯಮ" ಶಬ್ದಕ್ಕೆ ಸ್ಥಾನಮಾನದ ದೃಷ್ಟಿಯಿಂದ "ನಡುವಿನ," ಎಂಬರ್ಥ ಕಲ್ಪಿಸಬಹುದು.

ಮಾಧ್ಯಮಿಕ ಶಿಕ್ಷಣವು ಪ್ರಾಥಮಿಕ ಹಾಗೂ ಉಚ್ಚ ಶಿಕ್ಷಣದ ಮಧ್ಯದಲ್ಲಿರುವದು ಹಾಗೂ ಅದಕ್ಕೂ ತನ್ನದೇ ಆದ ಗಾತ್ರ, ಪಾತ್ರ, ವೈಶಿಷ್ಟ್ಯವಿರುವದು ಎಂಬರ್ಥದಲ್ಲಿ ತಿಳಿದರೆ ಒಳಿತು.

ಇಂಗ್ಲೀಷಿನ 'ಸ್ಕೂಲು'ಗಿಂತ ಹೆಚ್ಚಿನದು "ಹಾಯ್‌ಸ್ಕೂಲು". ಅಂದರೆ ಒಂದು ಶಾಲೆಗಿಂತ ಹೆಚ್ಚಿನ, ಅಥವಾ ಮುಂದಿನ ಶಾಲೆ ಹಾಯ್‌ಸ್ಕೂಲು. ಅದರ ಹಿಂದೆ ಹಲವಾರು ಶಾಲೆಗಳು ಬರಬಹುದು ಹಾಗೂ ಅದೇ ರೀತಿ ಅದರ ಮುಂದೆ ಹಲವಾರು ಉಚ್ಚ ಶಾಲೆಗಳು ಬರಬಹುದು ಎಂಬರ್ಥ ಈ ಇಂಗ್ಲೀಷ ಶಬ್ದಗಳಲ್ಲಿದೆ. ಆದರೆ ಸಂಸ್ಕೃತದ "ಮಧ್ಯಮ" ಇಡಿಯದರಲ್ಲಿ ಸಮನಾದ ಮಧ್ಯಮ ಭಾಗವನ್ನು ಸೂಚಿಸುವದು. ಬಹುಶಃ ಮಾಧ್ಯಮಿಕ ಶಾಲೆ ಎಂಬುದನ್ನು ಈ ಸಂಸ್ಕೃತದ ಅರ್ಥಕ್ಕೆ ಅನ್ವಯಿಸುವಂತೆ ಶಿಕ್ಷಣ ಕ್ರಮದ ಸಮನಾದ ಮಧ್ಯಮ ಭಾಗ ಎನ್ನುವ ಅರ್ಥದಲ್ಲಿ ಉಪಯೋಗಿಸಿರಬಹುದು. ಸದ್ಯದಲ್ಲಿ ಇದೇ ಅರ್ಥದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪರಿಗಣಿಸಲಾಗುವದು. ಅಂದಬಳಿಕ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣಕ್ಕೆ ಸಮನಾದ ಪ್ರಾಶಸ್ತ್ಯ ನೀಡಬೇಕು ಎಂಬುದೂ ಇಲ್ಲಿ ಸ್ಪಷ್ಟವಾಗುವದು. ಹಾಗೆ ಇರದಲ್ಲಿ ಶಿಕ್ಷಣ ರಂಗದಲ್ಲಿ ಅಸ್ತವ್ಯಸ್ತ ಪರಿಸ್ಥಿತಿ ಬರಬಹುದೆಂಬುದೂ ತಿಳಿಯುವದು. ಸದ್ಯದ ಅಸ್ಥಿರ ಪರಿಸ್ಥಿತಿಗೆ ಇದುವೇ ಕಾರಣವಿರಬಹುದು.

ಎಂಟನೆಯ ವರ್ಗದಿಂದ ಹತ್ತನೆಯ ವರ್ಗದ ಶಿಕ್ಷಣದ ಸಂಸ್ಥೆಗೆ, ಕರ್ನಾಟಕದಲ್ಲಿ ಮಾಧ್ಯಮಿಕ ಶಾಲೆ ಅಥವಾ (ಇಂಗ್ಲೀಷಿನಲ್ಲಿ) 'ಹಾಯ್‌ಸ್ಕೂಲು' ಎನ್ನುವರು. ಅಂದರೆ ಮಾಧ್ಯಮಿಕ ಶಿಕ್ಷಣವು ಕೇವಲ ಮೂರು ವರ್ಷಗಳದು. ಕರ್ನಾಟಕದಲ್ಲಿ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ಒಂದನೆಯ ವರ್ಗದಿಂದ ಏಳನೆಯ ವರ್ಗದ ವರೆಗೆ ಏಳು ವರ್ಷದ್ದಿರುವದು ಎಲ್ಲರಿಗೂ ವಿದಿತ. ಅಂದಬಳಿಕ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿ ಸಮಪ್ರಮಾಣ ಇಲ್ಲದಿರುವದು ಸ್ಪಷ್ಟ. ಇದು ನಿಜ ಸಂಸ್ಕೃತ ಅರ್ಥದಲ್ಲಿ ಮಾಧ್ಯಮಿಕ ಶಿಕ್ಷಣವಲ್ಲ. ಇದು ಕೇವಲ ಇಂಗ್ಲೀಷ ಅರ್ಥದಲ್ಲಿಯ ಮುಂದಿನ ಹೆಚ್ಚಿನ ಶಾಲೆ, ಅರ್ಥಾತ್ ಹಾಯ್‌ಸ್ಕೂಲು.

ಪ್ರಾಥಮಿಕ ಶಿಕ್ಷಣವನ್ನು ಹಲವು ಪ್ರಕಾರವಾಗಿ ವಿಂಗಡಿಸಲಾಗಿದೆಯಲ್ಲದೆ ವಿಂಗಡಣೆಗೆ ಅನುಗುಣವಾಗಿ ಬೇರೆ ಬೇರೆ ಹೆಸರುಗಳನ್ನು ನೀಡಲಾಗಿದೆ. "ಪ್ರಾಥಮಿಕ ಪೂರ್ವ" (Pre-Primary) ಶಿಕ್ಷಣವನ್ನು ಬಾಲವಾಡಿ ಅಥವಾ "ನರ್ಸರಿ" ಮುಖಾಂತರ ಕೊಡಲಾಗುವದು. ಇದರಲ್ಲಿ ಎರಡು ಭಾಗಗಳು ಮೂರರಿಂದ ನಾಲ್ಕನೆಯ ವರ್ಷದ ವರೆಗೆ ಬಾಲವಾಡಿ ಭಾಗ ೧ ಮತ್ತು ನಾಲ್ಕರಿಂದ ಐದನೆಯ ವರ್ಷದವರೆಗೆ ಬಾಲವಾಡಿ ಭಾಗ ೨. ಒಂದನೆಯ ವರ್ಗದಿಂದ ಏಳನೆಯ ವರ್ಗದವರೆಗೆ ಪ್ರಾಥಮಿಕ ಶಿಕ್ಷಣ ವಿರುವದು. ಒಂದನೆಯ ವರ್ಗಕ್ಕೆ ಸುಮಾರು ಆರು ವರ್ಷ (೫ ವರ್ಷ ೧೦ ತಿಂಗಳು)ಕ್ಕೆ ಪ್ರವೇಶ ನೀಡಲಾಗುವದು. ೧ನೆಯ ವರ್ಗದಿಂದ ಏಳನೆಯ ವರ್ಗದವರೆಗೆ ಒಂದು ಸಂಸ್ಥೆಯು ಶಿಕ್ಷಣ ನೀಡುತ್ತಿದ್ದರೆ ಅದಕ್ಕೆ "ಪೂರ್ಣ ಪ್ರಾಥಮಿಕ" ಶಾಲೆ (Full Primary) ಎನ್ನುವರು. ಕೇವಲ ೧ ರಿಂದ ೪ನೆಯ ವರ್ಗದವರೆಗೆ ಮಾತ್ರ ಇದ್ದುದು "ಪ್ರಾಥಮಿಕ" ಶಾಲೆಯು. ಇನ್ನು ಕೇವಲ ೫ನೆಯ ವರ್ಗದಿಂದ ೭ನೆಯ ವರ್ಗದವರೆಗೆ ಮಾತ್ರ

ಇದ್ದುದು "ಉಚ್ಚ ಪ್ರಾಥಮಿಕ" (Uppered Primary or Higher Primary) ಶಾಲೆಯು. ಎಲ್ಲ ಶಾಲೆಗಳು ಹೆಚ್ಚಾಗಿ ಸಹಶಿಕ್ಷಣ ಅಂದರೆ ಬಾಲಕ ಬಾಲಕಿಯರಿಗೆ ಸಮನಾದ ಅವಕಾಶ ನೀಡುವವು. ಭಾಷಾವಾರ ಅಂದರೆ, ಕನ್ನಡ, ಮರಾಠಿ, ಉರ್ದು, ಎಂದು ಮುಂತಾಗಿ ಬೇರೆ ಬೇರೆ ಪ್ರಾಥಮಿಕ ಶಾಲೆಗಳಿಗೂ ಎಡೆ ಇದೆ.

ಕೆಲ ವಿದ್ಯಾ ಸಂಸ್ಥೆಗಳು ಬಾಲವಾಡಿಯಿಂದ ಕಾಲೇಜ ಮಟ್ಟದವರೆಗೆ ಶಿಕ್ಷಣ ನೀಡುವವು. ಆದರಲ್ಲಿಯೇ ಬೇರೆ ಬೇರೆ ಭಾಗಗಳನ್ನಾಗಿ ಮಾಡಿ, ತಮಗೆ ಅನುಕೂಲ ವಾಗುವಂತೆ ಬೇರೆ ಬೇರೆ ಶಿಕ್ಷಕ ವರ್ಗ, ಅಥವಾ ಉಳಿತಾಯ ಹಾಗೂ ಇನ್ನಿತರ ದೃಷ್ಟಿ ಯಿಂದ ಒಂದೇ ಶಿಕ್ಷಕ ವರ್ಗವನ್ನೂ ಇಟ್ಟುಕೊಳ್ಳಬಹುದು.

ಹಾಯ್‌ಸ್ಕೂಲಿನಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳಿರುವವು.

i) ಎಂಟನೆಯ ವರ್ಗದಿಂದ ಹತ್ತನೆಯ ವರ್ಗದವರೆಗೆ ಮಾತ್ರ ಇದ್ದುದು ಸಾಮಾನ್ಯವಾಗಿ ಹಾಯ್‌ಸ್ಕೂಲು ಅಥವಾ ಮಾಧ್ಯಮಿಕ ಶಾಲೆ. ಸದ್ಯದ ಲೇಖನದಲ್ಲಿ ಮಾಧ್ಯಮಿಕ ಶಿಕ್ಷಣವು ಈ ಭಾಗಕ್ಕೆ ಮಾತ್ರ ಅನ್ವಯಿಸುವದು.

ii) ಇಂಥ ಹಾಯ್‌ಸ್ಕೂಲಿಗೆ ೫ ರಿಂದ ೭ನೆಯ ವರ್ಗದ ಪ್ರಾಥಮಿಕ ಶಿಕ್ಷಣ ವನ್ನೂ ಜೋಡಿಸಿದ್ದರೆ ಅದಕ್ಕೆ "ಕಂಪೋಜಿಟ್ ಹಾಯ್‌ಸ್ಕೂಲು" (Composite High School) ಎನ್ನುವರು. ಇದಕ್ಕೆ ೧ ರಿಂದ ೪ನೆಯ ವರ್ಗದ ಪ್ರಾಥಮಿಕ ಶಿಕ್ಷಣವನ್ನು ಜೋಡಿಸಿರುವುದಿಲ್ಲ ಅದಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿರುವದು ಕಂಡುಬರುವದು.

iii) ಹಾಯ್‌ಸ್ಕೂಲಿಗೆ ಉಚ್ಚ ಶಿಕ್ಷಣವಾದ ೧೧ ಮತ್ತು ೧೨ನೆಯ ವರ್ಗಗಳನ್ನೂ ಕೂಡಿಸಿದ್ದರೆ ಅದಕ್ಕೆ "ಉಚ್ಚ ಮಾಧ್ಯಮಿಕ" (Higher Secondory School) ಶಾಲೆ ಎನ್ನುವರು.

iv) ೫ನೆಯ ವರ್ಗದಿಂದ ೧೨ನೆಯ ವರ್ಗದವರೆಗೆ ಇರುವ ಸಂಸ್ಥೆಗೆ "ಕಂಪೋಜಿಟ್ ಹಾಯರ ಸೆಕಂಡರಿ ಸ್ಕೂಲ" ಎಂದು ಕರೆಯುವರು.

ಕೇವಲ ೧೧ ಮತ್ತು ೧೨ನೆಯ ವರ್ಗಗಳು ಇದ್ದುದಕ್ಕೆ "ಜ್ಯೂನಿಯರ ಕಾಲೇಜ" ಎನ್ನುವರು. ಅಂದಬಳಿಕ "ಕಂಪೋಜಿಟ್ ಹಾಯರ ಸೆಕೆಂಡರಿ ಸ್ಕೂಲಿ"ನಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣಗಳು ಮಿಶ್ರಣವಾದಂತಾಯಿತು. ಈ ರೀತಿಯ ಮಿಶ್ರಣಕ್ಕೆ ತನ್ನದೇ ಆದ ಗುಣಾವಗುಣಗಳಿರುವವು. ತನ್ನೆಡೆಗೆ ಬಂದ ವಿದ್ಯಾರ್ಥಿಗಳನ್ನು ೧೨ನೆಯ ವರ್ಗದವರೆಗೆ ಬಿಗಿ ಹಿಡಿದು ತನ್ನದೇ ಆದ ಸಿಬ್ಬಂದಿಯನ್ನು ಬೆಳೆಸಿಕೊಂಡು ತನ್ನ ಸಾರ್ವಭೌಮತ್ವವನ್ನು ಮೆರೆಯುವುದು ಮೂಲ ಉದ್ದೇಶವಾಗಿರಬಹುದು ಈ ಕಂಪೋಜಿಟ್ ಹಾಯರ ಸೆಕಂಡರಿ ಸ್ಕೂಲಿನದು. ಆದರೆ ಮೇಲ್ನೋಟಕ್ಕೆ ಅವು ತೋರಿಸುವ ಗುಣವೆಂದರೆ ವಿದ್ಯಾರ್ಥಿಗಳಿಗೆ ಒಂದೆಡೆಯಲ್ಲಿಯೇ ಸ್ವಲ್ಪ ಖರ್ಚಿನಲ್ಲಿ ಶಿಕ್ಷಣ ನೀಡುವದು.

ಈ ವಿಷಯದಲ್ಲಿ ಹೆಚ್ಚು ವಿಷದೀಕರಿಸಿದ ಮುಕ್ತಾಯಕ್ಕೆ ಬರುವ ಮುಖ್ಯ ಅಂಶವೆಂದರೆ ಬಾಲವಾಡಿ. ಪ್ರಾಥಮಿಕ, ಮಾಧ್ಯಮಿಕ, ಜ್ಯೂನಿಯರ ಕಾಲೇಜ ಇವೆಲ್ಲವುಗಳನ್ನು ಕಂಪೋಜಿಟ್ ಎಂದು ಮಿಶ್ರಣ ಮಾಡದೆ ಬೇರೆ ಬೇರೆ ಕಟ್ಟಡ. ಶಿಕ್ಷಕ ವರ್ಗಗಳುಳ್ಳ ಪ್ರತ್ಯೇಕ ಸ್ವಾಯತ್ತ ಸಂಸ್ಥೆಗಳನ್ನಾಗಿ ವಿಂಗಡಿಸಬೇಕು. ಅಂದರೆ ಅವು ತಮ್ಮದೇ ಆದ ಸ್ವಾತಂತ್ರ್ಯದ ಸುಳಿಗಾಳಿಯಲ್ಲಿ ಸ್ವಚ್ಛಂದವಾಗಿ ಬೆಳೆಯಲು ಅನುಕೂಲವಾಗುವದು. ಇಲ್ಲದಿದ್ದರೆ ಒಂದೇ ವ್ಯವಸ್ಥಾಪಕ ಮಂಡಳಿ, ಅಷ್ಟೇ ಏಕೆ ಒಬ್ಬರೇ ಎಲ್ಲದಕ್ಕೂ ಮುಖ್ಯಸ್ಥರಾಗುವದು ಹಾಗೂ ಅದೇ ಶಿಕ್ಷಕನನ್ನೇ ಐದನೆಯ ವರ್ಗದಿಂದ ೧೨ನೆಯ ವರ್ಗದವರೆಗೂ ನೋಡುವಂಥ ದುರ್ಧರ ಪ್ರಸಂಗ ಪಾಪ ಬಡಪಾಯಿ ವಿದ್ಯಾರ್ಥಿಗೆ ಬರಬಹುದು! ಅದೇ ರೀತಿ, ಹಾಯಸ್ಕೂಲು ಮುಖ್ಯಾಧ್ಯಾಪಕರ ಸರ್ವಾಧಿಕಾರತ್ವಕ್ಕೆ ಬೇಸತ್ತು ಏನೇನೋ ಪ್ರಯತ್ನಮಾಡಿ ವಿಶ್ವವಿದ್ಯಾಲಯದ ಪದವಿಗಳನ್ನು ಪಡೆದು, ಯಾರ್ಯಾರಿಗೋ ಪ್ರಾರ್ಥಿಸಿಕೊಂಡು ಜ್ಯೂನಿಯರ್ ಕಾಲೇಜಿಗೆ ಬಂದರೂ ಅಲ್ಲಿಯೂ ಮುಖ್ಯಸ್ಥನು ಅದೇ ಹಳೆಯ ಮುಖ್ಯಾಧ್ಯಾಪಕನಾದರೆ ಅಂಥ ಶಿಕ್ಷಕರ ಗತಿಯೇನು? ಅಂತಿಗೆ ಅಂತಿನವರಿದ್ದರೆ ಅಲ್ಲಿ ಸಂತೆಯಾಗುವುದು ಆ ಮಾತು ಬೇರೆ! ಆದರೆ ಸಾತ್ವಿಕರಿಗೆ ತಾಮಸಿಕರು ಬೆನ್ನುಹತ್ತಿದರೆ?!

ಆಡಳಿತೆಯ ದೃಷ್ಟಿಯಿಂದ ಮುಖ್ಯವಾಗಿ ಎರಡು ಪ್ರಕಾರಗಳು ಸರಕಾರಿ ಮತ್ತು ಖಾಸಗಿ ಶಾಲೆಗಳು. ಕಟ್ಟಡ. ಶಿಕ್ಷಕ ವರ್ಗ ಮುಂತಾದವುಗಳೆಲ್ಲದರ ಆಡಳಿತಾಧಿಕಾರವು ಸರಕಾರದ ಕೈಯಲ್ಲಿರುವದು ಸರಕಾರಿ ಶಾಲೆಗಳು. ಆಡಳಿತವು (ಸರಕಾರೇತರ) ಸಾರ್ವಜನಿಕರ ಕೈಯಲ್ಲಿದ್ದರೆ ಅಂಥವುಗಳು ಖಾಸಗಿ. ಕರ್ನಾಟಕದಲ್ಲಿಯ ಪ್ರಾಥಮಿಕ ಶಾಲೆಗಳು ಹೆಚ್ಚಾಗಿ ನೇರವಾಗಿ ಸರಕಾರದ ಕೈಯಲ್ಲಿರುವವು. ಮಾಧ್ಯಮಿಕ ಶಾಲೆಗಳು ಎರಡೂ ರಂಗದಲ್ಲಿಯೂ ಇವೆ. ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಸಾರ್ವಜನಿಕರ ಕೈಯಲ್ಲಿವೆ. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ನೇರವಾಗಿ ಸರಕಾರದ ಕೈಯಲ್ಲಿವೆ. ಸರಕಾರದ ಕೈಯಲ್ಲಿರುವ ಶಾಲೆಗೆ "ಸರಕಾರಿ ಮಾಧ್ಯಮಿಕ ಶಾಲೆ" ಎಂತಲೇ ಹೆಸರಿರುವುದು ಸಾಮಾನ್ಯ. ಅದರಲ್ಲಿಯೂ ಬಾಲಕರಿಗೆ ಹಾಗೂ ಬಾಲಕಿಯರಿಗೆ ಪ್ರತ್ಯೇಕವಾಗಿಯೂ ಇರಬಹುದು. ಸಾರ್ವಜನಿಕರ ಕೈಯಲ್ಲಿರುವ ಹಾಯಸ್ಕೂಲುಗಳಿಗೆ ಸಾಮಾನ್ಯವಾಗಿ ಆಯಾ ಸ್ಥಳಿಕ ದೇವರು. ಗುರು, ಹಿರಿಯರು, ರಾಜಕಾರಣಗಳ ಹೆಸರನ್ನಾಗಲಿ ಅಥವಾ ದೇಣಿಗೆ ಇತ್ತವರ ಹೆಸರನ್ನಾಗಲಿ ಇಡಲಾಗುವದು. ಇಂಥ ಮಾಧ್ಯಮಿಕ ಶಾಲೆಗಳು ಹೆಚ್ಚಾಗಿ ಸಹಶಿಕ್ಷಣ ನೀಡುವವು.

ಸರಕಾರಿ ಹಾಗೂ ಖಾಸಗಿ ಮಾಧ್ಯಮಿಕ ಶಾಲೆಗಳಲ್ಲಿ ಯಾವುದು ಒಳ್ಳೆಯದು ಎನ್ನುವದು ಚರ್ಚಾಸ್ಪದ ವಿಷಯ. ಶಿಕ್ಷಕರ ದೃಷ್ಟಿಯಿಂದ ಸರಕಾರಿ ಶಾಲೆಗಳು ಉತ್ತಮ. ಕಾರಣವೆಂದರೆ ಅವರ ಸಂಪೂರ್ಣ ವೇತನವು ಪ್ರತಿ ತಿಂಗಳು ತಪ್ಪದೇ ನಿಯಮಿತವಾಗಿ ಅವರ ಕೈಸೇರುವುದಲ್ಲದೆ, ಸೇವಾಬಡತಿಗಳನ್ನು ಸೇವಾ ಜೇಷ್ಠತೆ

(Seniority)ಯು ಮೇಲಿಂದ ನೀಡಲಾಗುವುದು. ಆಗಾಗ್ಗೆ ವೇತನ, ಹಾಗೂ ಇನ್ನಿತರ ಸೌಲಭ್ಯಗಳು ಹೆಚ್ಚಿದಲ್ಲಿ ಅವರಿಗೆ ತತ್‌ಕ್ಷಣ ನೇರವಾಗಿ ಲಭಿಸುವವು. ಇವೆಲ್ಲಕ್ಕಿಂತ ಮುಖ್ಯವಾಗಿ ಸ್ಥಾನದ ಭದ್ರತೆ (Security of Post) ಸರಕಾರಿ ರಂಗದಲ್ಲಿರುವದು. ಖಾಸಗಿಯಲ್ಲಿ ಯಾವಾಗಲೂ ಅಭದ್ರತೆಯ ಕತ್ತಿ ಶಿಕ್ಷಕರ ಮೇಲೆ ನೇತಾಡುತ್ತಿರುವದು. ಶ್ರೀಮಾನ್ ಎಸ್. ಆರ್. ಕಂಠಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಕರಿಗೆ ತ್ರಿವಿಧ ಸೌಲಭ್ಯ ಒದಗಿಸಿದುದನ್ನು ಕೃತಜ್ಞತಾಭಾವದಿಂದ ಎಲ್ಲ ಶಿಕ್ಷಕವರ್ಗ ಸದಾ ಸ್ಮರಿಸುವದು ಎಲ್ಲರಿಗೂ ವಿದಿತವಾದ ಸಂಗತಿ. ಖಾಸಗಿ ಮಾಧ್ಯಮಿಕ ಶಾಲೆಯ ಶಿಕ್ಷಕರಿಗೂ ನೇರವಾಗಿ ಚೆಕ್ಕುಗಳ ಮುಖಾಂತರ ಅವರ ವೇತನ ಮುಟ್ಟುವಂತೆ ಮಾಡಿದರೂ. ಖಾಸಗಿ ಸಂಸ್ಥೆಯ ವ್ಯವಸ್ಥಾಪಕ ಮಂಡಳಿಯವರು ಅವಕ್ಕೂ ಮುಟ್ಟುಗೋಲು ಹಾಕುತ್ತಿರುವ ಪ್ರಸಂಗಗಳು ಸಾಮಾನ್ಯವಾಗಿ ಕಂಡುಬರುವವು. ಇವೆಲ್ಲ ಅನಾಹುತಗಳನ್ನು ನೋಡಿದರೆ ಸರಕಾರಿ ಮಾಧ್ಯಮಿಕ ಶಾಲೆಗಳು ಉತ್ತಮ ಶಿಕ್ಷಕರ ದೃಷ್ಟಿಯಿಂದ. ಬಹುಶಃ ಅವರಿಗೆ ಎದುರಾಗುವ ಒಂದೇ ಮುಖ್ಯ ಗೋಳೆಂದರೆ ವರ್ಗಾವರ್ಗಿ. ಆಗಾಗ್ಗೆ ಗಂಟುಕಟ್ಟುವದು! ವರ್ಗಾವರ್ಗಿಯು ಒಂದು ದೃಷ್ಟಿಯಲ್ಲಿ ಒಳ್ಳೆಯ ಮಾಧ್ಯಮವೂ ಹೌದು. ಬೇಡಾದ ಮುಖಗಳನ್ನು ಬೇರೆಡೆಗೆ ಸರಿಸುವಲ್ಲಿ.

ಇನ್ನು ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವದು ಹಾಗೂ ವಿದ್ಯಾರ್ಥಿಗಳ ಬಗೆಗೆ ವಿಶೇಷ ಲಕ್ಷ್ಯವಹಿಸುವ ದೃಷ್ಟಿಯಲ್ಲಿ ಖಾಸಗಿ ಮಾಧ್ಯಮಿಕ ಶಾಲೆಗಳು ಖಂಡಿತವಾಗಿಯೂ ಶ್ರೇಷ್ಠ. ತಮ್ಮ ಶಾಲೆಯ ಪರೀಕ್ಷಾ ಪರಿಣಾಮಗಳು ಉತ್ತಮವಾಗಲೆಂದು ಕೆಲ ಖಾಸಗಿ ಸಂಸ್ಥೆಗಳು (ವಾಮ ಪಂಥವನ್ನು ಹಿಡಿದು) ಸ್ಪರ್ಧಿಸುವದು ಕಂಡುಬರುವದು. S.S.L.C.ಯಲ್ಲಿ ರ್‍ಯಾಂಕು ಗಿಟ್ಟಿಸಿದ ಶಾಲೆಯಂತೂ ಉಬ್ಬಿ ಹೋಗುವದು! ದುಡ್ಡು ಕೊಟ್ಟಾದರೂ ಪೇಪರಿನಲ್ಲಿ ಫೋಟೋಗಳನ್ನು ಹಾಕಿಸುವರು.

ಒಟ್ಟಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಸಾರ್ವಜನಿಕ ರಂಗಕ್ಕೆ ಬಿಟ್ಟುಕೊಟ್ಟು ಶಿಕ್ಷಕರ ಸೌಲಭ್ಯಗಳ ಭಾರವನ್ನು ಮಾತ್ರ ಸರಕಾರ ವಹಿಸುವದು ಉತ್ತಮ.

ಮಾಧ್ಯಮಿಕ ಶಿಕ್ಷಣದ ಉದ್ದೇಶ :

ಮಾನವನ ಸರ್ವಾಂಗೀಣ ವಿಕಸನವು ಶಿಕ್ಷಣದ ಗುರಿಯಾಗಿದೆ. ಮಾನಸಿಕ, ದೈಹಿಕ, ಬೌದ್ಧಿಕ ಹಾಗೂ ಆತ್ಮದ ಬೆಳವಣಿಗೆಯತ್ತ ಶಿಕ್ಷಣದ ಗುರಿ ಇದೆ. ಮುಖ್ಯವಾಗಿ ಮಾನವನು ಮಾನವನಾಗಿಯೇ ಬಾಳಬಲ್ಲಂಥ ಸ್ಥೈರ್ಯ. ಆತ್ಮವಿಶ್ವಾಸ ಸಂಘಟನೆ ಗೋಸುಗ ಈ ಶಿಕ್ಷಣವಿದೆ. ಶಿಕ್ಷಣವು ಜೀವನ ಪರ್ಯಂತವೂ ಇದ್ದರೂ ಪ್ರಾಯೋಗಿಕ ವಾಗಿ ಅನುಕೂಲವಾಗುವಂತೆ ಅದನ್ನು ಪ್ರಾಥಮಿಕ. ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣವೆಂದು ವಿಭಾಗಿಸಲಾಗಿದೆ. ಪ್ರತಿಯೊಂದು ಹಂತಕ್ಕೂ ತನ್ನದೇ ಆದ ವಿಶಿಷ್ಟ

ಉದ್ದೇಶವಿದೆ. ಪ್ರಾಥಮಿಕ ಶಿಕ್ಷಣದ ಮೂಲ ಉದ್ದೇಶ ಜೀವನದ ಪ್ರಾಥಮಿಕ ಪಾಠಗಳನ್ನು ಮಕ್ಕಳಿಗೆ ಕಲಿಸುವದು. ಅವರಿಗೆ ಮುಖ್ಯವಾಗಿ ಅಕ್ಷರ ಜ್ಞಾನವಿತ್ತು, ಓದು ಬರಹ ಕಲಿಸಿ. ಸುತ್ತಣದ ಐತಿಹಾಸಿಕ, ಭೌಗೋಲಿಕ, ಸಾಮಾಜಿಕ. ರಾಜಕೀಯ ವಿಷಯಗಳ ಪರಿಚಯ ಮಾಡಿಸಿ ಅವರಲ್ಲಿ ಹುದುಗಿದ ರಚನಾತ್ಮಕ ಶಕ್ತಿಗಳನ್ನು ಎಚ್ಚರಿಸಿ ಉದ್ದೀಪನಗೊಳಿಸುವದು ಪ್ರಾಥಮಿಕ ಶಿಕ್ಷಣದ ಗುರಿ. ಇಲ್ಲಿಯವರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಮುಖ್ಯವಾಗಿ ಅಂಕಗಣಿತಕ್ಕೆ ಮಹತ್ವ ಕೊಡಲಾಗಿತ್ತು. ಅವುಗಳ ಜೊತೆಗೆ ಇನ್ನುಳಿದ ವಿಷಯಗಳ ಜ್ಞಾನವನ್ನೂ ಅಷ್ಟೇ ಆಸಕ್ತಿಯಿಂದ ಹೇಳಿಕೊಡುವದು ಅತ್ಯವಶ್ಯ. ಒಟ್ಟಿನಲ್ಲಿ ಮಣ್ಣಿನ ಮೂರ್ತಿಯನ್ನು ತಯಾರಿಸಿ ಅದಕ್ಕೆ ಜೀವಕಳೆ ತುಂಬುವ ತೆರದಿ ಈ ಪ್ರಾಥಮಿಕ ಶಿಕ್ಷಣವಿದೆ. ಆಧ್ಯಾತ್ಮಿಕವಾಗಿ, ಔದ್ಯೋಗಿಕವಾಗಿ ಹಾಗೂ ರಾಷ್ಟ್ರೀಯ ಪ್ರಜ್ಞೆ. ಸಮಾಜ ಪ್ರಜ್ಞೆಯೊಂದಿಗೆ ಬೆಳೆಯುವಂತೆ ಪ್ರಚೋದನೆ ನೀಡುವ ಶಕ್ತಿ ಪ್ರಾಥಮಿಕ ಶಿಕ್ಷಣದಲ್ಲಿರಬೇಕು.

ಮಾಧ್ಯಮಿಕ ಶಿಕ್ಷಣವು ಒಂದು ರೀತಿಯ ಪ್ರಾಥಮಿಕತೆಯ ಮುಂದಿನ ಬೆಳವಣಿಗೆಯಾಗಿದೆ. ಸಾಮಾನ್ಯವಾದ ಶಿಕ್ಷಣದ ಚೈತನ್ಯಯುತ ವಿಕಸನದ ಗುರಿ ಇಲ್ಲಿಯೂ ಇರುವುದಲ್ಲದೆ ತನ್ನ ಭಾವೀ ವೈಯಕ್ತಿಕ ಜೀವನದ ಅಭಿಪ್ರಾಯ ಇದಾಗಿದೆ. ಪ್ರಾಥಮಿಕದಲ್ಲಿ ನೀಡುವ ಎಲ್ಲ ವಿಷಯಗಳು ಹೆಚ್ಚಾಗಿ ಕಡ್ಡಾಯ ವಿಷಯಗಳು. ಮಾಧ್ಯಮಿಕದಲ್ಲಿ ಕಡ್ಡಾಯದ ಜೊತೆಗೆ ಐಚ್ಛಿಕ ವಿಷಯಗಳೂ ಬರುವ ಉದ್ದೇಶವೆಂದರೆ ವಿದ್ಯಾರ್ಥಿಗಳು ತಮ್ಮ ಇಚ್ಛಾನುಸಾರ ತಮ್ಮ ಜೀವನದ ಗುರಿಯೆಡೆಗೆ ಧಾವಿಸುವುದಾಗಿದೆ. ಸಾಮಾನ್ಯವಾದ ಪ್ರಾಥಮಿಕ ಮಟ್ಟಕ್ಕಿಂತ ಇನ್ನೂ ಹೆಚ್ಚಿನ ಮಟ್ಟಕ್ಕೇರುವುದು ಮಾಧ್ಯಮಿಕ ಶಿಕ್ಷಣದ ಗುರಿ. ಪ್ರಾಥಮಿಕದಲ್ಲಿ ಸಂಕ್ಷಿಪ್ತವಾಗಿ, ಸರಳವಾಗಿ, ಕಲಿತುದುದನ್ನು ಮಾಧ್ಯಮಿಕದಲ್ಲಿ ಇನ್ನೂ ಆಳವಾಗಿ, ವಿಷದವಾಗಿ, ವಿಮರ್ಶಾತ್ಮಕವಾಗಿ ಅಭ್ಯಾಸಮಾಡಬೇಕಾಗಿದೆ. ಇನ್ನು ಮುಂದಿನ ಉಚ್ಚ ಶಿಕ್ಷಣವಾದ ಕಾಲೇಜ, ವಿಶ್ವವಿದ್ಯಾಲಯಕ್ಕೆ ಹೋಗಬೇಕೆನ್ನುವವರು, ಈ ಮಾಧ್ಯಮಿಕ ಹಂತದಲ್ಲಿಯೇ ಅದಕ್ಕೆ ಸನ್ನದ್ಧರಾದುದನ್ನು ಸಿದ್ಧಮಾಡಿ ತೋರಿಸಬೇಕಾಗಿದೆ.

ನಮ್ಮ ಶಿಕ್ಷಣದ ಮೂಲ ದೋಷವೆಂದರೆ ಪ್ರಾಥಮಿಕದಿಂದ ಬಂದವರೆಲ್ಲರೂ ಮಾಧ್ಯಮಿಕಕ್ಕೂ, ಮುಂದೆ ಅಲ್ಲಿಂದ ಕಾಲೇಜ, ವಿಶ್ವವಿದ್ಯಾಲಯಕ್ಕೂ ಹೋಗಲೇಬೇಕು. ಹಾಗೂ ಎಲ್ಲರಿಗೂ ಪದವಿಗಳು ದೊರೆತು. ಉಚ್ಚ ನೌಕರಿಗಳೂ ದೊರೆಯಬೇಕೆನ್ನುವದು. ಈ ರೀತಿ ಸಾಮ್ಯವಾದಿ ರಾಷ್ಟ್ರಗಳಾದ ರಶಿಯಾ, ಚೀನಾದಲ್ಲಿಯೂ ಇಲ್ಲ. ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಾದ ಇಂಗ್ಲಂಡ, ಅಮೇರಿಕಾಗಳಲ್ಲಿಯೂ ಇಲ್ಲ. ಭಾರತದಲ್ಲಿಯೇ ಇದರ ಮೂಲ ಹುಟ್ಟು ಇರುವುದಕ್ಕೆ ಕಾರಣವೆಂದರೆ ಪದವಿಗಳ ಮುಖಾಂತರ ನೌಕರಿಗಳನ್ನು ಗಿಟ್ಟಿಸಿ ಶ್ರಮಪಡದೆ ಇನ್ನೊಬ್ಬರ ಬೆವರಿನಲ್ಲಿ ತಮ್ಮ ಐಷಾರಾಮ ಜೀವನ

ಕಳೆಯುವದು. ಇಂಥ ಐಷಾರಾಮಿ ನೌಕರ ವರ್ಗ ಸದ್ಯಕ್ಕೆ ಸಮಾಜವನ್ನು ಶೋಷಿಸುವ ವರ್ಗವಾಗಿದೆ. ಸಮಾಜ ಘಾತಕವಾಗಿದೆ! ಸಂಬಳದೊಡನೆ, ತಮ್ಮ ವಂಶಪಾರಂಪಾರ ಎಲ್ಲತರದ ಸವಲತ್ತುಗಳು ಉಂಬಳಿಯಾಗಿ ಬರುವಂತೆ ಲೆಕ್ಕಾಚಾರ ನಡೆದಿದೆಯೆಂತಲೇ ದೇಶದುದ್ದಕ್ಕೂ ಎಲ್ಲೆಡೆ ಹಾಹಾಕಾರವೆದ್ದಿದೆ. ಶಿಕ್ಷಣದ ಗುರಿ ಇಂಥ ಲೆಕ್ಕಾಚಾರವಲ್ಲ. ಅಂಥ ಅನಾಚಾರವನ್ನು ಇಲ್ಲವಾಗಿಸುವ, ವಿವೇಕಯುತವಾದ ಜೀವನ ಒಡಮೂಡಿಸುವ ಶಿಕ್ಷಣ ಅತ್ಯವಶ್ಯ.

ಒಟ್ಟಿನಲ್ಲಿ ಮಾಧ್ಯಮಿಕ ಶಿಕ್ಷಣದ ಉದ್ದೇಶವು ಮೊದಲನೆಯದಾಗಿ ಪ್ರಾಥಮಿಕ ಮಟ್ಟದ ಮುಂದಿನ ಹೆಚ್ಚಿನ ಶಿಕ್ಷಣವನ್ನು ನೀಡುವದು ಮತ್ತು ಎರಡನೆಯದಾಗಿ ವಿದ್ಯಾರ್ಥಿಗಳ ವೈಯಕ್ತಿಕ ಅಭಿರುಚಿ, ಒಲವು ಹಾಗೂ ಗುರಿಗಳನ್ನು ಸಾಧಿಸುವತ್ತ ಪ್ರಚೋದಿಸುವದು ಆಗಿದೆ. ಈ ಉದ್ದೇಶಕ್ಕನುಗುಣವಾಗಿ ಮಾಧ್ಯಮಿಕ ಶಿಕ್ಷಣವನ್ನು ಸರಿಯಾಗಿ ರಚಿಸಬೇಕು.

ಕಟ್ಟಡ :

ಪ್ರಾಥಮಿಕ ಶಾಲಾ ಕಟ್ಟಡಗಳಿಗಿಂತ ಕರ್ನಾಟಕದಲ್ಲಿ ಮಾಧ್ಯಮಿಕ ಶಾಲೆಗಳು ಎಷ್ಟೋ ವಾಸಿ. ಕೆಲವೆಡೆ ಸ್ವಂತ ಕಟ್ಟಡಗಳಿಲ್ಲದಿದ್ದರೂ ಬಾಡಿಗೆಯಿಂದ ಒಳ್ಳೆಯ ಕಟ್ಟಡಗಳನ್ನು ದೊರಕಿಸಿರುವದು ಕಂಡು ಬರುವದು. ಇನ್ನು ಕೆಲವು ಮಾಧ್ಯಮಿಕ ಶಾಲೆಗಳು ಕಾಲೇಜ ಕಟ್ಟಡಗಳನ್ನು ನಾಚಿಸುವಂತಹವಿರುವವು! ಸರಕಾರಿ ಮಾಧ್ಯಮಿಕ ಶಾಲೆ ಆಗಿದ್ದರೆ ಸರಕಾರವೇ ಒಳ್ಳೆಯ ಕಟ್ಟಡವನ್ನು ಕಟ್ಟಿಸಿಕೊಡುವದು. ಆದರೊಡನೆ ಒಳ್ಳೆಯ ವಿಸ್ತಾರವಾದ ಆಟದ ಬೈಲು ಹಾಗೂ ಸಮೃದ್ಧ ಪುಸ್ತಕಾಲಯಕ್ಕೂ ಅನುವು ಮಾಡಿಕೊಟ್ಟು ನೆರವು ನೀಡುವದು. ಆಗಾಗ್ಗೆ ಕಟ್ಟಡದ ರಿಪೇರಿ, ಆಟದ ಬೈಲಿನ ರಿಪೇರಿ, ತೋಟವನ್ನು ಬೆಳೆಸಲೋಸುಗ ಎಂದು ಮುಂತಾಗಿ ಸರಕಾರವು ನೆರವು ನೀಡುವದು. ಇಂಥ ನೆರವುಗಳಿಗೆಲ್ಲ ಮುಖ್ಯವಾಗಿ ಹಾಗೂ ಎಲ್ಲರಿಗೂ ಗೊತ್ತಿದ್ದ ಮುಖ್ಯ ದೋಷವೆಂದರೆ ಅದನ್ನು ಪಡೆಯುವಲ್ಲಿ ಮುಖ್ಯಾಧ್ಯಾಪಕರು ಪಡುವ ಶ್ರಮ ಹಾಗೂ ವ್ಯಾಯಾಮ. ದೇವರು ವರ ಕೊಟ್ಟರೂ ಪೂಜಾರಿ..

ಖಾಸಗಿ ಮಾಧ್ಯಮಿಕ ಶಾಲಾ ಕಟ್ಟಡಕ್ಕೆ ಸಾರ್ವಜನಿಕರ ನೆರವು, ದೇಣಿಗೆ ಅತ್ಯವಶ್ಯ. ಇಂಥ ಪ್ರಸಂಗದಲ್ಲಿ ಸರಕಾರದ ನೆರವಿದ್ದರೂ ಅದು ಅತ್ಯಲ್ಪವೆನಿಸುವದು. ಆಟದ ಬೈಲಿನ, ಪುಸ್ತಕಾಲಯದ, ವಿಜ್ಞಾನ ಉಪಕರಣಗಳು ಹಾಗೂ ಆಸನಗಳ ಜೋಡಣೆಯ ಖರ್ಚಿನ ಬಾಬತ್ತು ಹೆಚ್ಚು ಬರುವದರಿಂದ ಖಾಸಗಿ ಸಂಸ್ಥೆಯವರು ಇಂಥ ಖರ್ಚನ್ನು ನಿಭಾಯಿಸಲೋಸುಗ ವಾಮಪಂಥವನ್ನು ಹಿಡಿಯುವುದು ಸ್ವಾಭಾವಿಕ. ಮುಖ್ಯವಾಗಿ ಬಲಿಯಾಗುವವರು ಅದರಲ್ಲಿ ಸೇವೆಮಾಡುವ ಶಿಕ್ಷಕರು. ಅವರ ನೇಮಕದ ಪೂರ್ವದಲ್ಲಿ

ದೇಣಿಗೆ ವಸೂಲಿ ಮಾಡುವದು, ಪಗಾರವಿಲ್ಲದೇ ದುಡಿಸುವದು, ಪಗಾರದಲ್ಲಿ ಕಡಿತ ಮಾಡುವದು ಮುಂತಾದ ಚಟಗಳು ಖಾಸಗೀ ಸಂಸ್ಥೆಗಳಿಗೆ ಸ್ವಾಭಾವಿಕವಾಗಿ ಅಂಟಿಕೊಳ್ಳುವವು. ಸಂಸ್ಥೆಯನ್ನು ನಡೆಸುವಲ್ಲಿಯ ಖರ್ಚಿನಕಡೆಗೆ ವಿಚಾರಿಸದೆ ಸಾಮಾನ್ಯವಾಗಿ ಸಾರ್ವಜನಿಕರು ಸಂಸ್ಥೆಯ ವ್ಯವಸ್ಥಾಪಕರನ್ನು ದೂಷಿಸುವದು ಕಂಡುಬರುವದು. ಈ ಪಿಡುಗನ್ನು ನಿವಾರಿಸಲು ಸರಕಾರವು ಕಟ್ಟಡ, ಆಟದ ಬೈಲು, ಪುಸ್ತಕಾಲಯ, ಉಪಕರಣಗಳು ಹಾಗೂ ಆಸನಗಳ ಜೋಡಣೆ ಮುಂತಾದ ಖರ್ಚಿನ ಪೂರ್ತಿ ಬಾಬತ್ತನ್ನು ನಿಭಾಯಿಸಬೇಕು. ಶಿಕ್ಷಕರ ವೇತನ ಹಾಗೂ ಇನ್ನಿತರ ಸೌಲಭ್ಯಗಳ ಖರ್ಚನ್ನೂ ನಿಭಾಯಿಸಬೇಕು. ಇನ್ನು ಇಷ್ಟೆಲ್ಲ ಸರಕಾರ ನಿಭಾಯಿಸಿದ ಮೇಲೆ ಅದಕ್ಕೆ ಖಾಸಗೀ ಒಡೆತನವಾದರೂ ಏಕೆ ಬೇಕು? ಎಂದು ಪ್ರಶ್ನಿಸಬಹುದು. ಆಯಾಸ್ಥಾನಗಳಲ್ಲಿ, ಸ್ಥಳಿಕರೇ ತಮ್ಮ ಸಂಸ್ಥೆಗಳನ್ನು ನಿಭಾಯಿಸುವಲ್ಲಿ ಸ್ವಾತಂತ್ರ್ಯವಿದೆ, ಸ್ವಾಯತ್ತತೆ ಇದೆ. ಹಾಗೂ ಮುಖ್ಯವಾಗಿ ಜನತೆಯ ಪ್ರೀತಿ, ವಿಶ್ವಾಸ, ಸಹಕಾರಗಳಿವೆ. ಈ ರೀತಿಯಾಗಿ ಎಲ್ಲ ಸಂಸ್ಥೆಗಳು ನಡೆದರೆ ಮಾತ್ರ ನಿಜಪ್ರಜಾಪ್ರಭುತ್ವವಿದೆ. ಆ ದಿಶೆಯತ್ತ ಸರ್ವರೂ ವಿಚಾರಿಸಿ ಕಾರ್ಯಪ್ರವೃತ್ತರಾಗಬೇಕು.

ಮಾಧ್ಯಮಿಕ ಶಾಲೆಗೆ ಪ್ರವೇಶ :

ಮಾಧ್ಯಮಿಕ ಶಾಲೆಗೆ ಪ್ರವೇಶ ಪಡೆಯಬೇಕಾದಲ್ಲಿ ಮುಖ್ಯವಾಗಿ ಹಾಗೂ ಅತ್ಯವಶ್ಯಕವಾಗಿ ಪ್ರಾಥಮಿಕ ೭ನೆಯ ವರ್ಗದಲ್ಲಿ ಸಂಪೂರ್ಣವಾಗಿ ಪಾಸಾಗಿರಬೇಕು. ೭ನೆಯ ವರ್ಗಕ್ಕೆ ಈ ಹಿಂದೆ 'ಮುಲ್ಕಿ' ಎನ್ನುತ್ತಿದ್ದರು. ಅದು ಒಳ್ಳೆಯ ಗುಣಮಟ್ಟವನ್ನು ಪಡೆದಿತ್ತು. ಅದರಲ್ಲಿ ಉತ್ತೀರ್ಣರಾದವರನ್ನು ಹೆಚ್ಚು ಗೌರವದಿಂದ ಕಾಣುತ್ತಿದ್ದರಲ್ಲದೆ ಅವನ್ನು ಪಾಸಾದವರು ಉಚ್ಚ ದರ್ಜೆಯ ನೌಕರಿಗಳನ್ನು ಪಡೆಯುತ್ತಿದ್ದರು. ಅಂಥವರ ಮನೆತನಕ ಬಂದು ಮನವೊಲಿಸಿ, ಗೌರವದಿಂದ ನೌಕರಿಗೆ ಕರೆದೊಯ್ಯುತ್ತಿದ್ದರು. ಆ ವಿಷಯ ಈಗ ನಂಬಲಾರದ ಪವಾಡ! ಆದರೆ ಅದು ನಂಬಲೇಬೇಕಾಗಿದ್ದ ಸತ್ಯ ಸಂಗತಿ. ಆಗ್ಗೆ ಕಲಿಯುವವರ ಪ್ರಮಾಣ ಕಡಿಮೆ ಇತ್ತಲ್ಲದೆ ಪರೀಕ್ಷಾ ವಿಧಾನಗಳು ಹೆಚ್ಚು ಕಟ್ಟುನಿಟ್ಟಾಗಿದ್ದವು. ಮುಲ್ಕಿಯಲ್ಲಿ ಫೇಲಾದರೂ ಪ್ರಾಥಮಿಕ ಶಾಲಾ ಶಿಕ್ಷಕ, ತಲಾಠಿ, ಗುಮಾಸ್ತ, ಹವಾಲ್ದಾರ ಮುಂತಾದ ಹುದ್ದೆಗಳಿಗೆ ಅಂಥವರನ್ನು ಒತ್ತಾಯದಿಂದ ಸ್ವಾಗತಿಸಲಾಗುತ್ತಿತ್ತು! ಈಗ ಈ ಜಾಗೆಗಳೂ ಎಮ್.ಎ.,ಪಿ.ಎಚ್.ಡಿಯವರಿಗೂ ಸಿಗುವುದಿಲ್ಲ! ಈ ಪರಿಸ್ಥಿತಿ ಬೇರೆ.

ಕೆಲವರ್ಷ ೭ನೆಯ ವರ್ಗದಲ್ಲಿ ಅನುತ್ತೀರ್ಣರಾದವರಿಗೂ ೮ನೆಯ ವರ್ಗಕ್ಕೆ ಹೋಗಲು ಅನುಮತಿ ನೀಡಲಾಗುತ್ತಿತ್ತು. ಅಂಥವರು ಪುನಃ ೭ನೆಯ ಪರೀಕ್ಷೆಗೆ ಕುಳಿತು ಪಾಸಾಗಬೇಕಿತ್ತು. ಸದ್ಯಕ್ಕೆ ೭ನೆಯ ವರ್ಗದಲ್ಲಿ ಪಾಸಾಗಿರಬೇಕೆಂಬುವದನ್ನು ಕಡ್ಡಾಯಗೊಳಿಸಲಾಗಿದೆ. ಸದ್ಯದಲ್ಲಿ ೭ನೆಯ ವರ್ಗದ ವಾರ್ಷಿಕ ಪರೀಕ್ಷೆಯನ್ನು

ಸಾರ್ವತ್ರಿಕವನ್ನಾಗಿರಿಸದೆ ವರ್ಗದ ಪರೀಕ್ಷೆಯನ್ನಾಗಿ ಮಾರ್ಪಡಿಸಲಾಗಿದೆ. ಅಂದರೆ ಆಯಾ ೭ನೆಯ ವರ್ಗದ ಶಿಕ್ಷಕರೇ ವಾರ್ಷಿಕ ಪರೀಕ್ಷೆ ಮಾಡಿ ಪರಿಣಾಮ ಹೇಳುವರು. ಇದರರ್ಥ ಬಹುಶಃ ೭ನೆಯ ವರ್ಗಕ್ಕೆ ಬಂದವರೆಲ್ಲರೂ ಪಾಸಾಗಬೇಕು ಎಂದಿರಬೇಕು. ಶಿಕ್ಷಣದ ಗುರಿ ಪದವಿ, ಪುರಸ್ಕಾರ, ನೌಕರಿಗಳಿಗಾಗಲ್ಲ. ಅದರ ಗುರಿ ಜ್ಞಾನಾರ್ಜನೆ, ಜೀವನ ವಿಕಾಸ ಹಾಗೂ ಮಾನವನ ಸರ್ವಾಂಗೀಣ ಬೆಳವಣಿಗೆ.

ರಾಜ್ಯದಲ್ಲಿ ಶಿಕ್ಷಣ ಮಟ್ಟದಲ್ಲಿ ಒಂದು ಏಕತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಪುನಃ ಮುಲ್ಕೀ ಪರೀಕ್ಷೆಯನ್ನು ರಾಜ್ಯಾದ್ಯಂತ ಕಟ್ಟುನಿಟ್ಟಾದ ಒಂದು ವಾರ್ಷಿಕ ಪರೀಕ್ಷೆಯನ್ನಾಗಿಸಬೇಕು, ಹಾಗೂ ನಿರ್ದಿಷ್ಟ ಪಡಿಸಿದ ವಿಷಯಗಳಲ್ಲಿ ಕನಿಷ್ಠ ಶೇಕಡಾ ೩೫ರಂತೆ ಅಭ್ಯರ್ಥಿಗಳು ಪಾಸಾಗಲು ಗುಣಗಳನ್ನು ಪಡೆಯಲೇಬೇಕು. ಮುಂದಿನ ಮಾಧ್ಯಮಿಕ ಶಾಲೆಯ ೮ನೆಯ ವರ್ಗಕ್ಕೆ ಈ ರೀತಿ ಎಲ್ಲ ವಿಷಯಗಳಲ್ಲಿ ಪಾಸಾದವರಿಗೆ ಮಾತ್ರ ಪ್ರವೇಶ ನೀಡಬೇಕು.

ಮಾಧ್ಯಮಿಕ ಶಾಲೆಗೆ ಪ್ರವೇಶ ನೀಡುವಲ್ಲಿ ಸದ್ಯಕ್ಕೆ ವಯೋಮಿತಿಗೆ ಸಂಬಂಧಿಸಿದಂತೆ ಯಾವ ಆತಂಕವಿದ್ದಂತಿಲ್ಲ.

ಮಾಧ್ಯಮಿಕ ಶಾಲೆಗಳ ಕೆಲಸದ ವಾರ್ಷಿಕ ಅವಧಿಯಲ್ಲಿ ಮುಖ್ಯವಾಗಿ ಎರಡು ಭಾಗಗಳು (Terms). ಮೊದಲನೆಯ ಅವಧಿಯು ಜೂನ ೧ರಿಂದ ಪ್ರಾರಂಭವಾಗಿ ಅಕ್ಟೋಬರದವರೆಗಿರುವದು. ಜೂನ ತಿಂಗಳ ಕೊನೆಯವರೆಗೆ ಶಾಲೆಯ ಮುಖ್ಯಾಧ್ಯಾಪಕರು ವಿದ್ಯಾರ್ಥಿಗಳಿಗೆ ಪ್ರವೇಶನೀಡಬಹುದು. ಆ ನಂತರ ಪ್ರವೇಶಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಅನುಮತಿ ನೀಡುವ ಅಧಿಕಾರ ಜುಲೈ ತಿಂಗಳದ ಕೊನೆಯವರೆಗೆ ಶಿಕ್ಷಣದ ಉಪನಿರ್ದೇಶಕ (D.D.P.I.)ರಿಗೂ ಹಾಗೂ ತದನಂತರ ಬರುವವರಿಗೆ ಆಗಸ್ಟ ತಿಂಗಳದ ಕೊನೆಯವರೆಗೆ ಸಹ ನಿರ್ದೇಶಕ (Jt. Director)ರಿಗೂ ಅಧಿಕಾರವಿದೆ. ಈ ರೀತಿ ಅಧಿಕಾರ ವರ್ಗಕ್ಕೆ ಪ್ರವೇಶ ನೀಡುವ ಅಧಿಕಾರವಿರುವದು ಸರಿಯಲ್ಲ. ಈ ವಿಷಯದಲ್ಲಿ ಪೂರ್ತಿ ಅಧಿಕಾರವನ್ನು ಮುಖ್ಯಾಧ್ಯಾಪಕರಿಗೆ ನೀಡಬೇಕು. ಇನ್ನು ಮುಖ್ಯಾಧ್ಯಾಪಕರು ಅಧಿಕಾರ ದುರಪಯೋಗಿಸಿಕೊಂಡು ಟರ್ಮಿನ ಕೊನೆಯುವರೆಗೂ ಪ್ರವೇಶ ನೀಡುತ್ತ ಹೋಗಬಹುದು ಎಂದು ಶಂಕಿಸಬಹುದು. ಆ ರೀತಿ ಪ್ರವೇಶ ನೀಡಿದರೂ ತಡಮಾಡಿ ಬಂದಾತನಿಗೆ ಅಲ್ಲಿಯವರೆಗೆ ಆದ ಅಭ್ಯಾಸ ತಪ್ಪುವುದಲ್ಲವೆ. ಆಗಾಗ್ಗ ನೀಡಿದ ಗುಣಗಳಿಗೂ ಆತ ವಂಚಿತನಾಗಿ ವಾರ್ಷಿಕದಲ್ಲಿ ಅಂಥವರು ನಪಾಸಾಗುವ ಪ್ರಸಂಗವೂ ಬರಬಹುದು.

ಇನ್ನು ಎರಡನೆಯ ಟರ್ಮು ಸಾಮಾನ್ಯವಾಗಿ ನವೆಂಬರ ೨ರಿಂದ ಪ್ರಾರಂಭವಾಗಿ ಏಪ್ರಿಲ್ ೧೦ರವರೆಗೆ ನಡೆಯುವದು. ಬೇರೆಡೆಯಿಂದ ವರ್ಗಾಯಿಸಿಕೊಂಡು ಬರುವ

ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವದು. ಈ ಅಧಿಕಾರವು ಸದ್ಯಕ್ಕೆ ನವಂಬರ ತಿಂಗಳದ ಕೊನೆಯವರೆಗೆ ಮುಖ್ಯಾಧ್ಯಾಪಕರಿಗೂ, ಡಿಸೆಂಬರ ಪೂರ್ತಿ ಉಪನಿರ್ದೇಶಕರಿಗೂ ಹಾಗೂ ಪರೀಕ್ಷಾದಿನದವರೆಗೆ ಸಹನಿರ್ದೇಶಕರಿಗೂ ಅಧಿಕಾರವಿದೆ. ಇಲ್ಲಿಯಾದರೂ ಕೇವಲ ಮುಖ್ಯಾಧ್ಯಾಪಕರಿಗೆ ಅಧಿಕಾರ ನೀಡುವದು ಒಳಿತು.

ಕೆಲ ಸಂಸ್ಥೆಗಳು ಹೆಚ್ಚು ವಿದ್ಯಾರ್ಥಿಗಳನ್ನು ಆಕರ್ಷಿಸುವವು. ಅಂಥವುಗಳು ಅದರ ದುರುಪಯೋಗ ಪಡೆದು ವಿದ್ಯಾರ್ಥಿಗಳಿಂದ ದೇಣಿಗೆಗಳನ್ನು ಎತ್ತುವದನ್ನು ಸಾಮಾನ್ಯವಾಗಿ ಕಾಣುವೆವು. ಇದಕ್ಕೆ ಸರಕಾರವು ತಡೆಹಾಕಬೇಕು. ಸಂಸ್ಥೆಯ, ಸಾಮಾನ್ಯವಾಗಿ, ಎಲ್ಲ ಖರ್ಚನ್ನು ಸರಕಾರವು ಹೊತ್ತಿರುವಾಗ ಸಂಸ್ಥೆಯು ದುಡ್ಡು ಕೂಡಿಸುವ ಇಂಥ ಕಾರ್ಯಮಾಡಬಾರದು.

ಪ್ರತಿ ವರ್ಗದಲ್ಲಿ ಸುಮಾರು ೩೦ರಿಂದ ೬೪ರ ವರೆಗೆ ವಿದ್ಯಾರ್ಥಿಗಳಿಗೆ ಸದ್ಯಕ್ಕೆ ಪ್ರವೇಶ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಹೆಚ್ಚಾದಂತೆ ಅ.ಬ.ಕ. ಎಂದು ಮುಂತಾಗಿ ವಿಭಾಗಗಳನ್ನು ಮಾಡಲಾಗುವದು. ಶಿಕ್ಷಕರನ್ನು ಹೆಚ್ಚಿಸುವ ದೃಷ್ಟಿಯಲ್ಲಿ ಒಮ್ಮೊಮ್ಮೆ ವಿಭಾಗಗಳನ್ನು ಹೆಚ್ಚಿಸುತ್ತ ಹೋಗಬಹುದು. ಆದರೆ ವಿಭಾಗಗಳು ಕಡಿಮೆಯಾಗುತ್ತ ಹೋದಂತೆ ಶಿಕ್ಷಕರನ್ನು ತೆಗೆಯುತ್ತಾ ಹೋಗುವದು ಜಾಣತನವಲ್ಲ. ಆ ಬಗ್ಗೆ ಸಂಸ್ಥೆ, ಸರಕಾರಗಳು ಎಚ್ಚರವಹಿಸಬೇಕು. ಪ್ರತಿವರ್ಗಕ್ಕೆ ೩೦–೪೦ ರಷ್ಟೇ ವಿದ್ಯಾರ್ಥಿಗಳನ್ನು ನಿಗದಿಪಡಿಸುವದು ಒಳ್ಳೆಯದು. ಅಂದರೆ ಶಿಕ್ಷಕರಿಗೆ ಪ್ರತಿ ವಿದ್ಯಾರ್ಥಿಯತ್ತ ಲಕ್ಷ್ಯ ವಹಿಸಲು ಹೆಚ್ಚು ಅನುಕೂಲವಾಗುವದು.

ಶುಲ್ಕಗಳು (Fees) :

ಈ ಹಿಂದೆ ಸರಕಾರದ ಕೊಡಮಾಡಿದ ನಿಯಮಾವಳಿಗಳ ಪ್ರಕಾರ (Grant-in-Aid-Code) ೮ನೆಯ ವರ್ಗಕ್ಕೆ ಪ್ರತಿ ತಿಂಗಳು ೪೩ ರೂ. ೯ನೆಯ ವರ್ಗಕ್ಕೆ ೫ ರೂ ಹಾಗೂ ೧೦ನೆಯ ವರ್ಗಕ್ಕೆ ೫೩ ರೂ. ಯಂತೆ ವರ್ಷದಲ್ಲಿ ಹತ್ತು ತಿಂಗಳುಗಳಿಗೆ ನಿಗದಿಯಾಗಿತ್ತು. ಬಡವರಿಗೆ ಅನುಕೂಲವಾಗಲೆಂದು ಆಗಿನ ಶಿಕ್ಷಣ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ವಾರ್ಷಿಕ ಉತ್ಪನ್ನ ೨೪೦೦ ರೂ. ಗಿಂತ ಕಡಿಮೆ ಇದ್ದ ಎಲ್ಲ ಪಾಲಕರ ಮಕ್ಕಳಿಗೂ ಶಿಕ್ಷಣವನ್ನು ಪೂರ್ತಿ ಉಚಿತಗೊಳಿಸಿದ್ದುದು ಇಡೀ ಭಾರತಕ್ಕೆ ಆದರ್ಶ ಮಾರ್ಗ ಹಾಕಿಕೊಟ್ಟಿತು. ಸದ್ಯಕ್ಕೆ ಕರ್ನಾಟಕದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವು ಪುಕ್ಕಟೆಯಾಗಿದೆ. ಆದರೂ ಖಾಸಗೀ ಸಂಸ್ಥೆಗಳು ಆಟದ ಶುಲ್ಕ ೧೦ ರೂ., ಪರೀಕ್ಷಾ ಶುಲ್ಕ ೪ ರೂ., ಪುಸ್ತಕಾಲಯ ಶುಲ್ಕ ೨ ರೂ., ಪ್ರಾಯೋಗಿಕ ಉಪಕರಣಕ್ಕೆ ೨ ರೂ., ವಾರ್ಷಿಕೋತ್ಸವಕ್ಕೆ ೨ ರೂ., ಪ್ರವೇಶ ಫೀ ೧ ರೂ. ವೈದ್ಯಕೀಯ ಶುಲ್ಕ ೧ ರೂ. ಈ ರೀತಿ ಪ್ರತಿ ಟರ್ಮಿಗೆ ೨೨ ರೂ. ಕ್ಕಿಂತ ಹೆಚ್ಚು ಶುಲ್ಕವನ್ನು

ವಸೂಲು ಮಾಡುವವು. ಇದರಿಂದ ಬಡವರಿಗೆ ಶಿಕ್ಷಣವು ಇನ್ನೂ ಭಾರವಾಗಿದೆ, ಸಿರಿವಂತರಿಗೆ ಹೆಚ್ಚು ಅನುಕೂಲವಾಗಿದೆ.

ಕನಿಷ್ಠ ಉತ್ಪನ್ನಕರ ತುಂಬುವ ಪಾಲಕರ ಮಕ್ಕಳಿಗೆ ಪ್ರತಿ ತಿಂಗಳು ೧೦ ರೂ. ಆದರೂ ಶುಲ್ಕವನ್ನು ವಿಧಿಸಬೇಕು. ಅವರಿಗೆ ಅದೇನು ಭಾರವಲ್ಲ. ಆ ರೀತಿ ಬಂದ ಹಣದಲ್ಲಿ ಪುಸ್ತಕಾಲಯ. ಆಟದ ಹಾಗೂ ಪ್ರಾಯೋಗಿಕ ಉಪಕರಣಗಳ ಖರ್ಚನ್ನು ನಿಭಾಯಿಸಲು ಅನುಕೂಲವಾಗುವದು. ಬಡವರಿಂದ ಶಿಕ್ಷಣಕ್ಕಾಗಿ ಶಿಕ್ಷಣ ಸಂಸ್ಥೆಗಳು ಯಾವುದಕ್ಕೂ ಹಣ ವಸೂಲು ಮಾಡಬಾರದು. ಪಠ್ಯಪುಸ್ತಕ, ಹಾಳಿ. ಪೆನ್ಸಿಲು ಕೊಳ್ಳುವುದೇ ಅವರಿಗೆ ಭಾರವಾಗಿರುವಾಗ ಇನ್ನುಳಿದ ಭಾರ ಹೇಗೆ ಹೊರುವರು? ಬಡ ಮಕ್ಕಳಿಗೆ ಪಠ್ಯಪುಸ್ತಕ, ಹಾಳಿ. ಪೆನ್ಸಿಲುಗಳನ್ನು ಸಹ ಪುಕ್ಕಟೆಯಾಗಿ ಕೊಟ್ಟರೆ ಆಗ್ಗ ಶಿಕ್ಷಣವು ಪೂರ್ತಿ ಪುಕ್ಕಟೆ ಎನಿಸುವದು. ಇಲ್ಲದಿದ್ದರೆ ಬಡವರಿಗೆ ಇದೊಂದು ಹೊರೆಯೇ ಸೈ.

ಹಾಜರಿ (Attendance) :

ಸದ್ಯಕ್ಕೆ ಮಾಧ್ಯಮಿಕ ಶಾಲೆಯು ವರ್ಗಕ್ಕೆ ೭೫% ದಂತೆ ಹಾಜರಿ ಇರಬೇಕಾದ ನಿಯಮವಿದೆ. ಸಾಧಾರಣ ೧೫ರಷ್ಟು ಗೈರಹಾಜರಿಯನ್ನು ಮಾಫ ಮಾಡುವ ಅಧಿಕಾರ ಮುಖ್ಯಾಧ್ಯಾಪಕರಿಗೂ, ತರುವಾಯದ ಒಂದು ತಿಂಗಳದಷ್ಟು ಮಾಫ ಮಾಡುವ ಅಧಿಕಾರ ಶಿಕ್ಷಣದ ಉಪನಿರ್ದೇಶಕರಿಗೂ, ಒಂದು ತಿಂಗಳಕ್ಕಿಂತ ಹೆಚ್ಚಿನ ಪ್ರಸಂಗದಲ್ಲಿ ನಿರ್ದೇಶಕರಿಗೂ ಅಧಿಕಾರವಿದೆ. ಈ ರೀತಿ ಅಧಿಕಾರಿಗಳಿಗೆ ಅಧಿಕಾರ ಕೊಡುವದು ಸಮಂಜಸವೆನಿಸಲಾರದು. ಹಾಜರಿ ಸಂಬಂಧ ಇಷ್ಟೊಂದು ತಲೆಯನ್ನಾದರೂ ಏಕೆ ಕೆಡಿಸಿಕೊಳ್ಳಬೇಕು? ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳಿಗೂ ವಾರ್ಷಿಕ ಪರೀಕ್ಷೆಗೆ ಅನುಮತಿಯನ್ನು ನೀಡಬೇಕು. ಪರೀಕ್ಷೆಯನ್ನು ಮಾತ್ರ ಕಟ್ಟುನಿಟ್ಟಾಗಿ ತಕ್ಕೊಳ್ಳಬೇಕು. ವರ್ಗಕ್ಕೆ ಹಾಜರಾಗಿ ಶಿಕ್ಷಕರಿಂದ ಪಾಠ ಕೇಳದಿದ್ದರೂ ಸ್ವಪ್ರಯತ್ನದಿಂದ ಹಾಗೂ ಸ್ವಪ್ರತಿಭೆಯಿಂದ ಏಕೆ ಆತನು ಪಾಸಾಗಬಾರದು? ಆದರೆ ಪಾಸಾಗಲಿಕ್ಕೆ 'ವಾಮಪಂಥ'ಕ್ಕೆ ಎಡೆ ಕೊಡಬಾರದು. "ಮುಕ್ತ ಕಾಲೇಜ" ಹಾಗೂ "ಮುಕ್ತ ವಿಶ್ವವಿದ್ಯಾಲಯ"ಗಳಿರುವಾಗ "ಮುಕ್ತ ಮಾಧ್ಯಮಿಕ ಶಾಲೆ"ಗಳೇಕಿರಬಾರದು? ಇದ್ದರೆ ತಪ್ಪೇನು? "ಶಿಕ್ಷಕರಾದರೂ ವರ್ಗದಲ್ಲಿ ಮಾಡುವುದಾದರೂ ಏನು ಮಹಾ?" ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದರೆ ಉತ್ತರ ಕೊಡುವುದಾದರೂ ಏನು? ಆದಕ್ಕೆ ಹಾಜರಿಯ ಸಂಬಂಧ ಯಾರೂ ತಲೆ ಕೆಡಿಸಿಕೊಳ್ಳಬಾರದು. ಅದು ಕಡ್ಡಾಯವಾಗಬಾರದು. ವಿದ್ಯಾರ್ಥಿಗಳಿಗೇ ಮನವರಿಕೆಯಾಗುವಂತೆ ಶಿಕ್ಷಕರು ಚುರುಕಾದ, ಆಕರ್ಷಣೀಯವಾದ, ಉಪಯುಕ್ತವಾದ ಪಾಠಗಳನ್ನು ವರ್ಗದಲ್ಲಿ ಹೇಳಲಿ. ಆಗ್ಗ ವಿದ್ಯಾರ್ಥಿಗಳು ತಾವಾಗಿಯೇ ವರ್ಗಕ್ಕೆ ಹಾಜರಾಗುವರು. ವರ್ಗ ತಪ್ಪಿದರೆ ತಾವೇ ಹಳಹಳಿಸುವರು

ವಿದ್ಯಾರ್ಥಿ ವೇತನಗಳು (Scholarships) :

ಈ ಹಿಂದೆ ಸ್ಪರ್ಧಾತ್ಮಕವಾಗಿ ವಿದ್ಯಾರ್ಥಿಗಳು ಮುಂದೆ ಬರಲೆಂಬ ಉದ್ದೇಶದಿಂದ ಸರಕಾರ, ಸಂಘ, ಸಂಸ್ಥೆಗಳು ಪರೀಕ್ಷೆಯಲ್ಲಿ ಉಚ್ಚ ಸ್ಥಾನಗಳನ್ನು ಗಿಟ್ಟಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಕೊಡುವದು ಸ್ವಾಭಾವಿಕವಾಗಿತ್ತು. S.S.L.C. ಯಲ್ಲಿ ರಾಜ್ಯಕ್ಕೆ ೩೦ನೇ ನಂಬರವರೆಗಿನ ಎಲ್ಲ ವಿದ್ಯಾರ್ಥಿಗಳಿಗೂ ಅವರ ಮುಂದಿನ ಕಾಲೇಜ ಅಭ್ಯಾಸಕ್ಕೆ ಅನುಕೂಲವಾಗಲೆಂದು ವಿದ್ಯಾರ್ಥಿ ವೇತನಗಳನ್ನು ಸರಕಾರವು ಕೊಡುತ್ತಿತ್ತು. ಸಂಘ, ಸಂಸ್ಥೆ, ಸಾರ್ವಜನಿಕರು ಸಹ ಸ್ಥಾನಕ್ಕನುಗುಣವಾಗಿ ಅಥವಾ ವಿಷಯಕ್ಕನುಗುಣವಾಗಿ ವೇತನ, ಪುರಸ್ಕಾರಗಳನ್ನು ನೀಡುವವು. ವಿದ್ಯಾಸಂಸ್ಥೆಗಳು ತಮ್ಮ ವಾರ್ಷಿಕೋತ್ಸವದಲ್ಲಿ ಪ್ರತಿ ವರ್ಗದ ಒಂದು ಮತ್ತು ಎರಡನೆಯ ನಂಬರ ಪಡೆದ ವಿದ್ಯಾರ್ಥಿಗಳಿಗೆ ಪುಸ್ತಕಗಳ ರೂಪದಲ್ಲಿ ಪುರಸ್ಕಾರ ನೀಡುವವು. ಅಭ್ಯಾಸದ ಜೊತೆಗೆ ಆಟಕ್ಕೂ ಈಗ ಹೆಚ್ಚಿಚ್ಚು ಮನ್ನಣೆ. ಪ್ರಾಶಸ್ತ್ಯ ಸಿಗುತ್ತಿರುವದು ಸ್ತುತ್ಯ ಸಂಗತಿ. ಆಟದಲ್ಲಿ ವಿಜಯಿಗಳಾದವರಿಗೆ ಪುರಸ್ಕಾರ, ಮನ್ನಣೆಗಳು ಸಿಗುತ್ತಿರುವವು.

ಸರಕಾರವು ಹಿಂದುಳಿದವರಿಗೆ ಹಾಗೂ ಬಡತನದ ವಿದ್ಯಾರ್ಥಿ ವೇತನಗಳನ್ನು ಕೊಡುತ್ತಿದೆ. ಆದರೆ ಅದರ ಸದುಪಯೋಗವಾಗಬೇಕು. ಪರೀಕ್ಷೆಯಲ್ಲಿ ಅಂಥವರು ನಪಾಸಾದರೆ ವೇತನವನ್ನು ಸ್ಥಗಿತಗೊಳಿಸಬೇಕು.

ಶಿಕ್ಷಣ ಪ್ರಸಾರಕ್ಕೆ ಅನುಕೂಲವಾಗಲೆಂದು ಕೆಲ ಸಮಾಜದವರು ತಮ್ಮನೇ ಆದ ಸಾರ್ವಜನಿಕ ಫಂಡು, ಹಾಸ್ಟೆಲ್, ಭೋಜನಾಲಯಗಳನ್ನು ತಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಒದಗಿಸುತ್ತ ಬಂದಿರುವರು. ಶಿರಸಂಗಿ ಫಂಡ, ಮಠ, ಮಂದಿರುಗಳು ಶಿಕ್ಷಣ ಪ್ರಸಾರಕ್ಕೆ ಹೆಚ್ಚು ಸಹಾಯನೀಡಿವೆ. ಇಲ್ಲದಿದ್ದರೆ ಕೆಲ ಸಮಾಜಗಳು ಶಿಕ್ಷಣದಿಂದ ಬಹುದೂರ ಉಳಿದುಬಿಡುತ್ತಿದ್ದವು. ಇಂಥ ಅನುಕೂಲಪಡೆದವರು ಆಯಾ ಸಂಸ್ಥೆಗಳಿಗೆ ಕೊನೆಯುವರೆಗೆ ಕೃತಜ್ಞರಾಗಿರಬೇಕು ಹಾಗೂ ತಮ್ಮ ಋಣ ತೀರಿಸಬೇಕು.

ಅಭ್ಯಾಸ ಕ್ರಮ :

ಪ್ರಾಥಮಿಕ ಶಾಲೆಗಳಿಗಿಂತ ಮಾಧ್ಯಮಿಕ ಶಾಲೆಗಳಲ್ಲಿ ಅಭ್ಯಾಸವು ಒಂದು ವಿಶಿಷ್ಟ ಕ್ರಮದಲ್ಲಿ ಸ್ವಲ್ಪ ಅಚ್ಚುಕಟ್ಟಾಗಿ ನಡೆಯುವುದು ಎಂದು ಹೇಳಬಹುದು. ಪ್ರಾಥಮಿಕ ಶಾಲೆಯಲ್ಲಿ ಸಾಮಾನ್ಯವಾಗಿ ಒಂದು ವರ್ಗಕ್ಕೆ ಒಬ್ಬನೇ ಶಿಕ್ಷಕ ಎಲ್ಲ ವಿಷಯಗಳಿಗೂ, ಆಟ, ಸಂಗೀತಕ್ಕೂ ಕೂಡ. ಆ ಶಿಕ್ಷಕನು ಗಣಿತದಲ್ಲಿ ಪರಿಣಿತನಿದ್ದರೆ ಹೆಚ್ಚಾಗಿ ಗಣಿತಕ್ಕೆ ಆತನ ಒಲವು ಹೆಚ್ಚಾಗುವದು, ಭಾಷೆಯುಲ್ಲಿದ್ದರೆ ಭಾಷೆಗೆ, ಆಟದಲ್ಲಿದ್ದರೆ ಆಟಕ್ಕೆ. ಎಲ್ಲ ವಿಷಯಗಳಿಗೂ ಆತನಿಗೆ ಒಲವು ತೋರಿಸುವುದು ಶಕ್ಯವಾಗದೇ ಹೋಗಬಹುದು. ಅಗ್ಗೆ ಗುರುವಿನಂತೆ ಶಿಷ್ಯರೂ ಅದೇ ರೀತಿ ಒಲವು ತೋರಿಸುವದು ಸ್ವಾಭಾವಿಕ.

ಮಾಧ್ಯಮಿಕ ಶಾಲೆಯಲ್ಲಿ ಸಾಮಾನ್ಯವಾಗಿ ೪೦ ನಿಮಿಷಗಳಿಗೊಂದರಂತೆ ವಿಷಯದ ಅವಧಿ (Period)ಗಳನ್ನು ಮಾಡಿರುವರಲ್ಲದೆ ಆಯಾ ವಿಷಯದ ಅವಧಿಗೆ ಆಯಾ ವಿಷಯದಲ್ಲಿ ಪದವಿ ಹಾಗೂ ಪರಿಣತಿಯನ್ನು ಪಡೆದ ಶಿಕ್ಷಕನೇ ಹೋಗುವನು. ಈ ಕ್ರಮದಿಂದ ಪ್ರತಿಯೊಂದು ವಿಷಯಕ್ಕೆ ಸಲ್ಲಬೇಕಾದ ಮನ್ನಣೆ ಸಲ್ಲುವುದಲ್ಲದೆ ಶಿಕ್ಷಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಹೆಚ್ಚು ಅನುಕೂಲವಾಗುವದು. ಅವಧಿಗನುಸಾರವಾಗಿ ವಿಷಯ ಹಾಗೂ ಮುಖಗಳು ಬದಲಾಗುವುದರಿಂದ ಯಾರಿಗೂ ಅಷ್ಟೊಂದು ತಲೆಬೇನೆ ಎನ್ನಿಸಲಾರದು.

ಶಿಕ್ಷಕರು ವಿದ್ಯೆ ನೀಡುವಲ್ಲಿಯೂ, ಪ್ರಾಥಮಿಕಕ್ಕಿಂತ ಮಾಧ್ಯಮಿಕದಲ್ಲಿ ಹೆಚ್ಚು ಸುಧಾರಿತ ಕ್ರಮವಿರುವದು ಕಂಡುಬರುವದು. ಶಿಕ್ಷಕನ ಕೈಯಲ್ಲಿ ಛಡಿಯ ಬದಲು ಬಳಪವಿರುವುದು; ಗದರಿಕೆಯ ಬದಲು ಉತ್ಸಾಹಭರಿತ ಉತ್ತೇಜಕ ಚೈತನ್ಯ ಕಾಣಬಹುದು. ಅಲ್ಲಲ್ಲಿ ಕಳೆ, ಕೊಳೆಯ ಬದಲು ಅಚ್ಚುಕಟ್ಟುತನ, ಪ್ರಾಯೋಗಿಕ ಉಪಕರಣ. ನಕಾಶೆ ಮುಂತಾದವುಗಳ ಮಾಧ್ಯಮಗಳು ಮಾಧ್ಯಮಿಕ ಶಾಲೆಯಲ್ಲಿ ಕಂಡುಬರುವವು. ಮಾಧ್ಯಮಿಕ ಶಾಲೆಗೆ ತನ್ನದೇ ಆದ ವಿಸ್ತಾರವಾದ ಆಟದ ಬಯಲು, ಪುಸ್ತಕಾಲಯಗಳು ಮತ್ತಷ್ಟು ಶಿಕ್ಷಣ ಕ್ರಮಕ್ಕೆ ಕಳೆಕಟ್ಟುವವು. ಪ್ರಾಥಮಿಕ ಶಾಲೆಗಳೂ ಸಹ ಇಂಥ ಸೌಲಭ್ಯ, ವಾತಾವರಣ ಹಾಗೂ ಶಿಕ್ಷಣ ಕ್ರಮದತ್ತ ಗುರಿ ಇಟ್ಟರೆ ಶಿಕ್ಷಣದ ಭಾಗ್ಯವೇ ತೆರೆಯುವದು.

ಶೈಕ್ಷಣಿಕ ಪ್ರವಾಸಕ್ಕೆ ತನ್ನದೇ ಆದ ಸ್ಥಾನವಿದೆ. ಪ್ರತಿ ವರುಷ ಒಂದು ದೂರದ ಹಾಗೂ ಒಂದು ಸಮೀಪದ ಪ್ರವಾಸ ಮಾಡುವ ಕಡ್ಡಾಯದ ಕ್ರಮವಿದೆ. ಮುಂಚಿತವಾಗಿ ಸರಕಾರದ ಪರವಾನಿಗೆ ಪಡೆದರೆ ಪ್ರತಿಯೊಬ್ಬ ವಿದ್ಯಾರ್ಥಿಗೆ ½ ಖರ್ಚನ್ನು ಸರಕಾರವೇ ನಿಭಾಯಿಸುವುದಲ್ಲದೆ ೨೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದರೆ ಅವರ ಮುಖಂಡತ್ವವಹಿಸಿದ ಒಬ್ಬ ಶಿಕ್ಷಕನ ಪೂರ್ತಿ ಖರ್ಚನ್ನೂ ನಿಭಾಯಿಸುವದು. ಈ ಸಂಬಂಧ ಪತ್ರ ವ್ಯವಹಾರಗಳ ಗೊಂದಲಕ್ಕೆ ಬೇಸತ್ತ ಶಿಕ್ಷಕರು ಹೆಚ್ಚಾಗಿ ವಿದ್ಯಾರ್ಥಿಗಳೇ ಎಲ್ಲ ತಮ್ಮ ಖರ್ಚನ್ನು ನಿಭಾಯಿಸಲು ತಿಳಿಸುವರು. ಆಗ್ಗೆ ಸಿರಿವಂತರು ಮಾತ್ರ. ಇಂಥವುಗಳಲ್ಲಿ ಪಾಲುಗೊಳ್ಳುವರು. ಬಡವರು ಅವರನ್ನು ಬೀಳ್ಕೊಡುವರು ಮಾತ್ರ! ಶೈಕ್ಷಣಿಕ ಪ್ರವಾಸದ ಮೇಲಿರುವ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ವರ್ಷಕ್ಕೆ ಒಂದು ಸಲವಾದರೂ ಗಾಡಿ, ಬಸ್ಸುಗಳ ಆಕರವಿಲ್ಲದಂತೆ ಸರಕಾರವು ಪರವಾನಿಗೆ ಕೊಡಬೇಕು. ವರ್ಗದಲ್ಲಿ ಪಡೆಯುವುದಕ್ಕಿಂತ ಹೆಚ್ಚು ಜ್ಞಾನವನ್ನು ಪ್ರವಾಸದಲ್ಲಿ ಪಡೆಯಬಹುದು. ಸಹಕಾರ, ಪ್ರೇಮ. ನಾಡ, ರಾಷ್ಟ್ರ, ಭಾಷೆಗಳ ಪ್ರಜ್ಞೆ ಇದರಿಂದ ಹೆಚ್ಚಾಗುವದು.

ಏಕರೂಪತೆ ಇದೆಯೆ?

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿ ರಾಜ್ಯದಾದ್ಯಂತ ಏಕರೂಪತೆಯನ್ನು ತರಲು ಕರ್ನಾಟಕ ಸರಕಾರವು ಪ್ರಯತ್ನಮಾಡುತ್ತಿದೆ. ೧ನೆಯ ವರ್ಗದಿಂದ ೧೦ನೆಯ ವರ್ಗದವರೆಗೆ ಪಠ್ಯಪುಸ್ತಕಗಳು ರಾಜ್ಯದಾದ್ಯಂತ ಒಂದೇ ತೆರನಾಗಿರುವವು. ಶಿಕ್ಷಕರು ಬೇರೆ ಬೇರೆಯಾಗಿರುವುದರಿಂದ ಜ್ಞಾನಪ್ರಸಾರದಲ್ಲಿ ಭಿನ್ನತೆ ಸ್ವಾಭಾವಿಕ. ೧೦ನೆಯ ವಾರ್ಷಿಕ ಪರೀಕ್ಷೆಯನ್ನುಳಿದು ಇನ್ನುಳಿದೆಲ್ಲ ವಾರ್ಷಿಕ ಪರೀಕ್ಷೆಗಳು ವರ್ಗಿಕವಾಗಿರುವುದರಿಂದ ಪರೀಕ್ಷೆಯಲ್ಲಿ, ಗುಣಮಟ್ಟದಲ್ಲಿ ಏಕತೆಯಿಲ್ಲ. ೭ನೆಯ ವಾರ್ಷಿಕ ಪರೀಕ್ಷೆಯನ್ನು ಹಿಂದಿನ ಮುಲ್ಕಿಯಂತೆ ರಾಜ್ಯದಾದ್ಯಂತ ಏಕತೆಯ ಕಟ್ಟುಸಿಟ್ಟಿನ ಪರೀಕ್ಷೆಯಾಗಿ ತಕ್ಕೊಳ್ಳಬೇಕು. ಅಂದರೆ ಶಿಕ್ಷಣ ಮಟ್ಟದಲ್ಲಿ ರಾಜ್ಯದಾದ್ಯಂತ ಏಕತೆ ಬರುವುದಲ್ಲದೆ ಆ ಮಟ್ಟಕ್ಕನುಗುಣವಾಗಿ ನೌಕರಿಗಳಿಗೆ ಆಯ್ಕೆ ಮಾಡುವಾಗ್ಗ ರಾಜ್ಯದಾದ್ಯಂತ ಸರ್ವರಿಗೂ ಸರಿಯಾದ ಸಮನಾದ ಅವಕಾಶ ದೊರೆಯಲು ಅನುಕೂಲವಾಗುವದು.

ಶಿಕ್ಷಣ ಮಾಧ್ಯಮ :

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಾಧ್ಯಮವು ಆಯಾ ರಾಜ್ಯದ ಮಾತೃ ಭಾಷೆಯೇ ಆಗಬೇಕು. ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು. ಬೇರೆ ಭಾಷಿಕರು ಖಾಸಗಿಯಾಗಿ ಸಂಸ್ಥೆಗಳನ್ನು ನಡೆಸುತ್ತಿದ್ದರೆ ಅವರು ತಮಗೆ ಬೇಕಾದ ಭಾಷೆಯನ್ನು ಶಿಕ್ಷಣ ಮಾಧ್ಯಮ ಮಾಡಬಹುದು. ಮಾತೃ ಭಾಷೆಯು ಶಿಕ್ಷಣ ಮಾಧ್ಯಮವಾದರೆ ಶಿಕ್ಷಕರು ಹೇಳುವ ಪಾಠಗಳು ವಿದ್ಯಾರ್ಥಿಗಳಿಗೆ ನೇರವಾಗಿ ತಲುಪುವವು. ಇಲ್ಲವಾದರೆ ಬೇರೆ ಭಾಷೆಯ ಮುಖಾಂತರ ತಿಳಿಯುವಲ್ಲಿ ಕೇವಲ ವ್ಯರ್ಥವಾದ ವ್ಯಾಯಾಮವಾಗುವದು. ಇನ್ನುಳಿದ ಭಾಷೆಗಳು ಕಡ್ಡಾಯ ಅಥವಾ ಐಚ್ಛಿಕವಾಗಿದ್ದಲ್ಲಿ ಅದೇ ಭಾಷೆಯ ಮಾಧ್ಯಮದಲ್ಲಿ ಹೆಚ್ಚು ತರಬೇತಿಯನ್ನು ನೀಡಿದರೆ ಒಳಿತು.

ಕಾಲೇಜ, ವಿಶ್ವವಿದ್ಯಾಲಯದ ಮಟ್ಟದ ಉಚ್ಚ ಶಿಕ್ಷಣದ ಕಡೆಗೆ ಗುರಿ ಇಟ್ಟವರು ಮಾಧ್ಯಮಿಕ ಶಿಕ್ಷಣದ ಹಂತದಲ್ಲಿಯೇ ಇಂಗ್ಲಿಷ ಭಾಷೆಯ ಕಡೆಗೆ ಹೆಚ್ಚು ಗಮನ ಕೊಡುವದು ಒಳ್ಳೆಯದು. ಇಂಗ್ಲೀಷ ಜಾಗತಿಕ ಭಾಷೆಯೆನಿಸಿದೆಯಲ್ಲದೆ, ಪ್ರಾಯೋಗಿಕವಾಗಿ ಅದುವೇ ನಮ್ಮ ಭಾರತದುದ್ದಕ್ಕೂ ಇರುವ ರಾಷ್ಟ್ರೀಯ ಮಾಧ್ಯಮ ಭಾಷೆ. ಸಂವಿಧಾನಾತ್ಮಕವಾಗಿ ಹಿಂದಿಯು ರಾಷ್ಟ್ರಭಾಷೆಯಾಗಿದ್ದರೂ ದಕ್ಷಿಣ ಭಾರತದಲ್ಲಿ ಸಂಚರಿಸುವವರಿಗೆ ಇಂಗ್ಲೀಷೇ ಹೆಚ್ಚು ಪ್ರಯೋಜನಕಾರಿ. ಸ್ಪರ್ಧಾತ್ಮಕ ಪರೀಕ್ಷೆ. ಸಂದರ್ಶನವೀಯುವಲ್ಲಿ, ವ್ಯಾವಹಾರಿಕದಲ್ಲಿ, ಜಾಗತಿಕವಾಗಿ, ಉಚ್ಚ ಜ್ಞಾನಪಡೆಯುವಲ್ಲಿ ವಿಲ್ಲ ಹಲವಾರು ವಿಧಗಳಲ್ಲಿಯೂ ಇಂಗ್ಲೀಷಿಗೆ ತನ್ನದೇ ಆದ ಸಾರ್ವಭೌಮತ್ವ ಸ್ಥಾನವಿದೆ. ರಾಜಕಾರಣಿಗಳು ಸ್ವಅನುಕೂಲಕ್ಕಾಗಿ, ಮತಗಳಿಗಾಗಿ ಹಾಗೂ ಒಣ ರಾಷ್ಟ್ರೀಯ

ಅಥವಾ ಪ್ರಾಂತಿಕ ಹೆಮ್ಮೆಗಾಗಿ ಬೇರೆ ಭಾಷೆಗಳನ್ನು ಬಹಿರಂಗವಾಗಿ ಹೇಳಿದರೂ ಆಂತರಿಕವಾಗಿ ತಮ್ಮ ಮಕ್ಕಳನ್ನು ಹೆಚ್ಚಾಗಿ ಇಂಗ್ಲೀಷ ಮಾಧ್ಯಮದ ಶಾಲೆಗೆ ಕಳಿಸುವದನ್ನು ಎಲ್ಲರೂ ಕಾಣಬಹುದು. ಇಂಗ್ಲೀಷ ಬಲ್ಲವನ ಸ್ಥಾನ, ಒಟ್ಟಿನಲ್ಲಿ ಎಲ್ಲದೃಷ್ಟಿಯಿಂದ ಮೇಲು. ವಿದ್ಯಾರ್ಥಿಗಳು, ಪಾಲಕರು ಹಾಗೂ ಶಿಕ್ಷಕರು ಈ ಸಂಗತಿ ಮೊದಲು ತಿಳಿದುಕೊಳ್ಳಬೇಕು. "ಇಂಗ್ಲೀಷ ಬಲ್ಲವ ಎಲ್ಲಿಯೂ ಸಲ್ಲುವ ಸರ್ವಜ್ಞ" ಎಂದು ಸರ್ವಜ್ಞನ ಕ್ಷಮೆಕೇಳಿ ಹೇಳಲಡ್ಡಿಯಿಲ್ಲ.

ಇನ್ನು ಇಂಗ್ಲೀಷಿನ ಮಹತ್ವ ಅರಿತು ಮಾಧ್ಯಮಿಕ ಶಾಲೆಯಲ್ಲಿ ಇಂಗ್ಲೀಷನ್ನೇ ಕಡ್ಡಾಯವಾಗಿ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬಾರದು. ಇಂಗ್ಲೀಷನಲ್ಲಿ ಒಲವಿಲ್ಲದವರಿಗೆ ಶಿಕ್ಷಣವು ಭಾರವಾಗುವುದಲ್ಲದೆ ಶಿಕ್ಷಣ ಹಾಗೂ ಜ್ಞಾನದ ಪ್ರಸಾರಕ್ಕೆ ಕುಂಠಿತವಾಗುವದು. ಮಾಧ್ಯಮಿಕ ಶಿಕ್ಷಣದ ಮೂಲ ಉದ್ದೇಶ ಶಿಕ್ಷಣ, ಜ್ಞಾನಗಳ ಪ್ರಸಾರದ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ವಿಕಸನ.

ಇಂಗ್ಲೀಷಿನಲ್ಲಿ ಒಲವಿದ್ದವರಿಗೆ ಹಾಗೂ ಹೆಚ್ಚು ಪರಿಶ್ರಮ ಪಡಬೇಕೆನ್ನುವವರಿಗೆ ಮತ್ತು ಉಚ್ಚ ಶಿಕ್ಷಣದತ್ತ ಗುರಿ ಇದ್ದವರಿಗೆ ಇಂಗ್ಲೀಷ ಮಾಧ್ಯಮದ ಬೇರೆ ಮಾಧ್ಯಮಿಕ ಶಾಲೆಗಳಿಗೆ ಅವಕಾಶವಿರಬೇಕು. ಈ ದಿಶೆಯಲ್ಲಿ ಕಾನ್ವೆಂಟ್ ಹಾಯ್‌ಸ್ಕೂಲುಗಳು ತತ್ಪರವಾಗಿರುವವು. ಆದರೆ ಎಲ್ಲ ವಿಷಯಗಳಿಗೂ ಸರಿಯಾದ ಅವಕಾಶ ಕನ್ನಡ ಮಾಧ್ಯಮದ ಹಾಯ್‌ಸ್ಕೂಲುಗಳಲ್ಲಿ ಸಿಗುವಷ್ಟು ಕಾನ್ವೆಂಟ್ ಹಾಯ್‌ಸ್ಕೂಲುಗಳಲ್ಲಿ ಸಿಗಲಿಕ್ಕಿಲ್ಲ. ಕಾನ್ವೆಂಟ್ ಶಿಕ್ಷಣ ಭಾರತೀಯ ಸಂಸ್ಕೃತಿಗೆ ಆತಂಕವನ್ನೂ ಒಡ್ಡಬಹುದು.

ಪಠ್ಯಪುಸ್ತಕಗಳು :

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಬಾಲಕರು ಹಾಗೂ ಶಿಕ್ಷಕರು ಕೇವಲ ಸರಕಾರವು ನಿಗದಿಪಡಿಸಿದ ಪಠ್ಯಪುಸ್ತಕಗಳ ಮೇಲೆಯೇ ಅವಲಂಬಿಸಬೇಕಾಗುವದು–ಎಲ್ಲ ವಿಷಯಗಳಿಗೂ ಕಾಲೇಜ, ವಿಶ್ವವಿದ್ಯಾಲಯ ಮಟ್ಟಗಳಲ್ಲಿ ಭಾಷೆಗಳಿಗೆ ಮಾತ್ರ ನಿಗದಿಪಡಿಸಿದ ಪಠ್ಯಗಳು ಇರುತ್ತವೆ. ಇನ್ನುಳಿದ ವಿಷಯಗಳಿಗೆ ನಿಗದಿಪಡಿಸಿದ ಪಠ್ಯಗಳಿರುವುದಿಲ್ಲ, ಹಾಗೆ ಇರಲೂ ಬಾರದು.

ಪ್ರಾಥಮಿಕ, ಮಾಧ್ಯಮಿಕ ಪಠ್ಯಗಳ ಸಂಬಂಧ ಹಲವಾರು ಕಿರಿಕಿರಿಗಳು ಕಂಡುಬರುವವು. ಮೊದಲನೆಯದಾಗಿ, ಅವಧಿಗೆ ಅನುಗುಣವಾಗಿ ಬೇಗ ಪಠ್ಯಪುಸ್ತಕಗಳು ಲಭ್ಯವಾಗದೇ ಇರುವದು. ಪರೀಕ್ಷೆ ಸಮೀಪಿಸಿದರೂ ಪಠ್ಯಪುಸ್ತಕಗಳೇ ಪೇಟೆಗೆ ಇನ್ನೂ ಬಂದಿರುವುದಿಲ್ಲ. ಒಮ್ಮೊಮ್ಮೆ ಹಾಗೆಯೇ ಪರೀಕ್ಷೆದಾಟಿದರೂ ಅಚ್ಚರಿಯೇನಲ್ಲ! ಎರಡನೆಯದಾಗಿ, ಪಠ್ಯಪುಸ್ತಕಗಳಲ್ಲಿ ಕಂಡುಬರುವ, ಮುದ್ರಾರಾಕ್ಷಸನ ಅದಕ್ಕಿಂತ

ಮುಖ್ಯವಾಗಿ ತಪ್ಪು ತಪ್ಪಾದ ವಿಷಯಗಳ ಹಾವಳಿ. ಮೂರನೆಯದಾಗಿ, ರಾಜಕಾರಣಿ ಲೇಖಕರ ಹಾಗೂ ಪ್ರಕಾಶಕರ ಪುಸ್ತಕಗಳೇ ಪಠ್ಯಗಳಾಗುವುದು ಹೆಚ್ಚು.

ಈ ಹಲವು ದೋಷಗಳನ್ನು ಸಂಬಂಧಪಟ್ಟವರು ನಿವಾರಿಸಲು ಪ್ರಯತ್ನಿಸಬೇಕು. ಇಲ್ಲದಿದ್ದರೆ ಶಿಕ್ಷಣದ ಉದ್ದೇಶ ಈಡೇರಲಾರದು. ಪಠ್ಯಗಳು ಆಕರ್ಷಕವಾಗಿರಬೇಕು, ಸುಂದರ, ಸರಳ ಶೈಲಿಯಲ್ಲಿರಬೇಕು. ಒಳ್ಳೇ ಶುಭ್ರ ಹಾಳೆಗಳನ್ನೇ ಮುದ್ರಿಸಲು ಉಪಯೋಗಿಸಿರಬೇಕು. ಕೇವಲ ಉತ್ಪಾದನಾ ವೆಚ್ಚ ತಿರುಗಿ ಬರುವಂತೆ ಆದಷ್ಟು ಕಡಿಮೆ ಬೆಲೆಗೆ ಸಿಗುವಂತಿರಬೇಕು. ಶಾಲೆಗಳು ಪ್ರಾರಂಭವಾಗುವ ಮುನ್ನವೇ ಅವೆಲ್ಲ ಪೇಟೆಯಲ್ಲಿ ಲಭ್ಯವಾಗಬೇಕು.

ವಿಷಯಗಳು :

ಶಿಕ್ಷಣದ ಗುಣಮಟ್ಟದ ಜೊತೆಗೆ ಶಿಕ್ಷಣ ಪ್ರಸಾರ, ಜ್ಞಾನಪ್ರಸಾರ, ವಿದ್ಯಾರ್ಥಿಗಳ ಸರ್ವಾಂಗೀಣ ಉನ್ನತಿ ಮುಂತಾದ ದೃಷ್ಟಿಗಳನ್ನಿಟ್ಟುಕೊಂಡು ಮಾಧ್ಯಮಿಕ ಶಿಕ್ಷಣದ ವಿಷಯಗಳನ್ನು ನಿಗದಿಪಡಿಸಬೇಕು.

ಸದ್ಯಕ್ಕೆ ೮ನೆಯ ವರ್ಗದಿಂದ ೧೦ನೆಯ ವರ್ಗದ ವರೆಗೆ ೧೦೦ ಗುಣಗಳ ಇಂಗ್ಲೀಷ ಒಂದು ವಿಷಯ ಕಡ್ಡಾಯವಾಗಿರುವುದಲ್ಲದೆ, ಎರಡನೆಯ ಭಾಷೆಯ ಸ್ಥಾನದಲ್ಲಿಯೂ ೧೦೦ ಗುಣಗಳ ಐಚ್ಛಿಕವಾಗಿರುವದು. ಭಾಷೆಗಳ ವಿಷಯದಲ್ಲಿ ಒಂದನೆಯ, ಎರಡನೆಯ, ಮೂರನೆಯ ಎಂದು ಮುಂತಾಗಿ ವರ್ಗೀಕರಿಸಿದೆ. ರಾಷ್ಟ್ರದ ಏಳ್ಗೆಗೆ ಅನುಗುಣವಾಗುವಂತೆ ತ್ರಿಭಾಷಾ ಸೂತ್ರದಂತೆ ಮೂರೂ ಭಾಷೆಗಳನ್ನು ಮಾಧ್ಯಮಿಕ ಶಿಕ್ಷಣದುದ್ದಕ್ಕೂ ಪ್ರತಿಯೊಂದಕ್ಕೆ ೧೦೦ ಗುಣಗಳಂತೆ ಕಡ್ಡಾಯಗೊಳಿಸಬೇಕು. ಅಂದರೆ ಮಾತೃಭಾಷೆ, ರಾಷ್ಟ್ರಭಾಷೆ, ಅಂತರರಾಷ್ಟ್ರೀಯ ಭಾಷೆಗೆ ಅನುವುಮಾಡಿದಂತಾಗುವುದಲ್ಲದೆ ವಿದ್ಯಾರ್ಥಿಗಳ ಉನ್ನತಿಗೆ ಅನುವುಮಾಡಿಕೊಟ್ಟಂತಾಗುವುದು. ಭಾಷೆಯ ಏಳ್ಗೆಗಿಂತ ವಿದ್ಯಾರ್ಥಿಗಳ ಸಮಾಜದ ಏಳ್ಗೆ ಮುಖ್ಯ. ಸಮಾಜಕ್ಕಾಗಿ ಭಾಷೆ ಇದೆ. ಭಾಷೆಗಾಗಿ ಸಮಾಜವಿಲ್ಲ. ಭಾಷೆ ಉಳಿಸಲು ಹೋಗಿ ಸಮಾಜವನ್ನು ಬಲಿಕೊಡಬಾರದು. ಶಿಕ್ಷಣ ಕ್ರಮದಲ್ಲಿ ವ್ಯಾವಹಾರಿಕತೆಯೂ ಬೇಕು.

ಸಂಸ್ಕೃತ :

ಇಲ್ಲಿಯವರೆಗೆ ೧೫೦ ಗುಣಗಳ ಸಂಸ್ಕೃತವು ಮೊದಲನೆಯ ಭಾಷೆಯಾಗಿತ್ತು. ಹಾಗೂ ಮಿಶ್ರಭಾಷೆ (Composite course) ಕನ್ನಡ ಹಾಗೂ ಸಂಸ್ಕೃತದಲ್ಲಿ ೧೦೦ ಗುಣಗಳ ಕನ್ನಡದ ಜೊತೆಗೆ ೫೦ ಗುಣಗಳ ಸಂಸ್ಕೃತವೂ ಸೇರಿತ್ತು. ಒಟ್ಟಿನಲ್ಲಿ ಇಲ್ಲಿಯವರೆಗೆ ಸಂಸ್ಕೃತಕ್ಕೆ ಕನ್ನಡಕ್ಕಿಂತ ಹೆಚ್ಚು ಪ್ರಾಶಸ್ತ್ಯ ಸಿಕ್ಕಿತ್ತು. ಈ ವರ್ಷ (೧೯೭೯)ದಿಂದ

ಸಂಸ್ಕೃತವನ್ನು ಮೊದಲನೆಯ ಭಾಷೆಯಿಂದ ತೃತೀಯ ಭಾಷೆಯ ಸ್ಥಾನಕ್ಕೆ ಇಳಿಸಲಾಗಿದೆ. ಇದನ್ನು ಸಮಾಜದ ಒಂದು ಗುಂಪಿನವರು ಪ್ರಾಮುಖ್ಯವಾಗಿ ವಿರೋಧಿಸುತ್ತಿರುವರು ಹಾಗೂ ಇನ್ನುಳಿದವರು ಭಾರ ಇಳಿಯಿತಲ್ಲದೇ ವ್ಯಾವಹಾರಿಕವಾಗಿ ಅನುಕೂಲವಾಯಿತೆನ್ನುವ ದೃಷ್ಟಿ ತಾಳಿದಂತಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡ ಕವಿ ಕುವೆಂಪುರವರು ಸಂಸ್ಕೃತವನ್ನು ಮೂರನೆಯ ದರ್ಜೆಗೆ ಇಳಿಸಿದುದನ್ನು ಸ್ವಾಗತಿಸಿರುವರು. ಆದರೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಹೆಗಡೆಯವರು ಇದನ್ನು ವಿರೋಧಿಸಿರುವರು. ಒಟ್ಟಿನಲ್ಲಿ ಸಂಸ್ಕೃತವು ಈಗ ಹೆಚ್ಚು ಚರ್ಚಾಸ್ಪದ ವಿಷಯವಾಗಿದೆ. ಆದರೆ ಚರ್ಚೆ ವ್ಯಾವಹಾರಿಕವಾಗಬೇಕು. ಈ ಸಂಬಂಧ ನಿಯಮಿಸಿದ ಗೋಕಾಕ ಸಮಿತಿಯು ಹೆಚ್ಚು ವಿರೋಧವನ್ನು ಎದುರಿಸಬೇಕಾಯಿತು.

ಡಾ. ಹೆಗಡೆಯವರು ಸಂಸ್ಕೃತವು ಭಾರತೀಯ ಎಲ್ಲ ಭಾಷೆಗಳ ಮಾತೃಭಾಷೆ ಎಂದು ವಾದಿಸಿರುವರು. ಆದರೆ ಈಗಾಗಲೇ ಆರ್ಯ ಭಾಷೆಯಾದ ಸಂಸ್ಕೃತಕ್ಕಿಂತ ದ್ರಾವಿಡ ಭಾಷೆಗಳು ಭಾರತದಲ್ಲಿದ್ದವು ಎನ್ನುವದು ಪಾಶ್ಚಿಮಾತ್ಯ ಸಂಶೋಧಕರ ಮತವಾಗಿರುವುದಲ್ಲದೆ, ಐತಿಹಾಸಿಕ ಸತ್ಯವಾಗಿದೆ. ಆರ್ಯರ ಪ್ರಾಬಲ್ಯ ಹೆಚ್ಚಾದ್ದರಿಂದ ಅವರ ಭಾಷೆ ಸಂಸ್ಕೃತದ ಪ್ರಭಾವವು ಹೆಚ್ಚಾದುದು ಸ್ವಾಭಾವಿಕ. ನಂತರ ಹೇರಳವಾಗಿ ಸಂಸ್ಕೃತ ಶಬ್ದಗಳು ಭಾರತೀಯ ಭಾಷೆಗಳಲ್ಲಿ ಕಾಲುಚಾಚಿದವು. ಈ ರೀತಿ ದ್ರಾವಿಡ ಭಾಷೆಗಳು ಸಂಸ್ಕೃತದ ಉಪಯೋಗ ಪಡೆದು ಸಮೃದ್ಧವಾಗಿದ್ದರೂ ಅವಕ್ಕೆ ತಮ್ಮದೇ ಆದ ಸ್ವತಂತ್ರ ಇತಿಹಾಸವಿದೆ. ಐತಿಹಾಸಿಕವಾಗಿ ದ್ರಾವಿಡ ಸಂಸ್ಕೃತಿಯು ಕ್ರಿ. ಶ. ಪೂ ೫೦೦೦ ವರ್ಷಗಳ ಹಿಂದಿನಿಂದಲೂ ಇತ್ತು. ಆರ್ಯರು ಭಾರತಕ್ಕೆ ಬಂದುದು ಸುಮಾರು ಕ್ರಿ.ಶ.ಪೂ. ೨೦೦೦ ವರ್ಷಗಳ ಹಿಂದೆ.

ಭಾಷೆಯನ್ನು ಶಿಕ್ಷಣ ಕ್ರಮದಲ್ಲಿ ಸೇರಿಸುವಾಗ್ಗೆ ಜಾತಿಯನ್ನಾಗಲಿ, ಗುಣ ಗಿಟ್ಟಿಸುವ ತಂತ್ರವನ್ನಾಗಲಿ ನೋಡದೆ, ವ್ಯಾವಹಾರಿಕ ಉಪಯುಕ್ತತೆಯಿಂದ ಅಳತೆ ಮಾಡಿ ನೋಡಬೇಕು. ಅಂತರರಾಷ್ಟ್ರೀಯ ಭಾಷೆ, ರಾಷ್ಟ್ರೀಯ ಭಾಷೆ, ಮಾತೃಭಾಷೆಗಳ ತರುವಾಯ ನಾಲ್ಕನೆಯದಾಗಿ ಇನ್ನುಳಿದ ಭಾಷೆಗಳು ಬರುವುದು ವಿದಿತ. ಈ ರೀತಿ ಗಣನೆ ಮಾಡಿದಾಗ್ಗೆ ಮನೆಯಿಂದ ಜಾಗತಿಕ ಮಾರುಕಟ್ಟೆಯವರೆಗೆ ಸಂಸ್ಕೃತವು ನಾಲ್ಕನೆಯ ಸ್ಥಾನದಿಂದ ಮೇಲೇಳಲು ಶಕ್ಯವಿಲ್ಲ. ಇದರರ್ಥ ಸಂಸ್ಕೃತ ಕನಿಷ್ಠ, ಅದನ್ನು ಪೂರ್ತಿ ಕೈಬಿಡಬೇಕು ಎಂದಲ್ಲ. ಜೀವನ ಮೌಲ್ಯಗಳು, ಜೀವನ ರೀತಿ ನೀತಿಗಳು ಮಾರ್ಪಾಡಾದಂತೆ ಭಾಷಿಕ ಉಪಯುಕ್ತತೆಯಲ್ಲಿಯೂ ಮಾರ್ಪಾಡಾಗುತ್ತದೆ. ಅದಕ್ಕನುಗುಣವಾಗಿ ಸಂಸ್ಕೃತವು ಈಗ ತೃತೀಯವಲ್ಲ, ಚತುರ್ಥ ಸ್ಥಾನಕ್ಕೆ ಇಳಿದಿದೆ.

೧೦೦ ಗುಣಗಳ ಸಂಸ್ಕೃತವನ್ನು ೮ನೆಯ ವರ್ಗದಿಂದ ೧೦ನೆಯ ವರ್ಗದವರೆಗೆ ಐಚ್ಛಿಕ ವಿಷಯವನ್ನಾಗಿಸಬೇಕು. ಅಂದರೆ ಆ ಭಾಷೆಗೆ ಮಾನ್ಯತೆಯೂ ಸಿಕ್ಕಂತಾಗುವದು.

ಇಚ್ಛೆಯುಳ್ಳವರಿಗೆ ಅನುವೂ ದೊರಕುವದು ಹಾಗೂ ಅದು ಭಾರವೆನಿಸಿದವರಿಗೆ ಅದನ್ನು ಕೈಬಿಡಲೂ ಬರುವದು.

ರಾಷ್ಟ್ರೀಯ ಭಾಷೆಯಾದ ಹಿಂದಿಗೆ ಸದ್ಯಕ್ಕೆ ೫೦ ಗುಣಗಳ ತೃತೀಯ ಸ್ಥಾನವಿದೆ. ಇದರ ಬದಲು ಮಾತೃಭಾಷೆ, ಹಾಗೂ ಅಂತರರಾಷ್ಟ್ರೀಯ ಭಾಷೆಯಷ್ಟೇ ಮಹತ್ವವನ್ನು ನೀಡಿ ಇದಕ್ಕೂ ೧೦೦ ಗುಣಗಳ ಕಡ್ಡಾಯದ ಪ್ರಥಮಸ್ಥಾನ ನೀಡುವದು ರಾಷ್ಟ್ರೀಯ ಪ್ರಜ್ಞೆಯ ಪ್ರಕಾರ ಮೇಲು.

ಭಾಷೆಗಳ ಜೊತೆಗೆ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳು ಪ್ರಕೃತಿ, ವಿಜ್ಞಾನಗಳು, ಸಾಮಾಜಿಕ ವಿಜ್ಞಾನಗಳು ಹಾಗೂ ಗಣಿತ ವಿಷಯಗಳನ್ನು ಸಹ ಕಲಿಯಬೇಕಾಗಿದೆ. ಪ್ರಕೃತಿ ವಿಜ್ಞಾನಗಳಲ್ಲಿ ಮುಖ್ಯವಾಗಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಪ್ರಾಣಿ ಹಾಗೂ ಸಸ್ಯಶಾಸ್ತ್ರಗಳಿಗೆ ಪ್ರಾಮುಖ್ಯತೆ ನೀಡಿದಂತಿದೆ. ೮ನೆಯ ವರ್ಗದಿಂದ ೧೧ನೆಯ ವರ್ಗದ ವರೆಗೆ ಇವೆಲ್ಲ ಸೇರಿ ೧೦೦ ಗುಣಗಳ ವಿಜ್ಞಾನದ ವಿಷಯವಿರುವದು. ಸಾಮಾಜಿಕ ವಿಜ್ಞಾನಗಳಲ್ಲಿ ಇತಿಹಾಸ, ಭೂಗೋಲ, ಪೌರನೀತಿ ಹಾಗೂ ಆಡಳಿತ ವಿಷಯಗಳನ್ನು ಒಳಗೊಂಡು ೧೦೦ ಗುಣಗಳ ಒಂದು ವಿಷಯವಿದೆ. ಅದೇ ರೀತಿ ಅಲ್ಜಿಬ್ರಾ, ಭೂಮಿತಿಗಳನ್ನೊಳಗೊಂಡ ಗಣಿತ ವಿಷಯವು ೧೦೦ ಗುಣದ್ದಿರುವದು.

ಡ್ರಾಯಿಂಗ್, ವೃತ್ತಿ (Craft) ಶಿಕ್ಷಣ ಹಾಗೂ ಶಾರೀರಿಕ ಶಿಕ್ಷಣಗಳು ಐಚ್ಛಿಕ ವಿಷಯಗಳಾಗಿರುವವು. ಇವು ಮೂರೂ ವಿಷಯಗಳು ಪರೀಕ್ಷಾರಹಿತ ಕಡ್ಡಾಯ ವಿಷಯಗಳಾಗಿರಬೇಕು. ಇವು ವಿದ್ಯಾರ್ಥಿಗಳ ಜೀವನಕ್ಕೆ ಅತ್ಯವಶ್ಯ. ಆದರೆ ಶೈಕ್ಷಣಿಕ ಸ್ಪರ್ಧೆಯಲ್ಲಿ ಅವು ಆತಂಕವಾಗಬಾರದು. ಡ್ರಾಯಿಂಗ್ ಕೇವಲ ಕಲೆಯ ದೃಷ್ಟಿಯಿಂದಷ್ಟೇ ಅವಶ್ಯಕವಾಗಿರದೆ ಅದು ವಿಜ್ಞಾನ ವಿಷಯಕ್ಕೆ ಹಾಗೂ ಭಾವೀ ಇಂಜನಿಯರ ಅಥವಾ ಇತರ ಯಾಂತ್ರಿಕಜ್ಞ ಅಥವಾ ತಾಂತ್ರಿಕಜ್ಞನಿಗೆ ಅನುಕೂಲವಾಗುವದು. ವೃತ್ತಿ ಶಿಕ್ಷಣಗಳಲ್ಲಿ ಟಾಯಿಪಿಂಗ್, ಶಾರ್ಟಹ್ಯಾಂಡ್, ಮುದ್ರಣ, ಗೌಂಡಿ, ಒಕ್ಕಲುತನ, ಕಂಬಾರಿಕೆ, ಕುಂಬಾರಿಕೆ, ಹೊಲಿಗೆ, ಬಡಿಗತನ, ಅಕ್ಕಸಾಲಿಗ ಮುಂತಾದವುಗಳಿಗೆ ಶಿಕ್ಷಣದಲ್ಲಿ ಅನುವುಮಾಡಿ ಕೊಟ್ಟಷ್ಟು ಸಮಾಜಕ್ಕೆ ಅನುಕೂಲ. ಕಾರಣವೆಂದರೆ ಇವು ಸ್ವಂತ ಉದ್ಯೋಗಕ್ಕೆ ಅನುವುಮಾಡಿಕೊಡುವವು. ನೌಕರಿಗಾಗಿ ಪರಾವಲಂಬನೆಯಾಗಬೇಕಿಲ್ಲ. ಇನ್ನು ಶಾರೀರಿಕ ಶಿಕ್ಷಣವಂತೂ ಅತ್ಯವಶ್ಯ. ಇದು ಪರೀಕ್ಷೆ ಅಥವಾ ನೌಕರಿಯ ದೃಷ್ಟಿಯಿಂದಲ್ಲ. ಮುಖ್ಯವಾಗಿ ಸುಖದಿಂದ ಬದುಕುವ ಆರೋಗ್ಯದ ದೃಷ್ಟಿಯಿಂದ ಅತ್ಯವಶ್ಯ. ಪೋಲೀಸ, ಮಿಲಟರಿ ಸೇವೆಗಳಿಗೆ ಸದೃಢತೆ ಅತ್ಯವಸ್ಯ. ಇನ್ನುಳಿದೆಲ್ಲ ಸೇವೆಗಳಿಗೂ ಶರೀರದ ಆರೋಗ್ಯವು ಅತ್ಯವಶ್ಯ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಆಟಗಳ ದೃಷ್ಟಿಯಿಂದ ಪ್ರಾಥಮಿಕ ಮಟ್ಟದಿಂದಲೇ ಒಳ್ಳೆಯ ಅಭ್ಯರ್ಥಿಗಳನ್ನು ಗುರುತಿಸಿ ಅವರಿಗೆ ಉತ್ತೇಜನ ಕೊಡುವುದು ಶ್ರೇಷ್ಠ. ಸದ್ಯಕ್ಕೆ ಓಲಿಂಪಿಕ್, ಏಶಿಯನ್ ಮತ್ತು ಅಂತರರಾಷ್ಟ್ರೀಯ ಆಟದ ರಂಗದಲ್ಲಿ ಭಾರತವು ಸಾಕಷ್ಟು ಹಿಂದಿದೆ.

ಪರೀಕ್ಷಾ ವಿಧಾನ :

ವಾರ್ಷಿಕ ಪರೀಕ್ಷಾ ವಿಧಾನವು ಸದ್ಯಕ್ಕೆ ತೀರ ಅಸ್ತವ್ಯಸ್ತವಾಗಿ ಸಡಿಲುಗೊಂಡಿದೆ. ಪರೀಕ್ಷಾ ಪೂರ್ವದಲ್ಲಿಯೇ ಪ್ರಶ್ನೆ ಪತ್ರಿಕೆಗಳು ಮಾರಾಟಗೊಂಡ ಎಷ್ಟೋ ಪ್ರಕರಣಗಳು ಬೆಳಕು ಕಂಡಿವೆ. ಪರೀಕ್ಷಾ ಮಂದಿರದಲ್ಲಿ ಸಾಮೂಹಿಕ ಕಾಪಿ ಹೊಡೆಯುವದು ಸ್ವಾಭಾವಿಕವಾಗಿದೆ. ತಮ್ಮ ತಮ್ಮ ಮಾಧ್ಯಮಿಕ ಶಾಲೆಗಳ ಮ್ಯಾಟ್ರಿಕ್ ಪರಿಣಾಮ ವನ್ನು ಉತ್ತಮಗೊಳಿಸುವ ಸ್ಪರ್ಧೆಯುಲ್ಲಿ ಸ್ವತಃ ಶಿಕ್ಷಕರೇ ಸಾಮೂಹಿಕವಾಗಿ ನಕಲು ಮಾಡಿಸುವ ವಿಷಯು ಹೊಸದಲ್ಲ. ಕರೆ ಹಲಿಗೆಯು ಮೇಲೆ ಸ್ವತಃ ಶಿಕ್ಷಕರೇ ಗಣಿತ ವಿಷಯುಗಳನ್ನು ಬಿಡಿಸಿ ಸಾಮೂಹಿಕವಾಗಿ ನೋಡಿ ಬರೆಯುಲು ಹೇಳುವ ಸಂಗತಿಗಳು ಸಾಕಷ್ಟು ಹೊರಬಿದ್ದಿವೆ. ತಮ್ಮ ಶಾಲೆಗಳಿಗೆ ಹೆಚ್ಚು ವಿದ್ಯಾರ್ಥಿಗಳನ್ನು ಜಗ್ಗುವ ವಿಧಾನಗಳಲ್ಲಿ ಇದೂ ಒಂದಾಗಿದೆ. ಇಲ್ಲವಿದ್ದರೆ ವಿದ್ಯಾರ್ಥಿಗಳು ಕಡಿಮೆಯಾದರೆ ಶಾಲೆಯು ಅಸ್ತಿತ್ವಕ್ಕೆ ಸಂಚಕಾರ ಸಂಭವವುಂಟು. S.S.L.C. ಯುಲ್ಲಿ ಇಂತಿಷ್ಟು ಶೇಕಡಾ ಪರಿಣಾಮುವಾದರೇ ಸರಕಾರಿ ಸಹಾಯುಧನ, ಇಲ್ಲದಿದ್ದರೆ ಅದರಲ್ಲಿ ಖೋತ ಎಂಬ ಕಾಯುದೆಯೂ ಇನ್ನಷ್ಟು ನಕಲುವಸಾಡಲು ಅನುವುಮಾಡಿಕೊಟ್ಟಿತು.

೮ ಹಾಗೂ ೯ನೆಯ ವಾರ್ಷಿಕ ಪರೀಕ್ಷೆಗಳು ವರ್ಗದ ಪರೀಕ್ಷೆಗಳಾಗಿವೆ. ಇಲ್ಲಿಯುೂ ಪರೀಕ್ಷೆಗಳು ಕಡ್ಡಾಯ ಹಾಗೂ ಕಠಿಣವಾಗಿರಬೇಕು. ಕನಿಷ್ಠ ಶೇಕಡಾ ೩೫ ರಷ್ಟು ಗುಣಗಳನ್ನು ಎಲ್ಲ ವಿಷಯುಗಳಲ್ಲಿ ತಕ್ಕೊಂಡು ಪಾಸಾಗಿದ್ದರೆ ಮಾತ್ರ ಮುಂದಿನ ವರ್ಗಕ್ಕೆ ಹೋಗಲು ಅನುಮತಿರಬೇಕು. ನಪಾಸಾದರೂ ಮುಂದಿನ ವರ್ಗಕ್ಕೆ ನೂಕುವ ಪದ್ಧತಿ ಇರಬಾರದು.

ಶಿಕ್ಷಕರು :

ಮಾಧ್ಯಮಿಕ ಶಾಲಾ ಶಿಕ್ಷಕರು ಸಾಮಾನ್ಯವಾಗಿ ಮಧ್ಯಮ ವರ್ಗದಲ್ಲಿ ಬರುವರು. ಮಧ್ಯಮ ವರ್ಗ ಸಾಮಾನ್ಯವಾಗಿ ತ್ರಿಶಂಕುವಿನಲ್ಲಿರುವದು. ಮೇಲ್ಮಟ್ಟಕ್ಕೆ ಹೋಗುವ ಶಕ್ತಿಯಿಲ್ಲ, ಕೆಳಮಟ್ಟದಲ್ಲಿ ಇರಲು ಮನಸಿಲ್ಲ. ಮಾಧ್ಯಮಿಕ ಶಾಲೆಗಳು ದೊಡ್ಡ ಹಳ್ಳಿ ಪಟ್ಟಣಗಳಲ್ಲಿ ಇರುವುದರಿಂದ ಮಾಧ್ಯಮಿಕ ಶಾಲಾ ಶಿಕ್ಷಕರು ಪಟ್ಟಣದ ಎಲ್ಲ ಖರ್ಚು ಗಳನ್ನು ನಿಭಾಯಿಸಬೇಕಾಗುವದು. ಉದಾ : ಬಾಡಿಗೆ, ಉರುವಲ, ಹೈನ, ಸುಧಾರಿತ ಬಟ್ಟೆ, ಮನರಂಜನೆ, ಕನಿಷ್ಟ ಐಷಾರಾಮಿ ವಸ್ತುಗಳು ಮುಂತಾದವುಗಳು. ಆಗಿನ ಶಿಕ್ಷಣ ಮಂತ್ರಿ ಶ್ರೀ ಎಸ್. ಆರ್. ಕಂಠಿಯುವರನ್ನು ಶಿಕ್ಷಕರು ಸದಾ ಸ್ಮರಿಸಲೇಬೇಕು. ಚೆಕ್ಕಿನ ಮುಖಾಂತರ ವೇತನ ಹಾಗೂ ತ್ರಿವಿಧ ಸೌಲಭ್ಯಗಳನ್ನು ಪಡೆಯುತ್ತಿರುವರು. ಚೆಕ್ಕಿನ ಮೇಲೆಯುೂ ಚೆಕ್ಕಿನ ಕಣ್ಣನ್ನು ಕೆಲ ವ್ಯವಸ್ಥಾಪಕ ಮಂಡಳಿಗಳು ಬಿಡುವವು! ಅಂಥ ಶಿಕ್ಷಕರ ಪರಿಸ್ಥಿತಿ ಚಿಂತಾಜನಕ.

ಮಾಧ್ಯಮಿಕ ಶಿಕ್ಷಕನು ಪ್ರಾಥಮಿಕ ಶಿಕ್ಷಕನಿಗಿಂತ ಕೆಲ ವಿಷಯಗಳಲ್ಲಿ ಹೆಚ್ಚು ಸುಧಾರಿತನೆಂದೇ ಹೇಳಬೇಕು. ತನ್ನ ಕಾಯಕದಲ್ಲಿ ಹೆಚ್ಚು ನಿಯಮ ನಿಷ್ಠೆಯುಳ್ಳವ ನಿರುವ. ತನ್ನ ಸಂಸಾರವನ್ನು ಸ್ಥಿಮಿತದಲ್ಲಿಟ್ಟಿರುವ. ಅಷ್ಟೊಂದು ಸಾಲ, ರಾಜಕಾರಣದಲ್ಲಿ ಮುಳುಗಿಲ್ಲ. ಮತ್ತೊಬ್ಬ ಶಿಕ್ಷಕನಿಗೆ ವಿಷಹಾಕುವಷ್ಟು ಮಟ್ಟಕ್ಕೆ ಇಳಿದಿಲ್ಲ. ವಿದ್ಯಾರ್ಥಿ ಗಳಿಗೆ ಸ್ಫೂರ್ತಿ, ಚೇತನ ಹೆಚ್ಚು ನೀಡುತ್ತಿರುವ. ಒಟ್ಟಿನಲ್ಲಿ ಮಾಧ್ಯಮಿಕ ಶಾಲೆ ತಲೆ ಎತ್ತಿ ನಿಲ್ಲುವಂತ ಮೌಲ್ಯ, ಮಾನ, ಶ್ರಮಗಳನ್ನು ಮಾಧ್ಯಮಿಕ ಶಾಲಾ ಶಿಕ್ಷಕ ನೀಡುತ್ತಿರುವ.

ಸಧ್ಯಕ್ಕೆ ಮುಖ್ಯಾಧ್ಯಾಪಕರ ವೇತನ ರೂ' ೬೬೦ ರಿಂದ ರೂ. ೧೩೫೦, ತರಬೇತಿ ಪಡೆದ ಶಿಕ್ಷಕರ ವೇತನ ರೂ. ೫೦೦ ರಿಂದ ರೂ, ೧೨೦೧, ವೃತ್ತಿ ಹಾಗು ಶಾರೀರಿಕ ಶಿಕ್ಷಣದ ಶಿಕ್ಷಕರ ವೇತನ ರೂ. ೩೪೦ ರಿಂದ ರೂ. ೮೦೦ ಇರುವದು. ನಿವೃತ್ತ ವಯಸ್ಸನ್ನು ೫೮ಕ್ಕೆ ಏರಿಸಿದರೆ ಅವರ ಸಮಸ್ಯೆಗಳೆಲ್ಲ ನಿವಾರಣೆಯಾದಂತೆಯೇ. ಮುಖ್ಯಾಧ್ಯಾಪಕ ರನ್ನು ಸೇವಾ ಜೇಷ್ಠತೆಯ ಮೇರೆಗೆ ಆಯ್ಕೆ ಮಾಡುವದು ಒಳ್ಳೆಯದು. ತರಬೇತಿ ಪಡೆದವರನ್ನೇ ಶಿಕ್ಷಕ ಜಾಗೆಗೆ ತಕ್ಕೊಳ್ಳುವ ಒಳ್ಳೆಯ ಕಡ್ಡಾಯದ ನಿಯಮವಿದೆ. ನೇಮಕ, ಬಢತಿಗಳಲ್ಲಿ ಸಾಮಾನ್ಯವಾಗಿ ಜಾತಿ ಹಾಗೂ ರಾಜಕಾರಣ ತಲೆಹಾಕುವವು. ಅವಕ್ಕೆ ಸದ್ಯಕ್ಕೆ ಭಾರತದುದ್ದಕ್ಕೂ ಮದ್ದಿಲ್ಲ.

ಶಿಕ್ಷಕರಲ್ಲದೆ, ಮಾಧ್ಯಮಿಕ ಶಾಲೆಯಲ್ಲಿ ಕಾರಕೂನ, ಸಿಪಾಯಿ, ರಾತ್ರಿ ಕಾಯುವವ ಮುಂತಾದವರಿರುವರು. ಅವರೆಲ್ಲ ಶಿಕ್ಷಕವೃಂದಕ್ಕೆ ನಿಷ್ಠೆಯಿದ್ದಷ್ಟೂ ಒಳ್ಳೆಯದು. ಆದರೆ ಹೆಚ್ಚಾಗಿ ಶಿಕ್ಷಕರೇ ಅವರಿಗೆ ನಿಷ್ಠೆಯಿಂದರಬೇಕಾದ ಅವಹೇಳನದ ಪ್ರಸಂಗಗಳು ಕಂಡುಬರುವುದೇ ಹೆಚ್ಚು. ಕಾರಕೂನರು ಹೆಚ್ಚಾಗಿ ಸರಕಾರ ಹಾಗೂ ವ್ಯವಸ್ಥಾಪಕ ಮಂಡಳಿಗೆ ಹೆಚ್ಚು ನಿಷ್ಠೆಯಿಂದಿರುವದು ಕಂಡುಬರುವದು.

ವಿದ್ಯಾರ್ಥಿಗಳು :

ಶಿಕ್ಷಣದಲ್ಲಿ ನಿಜವಾದ ಆಸಕ್ತಿ ಮೂಡುವದು ಮಾಧ್ಯಮಿಕ ಹಂತದಲ್ಲಿ. ಪ್ರಾಥಮಿಕದಲ್ಲಿ ಪಾಲಕರ ಹಾಗೂ ಶಿಕ್ಷಕರ ಜೋರೇ ಹೆಚ್ಚಿರುವದು. ಆದರೆ ಮಾಧ್ಯ ಮಿಕದಲ್ಲಿ ಸ್ವತಃ ವಿದ್ಯಾರ್ಥಿಯೇ ಆಸಕ್ತಿ ವಹಿಸುವ ಹೊಸ ಚೇತನ ಪಡೆಯುವ. ಇಲ್ಲಿ ಆತನಿಗೆ ಒಳ್ಳೆಯ ಸ್ಪರ್ಧೆ ಇರುವದು. ಒಳ್ಳೆಯ ಸ್ಪರ್ಧೆ ಪ್ರಗತಿಗೆ ಅನುಕೂಲ. ಕೆಲ ಹುಡುಗ ಹುಡುಗಿಯರು ಐಷಾರಾಮಿ ಚೈನಿಗೆ ಇಳಿದು ಹಾಳಾಗುವ ಪ್ರಸಂಗ ಉಂಟು. ಹೊಸ ಹರೆಯಕ್ಕೆ, ಲೈಂಗಿಕ ಚಿತ್ರಗಳಿಗೆ ಮನ ತಳಮಳಗೊಳ್ಳುವದು ಈ ಹಂತದಲ್ಲಿಯೇ. ಬಾಲಕಿಯರು ಹೆಚ್ಚು ಚಂಚಲತೆಗೆ ಬಲಿಬೀಳುವದು ಇಲ್ಲಿಯೇ. ಹಳ್ಳಿಗಳಿಂದ ಬರುವ ಬಾಲಕ, ಬಾಲಕಿಯರಿಗೆ ಇಂಥ ವಾತಾವರಣ ಒಂದು ಆಹ್ವಾನ. ಇಲ್ಲಿ ಸಂಯಮದಿಂದ,

ನಿಷ್ಠೆಯಿಂದ ಹಾಗೂ ಸ್ಪರ್ಧೆಯಿಂದ ಜಿದ್ದಿಗಿಳಿದು ಓದಿದರೇ ಅವರು ಜೀವನದುದ್ದಕ್ಕೂ ಜಯಗಳಿಸುವರು. ಇಲ್ಲಿ ಬಿದ್ದರೆ ಕೊನೆಯುವರೆಗೂ ಬಿದ್ದುಕೊಂಡೇ ಇರಬೇಕಾಗ ಬಹುದು.

ಪಾಲಕರು :

ವಿದ್ಯಾರ್ಥಿಗಳ ಪಾಲನೆ ಪೋಷಣೆಯ ಹೊಣೆ ಹೊತ್ತವರು ಪಾಲಕರು. ವಿದ್ಯಾರ್ಥಿಗಳ ಬೆಳವಣಿಗೆಯಲ್ಲಿ ಅವರ ಪಾತ್ರ ಮುಖ್ಯ. "ಮನೆಯಿಂದ ಮಾರು ಗೆದ್ದೆ," "ಮನೆಯೇ ಮೊದಲು ಪಾಠಶಾಲೆ," "ತಂದೆ ತಾಯಿಗಳಂತೆ ಮಕ್ಕಳು"-ಇವೆಲ್ಲ ಸುಳ್ಳಲ್ಲ. ಕೆಟ್ಟ ಚಟದ, ಅವಿಚಾರಿ ತಂದೆ ತನ್ನ ಮಕ್ಕಳ ಮುಂದೆ ಸ್ಥೈರ್ಯದಿಂದ ನಿಲ್ಲಲಾರ. ಇನ್ನು ಬುದ್ಧಿವಾದ ಹೇಳುವದಂತೂ ದೂರ. ಶಿಕ್ಷಿತರೆನಿಸುವ ನೌಕರಸ್ಥ ಪಾಲಕರಿಗೆ ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ಲಕ್ಷ್ಯವಹಿಸಲು ವೇಳೆ ಇಲ್ಲ. ಒಮ್ಮೊಮ್ಮೆ ಮನಸ್ಸೂ ಇಲ್ಲ.

ವ್ಯವಸ್ಥಾಪಕ ಮಂಡಳ :

ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಮಾಧ್ಯಮಿಕ ಶಾಲೆಗಳು ಖಾಸಗಿಯಾಗಿವೆ. ಆಯಾ ಭಾಗದ ಸಮಾಜಸುಧಾರಕ ಮುಖಂಡರ ಆಸಕ್ತಿ, ಕಳಕಳಿ. ಒಲವು ಮತ್ತು ಸ್ಪರ್ಧಾತ್ಮಕ ಮಹಾತ್ವಾಕಾಂಕ್ಷೆ ಮುಂತಾದವುಗಳ ಬಲದಿಂದ ಸಾರ್ವಜನಿಕರು ನೀಡಿದ ಧನಸಹಾಯದ ಮೇಲೆ ಎಷ್ಟೋ ಮಾಧ್ಯಮಿಕ ಶಾಲೆಗಳು ತಲೆ ಎತ್ತಿವೆ. ಕೆಲ ನಿರ್ದಿಷ್ಟ ಅವಧಿಯ ನಂತರ ಸರಕಾರವು ಇಂಥವುಗಳಿಗೆ ಧನಸಹಾಯ ಮಾಡುತ್ತಿದೆ. ಶಿಕ್ಷಕರಿಗೆ ತ್ರಿವಿಧ ಸೌಲಭ್ಯಗಳನ್ನು ನೀಡಿರುವುದಲ್ಲದೆ ಪ್ರತಿ ತಿಂಗಳು ಚೆಕ್ಕಿನ ಮುಖಾಂತರ ಶಿಕ್ಷಕರಿಗೆ ನೇರವಾಗಿ ಸರಕಾರವು ವೇತನ ನೀಡುವದು. "ದೇವರು ವರ ಕೊಟ್ಟರೂ ಪೂಜಾರಿ..." ಎನ್ನುವಂತೆ ಕೆಲ ಸಂಸ್ಥೆಗಳು ಅದರ ಮೇಲೂ ಕಣ್ಣುಹಾಕುತ್ತಿರುವ ಸಂದರ್ಭಗಳು ಸಾಕಷ್ಟಿವೆ. ಜಾಗೆಗಳನ್ನು ತುಂಬಿಕೊಳ್ಳುವಾಗ ಕೆಲ ಸಂಸ್ಥೆಗಳು ಸಾವಿರಾರು ಗಟ್ಟಲೆ ದೇಣಿಗೆ ಎತ್ತುವದು ಮನೆಮಾತಾಗಿದೆ. ಆದರೂ ಸರಕಾರ ಸುಮ್ಮನಿದೆ. ಒಬ್ಬ ಕಾರಕೂನ ಕೆಲ ಪೈಸೆ ಲಂಚ ತಿಂದರೆ ಲಂಚ ನಿರೋಧ ವಿಭಾಗ ಅಂಥವನ ಮೇಲೆ ಮುಗಿಬಿದ್ದು ಕೊನೆಗೆ ಅವನನ್ನು ಮನೆಗೂ ಕಳಿಸಬಹುದು. ಆದರೆ ಢಣಾಢಂಗುರ ಸಾವಿರಾರುಗಟ್ಟಲೆ ಹಣದೋಚುವ ಇಂಥ ಸಂಸ್ಥೆಗಳಿಗೆ ಯಾವ ಲಂಗ ಲಗಾಮು ಇರದ್ದು ಒಂದು ಪವಾಡ. ಸಂಸ್ಥೆಗಳಿಗೆ ಆರ್ಥಿಕ ತೊಂದರೆಯಿದ್ದರೆ ಸಾರ್ವಜನಿಕರಿಂದ ದೇಣಿಗೆ ಎತ್ತಲಿ, ಸಾಲ ಪಡೆಯಲಿ ಅಥವಾ ಅಂಥ ಪ್ರಸಂಗದಲ್ಲಿ ಸರಕಾರವು ಸಹಾಯ ಮಾಡಲಿ. ಆದರೆ ನೇಮಕ, ಬಢತಿ ಸಂಬಂಧದಲ್ಲಿ ದೇಣಿಗೆಯ ಪಿಡುಗು ಇರಬಾರದು.

ಕೆಲ ಸಂಸ್ಥೆಗಳಿಗೆ ದೊಡ್ಡಿಸ್ತನದ ರೋಗ ಬೇರೆ! ಶಿಕ್ಷಕರು ಸಂಸ್ಥೆಯ ಆಡಳಿತ ವರ್ಗಕ್ಕೆ ಸದಾ ವಿನೀತರಾಗಿರಬೇಕು! ಶಾಲೆಯಲ್ಲಿ ವರ್ಗಗಳನ್ನು ಬಿಟ್ಟಾದರೂ ಚೇರ್ಮನ್‌ರ ಮನೆಯಲ್ಲಿ ಮಕ್ಕಳಿಗೆ ಟ್ಯೂಶನ್ ಪುಕ್ಕಟ ಹೇಳಬೇಕು. ಮುಖ್ಯಾಧ್ಯಾಪಕ ರಂತೂ ಸದಾ ಇವರಿಗೆ ಸಂಸ್ಥೆಯಲ್ಲಿ ಸ್ವಾಗತಕೋರಿ ಅವರ ಚಟಗಳ ಭಾರವನ್ನು ಹೊರ ಬೇಕು. ಪ್ರತಿಯೊಂದು ದಿನನಿತ್ಯದ ಆಡಳಿತಕ್ಕೂ ಮುಖ್ಯಾಧ್ಯಾಪಕರು ಚೇರಮನ್ನರ ಮನೆಯ ಬಾಗಿಲ ಕಾಯಬೇಕು. ಮುಖ್ಯಾಧ್ಯಾಪಕರ ಹಣೆಯ ಬರಹವೇ ಇಷ್ಟಾದರೆ ಇನ್ನು ಸಹಶಿಕ್ಷಕ, ಸಹಶಿಕ್ಷಕಿಯರ ಗತಿ? ಇಂಥ ವಾತಾವರಣದ ಸಂಸ್ಥೆಯ ಶಿಕ್ಷಣ ಪ್ರಗತಿ?

ಇಷ್ಟೆಲ್ಲ ಸಮಸ್ಯೆಗಳ ಮಧ್ಯದಿಂದ ಮಾಧ್ಯಮಿಕ ಶಿಕ್ಷಣ ಪಾರಾಗಬೇಕಿದೆ. ಪಾಲಕ ರಲ್ಲಿ, ಶಿಕ್ಷಕರಲ್ಲಿ ಹಾಗೂ ವ್ಯವಸ್ಥಾಪಕ ಮಂಡಳಿಯಲ್ಲಿ ನೈತಿಕ ಮೌಲ್ಯಗಳು ಮೂಡಿಬಂದರೆ ಕೇವಲ ಇಂಥ ಸಂಸ್ಥೆಗಳಷ್ಟೇ ಅಲ್ಲ ಇಡೀ ಸಮಾಜ ಮುನ್ನಡೆಯುವದು. ಇಂಥ ಆದರ್ಶಗಳನ್ನು ನೋಡಿ ವಿದ್ಯಾರ್ಥಿಗಳು ತಮ್ಮ ಜೀವನ ರೂಪಿಸಿ ಕೊಳ್ಳುವರು. ಆಗ್ಗೆ ಶಿಕ್ಷಣ ತನ್ನ ಗುರಿಮುಟ್ಟಿದಂತಾಗುವದು.

ಭಾರತದಲ್ಲಿ ತೈಲೋತ್ಪಾದನೆಯ ನಿರೀಕ್ಷೆಗಳು*

● ಎನ್. ಎಸ್. ಹಿರೇಮಠ

ಪ್ರತಿಯೊಂದು ದೇಶದ ಸಮಗ್ರ ಆರ್ಥಿಕ ಪ್ರಗತಿಯಲ್ಲಿ ಶಕ್ತಿ ಪ್ರಮುಖ ಪಾತ್ರ ಹೊಂದಿರುತ್ತದೆ. ವಿಶ್ವದ ನಿಸರ್ಗದತ್ತ ಶಕ್ತಿಯ ಸಂಪನ್ಮೂಲಗಳು ಭೌಗೋಲಿಕವಾಗಿ ಎಲ್ಲ ದೇಶಗಳಲ್ಲಿ ಸಮಾನವಾಗಿ ಹಂಚಲ್ಪಟ್ಟಿಲ್ಲ. ಆದುದರಿಂದ ಶಕ್ತಿ ಸಂಪನ್ಮೂಲ ಶ್ರೀಮಂತ ಹಾಗೂ ಬಡ ದೇಶಗಳ ನಡುವೆ ಆರ್ಥಿಕ ಪೈಪೋಟಿ ನಡೆಯುವುದು ಸಹಜ. ಇಂಥ ಸ್ಪರ್ಧೆಯಲ್ಲಿ ಸಂಪನ್ಮೂಲ ಸಂಪನ್ನ ರಾಷ್ಟ್ರಗಳದೇ ಮೇಲುಗೈ. ಸಧ್ಯದ ವಿಶ್ವದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಇಂಥ ದೇಶಗಳು ಅಭಿವೃದ್ಧಿ ಹೊಂದಿದ ಶ್ರೀಮಂತ ಹಾಗೂ ಅಭಿವೃದ್ಧಿಶೀಲ ಬಡ ದೇಶಗಳ ಸಮಸ್ಯೆಗಳನ್ನು ಅರಿಯದೇ ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿವೆ. ತತ್ಫಲವಾಗಿ ತೃತೀಯ ವಿಶ್ವದ ದೇಶಗಳ ಆರ್ಥಿಕ ಸ್ಥಿತಿ ತೀರ ಹದಗೆಡುತ್ತಿರುವುದು ನಿಜವಾಗಿಯೂ ಶೋಚನೀಯ. ಈ ಶತಮಾನದ ಅರವತ್ತರ ದಶಕದಲ್ಲಿಯೇ ಅಮೇರಿಕೆ ಹಾಗೂ ಕೆಲ ದೇಶಗಳ ತಜ್ಞರು ಶಕ್ತಿಯ ತೊಂದರೆಯ ಮುನ್ಸೂಚನೆಗಳನ್ನು ಕೊಟ್ಟಿದ್ದರು. ಆದರೆ ಆ ಸಮಸ್ಯೆಯನ್ನು ನಾವು ಗಂಭೀರವಾಗಿ ಪರಿಗಣಿಸಲಿಲ್ಲ. ೧೯೭೩ರ ಅಕ್ಟೋಬರದಲ್ಲಿ ಪೆಟ್ರೋಲಿಯಂ ನಿರ್ಯಾತ ದೇಶಗಳು ಒಮ್ಮಿಂದೊಮ್ಮೆಲೆ ತೈಲದ ಬೆಲೆಯನ್ನು ಪ್ರತಿ ಬ್ಯಾರಲ್ಲಿಗೆ ಪ್ರಚಲಿತವಿದ್ದ ಬೆಲೆಯ ನಾಲ್ಕು ಪಟ್ಟಿಗಿಂತ ಹೆಚ್ಚಾಗಿ ಏರಿಸಿದಾಗ ಬೆಲೆಯೇರಿಕೆಯ ಬಿಸಿ ತಗಲಿ ಎಲ್ಲರೂ ಎಚ್ಚತ್ತೆವು. ಆಗಲೇ ನಮಗೆ ಶಕ್ತಿಯ ಬಿಕ್ಕಟ್ಟಿನ ನೈಜತೆಯ ಅರಿವಾದುದು. ತೈಲ ಸಂಪನ್ನ ರಾಷ್ಟ್ರಗಳು ಮೇಲಿಂದ ಮೇಲೆ ಬೆಲೆ ಏರಿಸುತ್ತಿರುವದರಿಂದ ಶಕ್ತಿಯ ಬಿಕ್ಕಟ್ಟು ಈ ದಶಕದ ಅತಿ ಮುಖ್ಯ ಜ್ವಲಂತ ಸಮಸ್ಯೆಯಾಗಿದೆ. ಇದು ಇಡೀ ಮಾನವ ಕುಲಕ್ಕೆ ಒಂದು ಘೋರ ಶಾಪವಾಗಿ ಪರಿಣಮಿಸಿದೆಯೆನ್ನುವದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಈ ಭಾರೀ ಆಹ್ವಾನವನ್ನು ತೀವ್ರವಾಗಿ ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ದೀರ್ಘಾವಧಿ ಪರಿಹಾರಗಳನ್ನು ಕಂಡು ಹಿಡಿಯದಿದ್ದರೆ ಮುಂಬರುವ ದಶಕಗಳಲ್ಲಿ ಈ

* ಬಾನುಲಿಯಲ್ಲಿ ೬-೮-೧೯೮೦ ರಂದು ಬಿತ್ತರಿಸಿದ ಭಾಷಣ.

ಸಮಸ್ಯೆ ಇನ್ನೂ ಭಯಂಕರ ರೂಪ ತಾಳುವ ಸಾಧ್ಯತೆ ಇದೆ. ಇದಕ್ಕೆ ಭಾರತವೇನೂ ಅಪವಾದವಲ್ಲ.

ಮುಖ್ಯವಾಗಿ ಶಕ್ತಿಯ ಮೂಲಗಳನ್ನು ವಾಣಿಜ್ಯ ಹಾಗೂ ವಾಣಿಜ್ಯೇತರ ಎಂದು ವಿಂಗಡಿಸಬಹುದು. ಕಲ್ಲಿದ್ದಲು, ಎಣ್ಣೆ, ನೈಸರ್ಗಿಕ ಅನಿಲ, ನ್ಯೂಕ್ಲಿಯರ ಶಕ್ತಿ, ಜಲ ವಿದ್ಯುತ್ತು ಇವು ವಾಣಿಜ್ಯ ಶಕ್ತಿಯ ಮೂಲಗಳು. ಜಲವಿದ್ಯುತ್ತೊಂದನ್ನು ಹೊರತುಪಡಿಸಿ ಇನ್ನುಳಿದವು ನವೀಕರಿಸಲಾಗದ ಶಕ್ತಿ ಮೂಲಗಳು. ವಾಣಿಜ್ಯೇತರ ಶಕ್ತಿಮೂಲಗಳಾದ ಉರುವಲು ಕಟ್ಟಿಗೆ, ಕಸಕಡ್ಡಿ, ಸಗಣಿ, ಗೊಬ್ಬರ, ಗಾಳಿ, ಸೂರ್ಯ, ಪ್ರಾಣಿ, ಮಾನವ ಮೊದಲಾದವು ನವೀಕರಣ ಸಾಧ್ಯತೆಯುಳ್ಳ ಶಕ್ತಿಮೂಲಗಳು.

ಭಾರತದ ವಾಣಿಜ್ಯ ಶಕ್ತಿಯ ಒಟ್ಟು ಬಳಕೆಯಲ್ಲಿ ತೈಲದ ಬಳಕೆ ಅರ್ಧಕ್ಕಿಂತ ಹೆಚ್ಚು. ನಂತರದ ಸ್ಥಾನ ವಿದ್ಯುಚ್ಛಕ್ತಿ ಹಾಗೂ ಕಲ್ಲಿದ್ದಲುಗಳದು. ನಮ್ಮ ದೇಶದ ಒಟ್ಟು ಶಕ್ತಿಯ ಬಳಕೆಯಲ್ಲಿ ತೈಲದ ಬಳಕೆ ೧೯೫೩-೫೪ರಲ್ಲಿ ಪ್ರತಿಶತ ೧೨.೮ ಇದ್ದುದು ೧೯೭೬-೭೭ ರಲ್ಲಿ ೨೬.೬ ಕ್ಕೆ ಏರಿತು. ಇತ್ತೀಚಿನ ವರ್ಷಗಳಲ್ಲಿ ಅದರ ಬಳಕೆಯ ಪ್ರಮಾಣ ಹೆಚ್ಚುತ್ತಲೇ ಇದೆ. ಇದಕ್ಕೆ ಕಾರಣಗಳಿಲ್ಲದಿಲ್ಲ. 'ಶಕ್ತಿ ತೀಕ್ಷ್ಣ ವಿಕಾಸ ವ್ಯೂಹ'ವನ್ನು ಅನುಸರಿಸುತ್ತ ಬಂದಿರುವದು ಒಂದು ಮುಖ್ಯ ಕಾರಣ. ಜನಸಂಖ್ಯೆಯ ಹೆಚ್ಚಳದಿಂದಾಗಿ ಕೃಷಿ, ಉದ್ದಿಮೆ, ಸಾರಿಗೆ ಹಾಗೂ ಗೃಹ ರಂಗಗಳಲ್ಲಿ ತೈಲದ ಬಳಕೆ ಅಧಿಕಗೊಳ್ಳುತ್ತಲಿದೆ. ಏಕೆಂದರೆ ಅದೊಂದು ಅನುಕೂಲಕರವಾದ ದ್ರವರೂಪದಲ್ಲಿರುವ ಶಕ್ತಿಯ ಮೂಲ. ೧೯೫೬ರಲ್ಲಿ ತೈಲದ ಬಳಕೆ ೫.೨೨ ದಶಲಕ್ಷ ಟನ್ನ ಇದ್ದುದು ೧೯೮೦-೮೧ರಲ್ಲಿ ಅದು ೩೩ ದಶಲಕ್ಷ ಟನ್ನಗಳಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ತೈಲದ ಬಳಕೆ ಹೀಗೆಯೇ ಹೆಚ್ಚುತ್ತಾ ಹೋದಲ್ಲಿ ಕ್ರಿ.ಶ. ೨೦೦೦ದ ಹೊತ್ತಿಗೆ ನಮಗೆ ೯೨ ದಶ ಲಕ್ಷ ಟನ್ನು ತೈಲ ಬೇಕಾಗಬಹುದೆಂದು ತಜ್ಞರ ಅಂದಾಜು. ಇಷ್ಟೊಂದು ತೈಲೋ ತ್ಪಾದನೆಯ ಸಾಮರ್ಥ್ಯ ಭಾರತಕ್ಕಿದೆಯೇ ಎಂಬುದು ಪರಿಶೀಲನಾರ್ಹ.

ಭಾರತದಲ್ಲಿ ತೈಲೋತ್ಪಾದನೆ ೧೯೬೧ರಲ್ಲಿ ೫ ಲಕ್ಷ ಟನ್ನಿಂಗಿಂತ ಸ್ವಲ್ಪ ಹೆಚ್ಚಿಗಿದ್ದುದು ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಗೆ ಅದು ೫.೬ ದಶಲಕ್ಷ ಟನ್ನ ಆಯಿತು. ಚತುರ್ಥ ಪಂಚವಾರ್ಷಿಕ ಯೋಜನೆಯ ಕೊನೆಗೆ ಅದು ೭.೯ ದಶಲಕ್ಷ ಟನ್ನಗೆ ಮುಟ್ಟಿತು. ೧೯೮೦-೮೧ ರಲ್ಲಿ ತೈಲೋತ್ಪಾದನೆ ೧೪ ದಶಲಕ್ಷ ಟನ್ನುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ವರ್ಷದ ತೈಲ ಬಳಕೆಯ ಪ್ರಮಾಣದ ಜೊತೆಗೆ ಉತ್ಪಾದನೆಯ ಪ್ರಮಾಣವನ್ನು ಹೋಲಿಸಿ ನೋಡಿದಾಗ ೧೯ ದಶಲಕ್ಷ ಟನ್ನ ತೈಲದ ಕೊರತೆಯಾಗುತ್ತಿರುವದು ಸ್ಪಷ್ಟ. ಈ ಕೊರತೆಯನ್ನು ತುಂಬಿಕೊಳ್ಳಲು ತೈಲ ನಿರ್ಯಾತ ದೇಶಗಳಿಂದ ತೈಲವನ್ನು ಆಮದು ಮಾಡಿಕೊಳ್ಳುವದು ಅನಿವಾರ್ಯ. ತೈಲ ನಿರ್ಯಾತ ದೇಶಗಳು ೧೯೭೩ ರಿಂದೀಚೆ ಐದಾರು ಸಲ ಮನ ಬಂದಂತೆ ತೈಲದ ಬೆಲೆ

ಯನ್ನು ಹೆಚ್ಚಿಸುತ್ತಲೇ ನಡೆದಿವೆ. ಅಕ್ಟೋಬರ ೧೯೭೩ರ ಮೊದಲು ಪ್ರತಿ ಬ್ಯಾರಲ್ಲ ತೈಲದ ಬೆಲೆ ೨.೧೮ ಡಾಲರು ಇದ್ದುದು ಈಗ ಅದು ೧೨ ಡಾಲರನ್ನು ಮೀರಿದೆ. ಇದರಿಂದ ೧೯೭೩ರಲ್ಲಿ ತೈಲಕ್ಕಾಗಿ ೩೩೩ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿದ್ದ ನಾವು ಈಗಿನ ಬೆಲೆಯ ಪ್ರಕಾರ ೫೦೦೦ ಕೋಟಿ ರೂಪಾಯಿಗಳಷ್ಟನ್ನು ವೆಚ್ಚ ಮಾಡ ಬೇಕಾಗಿದೆ. ಆರನೆಯ ಯೋಜನೆಯ ಕೊನೆಗೆ ತೈಲದ ಬೆಲೆಯೇರಿಕೆಯ ಸಾಧ್ಯತೆ ಹಾಗೂ ನಮ್ಮ ಬಳಕೆಯ ಪ್ರಮಾಣ ಇವೆರಡನ್ನೂ ಗಮನದಲ್ಲಿಟ್ಟುಕೊಂಡು ಯೋಚಿಸಿ ದಾಗ ಈ ವೆಚ್ಚ ಏಳು ಸಾವಿರ ಕೋಟಿ ರೂಪಾಯಿಗಳನ್ನು ಮೀರಬಹುದೆಂದು ಅಂದಾಜು ಮಾಡಲಾಗಿದೆ. ನಮ್ಮ ದೇಶದ ನಿರ್ಯಾತ ಗಳಿಕೆ ಆರನೆಯ ಯೋಜನೆಯ ಕೊನೆಗೆ ೮೫೦೦ ಕೋಟಿ ರೂಪಾಯಿಗಳನ್ನು ಮುಟ್ಟಬಹುದು. ಈ ಗಳಿಕೆಯಲ್ಲಿ ತೈಲ ಆಯಾತ ಕ್ಕಾಗಿಯೇ ಏಳು ಸಾವಿರ ಕೋಟಿಗೂ ಮಿಕ್ಕಿ ಹಣವನ್ನು ವಿನಿಯೋಗಿಸಬೇಕಾಗುತ್ತದೆ. ಹೀಗಾಗಿ ಉದ್ದಿಮೆಗಳಿಗೆ ಬೇಕಾಗುವ ಕಚ್ಚಾ ಸರಕು ಹಾಗೂ ಬೇರೆ ಅತ್ಯಾವಶ್ಯಕ ವಸ್ತು ಗಳನ್ನು ಆಮದು ಮಾಡಿಕೊಳ್ಳಲು ಉಳಿಯುವ ಹಣ ಅತಿ ಸ್ವಲ್ಪ. ಇದು ನಮ್ಮ ದೇಶದಲ್ಲಿಯ ತೈಲ ಬಿಕ್ಕಟ್ಟಿನ ಚಿತ್ರವನ್ನು ಕೊಡುತ್ತದೆ.

ಈ ಹಿನ್ನೆಲೆಯಲ್ಲಿ ತೈಲೋತ್ಪಾದನೆಯ ನಿರೀಕ್ಷೆಗಳನ್ನೂ ಕುರಿತು ವಿಚಾರಿಸ ಬಹುದು. ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ, ಆಯಿಲ ಇಂಡಿಯಾ ಲಿಮಿಟೆಡ್ ಮತ್ತು ಆಸಾಮು ತೈಲ ಕಂಪನಿ ಈ ಮೂರೂ ಸಂಸ್ಥೆಗಳು ಸಮಗ್ರ ಭಾರತದಲ್ಲಿ ತೈಲ ನಿಕ್ಷೇಪದ ಅನ್ವೇಷಣೆಯಲ್ಲಿ ತೊಡಗಿದ್ದು ಈಗಾಗಲೇ ಸುಮಾರು ಎರಡು ಸಾವಿರಕ್ಕೂ ಮೇಲ್ಪಟ್ಟು ಬಾವಿಗಳನ್ನು ತೋಡಿವೆ. ಅವುಗಳಲ್ಲಿ ಅಂದಾಜು ಅರ್ಧದಷ್ಟು ಯಶಸ್ವಿ ಯಾಗಿವೆ. ಯಶಸ್ವಿಯಾದವುಗಳಲ್ಲಿ ಕೆಲವು ಎಣ್ಣೆಯ ಬಾವಿಗಳಾದರೆ ಇನ್ನು ಕೆಲವು ಅನಿಲದವು. ನಮ್ಮ ದೇಶದ ಪೂರ್ವ ಮತ್ತು ಪಶ್ಚಿಮ ತೀರ ಪ್ರದೇಶಗಳಲ್ಲಿ ತೈಲ ನಿಕ್ಷೇಪಗಳು ಶ್ರೀಮಂತವಾಗಿರುವದನ್ನು ತೈಲ ಮತ್ತು ನೈಸರ್ಗಿಕ ಅನಿಲ ಆಯೋಗ ಕಂಡು ಹಿಡಿದಿದೆ. ಮತ್ತು ಅಲ್ಲಿ ತೊಂಬತ್ತೈದು ಬಾವಿಗಳನ್ನು ತೋಡುವ ಯೋಜನೆ ಇಟ್ಟುಕೊಂಡಿದೆ. ಇದಕ್ಕೆ ಕನಿಷ್ಟ ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಇದೇ ಆಯೋಗವು ಆಯಿಲ್ ಇಂಡಿಯಾ ಲಿಮಿಟೆಡ್ ಜೊತೆಗೂಡಿ ಬಾಂಬೆ ಹೈ ಮತ್ತು ಜಲಾನಯನ ಪ್ರದೇಶಗಳಲ್ಲಿ ಎಣ್ಣೆ ಕ್ಷೇತ್ರ ಗಳನ್ನು ಅಭಿವೃದ್ಧಿ ಪಡಿಸಿ ಪ್ರತಿವರ್ಷ ೧೨೫ ದಶಲಕ್ಷ ಟನ್ನುಗಳಷ್ಟು ಕಚ್ಚಾ ಎಣ್ಣೆ ಉತ್ಪಾದಿಸಬಹುದಾದ ಸಾಧ್ಯತೆಯನ್ನೂ ತೋರಿಸಿದೆ. ಸಮುದ್ರ ತೀರದಾಚೆಯ ಪ್ರದೇಶ ಹಾಗೂ ಅಂದಮಾನ ನಿಕೋಬಾರ ದ್ವೀಪಗಳಲ್ಲಿ ಕೂಡ ಈ ಆಯೋಗವು ಸಮೀಕ್ಷೆ ನಡೆಸಿ ಅನ್ವೇಷಣಾತ್ಮಕ ಬಾವಿಗಳನ್ನು ತೋಡುತ್ತಿದೆ. ಈ ಪ್ರದೇಶಗಳಲ್ಲಿ ತೈಲ ನಿಕ್ಷೇಪಗಳಿರುವದು ಅನ್ವೇಷಣೆಗಳಿಂದ ಕಂಡು ಬಂದಿದೆ. ಇತ್ತೀಚೆಗೆ ಆಯೋಗವು ಬಂಗಾಲ ಉಪಸಾಗರ, ಕೃಷ್ಣಾ ಗೋದಾವರಿ ಮುಖಜ ಪ್ರದೇಶದಲ್ಲಿ ತೈಲ ನಿಕ್ಷೇಪವನ್ನು

ಕಂಡು ಹಿಡಿದುದು ಹಾಗೂ ಅಂದಮಾನ ದ್ವೀಪಗಳಲ್ಲಿ ನೈಸರ್ಗಿಕ ಅನಿಲವನ್ನು ಪತ್ತೆ ಹಚ್ಚಿದುದು ಆಶಾದಾಯಕ ಸಂಗತಿಯಾಗಿದೆ. ಗೋದಾವರಿ ಮುಖಜ ಪ್ರದೇಶದಲ್ಲಿ ಕೊರೆಯಲಾದ ಮೊದಲ ಬಾವಿಯಲ್ಲಿಯೇ ದಿನಕ್ಕೆ ಸುಮಾರು ಆರುನೂರು ಬ್ಯಾರಲ್ ಎಣ್ಣೆ ದೊರೆಯುವ ಸಂಭವವಿದೆ. ಇದೇ ಪ್ರದೇಶದಲ್ಲಿ ಮತ್ತೊಂದು ಬಾವಿಯನ್ನು ತೋಡುವ ಕಾರ್ಯವು ನಡೆದಿದೆ. ಸಾರ್ವಜನಿಕ ರಂಗದಲ್ಲಿರುವ ಕೋಯಲಿ, ವಿಶಾಖ ಪಟ್ಟಣಂ, ಮಥುರಾ ಮುಂತಾದ ತೈಲ ಶುದ್ಧೀಕರಣ ಕೇಂದ್ರಗಳ ಕಾರ್ಯ ಸಾಮರ್ಥ್ಯ ವನ್ನು ಹೆಚ್ಚಿಸುವ ದಿಶೆಯಲ್ಲಿ ಕೂಡ ಆಯೋಗವು ಅನೇಕ ಕ್ರಮಗಳನ್ನು ಕೈಕೊಂಡಿದೆ. ತೈಲೋತ್ಪಾದನೆಯ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಗಾಗಿ ಸರಕಾರವು ಸಾಕಷ್ಟು ಗಮನ ಹರಿಸಿರುವುದು ಶುಭದಾಯಕ. ಉದ್ಪಾದನೆಯನ್ನು ಹಂಚಿಕೊಳ್ಳುವ ಕರಾರಿನ ಮೇಲೆ ಇರಾಣ, ಇರಾಕ, ತಾಂಝಾನಿಯಾ ಮುಂತಾದ ದೇಶಗಳಲ್ಲಿ ಕೂಡ ತೈಲ ಆಯೋಗವು ತೈಲ ಅನ್ವೇಷಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವದು ಮಹತ್ವದ ಅಂಶ. ತೈಲ ನಿಕ್ಷೇಪಗಳ ಸಂಶೋಧನೆ, ತೈಲೋತ್ಪಾದನೆ ಮತ್ತು ತೈಲ ಶುದ್ಧೀಕರಣ ಹೀಗೆ ಮುಮ್ಮೊಗವಾಗಿ ಪ್ರಯತ್ನಗಳು ಮುಂದುವರೆದಿದ್ದರೂ ೧೯೮೩-೮೪ರ ಹೊತ್ತಿಗೆ ನಮ್ಮ ದೇಶದ ತೈಲೋತ್ಪಾದನೆ ೨೫ ದಶಲಕ್ಷ ಟನ್ನಗಳಷ್ಟಾಗಬಹುದೆಂದು ಅನಿಲ ಆಯೋಗದ ಅಧ್ಯಕ್ಷರಾದ ಶ್ರೀ ಪಿ. ಟಿ. ವೇಣುಗೋಪಾಲರು ಅಭಿಪ್ರಾಯ ಪಟ್ಟಿದ್ದಾರೆ. ತೈಲ ಬಳಕೆಯ ಮೇಲೆ ಸರಕಾರವು ಸಧ್ಯ ವಿಧಿಸಿರುವ ನಿರ್ಬಂಧನೆಗಳನ್ನು ಪಾಲಿಸಿದರೂ ೧೯೮೩–೮೪ರ ವೇಳೆಗೆ ತೈಲದ ಬೇಡಿಕೆ ೩೫ ದಶಲಕ್ಷ ಟನ್ನ ಆಗಬಹುದೆಂದು ಅವರೇ ಹೇಳಿದ್ದಾರೆ. ಇದರಿಂದ ಉತ್ಪಾದನೆ ಹಾಗೂ ಬೇಡಿಕೆಗಳ ಮಧ್ಯದ ಅಂತರ ಹತ್ತು ದಶಲಕ್ಷ ಟನ್ನ ಆಗುತ್ತದೆ. ಇದಕ್ಕೆ ಪರಿಹಾರೋಪಾಯಗಳನ್ನು ಕಂಡು ಹಿಡಿಯುವದು ಅತ್ಯವಶ್ಯ.

ನವೀಕರಿಸಲಾಗದ ತೈಲೋತ್ಪಾದನಾ ಶಕ್ತಿ ಮೂಲಗಳ ಪರಿಮಿತಿ ಹಾಗೂ ಒಂದೇ ಸವನೇ ಹೆಚ್ಚುತ್ತಲಿರುವ ತೈಲ ಶಕ್ತಿಯ ಬೇಡಿಕೆ ಇವುಗಳನ್ನು ಗಮನದಲ್ಲಿರಿಸಿ ಪರಿಹಾರೋಪಾಯಗಳನ್ನು ಸೂಚಿಸಬೇಕಾಗುತ್ತದೆ. ಪೆಟ್ರೋಲಿಯಂ ಪದಾರ್ಥಗಳ ಬೇಡಿಕೆಯಲ್ಲಿಯ ಹೆಚ್ಚಳವನ್ನು ಇಳಿಸುವದಲ್ಲದೇ ಅವುಗಳ ಬಳಕೆಯ ಪ್ರಮಾಣವನ್ನು ಕಡಿಮೆ ಮಾಡಲೇ ಬೇಕು. ಇದರಿಂದ ತೈಲಶಕ್ತಿಯ ಮೂಲಗಳ ಸಂರಕ್ಷಣೆಯ ಜೊತೆಗೆ ಬೇರೆ ವಿಧದ ಶಕ್ತಿಗಳಿಗೆ ಬೇಡಿಕೆ ಬರುವದು. ಮುಂದಿನ ಕೆಲವು ದಶಕಗಳವರೆಗೆ ಕಲ್ಲಿದ್ದಲನ್ನೇ ಪ್ರಾಥಮಿಕ ಶಕ್ತಿಯ ಮೂಲವನ್ನಾಗಿ ಬಳಸಲು ಸಾಧ್ಯವಿರುವದೆಂದು ಇಂಧನ ನೀತಿ ಸಮಿತಿಯ ವರದಿ ತಿಳಿಸುತ್ತದೆ. 'ಲಿಕ್ ಫ್ಯಾಕ್ಶನ್' ವಿಧಾನದ ಮೂಲಕ ಕಲ್ಲಿದ್ದಲನ್ನು ತೈಲವನ್ನಾಗಿ ಮಾರ್ಪಡಿಸಬಹುದು. ಮತ್ತು ಕಲ್ಲಿದ್ದಲಿಂದ ಉರುವಲಕ್ಕೆ ಬೇಕಾಗುವ ಅನಿಲವನ್ನು ತಯಾರಿಸಬಹುದು. ಆದುದರಿಂದ ತೈಲಕ್ಕೆ ಪರ್ಯಾಯವಾಗಿ ಕಲ್ಲಿದ್ದಲಿನ ಉತ್ಪಾದನೆಯನ್ನು ಅಧಿಕಗೊಳಿಸಿ ಬಳಸುತ್ತ ಹೋಗಬೇಕು.

ದೇಶದಲ್ಲಿಯ ಸಂಭವನೀಯ ಜಲವಿದ್ಯುತ್ಪಾದನೆಯಲ್ಲಿ ಅಂದಾಜು ಪ್ರತಿಶತ ಇಪ್ಪತ್ತರಷ್ಟನ್ನೇ ನಾವೀಗ ಉಪಯೋಗಿಸುತ್ತಿದ್ದೇವೆ. ಆಸಾಮ ಹಾಗೂ ಈಶಾನ್ಯ ಭಾಗದಲ್ಲಿ ಜಲವಿದ್ಯುತ್ತನ್ನು ಉತ್ಪಾದಿಸಲು ಹೆಚ್ಚಿನ ಅನುಕೂಲಗಳಿವೆ. ಆದುದರಿಂದ ಇದರ ಉತ್ಪಾದನೆಯನ್ನು ಇನ್ನೂ ಅಧಿಕಗೊಳಿಸಲು ಸಾಧ್ಯವಿದೆ. ಹೀಗೆ ಉತ್ಪಾದಿಸಿದ ಜಲವಿದ್ಯುತ್ತನ್ನು ತೈಲಕ್ಕೆ ಪರ್ಯಾಯವಾಗಿ ಉಪಯೋಗಿಸಬಹುದು. ಸೂರ್ಯ, ವಾಯು, ಜಲಜನಕ, ಆಲ್ಕೊಹಾಲ್ ಮುಂತಾದ ನವೀಕರಿಸಲು ಅನುಕೂಲವಾದ ಮೂಲಗಳಿಂದ ಶಕ್ತಿಯನ್ನು ಉತ್ಪಾದಿಸಿ ತೈಲ ಶಕ್ತಿಯ ಬದಲಾಗಿ ಉಪಯೋಗಿಸಬೇಕು. ಈಗಾಗಲೇ ಇಪ್ಪತ್ತೈದು ಸಂಶೋಧನಾ ಸಂಸ್ಥೆಗಳು ಸೌರಶಕ್ತಿಯನ್ನು ಬಳಸುವ ವಿಧಾನಗಳನ್ನು ಕಂಡುಹಿಡಿಯುತ್ತಿರುವವು. ಗಾಳಿ ಶಕ್ತಿಯ ಬಳಕೆಯಲ್ಲೂ ಸಂಶೋಧನಾ ಕಾರ್ಯಗಳು ನಡೆದಿವೆ. ಈ ಪ್ರಾಯೋಗಿಕ ಕಾರ್ಯಗಳನ್ನು ಮುಂದುವರಿಸುವಾಗ ತಾಂತ್ರಿಕ ಆಹ್ವಾನಗಳಿಗೆ ಅಂಜಬಾರದು. ಗ್ರಾಮಾಂತರ ಪ್ರದೇಶಗಳಲ್ಲಿ ಉರುವಲು ಕಟ್ಟಿಗೆಯ ಉತ್ಪಾದನೆ ಹೆಚ್ಚಿಸಿ ಬಳಸಬೇಕು. ಮಾನವ ಹಾಗೂ ಪ್ರಾಣಿ ಗೊಬ್ಬರದಿಂದ ಅನಿಲವನ್ನು ತಯಾರಿಸುವ ತಂತ್ರವನ್ನು ಕಂಡು ಹಿಡಿದು ಬಳಸುತ್ತಿರುವದು ಸಂತೋಷದ ಸಂಗತಿ. ಈ ಗೊಬ್ಬರ ಅನಿಲ ಯಂತ್ರಗಳ ಗಾತ್ರಗಳನ್ನು ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಯೋಗ್ಯವಾಗುವಂತೆ ತಯಾರಿಸಿ, ವಿವಿಧ ಕಾರ್ಯಗಳಿಗೆ ಉಪಯೋಗಿಸುವದರಿಂದ ಹಳ್ಳಿಗಳಲ್ಲಿ ಉರುವಲು ಕಟ್ಟಿಗೆ ಹಾಗೂ ಚಿಮಣಿ ಎಣ್ಣೆಯ ಬಳಕೆ ಕಡಿಮೆಯಾಗುವದಲ್ಲದೇ ಅದಕ್ಕೆ ಉಪಯೋಗಿಸಿದ ಸಗಣಿ ಹಾಗೂ ಕಸವು ಉತ್ತಮ ಗೊಬ್ಬರವಾಗುವದು. ಇದು ಅಲ್ಲದೇ ನಮ್ಮಲ್ಲಿ ಸಾಕಷ್ಟಿರುವ ಮಾನವ ಮತ್ತು ಪಶುಬಲ ಇವುಗಳನ್ನು ಸರಿಯಾಗಿ ಯೋಜಿಸಿ ಬಳಸಬೇಕು. ಮೇಲೆ ಹೇಳಿದ ವಿವಿಧ ಶಕ್ತಿಗಳ ಉತ್ಪಾದನ ಹಾಗೂ ಅವುಗಳ ಯೋಗ್ಯ ಬಳಕೆಗಾಗಿ ಹೆಚ್ಚು ಪರಿಣಾಮಕಾರಿ ಸಂಶೋಧನಾ ಕಾರ್ಯಗಳನ್ನು ಹಮ್ಮಿಕೊಳ್ಳುವದು ಅವಶ್ಯ. ಇಂಥ ಚಟುವಟಿಕೆಗಳಿಗೆ ಸರಕಾರವು ಸರ್ವವಿಧದಲ್ಲೂ ಪ್ರೋತ್ಸಾಹ ನೀಡಲು ಮುಂದೆ ಬರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಬಳಕೆದಾರರ ಮನೋಭಾವನೆಯಲ್ಲಿ ಸರಿಯಾದ ಮಾರ್ಪಾಡುಗಳಾಗಬೇಕು. ಇದನ್ನು ಸಾಧಿಸಲು ಸರಕಾರವು ರೇಡಿಯೋ, ಟೆಲಿವಿಜನ್, ಸಿನೇಮಾ ಮುಂತಾದ ಸಂಪರ್ಕ ಸಾಧನಗಳ ಮೂಲಕ ಯೋಗ್ಯ ಶಿಕ್ಷಣ ನೀಡಬೇಕಾದುದು ಇಂದಿನ ವಿಷಮ ಪರಿಸ್ಥಿತಿಯಲ್ಲಿ ಅನಿವಾರ್ಯ.

ಹೇಮಾವತಿ : ಹರಿಜನ ಸಮಸ್ಯೆ*

● ಬಿ. ಕುಪ್ಪುಸ್ವಾಮಿ

ಈ ಗ್ರಂಥವನ್ನು ಗೋರೂರು ರಾಮಸ್ವಾಮಿಯಂಗಾರ್‌ರವರು. ೧೯೪೮ ರಲ್ಲಿ ಪ್ರಕಟಿಸಿದರು. 'ಚೋಮನ ದುಡಿ' ಯಂತೆಯೇ ಈ ಕಾದಂಬರಿಯು ಸಹ ಸ್ವಾತಂತ್ರ್ಯದ ಹಿಂದಿನ ಕಾಲಕ್ಕೆ ಸೇರುವುದು. ಈ ಶತಾಬ್ದದ ಮೂರನೆಯ ಮತ್ತು ನಾಲ್ಕನೆಯ ದಶಕಗಳಲ್ಲಿ ಸಾಮಾಜಿಕ ಪರಿಸ್ಥಿತಿಯ ಒಂದು ನೋಟವನ್ನು ಇಲ್ಲಿ ಚಿತ್ರಿಸಲಾಗಿದೆ.

ಸ್ಥಳ, ಕಾವೇರಿ ನದಿಯ ದಡದಲ್ಲಿರುವ ಒಂದು ಚಿಕ್ಕ ಗ್ರಾಮ. ಆ ಗ್ರಾಮದಲ್ಲಿ ಒಂದು ಕುಟುಂಬವು ಕೆಲವು ತಲೆಮಾರುಗಳಿಂದ ಸಂಗೀತದಲ್ಲಿ ಪ್ರಶಸ್ತಿಯನ್ನು ಪಡೆದಿರುವುದು. ಆ ಕುಟುಂಬದ ವೈಶಿಷ್ಟ್ಯವೆಂದರೆ, ಸಂಗೀತದಲ್ಲಿ ನಿಪುಣತೆ. ದೇವರಲ್ಲಿ ಭಕ್ತಿ ಮತ್ತು ಸರ್ವರಲ್ಲೂ ಸಹಾನುಭೂತಿ.

ಪ್ರದೇಶವು ಫಲವತ್ತಾಗಿರುವುದರಿಂದ ಈ ಗ್ರಾಮದ ಬ್ರಾಹ್ಮಣರು, ಒಕ್ಕಲಿಗರು ಮುಂತಾದ ಎಲ್ಲಾ ಜಾತಿಗಳವರೂ, ವ್ಯವಸಾಯವನ್ನು ಆ ಊರಿನ ಹೊಲೆಯರ ಸಹಾಯದಿಂದ ಮಾಡುತ್ತಿದ್ದರು. ಹೊಲಗೇರಿಯಲ್ಲಿರುವರೆಲ್ಲರೂ ಈ ಉತ್ತಮ ವರ್ಣದವರ ಕೂಲಿಯಿಂದಲೋ ಅಥವಾ ಜೀತದಿಂದಲೋ ಜೀವಿಸುತ್ತಿದ್ದರು.

ರಾಮಣ್ಣ ಪೆರುಮಾಳರು ಗ್ರಾಮದ ಮುಖ್ಯಸ್ಥರು, ದೈವ ಭಕ್ತರು ಮತ್ತು ಉತ್ತಮ ಸಂಗೀತಗಾರರು. ಪ್ರತಿ ಶನಿವಾರ ಸಾಯಂಕಾಲ ಅವರ ಮನೆಯಲ್ಲಿ ಭಜನೆ. ಅವರಿಗೆ ಒಬ್ಬಳೇ ಮಗಳು. ಅವಳ ಹೆಸರು ಹೇಮಾವತಿ. ಚಿಕ್ಕ ವಯಸ್ಸಿನಲ್ಲಿಯೇ ಅವಳ ತಾಯಿಯು ತೀರಿ ಹೋದುದರಿಂದ ಪುಟ್ಟ ಮಗುವನ್ನು ಸಾಕುವುದಕ್ಕೋಸ್ಕರ ಮರು ಮದುವೆ ಮಾಡಿಕೊಂಡರು.

---

* ಪುಸ್ತಕ ವಿಮರ್ಶೆ.

ಅವರ ತಮ್ಮ ಆನಂದ, ಈತನಿಗೆ ಜೀವನದಲ್ಲಿ ಒಂದೇ ಆಸ್ತೆ ಸಂಗೀತ. ವಯಸ್ಸಾದರೂ ಮದುವೆ ಮಾಡಿಕೊಳ್ಳಲಿಲ್ಲ. ಈತನ ಗುರಿ ಒಳ್ಳೆಯ ಕಂಠವಿರುವ ಮತ್ತು ಸಂಗೀತದಲ್ಲಿ ಆಸಕ್ತಿಯಿರುವ ಹುಡುಗಿಗೆ ಸರಿಯಾದ ತರಪೇತನ್ನು ಕೊಟ್ಟು ಉತ್ತಮ ಗಾಯಕಿಯನ್ನಾಗಿ ಮಾಡುವುದು. ಆದುದರಿಂದ ಈತನು ಗ್ರಾಮದಲ್ಲಿರುವ ದೇವಸ್ಥಾನದ ಕೈಸಾಲೆಯಲ್ಲಿ ಬೆಳಗಿನ ಒಂಬತ್ತು ಗಂಟೆಯಿಂದ ಮಧ್ಯಾಹ್ನ ಹನ್ನೆರೆಡು ಗಂಟೆಯವರೆಗೆ ಊರಿನ ಮಕ್ಕಳಿಗೆ ಸಂಗೀತ ಕಲಿಸಿ ಕೊಡುತ್ತಿದ್ದ. ಈ ಚಿಟ್ಟಿ ಸಂಗೀತ ಶಾಲೆಗೆ ಕೇವಲ ಉತ್ತಮ ವರ್ಣಗಳಿಗೆ ಸೇರಿದ ಹೆಣ್ಣು ಮಕ್ಕಳು ಮಾತ್ರ ಬರುತ್ತಿದ್ದರು. ಇವರಲ್ಲಿ ಯಾರಲ್ಲಿಯೂ ಈತನು ಹುಡುಕುತ್ತಿದ್ದ ಒಳ್ಳೆಯ ಕಂಠವಿರಲಿಲ್ಲ. ಒಂದು ದಿನ ತಾನು ತೋಟದಲ್ಲಿ ಕೆಲಸ ಮಾಡುತ್ತಿರುವಾಗ ಒಂದು ಸಣ್ಣ ಹುಡುಗಿ ಮೆಲ್ಲನೆ ಹಾಡುತ್ತಿರುವುದು ಕೇಳಿಸಿತು. ಯಾರೆಂದು ನೋಡಿದರೆ ಅವರ ಮನೆಯ ಜೀತಗಾರನಾದ ಕಾಳನ ಮಗಳು. ಆರು ವರ್ಷದ ಚೆನ್ನಿ. ಆ ಮಗು ಹಾಡುತ್ತಿದ್ದುದು ಈತನು ದೇವಸ್ಥಾನದ ಕೈಸಾಲೆಯಲ್ಲಿ ಹುಡುಗಿಯರಿಗೆ ಹೇಳಿಕೊಡುತ್ತಿದ್ದ ಒಂದು ಹಾಡು. ಆ ಹುಡುಗಿಯು ಊರ ಸುತ್ತ ತಲೆಯ ಮೇಲೆ ಸಗಣಿ ಕುಕ್ಕೆಯನ್ನು ಎತ್ತಿಕೊಂಡು ಆ ಕಡೆ ಹೋಗುತ್ತಿದ್ದಾಗ ಕೇಳಿದ ಹಾಡನ್ನು ಚೆನ್ನಿ ಕಲಿತು ಹಾಡುತ್ತಿದ್ದಳು.

ಅವಳ ಕಂಠವನ್ನು ಕೇಳಿ ಆನಂದನಿಗೆ ರೋಮಾಂಚವಾಯಿತು. ತಾನು ಕನಸಿನಲ್ಲಿ ಆಗಾಗ್ಗೆ ಕೇಳುತ್ತಿದ್ದ ಇದೇ ಕಂಠವೆಂದು ಆನಂದನಿಗೆ ತೋರಿತು. ಅವಳು ಹೊಲೆಯರವರ ಹುಡುಗಿಯೆಂಬುದನ್ನೂ, ಅವಳು ತಮ್ಮ ಜೀತಗಾರನ ಮಗಳೆಂಬುದನ್ನೂ, ಊರಿನ ಉತ್ತಮ ಕುಲದವರು ಏನು ತಿಳಿದುಕೊಳ್ಳಬಹುದು ಎಂಬುದನ್ನೂ ತಾನು ಮಾಡುವುದು ಜಾತಿ ಧರ್ಮಕ್ಕೆ, ಸಾಮಾಜಿಕ ಆಚರಣೆಗೆ ವಿರುದ್ಧವೆಂಬುದನ್ನೂ ಲೆಕ್ಕಿಸದೆ ಆ ಆರು ವರ್ಷದ ಹುಡುಗಿಗೆ ತಾನು ಸಂಗೀತವನ್ನು ಹೇಳಿಕೊಡುವೆನೆಂದು ವಾಗ್ದಾನ ಮಾಡಿ, ಹಾಡು ಹೇಳಿಕೊಡಲು ಕೂಡಲೇ ಪ್ರಾರಂಭಿಸಿದನು.

ತನ್ನ ಮಗಳನ್ನು ತನ್ನ ದಣಿ ಆನಂದಪ್ಪನನ್ನೂ ಕಂಡು ಜೀತಗಾರ ಕಾಳನಿಗೆ ಕೋಪ ಹೆದರಿಕೆಗಳುಂಟಾದವು. "ಹಾಳು ಮೂಳಿ ಏನೂ ತಿಳೀದು. ದಣಿಗಳ ಸಮಕ್ಕೆ ಕುಳಿತಿದೆ" ಎಂದು ಕೂಗಲಾರಂಬಿಸಿದನು. (ಪ್ರ ೨೬). ಆದರೆ ಆನಂದ ಮತ್ತು ಚೆನ್ನಿ ಹಾಡಿನಲ್ಲಿಯೇ ಮಗ್ನರಾಗಿದ್ದರು. ಆಮೇಲೆ ಕಾಳನನ್ನು ನೋಡಿ ಮಗಳ ಕೋಮಲ ಕಂಠವನ್ನು ತಾನು ಎಲ್ಲಿಯೂ ಕೇಳಿರಲಿಲ್ಲವೆಂದೂ, ಅವಳಿಗೆ ತಾನು ಸಂಗೀತವನ್ನು ಹೇಳಿಕೊಡುವೆನೆಂದೂ ಹೇಳಿದನು.

ಯುವಕನಾದ ಆನಂದನಿಗೆ ಅತ್ಯಂತ ಉತ್ಸಾಹ ಮತ್ತು ತನ್ನ ಶಕ್ತಿಯಲ್ಲಿ ಅಪಾರ ನಂಬಿಕೆ, ಸತ್ಯ, ನ್ಯಾಯ, ಧರ್ಮ, ನೀತಿಗಳಿಗಾಗಿ ಹೋರಾಡುವ ಸಾಹಸವು ಅವನಿಗೆ ವಿಶೇಷವಾಗಿದ್ದವು. "ಆದರೆ ಹೊಲತಿಗೆ ಹಾಡನ್ನು ಹೇಳಿಕೊಡಲು ಒಪ್ಪಿದುದರಿಂದ

ಎಂತಹ ಕಣಜದ ಗೂಡಿಗೆ ಕೈಹಾಕಿದಂತೆ ಆಯಿತೆಂಬುದು ಅವನಿಗೆ ಇನ್ನೂ ಅನುಭವಕ್ಕೆ ಬಂದಿರಲಿಲ್ಲ. ಅದು ಬರುವುದಕ್ಕೂ ಹೆಚ್ಚುಕಾಲ ಹಿಡಿಯಲಿಲ್ಲ". (ಪು ೨೭)

ಆನಂದ ಹೊಲೆಯರ ಚೆನ್ನಿಗೆ ಹಾಡು ಹೇಳಿ ಕೊಡುತ್ತಿದ್ದಾನೆಂದು ಕೇಳಿ ಅಗ್ರಹಾರದ ಬ್ರಾಹ್ಮಣರಿಗೂ, ಊರಿನ ಇತರ ಉತ್ತಮ ಜಾತಿಗಳವರಿಗೂ ಆಶ್ಚರ್ಯ ಮತ್ತು ಕೋಪವುಂಟಾಯಿತು. ಇಂತಹ ನೀಚ ಕಾರ್ಯವನ್ನು ಮಾಡುವುದುಂಟೇ ಎಂದು ಎಲ್ಲರಿಗೂ ದಿಗ್ಭ್ರಮೆ. ಹೊಲೆಯರನ್ನು ಎಲ್ಲಿಡಬೇಕೋ ಅಲ್ಲಿಡಬೇಕು. ಇಲ್ಲದಿದ್ದರೆ ಆತನ ಪಿತೃಗಳ ಏಳು ತಲೆಯವರನ್ನು ನರಕದಲ್ಲಿ ಬೀಳುವಹಾಗೆ ಮಾಡುವುದೇ ಇದರ ಪರಿಣಾಮ ಎಂದು ನಂಬಿದ್ದರು. ಊರಿನ ಮುಸಲ್ಮಾನರೂ ಸಹ ಆನಂದನ ಈ ಕೆಲಸವನ್ನು ಒಪ್ಪಲಿಲ್ಲ. ಊರಿನ ಪಟೇಲರೂ ಸಹ "ನಮ್ಮ ಹಿಂದಲದವರು ಹೆಡ್ಡರಲ್ಲ, ಹೊಲೆಯರನ್ನು ಎಲ್ಲಿಟ್ಟಿರಬೇಕೋ ಅಲ್ಲಿಟ್ಟಿರಬೇಕು". (ಪು ೨೮)

ಊರಿನ ಎಲ್ಲಾ ಜಾತಿಯವರು ಹೀಗೆ ವಾದಿಸುವುದನ್ನು ಕಂಡು ಆನಂದನ ಮನಸ್ಸಿನಲ್ಲಿ ಸಂಶಯ ಉಂಟಾಯಿತು. ತಾನು ಮಾಡುವ ಕೆಲಸ ಒಳ್ಳೆಯದೋ, ಕೆಟ್ಟದೋ ಎಂಬ ಶಂಕೆ ಮನಸ್ಸಿನಲ್ಲುಂಟಾಯಿತು. ಮನೆಗೆ ಹೋಗಿ ರಾಮಾನುಜಾಚಾರ್ಯರ ಚರಿತ್ರೆಯನ್ನು ವ್ಯಾಸಂಗ ಮಾಡಿದನು. ತನಗೆ ನರಕ ಪ್ರಾಪ್ತವಾದರೂ ಇತರರಿಗೆ ಮೋಕ್ಷವು ದೊರೆತರೆ ಗುರುವಿನ ಆಜ್ಞೆಗೆ ವಿರೋಧವಾಗಿ ಮಂತ್ರವನ್ನು ಹನ್ನೊಂದನೆಯ ಶತಮಾನದಲ್ಲಿ ಬಹಿರಂಗ ಮಾಡಿದರು ಮತಾಚಾರ್ಯರು. ಹಾಗೆಯೇ ಕೀಳು ಜಾತಿಯವನಾದ ತಿರು ಕಚ್ಚಿ ನಂಬಿಯ ಎಂಜಲಿನ ಮೇಲೆ ಊಟ ಮಾಡಲು ತನಗೆ ಅವಕಾಶವನ್ನು ಕೊಡಲಿಲ್ಲವೆಂದು, ತನ್ನ ಹೆಂಡತಿಯನ್ನೇ ಬಿಟ್ಟವರು ರಾಮಾನುಜಾಚಾರ್ಯರು. ಅವರು ದಲಿತ ಬಾಂಧವರು. ಕರುಣಾ ಸಮುದ್ರ. ಸರ್ವರನ್ನೂ ಸಮನಾಗಿ ಕಾಣುವ ಸಮದರ್ಶಿ. ಆದರೆ ರಾಮಾನುಜಾಚಾರ್ಯರ ಅನುಯಾಯಿಗಳು, ಅವರ ತತ್ವಗಳನ್ನೂ, ಅವರ ಜೀವನದ ಘಟನೆಗಳನ್ನೂ ಪೂರ್ತಿಯಾಗಿ ಮರೆತಿರುವರೆಂದೂ, ಗುರುಗಳ ಬೋಧನೆಗೂ, ಅವರ ಶಿಷ್ಯರ ನಡತೆ, ಆಚರಣೆಗೂ ಯಾವ ಸಂಬಂಧವು ಇಲ್ಲವೆಂದೂ ಆನಂದನಿಗೆ ಗೋಚರವಾಯಿತು. ಇವರ ಪ್ರಕಾರ "ಆಚರಣೆಗಳೇ ಮತಧರ್ಮ ನೀತಿಯೆಂದೂ ಅವರು ತಿಳಿದಿದ್ದರು" (ಪು ೩೧). ಇವರು ತಮ್ಮ ಆಚರಣೆಗಳು ಮತ್ತು ಅಭಿಪ್ರಾಯಗಳು ಸರಿಯೇ ತಪ್ಪೇ ಎಂದು ಪ್ರಶ್ನಿಸುತ್ತಿಲ್ಲವೆಂದು ಆನಂದನಿಗೆ ತಿಳಿಯಿತು.

ಆದರೆ ಊರಿನವರೆಲ್ಲಾ ಒಂದಾಗಿ, ಆನಂದ ಚೆನ್ನಿಗೆ ಸಂಗೀತ ಹೇಳಿಕೊಡಕೂಡದೆಂದು ಎಚ್ಚರಿಸಿದರು. ಅಲ್ಲದೆ ಆತನ ಅಣ್ಣನಾದ ರಾಮಣ್ಣ ಪೆರುಮಾಳರನ್ನೂ ಸಹ ಕರೆದು ಹೆದರಿಸಿದರು. ತಮ್ಮ ಮಕ್ಕಳನ್ನು ಸಂಗೀತ ಪಾಠಕ್ಕೆ ಕಳುಹಿಸುತ್ತಿರಲಿಲ್ಲ. ಕೊನೆಗೆ ಚೆನ್ನಿ ಒಬ್ಬಳೇ ಆನಂದನ ಶಿಷ್ಯೆಯಾದಳು. ಕ್ರಮೇಣ ಜನರ ದ್ವೇಷವು

ಹೊಲೆಯರಲ್ಲರ ಮೇಲೆ ಕೇಂದ್ರೀಕರಿಸಿತು. ಅವರಿಗೆ ಸಾಲ ಕೊಟ್ಟವರೆಲ್ಲರೂ ಸಾಲವನ್ನು ಹಿಂತಿರುಗಿಸಬೇಕೆಂದು ನಿರ್ಬಂಧ ಮಾಡಿದರು. ಕಡೆಗೆ ಒಂದು ರಾತ್ರಿ ಕಾಳನ ಹುಲ್ಲು ಗುಡಿಸಿಲಿಗೆ ಬೆಂಕಿ ಹಾಕಿದರು. ಮರುದಿನ ರಾಮಣ್ಣ ಪೆರುಮಾಳರ ಹುಲ್ಲು ಗುಡ್ಡೆಗೂ ಬೆಂಕಿ ಬಿದ್ದಿತು. ಬಾಳೆಯ ಮರಗಳೆಲ್ಲವನ್ನು ಕತ್ತಿರಿಸಿ ಹಾಕಿದರು. (ಪು ೩೪)

ಈ ವಿಧವಾಗಿ ಚೆನ್ನಿಯ ತಂದೆಯಾದ ಜೀತಗಾರ, ಕಾಳನಿಗೂ ಆನಂದನ ಅಣ್ಣಂದಿರಾದ ರಾಮಣ್ಣ ಪೆರುಮಾಳರಿಗೂ, ಸಾಮಾಜಿಕ ಬಹಿಷ್ಕಾರಗಳನ್ನು ಕಂಡು ಹೊಲೆಯರಿಗೆಲ್ಲಾ ವಿಪರೀತ ಹೆದರಿಕೆಯುಂಟಾಯಿತು. ಮರುದಿನ ಸಾಯಂಕಾಲ ಆನಂದ ನದಿಯ ತೀರದ ತೋಪಿನಲ್ಲಿ ಒಬ್ಬನೇ ಹಾಡಿಕೊಳ್ಳುತ್ತಿದ್ದಾಗ ಊರಿನ ಹೊಲೆಯರೆಲ್ಲಾ ದೊಡ್ಡ ಗುಂಪಾಗಿ ಅವನ ಬಳಿ ಬಂದರು. ಆ ಜನ ಸಮೂಹವನ್ನು ನೋಡಿ ಆನಂದನಲ್ಲಿ ಕನಿಕರವುಂಟಾಯಿತು. "ಇಷ್ಟೊಂದು ಜನರ ಬಲವಿದ್ದರೆ ಯಾವ ಕೆಲಸವನ್ನು ತಾನೇ ಸಾಧಿಸುವುದಕ್ಕಾಗುವುದಿಲ್ಲ. ಆದರೆ ಇವರನ್ನು ಮನುಷ್ಯರನ್ನಾಗಿ ಇಟ್ಟಿಲ್ಲ, ಇವರಿಗೆ ತಾವು ಮನುಷ್ಯರೆಂಬುದೇ ತಿಳಿಯದು, ಇವರಿಗೆ ವಿದ್ಯೆ ಬುದ್ಧಿ ಇಲ್ಲ. ಧೈರ್ಯ. ಸಾಹಸ, ಕೆಚ್ಚು ಇಲ್ಲ. ಈ ಜನಬಲವನ್ನು ಅಗ್ರಹಾರದ ಏಳಿಗೆಗಾಗಿ ಉಪಯೋಗಿಸಿಕೊಳ್ಳುವ ಶಕ್ತಿಯೂ ನಮಗೆ ಇಲ್ಲ" ಎಂದುಕೊಂಡನು (ಪು ೩೫). ಹೀಗೆ ಆನಂದನಿಗೆ ಅಸ್ಪೃಶ್ಯತಾ ಆಚರಣೆಯಿಂದ ಭಾರತೀಯ ಸಮಾಜದಲ್ಲಿ ಉಂಟಾದ ಪರಿಸ್ಥಿತಿಯು ಮನದಟ್ಟಾಯಿತು.

ಆ ರಾತ್ರಿ ಆನಂದ ತನ್ನ ಮನೆಗೆ ಹೋಗಲಿಲ್ಲ. ಮಾರನೇ ಬೆಳಿಗ್ಗೆ ಅಗ್ರಹಾರದಿಂದ ಯಾರಿಗೂ ಹೇಳದೇ ಹೊರಟುಹೋದ. ಕಾಳನ ಮನೆಯಲ್ಲಿ ಚೆನ್ನಿಯೂ ಇರಲಿಲ್ಲ. ಅವಳು ಎಲ್ಲಿ ಎಂದು ಕೇಳಿದವರಿಗೆ ನೆಂಟರ ಮನೆಗೆ ಹೋಗಿದ್ದಾಳೆಂದು ಕಾಳ ಹೇಳಿದ. ಅಗ್ರಹಾರದ ಉತ್ತಮರು ಆನಂದ ಚೆನ್ನಿಯನ್ನು ಎತ್ತಿಕೊಂಡು ಹೋದನೆಂದು ಹೇಳಿಕೊಂಡರು. ರಾಮಣ್ಣ ಪೆರುಮಾಳರನ್ನು ಜನ ಖಂಡಿಸಿದರು. ಅವರ ಮನೆ ಭಜನೆಗೆ ಯಾರೂ ಹೋಗಲಿಲ್ಲ.

ಹನ್ನೆರಡು ವರ್ಷಗಳಾದ ಮೇಲೆ ಬೆಂಗಳೂರಿಗೆ ಅಭಿನವ ಶಾರದೆ ಎಂಬ ಸಂಗೀತಗಾರಳು ನಗರ ಭವನದಲ್ಲಿ ಹಾಡುವಳೆಂದು ಗೊತ್ತಾಯಿತು. ಆಕೆಯ ಹೆಸರು ಪ್ರಸಿದ್ಧವಾಗಿತ್ತು. ಆಕೆಯ ಗಾಯನ ತಟ್ಟೆಗಳನ್ನು ಸಾವಿರಾರು ಜನ ಕೊಂಡುಕೊಳ್ಳುತ್ತಿದ್ದರು. ಆಕೆಯ ವಾಸಸ್ಥಳ ಮದರಾಸು. ಆದರೆ ದಕ್ಷಿಣ ಭಾರತದಲ್ಲೆಲ್ಲಾ ಆಕೆ ಹೆಸರುವಾಸಿಯಾಗಿದ್ದಳು. "ಅವಳ ಸಂಗೀತ ಭಕ್ತರ ಪೈಕಿ ಈಕೆ ದೇವರೆಂದು ನಿತ್ಯ ಅವಳ ಚಿತ್ರಕ್ಕೆ ಅಡ್ಡಬಿದ್ದು ಪೂಜಿಸುತ್ತಿರುವವರಿಂದ ಹಿಡಿದು, ಈಕೆ ನನ್ನ ಹೆಂಡತಿಯಾದರೆ, ನನ್ನ ಚಲನಚಿತ್ರದಲ್ಲಿ ಭಾಗವಹಿಸಿದರೆ, ಎಂದು ಗಾಳಿ ಗೋಪುರ ಕಟ್ಟುವವರೆಗಿನ ಯುವಕರೂ ಮುದುಕರೂ ಇದ್ದರು. ಅಭಿನವ ಶಾರದೆ ಒಳ್ಳೆಯ ಲಕ್ಷಣವಾದ ಹುಡುಗಿಯಾಗಿದ್ದಳು.

ಆಕೆಯ ವಯಸ್ಸು ೧೮–೧೯ಕ್ಕೆ ಮೀರಿರಲಿಲ್ಲ. ಆದರೆ ಅವಳ ಸಂಗೀತವನ್ನು ಕೇಳಿದವರಿಗೆ ಈಕೆ ಸಂಗೀತ ಶಾಸ್ತ್ರವನ್ನು ನೂರಾರು ವರುಷ ಅಭ್ಯಾಸ ಮಾಡಿದ್ದಿರಬೇಕೆಂದು ತೋರು ತ್ತಿದ್ದಿತು." (ಪು ೮೭–೮೮)

ಸಂಗೀತ ಕಛೇರಿಗಳ ಉತ್ಪತ್ತಿಯನ್ನು ಹರಿಜನರ ಉದ್ಧಾರಕ್ಕಾಗಿ ಮಹಾತ್ಮಾ ಗಾಂಧಿಯವರಿಗೆ ಆಕೆಯು ಅರ್ಪಿಸುತ್ತಿರುವ ವಿಷಯವು ಜನರಿಗೆ ಗೊತ್ತಾಯಿತು. ಆಕೆಯು ಈಗಾಗಲೇ ಮಹಾತ್ಮರ ಹರಿಜನೋದ್ಧಾರಕ್ಕಾಗಿ ಒಂದು ಲಕ್ಷ ರೂಪಾಯಿ ಗಳನ್ನು ಸಲ್ಲಿಸಿದ್ದಾಳೆಂದು ಜನರಿಗೆ ತಿಳಿಯಿತು. ಆದುದರಿಂದ ಜನರು ಹೆಚ್ಚು ಹಣವನ್ನು ಕೊಟ್ಟು ಟಿಕೇಟುಗಳನ್ನು ಕೊಳ್ಳುತ್ತಿದ್ದರು.

ಕಾವೇರಿ ಅಗ್ರಹಾರದ ಸುಬ್ಬಾಭಟ್ಟರು ಆಕೆಯ ಸಂಗೀತವನ್ನೂ ತ್ಯಾಗ ಬುದ್ಧಿ ಯನ್ನೂ ಮೆಚ್ಚಿದರು. ಆದರೆ ಹರಿಜನೋದ್ಧಾರ ಕಾರ್ಯಕ್ರಮವು ಒಂದು ಹುಚ್ಚು ಎಂದು ಅವರಿಗೆನಿಸಿತು. ಈ ವಿಷಯದಲ್ಲಿ ಆನಂದನ ನೆನಪು ಸಹ ಅವರಿಗೆ ಬಂತು.

ಅಭಿನವ ಶಾರದೆಯು ತನ್ನ ಗುರುವಿಗೆ ಅಭಿನಂದನೆಯನ್ನು ವೇದಿಕೆಯ ಮೇಲೆ ಪ್ರಕಟಿಸಿದಳು. ಆಗ ಎಲ್ಲರೂ ಆಕೆಯ ಗುರು ಯಾರಿರಬಹುದೆಂದು ಕುತೂಹಲದಿಂದ ನೋಡತೊಡಗಿದರು. ಆತನು ಮಧ್ಯ ವಯಸ್ಸಿನ ಗಡ್ಡ ಬಿಟ್ಟಿರುವ ಖಾದಿ ತೊಟ್ಟಿರುವ ವ್ಯಕ್ತಿಯೆಂದು ಗೊತ್ತಾಯಿತು. ವ್ಯಾಸಂಗ ಮಾಡುವುದನ್ನು ಬಿಟ್ಟು ಗಾನ ಶಾರದೆಯ ಹಾಡನ್ನು ಕೇಳಲು ತನ್ನ ಮಗ ಬೆಂಗಳೂರಿಗೆ ಬಂದಿದ್ದು ಸುಬ್ಬಾಭಟ್ಟರಿಗೆ ಅಸಮಾಧಾನ ವಾಯಿತು. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಬಿಟ್ಟು ಕಲಾಭಿಮಾನಿಗಳಾಗಿ ಒಂದೂರಿನ ಇನ್ನೊಂದೂರಿಗೆ ಬಂದಿದ್ದು ಅವರಿಗೆ ವಿಸ್ಮಯವನ್ನುಂಟು ಮಾಡಿತು. (ಪು ೯೪)

ರಾಮಣ್ಣ ಪೆರುಮಾಳರ ಅಜ್ಜಂದಿರಾದ ಶ್ರೀನಿವಾಸ ಪೆರುಮಾಳರು ಶ್ರೇಷ್ಠ ರಾಮ ಭಕ್ತರು ಮತ್ತು ಕಲಾಭಿಮಾನಿಗಳು; ಶ್ರೀರಾಮನವಮಿಯ ಹಬ್ಬ ಶಾಶ್ವತವಾಗಿ ದೇವಸ್ಥಾನದಲ್ಲಿ ನಡೆಯಬೇಕೆಂದು ಒಂದು ನಿಧಿಯನ್ನು ಸ್ಥಾಪಿಸಿದ್ದರು.

ಅಂದು ಶ್ರೀರಾಮನವಮಿ, ರಾಮಣ್ಣ ಪೆರುಮಾಳರು ಅವರು ಸ್ನೇಹಿತರಾದ ರಾಮಕೃಷ್ಣ ಮತ್ತು ದೇವಕಿಪ್ರಿಯರೊಡನೆ ಸ್ನಾನಕ್ಕೋಸ್ಕರ ನದಿಗೆ ಬಂದರು. ಅವರು ಸ್ನಾನ ಮಾಡುವ ಕಡೆ ಹೊಲೆಯರ ಹುಡುಗ ಜವರ, ಒಂದು ಜೊತೆ ಎತ್ತುಗಳನ್ನು ನದಿಯಲ್ಲಿ ಬಿಟ್ಟಿದ್ದನು, ರಾಮಕೃಷ್ಣನು ಜವರನನ್ನು ನೋಡಿ, "ಸ್ವಲ್ಪ ಕೆಳಗಡೆಗೆ ಹೋಗು, ಇಲ್ಲಿ ಯಾಕೆ ನಾವು ಇರುವ ಕಡೆಯೇ ಬಂದು ಪ್ರಾಣ ಜಡ್ತೀಯ" ಎಂದು ಗದರಿಸಿದರು. (ಪು ೧೬೭), ಜವರನು ಇದನ್ನು ಗಮನಿಸಲಿಲ್ಲ. ಎತ್ತುಗಳು ಈಜಿಕೊಂಡು ಬಂದು

ಅವರ ನಡುವೆ ದಡವನ್ನೇರಿದವು. ತಮ್ಮ ಬಾಲಗಳನ್ನು ಅಲ್ಲಾಡಿಸಿದಾಗ ನೀರು ರಾಮಕೃಷ್ಣ ಮತ್ತು ಇತರರ ಮೇಲೆ ಸೇಚನವಾಯಿತು. ತಮ್ಮ ಮಡಿಯನ್ನು ಹಾಳು ಮಾಡಿದನೆಂದು ರಾಮಕೃಷ್ಣ ಜವರನ ಕಡೆಗೆ ಒಂದು ಕಲ್ಲನ್ನು ಬೀಸಿದನು. ಕಲ್ಲು ಜವರನ ಹಣೆಗೆ ಬಂದು ಬಡಿದು ರಕ್ತ ಹರಿಯಿತು. 'ಅಯ್ಯೋ' ಎಂದು ಕೂಗುತ್ತಾ ಜವರ ನೆಲದ ಮೇಲೆ ಬಿದ್ದ. ಸ್ನಾನ ಮಾಡಿ ನಾಮ ಹಾಕಿಕೊಳ್ಳುತ್ತಿದ್ದ ರಾಮಣ್ಣ ಪೆರುಮಾಳರು ಜವರನ ಸ್ಥಿತಿಯನ್ನು ಕಂಡು ರಕ್ತವನ್ನು ನಿಲ್ಲಿಸುವುದಕ್ಕೋಸ್ಕರ ತಮ್ಮ ತಲೆಯ ಮೇಲಿದ್ದ ಗುರುಗಳ ಪಾದದ ಬಟ್ಟೆಯನ್ನು ನೀರಿನಲ್ಲಿ ಅದ್ದಿ ಹಿಂಡಿ ಜವರನ ಹಣೆಯ ಗಾಯವನ್ನು ಸವರಿ ತೊಳೆದರು. ಇದನ್ನು ನೋಡಿ ಗುರುಗಳ ಪಾದುಕೆಯನ್ನು ಹೊಲೆಯನ ಉಪಚಾರಕ್ಕೆ ಉಪಯೋಗಿಸಿ ಸ್ವರ್ಗದಲ್ಲಿರುವ ಹಿರಿಯರ ಗತಿಯನ್ನು ರಾಮಣ್ಣ ಪೆರುಮಾಳರು ಹಾಳುಮಾಡಿದರೆಂದು ಅವರ ಸ್ನೇಹಿತರು ಕೂಗಿಕೊಂಡರು. (ಪು ೧೬೯).

ರಾಮಕೃಷ್ಣನು, ದೇವಕಿಪ್ರಿಯನು ದೇವಸ್ಥಾನಕ್ಕೆ ಹೋಗಿ ರಾಮಣ್ಣ ಪೆರುಮಾಳರು ನದಿಯ ದಡದ ಮೇಲೆ ಹೊಲೆಯನನ್ನು ಮುಟ್ಟಿಕೊಂಡಿದ್ದನ್ನೂ, ಅವನ ತಲೆಯ ಮೇಲೆ ಪಾದುಕೆಯನ್ನು ಹಾಕಿದುದನ್ನೂ ವಿವರಿಸಿದರು.

ರಾಮಣ್ಣ ಪೆರುಮಾಳರು ತಮ್ಮ ಧ್ಯಾನವನ್ನು ಮುಗಿಸಿ ದೇವಸ್ಥಾನವನ್ನು ಮೂರು ಸುತ್ತು ಸುತ್ತಿ ಪ್ರತಿವರ್ಷವೂ ಮಾಡುತ್ತಿದ್ದ ಹಾಗೆ ಆ ವರ್ಷವೂ ರಾಮಾಯಣ ಪಾರಾಯಣವನ್ನು ಮಾಡಲು ದೇವಸ್ಥಾನದ ಒಳಕ್ಕೆ ಹೋಗಲು ಹೊರಟರು. ಆದರೆ ಆ ಊರಿನ ವೈದಿಕರೆಲ್ಲರೂ, ಬಾಗಿಲಲ್ಲಿ ಅವರನ್ನು ತಡೆದರು "ಸ್ವಲ್ಪ ನಿಲ್ಲಿ, ನಿಮಗೆ ಪ್ರಾಯಶ್ಚಿತ್ತವಾಗಬೇಕು...... ನೀವು ಹೊಲೆಯನನ್ನು ಮುಟ್ಟಿದ್ದಿರಿ...... ಗುರುವಿನ ಪಾದುಕೆಯನ್ನು ಇವತ್ತು ನೀವು ಹೊಲೆಯನ ತಲೆಯ ಮೇಲೆ ಇಟ್ಟಿರಿ...... ನಿಮ್ಮ ವ್ಯವಹಾರದಿಂದ ನಮ್ಮ ಸಮಾಜಕ್ಕೆಲ್ಲಾ ಅವಮಾನವಾಗಿದೆ" (ಪು ೧೭೦–೧೭೧) ಎಂದು ಕೂಗಿಕೊಂಡರು.

ತಾನು ಏನೂ ತಪ್ಪುಮಾಡಿಲ್ಲವೆಂದೂ ಗಾಯಗೊಂಡ ಯುವಕನಿಗೆ ಉಪಚರಿಸಿದುದು ಪಾಪಕರ್ಮವಲ್ಲವೆಂದೂ, ಪೆರುಮಾಳರು ಹೇಳಿದರು. ಆದರೆ ವೈದಿಕರು ಕೋಪಗೊಂಡು ಪೆರುಮಾಳರ ಕೈಯಲ್ಲಿದ್ದ ರಾಮಾಯಣ ಗ್ರಂಥವನ್ನು ದೇವಸ್ಥಾನದ ಆಚೆ ಎಸೆದು ಅವರನ್ನು ಆಚೆಗೆ ಓಡಿಸಿದರು. ಅವರ ಜೊತೆಯಲ್ಲಿ ಕೆಲ ಯುವಕರು ಹೊರಗೆ ಹೋದರು. ರಾಮಾಯಣ ಗ್ರಂಥವನ್ನೂ ಇತರ ಸಾಮಾನುಗಳನ್ನೂ ಎತ್ತಿಕೊಂಡು ಪೆರುಮಾಳರು ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಾ ತಮ್ಮ ಮನೆಗೆ ಹೋದರು.

ಈ ದೃಶ್ಯವನ್ನು ನೋಡಿದ ಜೀತಗಾರ ಕಾಳನಿಗೆ ಬಹಳ ನೋವುಂಟಾಯಿತು. ಆವನು ಹರಿಜನ ಕೇರಿಗೆ ಹೋಗಿ ಅವರನ್ನೆಲ್ಲಾ ಕರೆದುಕೊಂಡು ಬಂದು ಒಂದು ವಿಶಾಲ

ವಾದ ಚಪ್ಪರವನ್ನು ಪೆರುಮಾಳರ ಮನೆಯ ಮುಂದೆ ಕಟ್ಟಿಸಿದನು. ಅಲ್ಲಿ ಒಂದು ದೇವರ ಪಟವನ್ನಿಟ್ಟು. ಹಣ್ಣುಕಾಯಿಗಳನ್ನಿಟ್ಟು, "ಶ್ರೀ ಮದ್ರ ಮಾರಮಣ ಗೋವಿಂದ ಗೋವಿಂದ" ಎಂದು ಪ್ರಾರ್ಥನೆ ಮಾಡಿದರು. (ಪು ೧೭೫).

ಆ ಕೂಗನ್ನು ಕೇಳಿ ರಾಮಣ್ಣ ಪೆರುಮಾಳರು ಹೊರಕ್ಕೆ ಬಂದರು. ಮಂಟಪವನ್ನೂ ಭಕ್ತರನ್ನೂ ನೋಡಿ ಅವರಿಗೆ ಮಹದಾನಂದವಾಯಿತು. ಶ್ರೀರಾಮ ಪಟ್ಟಾಭಿಷೇಕದ ಪಟದ ಮುಂದೆ ಕುಳಿತು ಪ್ರತಿ ವರ್ಷವೂ ತಾನು ದೇವಸ್ಥಾನದಲ್ಲಿ ಓದುತ್ತಿದ್ದ ಭಾಗವನ್ನು ಓದಿ, ಅದರ ಅರ್ಥವನ್ನು ನೆಲಸಿದ್ದ ಹೊಲೆಯರಿಗೆ ವಿವರಿಸಿದರು.

ಈ ದೃಶ್ಯವನ್ನು ನೋಡುತ್ತಿದ್ದ ವೈದಿಕರಿಗೆ ಅತ್ಯಂತ ಕೋಪವುಂಟಾಯಿತು. ರಾಮಣ್ಣ ಪೆರುಮಾಳರ ಮೇಲೆ ಕಲ್ಲುಗಳನ್ನು ಎಸೆದರು. ಅಲ್ಲಿ ಸೇರಿದ್ದ ಅಸಂಖ್ಯಾತ ಹೊಲೆಯರು ವೈದಿಕರನ್ನು ಹೊಡೆಯಲು ಹಿಂದಿರುಗಿದರು. ನಾಲ್ಕಾರು ಕಲ್ಲುಗಳನ್ನೆಸೆದು ತಾವೇ ನಾಚಿಕೊಂಡು ಅಲ್ಲಿಂದ ಹೊರಟರು. (ಪು ೧೭೫). ಆಮೇಲೆ ಕ್ರಮದ ಪ್ರಕಾರ ತೀರ್ಥ, ಪ್ರಸಾದ, ಜಪವು ವಿನಿಯೋಗಗಳನ್ನು ತೆಗೆದುಕೊಂಡು ಹೊಲೆಯರು ತಮ್ಮ ತಮ್ಮ ಮನೆಗಳಿಗೆ ಹೋದರು.

ಆ ರಾತ್ರಿ ರಾಮಣ್ಣ ಪೆರುಮಾಳರು ಯಾರಿಗೂ ಹೇಳದೆ, ತಮ್ಮ ಮನೆಯನ್ನೂ ಊರನ್ನೂ ಬಿಟ್ಟು ಹೋದರು. ಹೋಗುತ್ತಾ, 'ಹರಿಜನರು ಮನುಷ್ಯರಲ್ಲವೇ?' ಮನುಷ್ಯನನ್ನು ಮನುಷ್ಯನನ್ನಾಗಿ ಕಾಣುವುದು ಹಿಂದು ಧರ್ಮಕ್ಕೆ ವಿರುದ್ಧವೇ? ಈ ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಮೂಡಿ ಬಂದವು. (ಪು ೧೮೩).

ರಾಮಣ್ಣ ಪೆರುಮಾಳರು ಅಗ್ರಹಾರವನ್ನು ಬಿಟ್ಟು ಹೋದರೆಂಬ ಸುದ್ದಿಯು ಬೆಂಗಳೂರಿಗೆ ಮುಟ್ಟಿತು. ಹೇಮಾವತಿಯ ಅತ್ತೆ ಮಾವಂದಿರಿಗೆ ಇನ್ನು ಅವಳ ಮೂಲಕ ಅವಳ ತಂದೆಯಿಂದ ಹಣವನ್ನು ಸಂಪಾದಿಸಲು ಆಗುವುದಿಲ್ಲವೆಂದು ಮನದಟ್ಟಾಯಿತು. ಅವರ ಮಗನು, ಹೇಮಾವತಿಯ ಗಂಡನು ಸೈನ್ಯವನ್ನು ಸೇರಿದ್ದುದರಿಂದ, ಅವರಿಗೆ ಬೆಂಗಳೂರಿನಲ್ಲಿ ವಾಸಮಾಡುವುದು ಕಷ್ಟವೂ ಆಯಿತು, ಮತ್ತೆ ಅರ್ಥಹೀನವೂ ಆಯಿತು. ಆದುದರಿಂದ ಹೇಮಾವತಿಯನ್ನು ಆಕೆಯ ಊರಿಗೆ ಕಳುಹಿಸಿ ತಾವು ಬೇರೆ ಹಳ್ಳಿಯಲ್ಲಿ ತಮ್ಮ ನೆಂಟರ ಜೊತೆಯಲ್ಲಿ ಇರುವುದು ಉತ್ತಮವೇದು ನಿರ್ಧಾರ ಮಾಡಿದರು. ತನಗೂ ತನ್ನ ಗಂಡನಿಗೂ ಯಾವ ವಿಧವಾದ ಸಂಪರ್ಕವೂ ಇರಲಿಲ್ಲ. ಸೈನ್ಯಕ್ಕೆ ಸೇರಿದುದರಿಂದ ಆತನು ಮನೆಯಲ್ಲಿಯೂ ಸಹ ಇರುವುದಿಲ್ಲ ಆದುದರಿಂದ ತನ್ನ ಊರಿಗೆ ಹೋಗಿ ತಂದೆಯ ಮನೆಯಲ್ಲಿಯೇ ಇರುವುದು ಉತ್ತಮವೆಂದು ತಿಳಿದು ಹೇಮಾವತಿಯು ಅಗ್ರಹಾರಕ್ಕೆ ಹೋದಳು. ತಂದೆಯೂ ಊರನ್ನು ಬಿಟ್ಟು ಹೋದುದೂ, ಅವರು ಹೋದ ಮೇಲೆ ಮಲತಾಯಿ ಇನ್ನುಳಿದವರು ಊರನ್ನು ಬಿಟ್ಟು ಹೋದುದು

ಹೇಮಾವತಿಗೆ ಆಗ ಗೊತ್ತಾಯಿತು. ಮನೆಗೆ ಬೀಗ ಹಾಕಿತ್ತು. ರಾಮಣ್ಣ ಪೆರುಮಾಳರ ಮನೆಯನ್ನು ವಶಕ್ಕೆ ತೆಗೆದುಕೊಂಡಿದ್ದ ಭಟ್ಟರು ಹೇಮಾವತಿ ಇರುವುದಕ್ಕೆ ಒಂದು ಕೊಠಡಿಯನ್ನು ಕೊಟ್ಟರು. ಇತರರ ಮನೆಯಲ್ಲಿ ಮನೆಕೆಲಸ ಮಾಡಿಕೊಂಡು ತನ್ನ ಜೀವನೋಪಾಯವನ್ನು ಮುಂದುವರೆಸುವುದೇದೂ ಯೋಚಿಸಿದಳು. ಆದರೆ ತಂದೆಯೂ ಇಲ್ಲದೆ, ಗಂಡನೂ ಇಲ್ಲದೆ ಇರುವ ಚಿಕ್ಕ ವಯಸ್ಸಿನ ಹೆಣ್ಣುಮಗಳನ್ನು ಊರಿನ ಗಂಡಸರೂ, ಹೆಂಗಸರು ನಾನಾ ಕಷ್ಟಗಳಿಗೆ ಗುರಿಮಾಡಿದರು. ಆದುದರಿಂದ ಊರನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಸೈನ್ಯದಲ್ಲಿರುವ ತನ್ನ ಗಂಡನನ್ನು ಕಾಣುವುದು ಉತ್ತಮವೆಂದು ಆಕೆಯು ಬೆಂಗಳೂರಿಗೆ ಹಿಂತಿರುಗಿದಳು. ಆದರೆ ಆಕೆಯ ವಿಷಯದಲ್ಲಿ ಗಂಡನಿಗೆ ಪ್ರೇಮವೂ ಇರಲಿಲ್ಲ, ಕನಿಕರವೂ ಇರಲಿಲ್ಲ. ಅವಳಿಗೆ ಇದು ಗೊತ್ತಿದ್ದ ವಿಷಯವೇ ಆದರೂ ತನ್ನ ಈ ಸ್ಥಿತಿಯನ್ನು ಕಂಡು ಅವನ ಮನಸ್ಸು ಕರಗಬಹುದೆಂಬ ಆಶೆಯಿತ್ತು. ನಿರಾಶೆಯಾದ ಹೇಮಾವತಿ ರೈಲ್ವೆ ಸ್ಟೇಷನ್ನಿಗೆ ಹೋಗಿ ಆರಾತ್ರಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದಳು. ಸ್ಟೇಷನ್ನಿನಲ್ಲಿ ಕುಳಿತಿರುವಾಗ ತನ್ನ ಚಿಕ್ಕಪ್ಪ ಆನಂದನನ್ನು ನೋಡಿದಳು. ಆತನು ವಿಸ್ಮಯದಿಂದ ಅವಳನ್ನು ಪ್ರಶ್ನಿಸಿ ಹೇಮಾವತಿಯ ಸ್ಥಿತಿಯನ್ನು ತಿಳಿದುಕೊಂಡು ತನ್ನಜೊತೆಯಲ್ಲಿಯೇ ಆಕೆಯನ್ನು ಮದರಾಸಿಗೆ ಕರೆದುಕೊಂಡು ಹೋದನು. (ಪು ೨೨೮).

ಆನಂದನು ಹೇಮಾವತಿಯನ್ನು ಗಾನ ಶಾರದೆಯ ಮನೆಗೆ ಕರೆದುಕೊಂಡು ಹೋದನು. ಹೇಮಾವತಿಯು ಗಾನ ಶಾರದೆಯನ್ನು ನೋಡುತ್ತಲೇ, ಆಕೆಯು ತನ್ನ ಮನೆಯ ಜೀತದ ಆಳಾಗಿದ್ದ ಕಾಳನ ಮಗಳು ಚೆನ್ನಿಯೆಂದು ಕಂಡುಬಂತು. ಗಾನ ಶಾರದೆಯ ಜೊತೆಯಲ್ಲಿ ಮಾತನಾಡುತ್ತಾ ಆಕೆಯ ವಿಷಯವು ಗೊತ್ತಾಯಿತು. ಆರು ವರ್ಷದ ವಯಸ್ಸಿನಲ್ಲಿ ತನ್ನ ತಂದೆಯು ತನ್ನನ್ನು ಆನಂದನ ಜೊತೆಯಲ್ಲಿ ಕಳುಹಿಸಿದರೆಂಬುದು ತಿಳಿಯಿತು. ಬೆಂಗಳೂರಿನಲ್ಲಿಯೂ ಆಮೇಲೆ ಮದರಾಸಿನಲ್ಲಿಯೂ ಸಂಗೀತದ ಪಾಠಗಳನ್ನು ಹೇಳಿಕೊಟ್ಟು ಹಣ ಸಂಪಾದಿಸಿ ಚೆನ್ನಿಯನ್ನು ಸಂರಕ್ಷಿಸಿ ಆಕೆಗೆ ಸಂಗೀತವನ್ನು ಕಲಿಸಿಕೊಟ್ಟಿದ್ದು ತಿಳಿಯಿತು. "ಗುರೂಜಿ ನನ್ನ ಕಂಠವನ್ನು ಮಾತ್ರವೇ ಕದ್ದಿದ್ದರೇದಲ್ಲ, ನನಗೆ ಕನ್ನಡ, ಇಂಗ್ಲೀಷು, ತಮಿಳು, ಹಿಂದಿ ಕಲಿಸುವ ಉಪಾಧ್ಯಾಯಿನಿಯರನ್ನು ಗೊತ್ತು ಮಾಡಿದರು, ಸ್ವಚ್ಛವಾದ ಉಚ್ಚಾರಣೆ, ನಡತೆ, ಒಳ್ಳೆಯ ಉಡುಗೆ, ಶುಭ್ರವಾದ ಮಾತು, ದೇವರ ಪೂಜೆ ಇವುಗಳಿಗೆ ಉಪಾಧ್ಯಾಯರನ್ನು ನೇಮಿಸಿದರು. ಆಗ ನೀನು ನಮ್ಮ ಮನೆ ನೋಡಬೇಕಾಗಿತ್ತು. ಅದು ನನ್ನನ್ನು ತಯಾರಿಸುವ ಒಂದು ಕಾರ್ಖಾನೆಯಂತೆ ತೋರುತ್ತಿದ್ದಿತು, ಎಂದು ಹೇಳಿದಳು (ಪು ೨೩೨). ಹೀಗೆ ಹತ್ತು ವರ್ಷಗಳ ಕಾಲ ಶ್ರಮಿಸಿದ್ದ ಫಲವಾಗಿ ತಾನು ಸಂಗೀತ ಕಛೇರಿಗಳನ್ನು ಕೊಡುವ ಅರ್ಹತೆಯನ್ನು, ನಿಪುಣತೆಯನ್ನು, ಪಡೆಯಲಾಯಿತೆಂದು ಚೆನ್ನಿ, ಹೇಮಾವತಿಗೆ ಹೇಳಿದಳು. ಆಗ ಗುರೂಜಿ ಅವಳನ್ನು ನೋಡಿ, ನೀನು ಹೋಲತಿಯಾಗದಿದ್ದರೆ ಈ ವಿದ್ಯೆ ನಿನ್ನಲ್ಲಿ ಹಾಗೆಯೇ

ಮಾಯವಾಗುತ್ತಿತ್ತು. ಹೊಲೆಯರು ಎನ್ನಿಸಿಕೊಳ್ಳುವ ಎಷ್ಟು ಮಂದಿಯಲ್ಲಿ ಇನ್ನೂ ಇಂತಹ, ಯಾವ ಯಾವ ಶಕ್ತಿಗಳಿವೆಯೋ ಅವನ್ನೆಲ್ಲಾ ಹೊರಕ್ಕೆ ತರಬೇಕು. ನಿನ್ನ ವಿದ್ಯೆ, ಸಂಪಾದನೆ, ಯಶಸ್ಸು ಅವರಿಗಾಗಿ ಮೀಸಲಾಗಿರಲಿ ಎಂದರು." (ಪು ೨೩೪)

ಇದು ಸಾವಿರಾರು ವರ್ಷಗಳಿಂದ ಭಾರತೀಯ ಸಮಾಜದ ಶೋಚನೀಯ ಸಂತ್ಯಾಂಶ. ಅನೇಕ ಕಾರಣಗಳಿಂದ ಎಲ್ಲಾ ಪಂಗಡಗಳ ಹೆಂಗಸರೂ ಮತ್ತು ಸ್ಪೃಶ್ಯ ಮತ್ತು ಅಸ್ಪೃಶ್ಯ ಶೂದ್ರರು ವಿದ್ಯಾಭ್ಯಾಸಕ್ಕೆ ಅರ್ಹರಲ್ಲ ಎಂಬುವ ಸಂಪ್ರದಾಯ ವನ್ನು ಒಪ್ಪಿಕೊಳ್ಳಲಾಯಿತು. ಇದರಿಂದಾಗಿ ಶೇಕಡಾ ೯೦ರಷ್ಟು ಭಾರತೀಯರ ಬುದ್ಧಿ ಶಕ್ತಿಯ ಚತುರತೆಯ ವಿಕಾಸಕ್ಕೆ ಅವಕಾಶವಿರಲಿಲ್ಲ, ಈಗಲೂ ಇಲ್ಲ. ಇದರ ಪರಿಣಾಮ ವಾಗಿ ಈ ಗುಂಪುಗಳಿಗೆ ಸೇರಿದ ವ್ಯಕ್ತಿಗಳ ಸಾಮರ್ಥ್ಯವೂ, ಸಮಾಜದ ಅಭ್ಯುದಯಕ್ಕೆ ನೆರವಾಗುವುದು ಅಸಾಧ್ಯ. ಉದಾರ ಮನೋಭಾವವುಳ್ಳ ಮತ್ತು ಸಾಮಾಜಿಕ ಕಟ್ಟು ನಿಟ್ಟುಗಳನ್ನು ಎದುರಿಸುವ ಧೈರ್ಯವುಳ್ಳ ಆನಂದನು ಹೊಲತಿಯ ಹುಡುಗಿಯಾದ ಚೆನ್ನಿಯನ್ನು ದಕ್ಷಿಣ ದೇಶದ ಗಾನ ಶಾರದೆಯಾಗಿ ಮಾಡಿದನು.

ಹರಿಜನೋದ್ಧಾರದಲ್ಲಿ ಆಸಕ್ತಿಯಿದ್ದ ಆನಂದನು ಅಭಿನವ ಶಾರದೆಯನ್ನು ಗಾಂಧೀಜಿಯವರ ವಾರ್ಧಾ ಆಶ್ರಮಕ್ಕೆ ಕರೆದುಕೊಂಡು ಹೋದನು. ಈ ವಿಷಯ ವನ್ನು ಕೇಳಿ, 'ಇದುವರೆಗೆ ಒಂದು ವ್ಯಕ್ತಿಯನ್ನು ಅದರಲ್ಲಿಯೂ ಹೊಲತಿಯನ್ನು ಪರಿ ಪೂರ್ಣ ಕಲಾವಿದಳನ್ನಾಗಿ ಮಾಡಲು ನೀನು ಇಷ್ಟು ಸಾಹಸ ಮಾಡಿದೆ. ನಿನ್ನಂಥವನ ಶಕ್ತಿ ಸಮಾಜಕ್ಕೆ ಪೂರ್ತಿ ದೊರೆಯಬೇಕು. ನಿನ್ನ ಏಕಾಗ್ರತೆಯೂ, ಕಾರ್ಯತತ್ಪರತೆಯೂ, ವ್ಯವಸ್ಥಾ ಶಕ್ತಿಯೂ, ಅಸಾಧ್ಯವಾದುದು. ನಿಮ್ಮಿಬ್ಬರ ಪೂರ್ಣ ಶಕ್ತಿಯನ್ನು ನಿಮಗೆ ಪ್ರಿಯವಾದ ಹರಿಜನ ಸೇವೆಗೆ ವಿನಿಯೋಗಿಸಿ" ಎಂದು ಗಾಂಧೀಜಿಯವರು ಹೇಳಿದರು (ಪು ೨೩೯).

ಹೇಮಾವತಿ ಮದರಾಸಿಗೆ ಹೋದುದು ಆಗಸ್ಟು ೧೯೪೨ನೇ ಇಸವಿಯಲ್ಲಿ (ಪು ೨೪೬). ಆಗ ಹೇಮಾವತಿಗೆ ಹದಿನೆಂಟು ವರ್ಷ ವಯಸ್ಸು. ಅಭಿನವ ಶಾರದೆಗೆ ಇಪ್ಪತ್ತು ವಯಸ್ಸು. ಆನಂದನಿಗೆ ಮೂವತ್ತಕ್ಕೆ ಮೀರಿತ್ತು. (ಪು ೨೪೧).

ಚೆನ್ನಿಯು ಸುಮಾರು ಹನ್ನೆರಡು ವರ್ಷ ತನ್ನ ಊರನ್ನು ಬಿಟ್ಟು ಆನಂದನ ಜೊತೆಯಲ್ಲಿ ಸರಿಸಮಾನಳಾಗಿ ತನ್ನ ಜೀವನವನ್ನು ಕಳೆದಿದ್ದರೂ ಹೇಮಾವತಿಗೆ ಊಟ ವನ್ನು ಬಡಿಸುವಾಗ ತಾನು ಹೊಲತಿಯೆಂಬ ಭಾವನೆಯು ತನ್ನ ಮನಸ್ಸಿನಲ್ಲಿ ಮೂಡಿ ಬಂತು. ಇದನ್ನು ನೋಡಿ ಆನಂದನು ಹೇಮಾವತಿಗೆ ಹೀಗೆ ಹೇಳಿದನು, "ನೋಡು, ಹನ್ನೆರಡು ವರ್ಷ ನೀನು ಹೊಲತಿಯಲ್ಲ ಎಂದು ಹೇಳಿದ ಮೇಲೆಯೂ ಇನ್ನೂ ಹಳೆಯ ಭಯ ಈಕೆಗೆ ತಪ್ಪಿಲ್ಲ. ಈ ಭಯ ಸ್ವಪ್ನದಲ್ಲಿಯೂ ಕಾಡುತ್ತಿದೆ. ನಿನ್ನನ್ನು ನೋಡಿದ

ಕೂಡಲೇ ತಾನು ಹೊಲತಿ, ನೀನು ಉತ್ತಮಳು ಎಂಬ ಹಳೆಯ ಸಂಸ್ಕೃತಿ ಇವಳ ಎದುರಿಗೆ ಭೂತಾಕಾರವಾಗಿ ಎದ್ದು ನಿಂತಿದೆ." (ಪು ೨೪೨).

ಇದು ಸಂಸ್ಕಾರ ಬಲ. ಸಣ್ಣ ವಯಸ್ಸಿನಲ್ಲಿ ತಂದೆ ತಾಯಿಗಳ ಭಾವನೆಗಳೂ ಆಚರಣೆಗಳೂ ಮಗುವಿನಲ್ಲಿ ಅತ್ಯಂತ ಶಕ್ತಿಯುಳ್ಳ ಪರಿಣಾಮಗಳನ್ನುಂಟು ಮಾಡುವುವು. ಉತ್ತಮ ಮನೆತನದಲ್ಲಿ ಹುಟ್ಟಿಬೆಳೆದ ಮಗುವಿಗೆ ಧೈರ್ಯ, ಉತ್ಸಾಹ ಇರುವಹಾಗೆಯೇ, ಕೀಳುವರ್ಗದ ಮನೆತನದಲ್ಲಿ ಹುಟ್ಟಿ ಬೆಳೆದ ಮಗುವಿಗೆ ಭಯ, ಅಸಹಾಯಕತನ, ಮುಂತಾದವು ಸಹಜವಾಗಿಯೇ ಇರುವ ಹಾಗೆ ಕಾಣುವುದು.

ಕಸ್ತೂರಬಾರವರು ತೀರಿಹೋದ ಮೇಲೆ ಅವರ ಹೆಸರಿನಲ್ಲಿ ಒಂದು ನಿಧಿಯನ್ನು ಸ್ಥಾಪಿಸಬೇಕೆಂದು ನಿರ್ಣಯವಾಯಿತು. ಇದಕ್ಕೆ ಧನ ಶೇಖರಿಸಲು ದಕ್ಷಿಣ ಭಾರತದ ಅನೇಕ ಪಟ್ಟಣಗಳಿಗೆ ಕಛೇರಿಗಳನ್ನು ಕೊಡಲು ಗಾನ ಶಾರದೆ ಹೋದಳು. ಬೆಂಗಳೂರಿಗೆ ಮತ್ತೊಮ್ಮೆ ಬಂದಳು. ಅನೇಕ ಸಂಸ್ಥೆಗಳು ಗಾನ ಶಾರದೆಗೆ ಬಿನ್ನವತ್ತಳೆಗಳನ್ನರ್ಪಿಸಿ, ತಾವು ಕೂಡಿಸಿದ್ದ ಹಣವನ್ನು ಕಸ್ತೂರಬಾ ನಿಧಿಗೆ ಕೊಟ್ಟರು. ಮೈಸೂರು ವಿದ್ಯಾರ್ಥಿಗಳ ಪರವಾಗಿ ಅಗ್ರಹಾರದ ಸುಬ್ಬಾ ಭಟ್ಟರ ಮಗ ವಾಸು ಮೈಸೂರಿನಿಂದ ಬಂದಿದ್ದ. ಆಕೆಯ ಗಾನವನ್ನು ಕೇಳಿ ಆಕೆಯನ್ನು ನೋಡಿದ ಕ್ಷಣದಿಂದ ವಾಸುವಿಗೆ ಆಕೆಯ ಮೇಲೆ ಪ್ರೇಮ. ಬಿನ್ನವತ್ತಳೆಯನ್ನೂ, ಹಣವನ್ನೂ ಅರ್ಪಿಸಲು ವೇದಿಕೆಯ ಮೇಲೆ ಹೋದಾಗ ಗಾನ ಶಾರದೆಯ ಪಕ್ಕದಲ್ಲಿ ಕುಳಿತಿದ್ದ ಹೇಮಾವತಿಯನ್ನು ಗುರುತಿಸಿದನು. ತನಗೆ ಪರಿಚಯವಿದ್ದ ಹೇಮಾವತಿಯ ಮೂಲಕ ಗಾನ ಶಾರದೆಯನ್ನು ಸಂದರ್ಶಿಸಬಹುದೆಂದು ಕುತೂಹಲಪಟ್ಟನು.

ಆನಂದ ಮತ್ತು ಗಾನ ಶಾರದೆ ಕಸ್ತೂರಬಾ ನಿಧಿಗಾಗಿ ಶ್ರಮಿಸುವುದನ್ನು ಕೇಳಿ ಗಾಂಧೀಜಿಯವರು ಅವರನ್ನು ಹಳ್ಳಿಯಲ್ಲಿ ನೆಲಸಿ ಹರಿಜನ ಸೇವೆಯನ್ನು ಮಾಡಬೇಕೆಂದು ಬರೆದಿದ್ದರು. (ಪು ೨೫೯). ಈ ಸಲಹೆಯನ್ನು ಕುರಿತು ಆನಂದ, ಗಾನ ಶಾರದೆ ಮತ್ತು ಹೇಮಾವತಿ ಯೋಚನೆ ಮಾಡಿ ಅಗ್ರಹಾರಕ್ಕೆ ಸೇವೆ ಸಲ್ಲಿಸಬೇಕೆಂದು ನಿರ್ಧಾರ ಮಾಡಿದರು. (ಪು ೨೬೨) ಇದನ್ನು ಕೇಳಿ ವಾಸುವಿಗೆ ಅತ್ಯಂತ ಸಂತೋಷವಾಯಿತು. ಆತನು ಅವರ ಜೊತೆಯಲ್ಲಿ ಅಗ್ರಹಾರಕ್ಕೆ ಹೊರಟನು. ತನ್ನ ಮನೆಯಲ್ಲಿಯೇ ಅವರು ಇಳಿದುಕೊಳ್ಳಬೇಕೆಂದು ಕೇಳಿಕೊಂಡನು. ಆದರೆ ಆನಂದನು ಮೋಟಾರನ್ನು ರಾಮಣ್ಣ ಪೆರುಮಾಳರ ಮನೆಯ ಮುಂದೆ ನಿಲ್ಲಿಸಿದನು. ಮನೆಯ ಬೀಗದ ಕೈ ಸುಬ್ಬಾಭಟ್ಟರ ಮನೆಯಲ್ಲಿರುವದೆಂದು ಹೇಮಾವತಿಯು ಹೇಳಿದಳು. ವಾಸು ತಾನೇ ಬೀಗದ ಕೈ ತರುವೆನೆಂದು ಹೇಳಿ ಮನೆಗೆ ಹೋದನು. ತಾಯಿಗೆ ಬೇಗ ಕಾಫಿ, ತಿಂಡಿ ಮಾಡಬೇಕೆಂದು ಹೇಳಿದನು.

ಇಷ್ಟರಲ್ಲಿ ಊರಿನವರೆಲ್ಲರೂ, ತಮ್ಮೂರಿಗೆ ಬಂದವರನ್ನು ನೋಡಲು ಪೆರುಮಾಳರ ಮನೆಯ ಬಾಗಿಲ ಮುಂದೆ ಸೇರಿದರು. ಕೆಲವರು ಅವನ ವೇಷ ಭೂಷಣಗಳು ಬೇರೆಯಾಗಿದ್ದರೂ, ಆನಂದನನ್ನು ಗುರುತಿಸಿದರು. ವಾಸು ಪೆರುಮಾಳರ ಮನೆಯನ್ನು ತೆರೆದು ಮತ್ತೆ ತನ್ನ ಮನಗೆ ಹೋಗಿ ಕಾಫಿ, ತಿಂಡಿಯನ್ನು ತೆಗೆದುಕೊಂಡು ಬಂದು ಅವರಿಗೆ ಬಡಿಸಿದನು. ಅವರು ತಿಂಡಿಯನ್ನು ತಿನ್ನುತ್ತಿರುವಾಗ ಸುಬ್ಬಾಭಟ್ಟರು ಬಂದರು. ಹೊಸ ಹುಡುಗಿಯು ಹೊಲೆಯ ಕಾಳನ ಮಗಳು ಚೆನ್ನಿಯೆಂದು ಗುರುತಿಸಿದರು (ಪು ೨೬೭). ವಾಸುವಿನ ವರ್ತನೆಯನ್ನು ನೋಡಿ, ಅವನ ಇಚ್ಛೆ ಏನಿರಬಹುದೆಂದು ಊಹಿಸಿದ ಭಟ್ಟರು ಏನೂ ಹೇಳಲಿಲ್ಲ.

ವಾಸುವಿನ ಆದರವನ್ನು ನೋಡಿ ಆನಂದ ಆತನಿಗೆ ಗಾನ ಶಾರದೆಯ ನಿಜಸ್ಥಿತಿಯನ್ನು ಹೇಳಿದನು. ವಾಸುವು ಈ ವಿಚಾರ ತಿಳಿದುಕೊಂಡು ಆನಂದನ ಆದರ್ಶವನ್ನೂ, ಶಕ್ತಿಯನ್ನೂ ಹೊಗಳಿದನು. ಹೀಗೆ ನಿಜಸ್ಥಿತಿಯನ್ನು ಅರಿತರೂ ವಾಸುವಿನ ದೃಷ್ಟಿಯು ಬದಲಾಯಿಸಲಿಲ್ಲ. "ಮಹಾಶಯ, ನಾನು ಮೂರು ವರುಷಗಳಿಂದ ಗಾನ ಶಾರದೆಯ ಪೂಜಾರಿ. ಇವಳು ಯಾವ ತಮಿಳುನಾಡಿನವಳೋ ಎಂದುಕೊಂಡಿದ್ದೆ, ನಮ್ಮೂರಿನವಳೇ ಆದ ಮೇಲೆ ನನ್ನ ಹೆಮ್ಮೆ ಇನ್ನೂ ಹೆಚ್ಚಾಯಿತು. ಈಕೆ ಹರಿಜನ ಎನ್ನುತ್ತೀರಿ. ಇವಳ ಮಹಿಮೆ ಇನ್ನೂ ಹೆಚ್ಚಾಯಿತು." ಎಂದನು (ಪು ೨೭೦).

ಸುಬ್ಬಾ ಭಟ್ಟರು ಗಾನ ಶಾರದೆಯು ಹೊಲತಿಯೆಂದು ವಾಸುವಿಗೆ ಹೇಳಿದರೆ "ನಾನು ಹೊಲತಿಯನ್ನು ಮದುವೆಯಾಗುತ್ತೇನೆ" ಎಂದನು. ಇದನ್ನು ಕೇಳಿ ಭಟ್ಟರು ಹಾಗೆಯೇ ನೆಲದ ಮೇಲೆ ಕುಳಿತು ಬಿಟ್ಟರು. "ಸಾವಿರಾರು ವರ್ಷಗಳಿಂದ ಪರಿಶುದ್ಧ ವೈದಿಕರೆಂದು ಹೆಸರಾದ ತಮ್ಮ ಪೂರ್ವಿಕರೆಲ್ಲಾ ಈ ಕೃತ್ಯದಿಂದ ರೌರವಾದಿ ನರಕಗಳಿಗೆ ಬೀಳುವರಲ್ಲಾ ಎಂದು ಅವರಿಗೆ ನಿಜವಾಗಿ ದುಃಖವಾಯಿತು. ಮಗನ ಮೇಲೆ ಅವರು ಇಟ್ಟುಕೊಂಡಿದ್ದ ಆಸೆಯೆಲ್ಲಾ ಅಲ್ಲೇ ನಿರ್ಮೂಲವಾದುವು. 'ನನಗೆ ಮಗನಿದ್ದರೂ ಸತ್ತಂತೆಯೇ' ಎಂದು ಅವರು ಭಾವಿಸಿದರು." (ಪು. ೨೭೩)

ಸುಬ್ಬಾಭಟ್ಟರ ಮನಃಸ್ಥಿತಿಯನ್ನು ಕಾದಂಬರಿಕಾರರು ಬಹಳ ಚೆನ್ನಾಗಿ ವಿವರಿಸಿರುವರು. ತಮ್ಮ ಮಗನು ಬೇರೆ ಜಾತಿಯಲ್ಲಿ ಮದುವೆ ಮಾಡಿಕೊಳ್ಳುವ ನಿರ್ಣಯವು ದೊಡ್ಡ ಆಘಾತವಾದರೆ ಅದೇ ಹಳ್ಳಿಯ ಹೊಲತಿಯನ್ನು ಮದುವೆಮಾಡಿಕೊಳ್ಳುವನೆಂಬುದನ್ನು ಕೇಳಿ ಸ್ತಬ್ಧರಾಗಿ ಹೀಗೆ ಯೋಚಿಸಿದರು: "ಹೊಲೆಯರ ಕಾಳ ನನ್ನ ಬೀಗ ಛೇಪ್, ಛೇಪ್ ಆದರೆ ಈಗ ಕಾಳ ಇಲ್ಲ, ನನ್ನ ಮನೆಯ ಸತ್ತ ದನಗಳನ್ನೆಲ್ಲಾ ತಿಂದವನು ಕಾಳನೇ, ಈ ಗಾನಶಾರದೆಯೂ ತಿಂದಿರಬೇಕು. ಇವಳನ್ನು ಮದುವೆಯಾಗುವವನು, ನನ್ನ ಮಗ ವಾಸು." (೨೭೫)

ವಾಸು ಹೊಲತಿ ಚೆನ್ನಿಯನ್ನು ಮದುವೆಯಾಗುವ ವಿಷಯದಲ್ಲಿ ಆನಂದನಿಗೆ ಅಷ್ಟೇನು ಸಮ್ಮತವೆನಿಸಲಿಲ್ಲ. ಆದುದರಿಂದ ತನ್ನ ಕೈಲಾದಷ್ಟು ಮಟ್ಟಿಗೆ ಈ ಮದುವೆಯನ್ನು ತಪ್ಪಿಸಲು ಪ್ರಯತ್ನಿಸಿದನು, "ನಿಮ್ಮ ತಂದೆಯವರ ಆಕ್ಷೇಪಣೆಯ ಕಾರಣ ನಿನ್ನ ಧ್ಯೇಯದಷ್ಟೇ ಸತ್ಯವಾದುದು. ನಿನ್ನ ಧ್ಯೇಯದಲ್ಲಿ ನಿನಗೆ ಎಷ್ಟು ನಂಬಿಕೆಯೋ ಅವರ ಧ್ಯೇಯದಲ್ಲಿ ಅವರಿಗೂ ಅಷ್ಟೇ ನಂಬಿಕೆ" ಎಂದು ಆನಂದನು ವಾಸುವಿಗೆ ಹೇಳಿದನು, (ಪು ೨೭೫). ವಾಸುವಿನ ನಿಜವಾದ ಧ್ಯೇಯವೇನು ಎಂಬುದನ್ನು ಸಹ ಪ್ರಶ್ನಿಸಿದನು. ಹರಿಜನ ಸೇವೆ ಮಾಡುವುದು ಧ್ಯೇಯವೋ ಅಥವಾ ಗಾನ ಶಾರದೆಯನ್ನು ಮದುವೆಯಾಗುವುದು ಧ್ಯೇಯವೋ ಎಂದು ಕೇಳಿದನು. ವಾಸುವಿನ ದೃಷ್ಟಿಯೇ ಬೇರೆಯಾಗಿತ್ತು. ನಿಜವಾಗಿಯೂ ಹರಿಜನ ಸೇವೆ ಮಾಡಬೇಕಾದರೆ "ಹರಿಜನರಲ್ಲಿ ಸೇರಬೇಕು. ಅವರಲ್ಲಿ ಊಟಮಾಡಬೇಕು, ಅವರನ್ನು ಮದುವೆಯಾಗಬೇಕು. ಮನುಷ್ಯನಿಗೆ ಮನುಷ್ಯನು ತೋರಿಸುವ ಎಲ್ಲಾ ಸೌಜನ್ಯ, ಪ್ರೀತಿಗಳನ್ನು ಅವರಿಗೆ ತೋರಿಸಬೇಕು, ಅಸ್ಪೃಶ್ಯತೆ ಪೂರ್ಣ ನಿರ್ನಾಮವಾಗಬೇಕು, ನಾನು ನಮ್ಮ ಮನೆಗೆ ಒಳಕ್ಕೆ ಹೋಗುವಂತೆ ಹೊಲೆಯನೂ ಹೋಗಬೇಕು. ಇದು ನಿಸ್ಸಂಕೋಚದಿಂದ ಅವರಲ್ಲಿ ಪೂರ್ಣವಾಗಿ ಬೆರೆಯುವುದರಿಂದ ಸಾಧ್ಯವೇ ಹೊರತು ಒಬ್ಬ ಹರಿಜನನನ್ನು ಬಾಗಿಲಿಗೆ ಬಿಡುತ್ತೇನೆ, ಮತ್ತೊಬ್ಬನನ್ನು ನಡುಮನೆಗೆ, ಒಬ್ಬನಿಗೆ ದೇವಸ್ಥಾನ ಪ್ರವೇಶ, ಮತ್ತೊಬ್ಬನ ಜತೆಯಲ್ಲಿ ಸಹ ಪಂಕ್ತಿ ಭೋಜನ ಹೀಗೆ ಅರ್ಧಾರ್ಧ ಸುಧಾರಣೆಯಿಂದ ಈ ಹಳೆಯ ರೋಗ ವಾಸಿಯಾಗುವುದೇ?" ಎಂದು ವಾಸು ವಾದ ಮಾಡಿದನು (ಪು ೨೭೫ ೨೭೬).

ಇದು ತರ್ಕಬದ್ಧವಾಗಿ ಯೋಚನೆ ಮಾಡುವ ಯುವಕನ ದೃಷ್ಟಿ. ಸಾಮಾಜಿಕ ವಿಷಯಗಳಲ್ಲಿ ಯುವಕರು ಕೇವಲ ರಾಜಿಗೆ ಒಪ್ಪುವುದಿಲ್ಲ. ಒಂದು ಧ್ಯೇಯದಲ್ಲಿ ನಂಬಿಕೆಯಿದ್ದರೆ ಅದನ್ನು ಪೂರ್ತಿಯಾಗಿ ಒಪ್ಪಬೇಕು. ಅದರಿಂದ ಒದಗುವ ಕಷ್ಟ ಕಾರ್ಪಣ್ಯಗಳನ್ನು ಎದುರಿಸಬೇಕು. ಈ ಮಾರ್ಗವನ್ನೇ ಆನಂದನು ಅನುಸರಿಸಿ ಹೊಲತಿ ಚೆನ್ನಿಯನ್ನು ಹೆಸರುವಾಸಿಯಾದ ಗಾನ ಶಾರದೆಯನ್ನಾಗಿ ಮಾಡಿದನು. ಆದರೆ ತೀವ್ರಗಾಮಿ ಯುವಕ ವಾಸುವಿನ ಅಭಿಪ್ರಾಯಗಳನ್ನು ಕೇಳಿ ಆನಂದನೂ ಸಹ ಬೆರಗಾದನು.

ಆನಂದನ ಮುಖ್ಯ ಕರ್ತವ್ಯ ಹರಿಜನರ ಸೇವೆ. ಊರಿನಲ್ಲಿಯೇ ಇದ್ದುಕೊಂಡು ಈ ಕೆಲಸವನ್ನು ಮಾಡುವುದು ಸಾಧ್ಯವಿಲ್ಲವೆಂಬುದು. ಆತನಿಗೆ ಸ್ಪಷ್ಟವಾಯಿತು. ಆದುದರಿಂದ ಹರಿಜನ ಕೇರಿಯ ಮುಂಭಾಗದಲ್ಲಿ ಒಂದು ತೆಂಗಿನ ಮನೆಯನ್ನು ಕಟ್ಟಲು ಪ್ರಾರಂಭಿಸಿದರು. ಅದನ್ನು "ವಾಲ್ಮೀಕ ಕುಟೀರ" ಎಂದು ಕರೆದನು. ಇದನ್ನು ಹರಿಜನರ ಸಹಾಯದಿಂದಲೇ ನಿರ್ಮಿಸಿದನು. ಆನಂದನೂ ಗಾನ ಶಾರದೆಯೂ ಆ ಮನೆಯಲ್ಲಿಯೇ ವಾಸಮಾಡಿದರು. ಹೇಮಾವತಿ ಅಗ್ರಹಾರದಲ್ಲಿ ಇದ್ದು ಕುಟೀರದಲ್ಲಿ ಕೆಲಸ

ಮಾಡುತ್ತಿದ್ದಳು. ಕೇರಿಯ ಶುದ್ಧೀಕರಣ, ಮಕ್ಕಳ ವಿದ್ಯಾರ್ಥಿನಿಲಯ. ಸಂಗೀತ, ನೃತ್ಯ ಮುಂತಾದ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು. ವಾಸು ಈ ಕೆಲಸಗಳಲ್ಲಿ ಭಾಗವಹಿಸಿದನು. ಕ್ರಮೇಣ 'ವಾಲ್ಮೀಕಿ ಕುಟೀರವೇ' ಅಗ್ರಹಾರದ ಸಂಸ್ಕೃತಿಯ ಕೇಂದ್ರವಾಯಿತು. ಪ್ರತಿ ಶನಿವಾರ ಸಾಯಂಕಾಲದಲ್ಲಿ ರಾಮ ಭಜನೆಗೆ ಮೊದಲು ಹರಿಜನರು ಮಾತ್ರ ಬರುತ್ತಿದ್ದರು. ಕ್ರಮೇಣ ಅಗ್ರಹಾರದ ನಿವಾಸಿಗಳು ಹೆಚ್ಚು ಹೆಚ್ಚಾಗಿ ಸೇರುತ್ತಿದ್ದರು.

ಸುಬ್ಬಾಭಟ್ಟರು ಏನಾದರೂ ಮಾಡಿ ವಾಸುವಿನ ದೃಷ್ಟಿಯನ್ನು ಬದಲಾಯಿಸಬೇಕೆಂದು ಪ್ರಯತ್ನಿಸಿದರು. ಅದು ನಿಷ್ಫಲವಾಯಿತು. ಕಡೆಗೆ ಗಾನ ಶಾರದೆಯ ಹತ್ತಿರ ಹೋದರು. "ನನ್ನ ಸಂಸಾರವನ್ನೂ, ಪಿತೃಗಳನ್ನೂ ನರಕದಲ್ಲಿ ಅದ್ದಬೇಡ! ಜಾತಿ ಕೆಡಿಸಿ ನಮ್ಮ ಕರುಳಿನಲ್ಲಿ ಯಾಕೆ ಕಿಚ್ಚು ಇಕ್ಕುತ್ತೀ? ಒಂದು ಆರು ತಿಂಗಳು ಈ ಊರನ್ನು ಬಿಟ್ಟು ಹೋಗು" ಎಂದು ಅವಳನ್ನು ಬೇಡಿಕೊಂಡರು (ಪು ೨೮೪). "ನಾನು ಅವರನ್ನು ಬಿಟ್ಟರೂ, ಅವರು ನನ್ನನ್ನು ಬಿಡುವಂತಿಲ್ಲ. ನನ್ನನ್ನು ಬಿಟ್ಟಮೇಲೆ ಅವರು ಬೇರೆ ಮದುವೆಯಾಗುವುದಿಲ್ಲವೆಂಬುದು ನಿಮಗೆ ಗೊತ್ತಾಗಿರಬೇಕು" ಎಂದು ಆಕೆ ಇವರಿಗೆ ಹೇಳಿದಳು. ಆಗ ಭಟ್ಟರು ಆಕೆಯ ಮುಂದೆ ಅನೇಕ ಕಟ್ಟುಗಳ ನೋಟುಗಳನ್ನು ಇಟ್ಟರು. ಲಕ್ಷಾಂತರ ರೂಪಾಯಿ ಸಂಪಾದಿಸಿದ ಗಾನ ಶಾರದೆಯು ಸಿಂಹಿಣಿಯಂತೆ ಮೇಲೆದ್ದು ನೋಟಿನ ಕಂತೆಗಳನ್ನು ಭಟ್ಟರ ಮುಖದ ಮೇಲೆಯೇ ಎಸೆದಳು. (ಪು ೨೮೫). ವಾಸು ಮತ್ತು ಗಾನ ಶಾರದೆಯು ತಮ್ಮ ವಿವಾಹಕ್ಕೆ ಸಮ್ಮತಿಯನ್ನೀಯಬೇಕೆಂದು ಆನಂದನನ್ನು ಬೇಡುತ್ತಿದ್ದರು. ಆದರೆ ಸಾವಿರಾರು ವರ್ಷಗಳಿಂದ ಬಂದಿದ್ದ ಪದ್ಧತಿಗೆ ವಿರೋಧವಾಗಿ ಹೋಗಲು ಆನಂದನಿಗೆ ಧೈರ್ಯ ಬರಲಿಲ್ಲ. ಕೊನೆಗೆ ಗಾಂಧೀಯವರಿಗೆ ಪತ್ರ ಬರೆದನು. ವಿವಾಹವು ಸೇವಾಗ್ರಾಮದಲ್ಲಿ ಗಾಂಧೀಯವರ ನೇತೃತ್ವದಲ್ಲಿಯೇ ನಡೆಯಬೇಕೆಂದು ನಿಶ್ಚಯವಾಯಿತು. ಸೇವಾಗ್ರಾಮದಲ್ಲಿ ಅವರ ಮದುವೆಯು ಶಾಸ್ತ್ರೋಕ್ತವಾಗಿ ಆಶ್ರಮದ ಶಾಸ್ತ್ರಿಗಳು ನಡೆಸಿದರು. ಶ್ಲೋಕಗಳ ಅರ್ಥವನ್ನು ವಿವರಿಸಿದರು. (ಪು ೨೯೬).

ಹೇಮಾವತಿಯ ಗಂಡನಾದ ಸುಂದರ ಸೈನ್ಯದಿಂದ ನಿವೃತ್ತನಾಗಿ ತನ್ನ ಸಂಪಾದನೆಯನ್ನೆಲ್ಲಾ ಕಳೆದುಕೊಂಡು ವಾಲ್ಮೀಕಿ ಆಶ್ರಮವನ್ನು ಬಂದು ಸೇರಿದನು. (ಪು ೩೦೦). ಆನಂದನ ಸಲಹೆಯಂತೆ ಪಾಠಶಾಲೆಯಲ್ಲಿ, ವೈದ್ಯ ಶಾಲೆಯಲ್ಲಿ, ಗೋಸೇವೆಯಲ್ಲಿ ಭಾಗವಹಿಸಿದನು.

'ವಾಲ್ಮೀಕಿ ಕುಟೀರ'ವನ್ನು ಸ್ಥಾಪಿಸಿದ ಮೂರು ತಿಂಗಳೊಳಗಾಗಿಯೇ, ಹರಿಜನರು, ದೇವಾಲಯ ಪ್ರವೇಶದ ಚಳುವಳಿ ಹೂಡಬೇಕೆಂಬುದು ವಾಸುವಿನ ಇಷ್ಟವಾಗಿತ್ತು. ಇದರ ಅಂಗವಾಗಿ ಹರಿಜನರ ಒಂದು ಸಭೆಯನ್ನು ಕರೆಯಬೇಕೆಂದು ತೀರ್ಮಾನವಾಯಿತು.

ಅಷ್ಟರೊಳಗೆ ದೇಶಾಂತರಕ್ಕೆ ಹೋಗಿದ್ದ ರಾಮಣ್ಣ ಪೆರುಮಾಳರು ಅಗ್ರಹಾರಕ್ಕೆ ಹಿಂದುರುಗಿದರು, (ಪು ೩೦೬).

ಹರಿಜನರ ಸಭೆಯು ಮಧ್ಯಾಹ್ನ ಮೂರು ಗಂಟೆಗೆ ಸೇರಬೇಕೆಂದೂ, ಸಾಯಂಕಾಲ ಸಮಯದಲ್ಲಿ ಅವರು ತಮ್ಮ ಮನೆಗಳಿಗೆ ಹಿಂತಿರುಗಬೇಕೆಂದು ತೀರ್ಮಾನಿಸಲಾಯಿತು. ಮೂರು ಗಂಟೆಗೆ ಸರಿಯಾಗಿ ಸಾವಿರಾರು ಜನ ಸುತ್ತಲ ಹಳ್ಳಿಗಳಿಂದ ಬಂದು ಸೇರಿದರು. ಸಭೆಯು ಕ್ರಮಭದ್ಧವಾಗಿ ನಡೆಯಿತು. ಆದರೆ ವೈದಿಕರಿಗೆ ದೊಡ್ಡ ಭಯ, ಅವರೆಲ್ಲರೂ ಹಾಗೆಯೇ ದೇವಸ್ಥಾನದೊಳಗ ಹೋಗಬಹುದೆಂಬುದು ಅವರ ಭೀತಿ, ಅದನ್ನು ತಡೆಯ ಬೇಕೆಂದು ಅವರು ಸಿದ್ಧರಾದರು.

ಹರಿಜನರ ದೊಡ್ಡ ಸಭೆ ಸೇರಿದುದನ್ನು ಕಂಡು ಹೆಂಡದ ಕಂಟ್ರಾಕ್ಟರು ನಾಲ್ಕು ಲಾರಿ ಹೆಂಡವನ್ನು ಸಭಾ ಮಂಟಪದಿಂದ ಒಂದು ಫರ್ಲಾಂಗ್ ದೂರದಲ್ಲಿ ನಿಲ್ಲಿಸಿದರು. (ಪು ೩೦೧). ತಮ್ಮ ಊರುಗಳಿಗೆ ಹೋಗದೆ ಹೆಂಡದ ಅಂಗಡಿಗೆ ಹೋಗಿ ಚೆನ್ನಾಗಿ ಕುಡಿದು ಬಿಟ್ಟರು.

ಊರಿನ ಉತ್ತಮರು ಭಯಬಿದ್ದ ಹಾಗೇ ಈ ಸಾವಿರಾರು ಮಂದಿ ಹೊಲೆಯರು ಕುಡಿದು ತಾವು ಮಾಡಿದ ನಿರ್ಣಯಗಳನ್ನು ಮರೆತು ದೇವಸ್ಥಾನದೊಳಗೆ ನುಗ್ಗಲು ಹಿಂತಿರುಗಿದರು. ಇದನ್ನು ನಿರೀಕ್ಷಿಸಿದ ಆನಂದ, ವಾಸು, ಸುಂದರ, ರಾಮಣ್ಣ ಪೆರುಮಾಳ ಮುಂತಾದವರೆಲ್ಲಾ ಇನ್ನೊಂದು ಕಡೆಯಿಂದ ದೇವಸ್ಥಾನವನ್ನು ಸೇರಿದರು. ಹೊಲೆಯರು ಮುನ್ನುಗ್ಗುವಾಗ ತಾವೇ ಅವರನ್ನು ಎದುರಿಸಿದರು. ಅವರನ್ನು ಹೊಡೆದ ಮೇಲೆ ಅವರು ಯಾರೆಂಬುದು ಹೊಲೆಯರಿಗೆ ಗೊತ್ತಾಯಿತು. ಆಗ ಪೆರುಮಾಳರ ಸಲಹೆಯಂತೆ ಆನಂದ ಹಾಡಲಾರಂಭಿಸಿದನು. ಆ ಹಾಡುಗಳನ್ನು ಕೇಳಿ ಪರಿಜನರು ಸುಮ್ಮನೆ ನಿಂತು ಕಡೆಗೆ ತಮ್ಮ ಹಳ್ಳಿಗಳಿಗೆ ಹಿಂತಿರುಗಿದರು.

ವಾಸುವಿಗೂ, ಸುಂದರನಿಗೂ, ಏಟು ಬಹಳ ಬಲವಾಗಿ ಬಿದ್ದಿತು. ಆನಂದನ ಗಾನ ನಡೆಯುತ್ತಿರುವಾಗಲೇ ದೇವಸ್ಥಾನದ ಬಳಿಗೆ ಗಾನ ಶಾರದೆ ವಾಸುವಿಗೂ, ಹೇಮಾವತಿ ಸುಂದರನಿಗೂ ಶುಶ್ರೂಷೆ ಮಾಡಿದರು. ವಾಸುವಿನ ಗಾಯವನ್ನು ತೊಳೆಯಲು ನೀರನ್ನು ಕೇಳಿದಾಗ ಭಟ್ಟರು ಗಾಬರಿಯಲ್ಲಿ ದೇವರ ತೀರ್ಥದ ಬಟ್ಟ ಲಲ್ಲಿಯೇ ತಂದುಕೊಟ್ಟರು.

ವಾಸುವಿಗೂ, ಸುಂದರನಿಗೂ ಚೆನ್ನಾಗಿ ಗುಣವಾದ ಮೇಲೆ, ಆನಂದನು 'ವಾಲ್ಮೀಕಿ ಕುಟೀರ'ದ ಸ್ವಯಂ ಸೇವಕರ ಸಭೆಯೊಂದನ್ನು ಕರೆದು ಉತ್ತಮರ ಒಪ್ಪಿಗೆ ಇಲ್ಲದೆ ಬಲಾತ್ಕಾರವಾಗಿ ದೇವಸ್ಥಾನದ ಪ್ರವೇಶವನ್ನು ಮಾಡುವುದು ಸರಿಯಲ್ಲವೆಂದೂ

'ವಾಲ್ಮೀಕಿ ಕುಟೀರ'ದಲ್ಲಿಯೇ ಒಂದು ದೇವಸ್ಥಾನವನ್ನು ಸ್ಥಾಪಿಸಬೇಕೆಂದೂ ತೀರ್ಮಾನಿಸಲಾಯಿತು. (ಪು ೩೧೮).

'ವಾಲ್ಮೀಕಿ ಕುಟೀರ'ದಲ್ಲಿಯೇ ಒಂದು ದೇವಸ್ಥಾನವನ್ನು ಸ್ಥಾಪಿಸಿದ ಮೇಲೆ ಆನಂದನು ಯಾರಿಗೂ ಹೇಳದೆ ಅಲ್ಲಿಂದ ಹೊರಟುಹೋದನು.

ಈ ವಿಧವಾಗಿ ಕಾದಂಬರಿಕಾರರು ಹರಿಜನೋದ್ಧಾರಕ್ಕೆ ಎಷ್ಟೋ ಕೆಲಸವನ್ನು ಮಾಡಿ ಕೊನೆಗೆ ಸಾಮಾಜಿಕ ಘರ್ಷಣೆಯನ್ನು ತಪ್ಪಿಸಲು ಪ್ರತ್ಯೇಕ ದೇವಾಲಯದ ಸ್ಥಾಪನೆಯೇ ಮಾರ್ಗವೆಂದು ತೋರಿಸಿ ಕಾದಂಬರಿಯನ್ನು ಮುಕ್ತಾಯ ಮಾಡಿದರು. ಅಂದರೆ ಹರಿಜನ ವರ್ಗಕ್ಕೆ ಸೇರಿದವರು ಎಷ್ಟು ಮುಂದುವರಿದರೂ, ಅವರು ಜನ್ಮತ: ಹಿಂದುಗಳಾಗಿದ್ದರೂ ಅವರಿಗೆ ದೇವಸ್ಥಾನದ ಒಳಗೆ ಹೋಗುವ ಹಕ್ಕು ಕಷ್ಟಸಾಧ್ಯವೇ ಎಂದು ತೀರ್ಮಾನಕ್ಕೆ ಬಂದ ಹಾಗಾಯಿತು.

ಕಟ್ಟಕಡೆಗೆ ಇದೇ ಮಡಿವೈಲಿಗೆ ಪ್ರಶ್ನೆಯಾಯಿತು. ಹರಿಜನರು ಎಷ್ಟೇ ಪರಿಶುದ್ಧ ಜೀವನವನ್ನು ನಡೆಸಿದರೂ, ಅವರ ವೈಲಿಗೆಗೆ ಮಾತ್ರ ಕೊನೆಯಿಲ್ಲವೆಂದು ಒಪ್ಪಿದಂತಾಯಿತು. ಈ ಹರಿಜನ ಸಮಸ್ಯೆಯ ಪರಿಹಾರವು ಈ ರೀತಿಯಲ್ಲಿ ಕೊನೆಗೊಳ್ಳುವುದು ಸಾಮಾಜಿಕ ಉಗ್ರಗಾಮಿಗಳ ದೃಷ್ಟಿಯಲ್ಲಿ ಸಮರ್ಪಕವೆನ್ನಿಸಲಾರದು.

ಲಾಸ್ ಬೊಕರೋನ್ಸ್ : ಹೊಟ್ಟೆಪಾಡಿನ ಅರ್ಥವ್ಯವಸ್ಥೆಯ ಅವಸಾನ

● ಎಚ್. ವಿ. ನಾಗೇಶ

೧. ಲಾಸ್ ಬೊಕರೋನ್ಸ್-ಹಿನ್ನೆಲೆ

ಇದು ಲ್ಯಾಟಿನ್ ಅಮೇರಿಕದ ಹಳ್ಳಿಯೊಂದರ ಕಥೆ. ಕಥೆಯ ಕೇಂದ್ರವಸ್ತು ಪನಾಮಾ ದೇಶದ ಒಂದು ಹಳ್ಳಿಯು. ಅಕ್ಕಿ ಮತ್ತು ಮುಸುಕಿನ ಜೋಳದ ಕೃಷಿಯನ್ನು ಬಿಟ್ಟುಕೊಟ್ಟು ಒಂದು ಹೊಸ ಬೆಳೆಯನ್ನು ಅಂದರೆ ಕಬ್ಬನ್ನು ಬೆಳೆಯಲು ಪ್ರಾರಂಭಿಸಿದಾಗ ಆ ಹಳ್ಳಿಗೆ ಏನಾಯಿತು ಎಂಬ ಕುತೂಹಲ. ನಮ್ಮ ಹಳ್ಳಿಯ ಹೆಸರು ಲಾಸ್ ಬೊಕರೋನ್ಸ್. ಅದು ವೆರಗಾಸ್ ಪ್ರಾಂತದಲ್ಲಿದೆ. ನೂರಾರು ವರ್ಷಗಳ ಕಾಲ ಅಲ್ಲಿಯ ಜನರು ಕೇವಲ ಹೊಟ್ಟೆಪಾಡಿಗಾಗಿ ಕೃಷಿ ಮಾಡುತ್ತಿದ್ದರು. ಆದರೆ ೧೯೫೦ರ ಸುಮಾರಿಗೆ ಅವರು ಹಣದ ಬೆಳೆಯಾದ ಕಬ್ಬನ್ನು ಬೆಳೆಯತೊಡಗಿದರು. ಈ ಪ್ರಸಂಗವನ್ನು ಅರ್ಥಶಾಸ್ತ್ರ ಮತ್ತು ಮಾನವಶಾಸ್ತ್ರಗಳ ಒಟ್ಟು ನಿಟ್ಟಿನಿಂದ ನೋಡಿದರೆ ಯಾವುದೇ ಒಂದು ಗ್ರಾಮದ ಅರ್ಥ ವ್ಯವಸ್ಥೆಯು ಆ ಗ್ರಾಮವನ್ನು ಆವರಿಸಿಕೊಂಡಿರುವ ಪ್ರಾಂತದ ಅರ್ಥವ್ಯವಸ್ಥೆಯೊಡನೆ ಹಾಗೂ ಹೊರಜಗತ್ತಿನ ಅರ್ಥವ್ಯವಸ್ಥೆಯೊಡನೆ ಹೇಗೆ ತಳಕು ಹಾಕಿಕೊಂಡಿದೆ ಎಂಬುದು ಗೋಚರವಾಗುತ್ತದೆ. ಲಾಸ್ ಬೊಕರೋನ್ಸ ದಂಥ ಎಷ್ಟೋ ಸಾವಿರ ಹಳ್ಳಿಗಳಿಗೆ ಕಾಲಕ್ರಮೇಣ ತಮ್ಮ ಗ್ರಾಮಕ್ಕಷ್ಟೇ ಸೀಮಿತವಾದ ಹಳೆಯ ಆರ್ಥಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಶಕ್ಯವಾಗಲಿಲ್ಲ. ಅವು ವಿಶಾಲ ವ್ಯವಸ್ಥೆಗಳಲ್ಲಿ ಲೀನವಾಗಿ ಹೋಗಿವೆ. ಹೊಟ್ಟೆಪಾಡಿಗಾಗಿ ಕೃಷಿ ಮಾಡುವ, ಬೆಳೆದು

ಉಣ್ಣುವ ಸರಳ ಆರ್ಥಿಕ ವ್ಯವಸ್ಥೆಗಳು ಜಗತ್ತಿನ ಬಹುತೇಕ ಕಡೆಗಳಲ್ಲಿ ಹಣ ವಿನಿಮಯ ಹಾಗೂ ಅಂತರ್ದೇಶೀಯ ಮಾರುಕಟ್ಟೆಗಳ ಜಾಲದಲ್ಲಿ ಐಕ್ಯಗೊಂಡಿವೆ.

ಲಾಸ್ ಬೊಕರೋನ್ಸ್ ೯೧ ಮನೆಗಳಲ್ಲಿ ವಾಸಮಾಡಿಕೊಂಡಿರುವ ೩೫೦ ಜನರಿರುವ ಒಂದು ಕೃಷಿಕ ಗ್ರಾಮ. ಸ್ಪಾನಿಷ್ ಭಾಷೆಯನ್ನಾಡುವ ಅಲ್ಲಿಯ ಜನರು ಸುತ್ತ ಮುತ್ತ ಇರುವ ಲ್ಯಾಟಿನ್ ಅಮೇರಿಕದ ಜನರ ಕೃಷಿಕ ಸಂಸ್ಕೃತಿಯನ್ನೇ ಹೊಂದಿದ್ದಾರೆ. ಇನ್ನುಳಿದ ಅವೆಷ್ಟೋ ಗ್ರಾಮಗಳಂತೆ ಲಾಸ್ ಬೊಕರೋನ್ಸ್ ಗ್ರಾಮದಲ್ಲಿನ ಭೂಮಿಯೂ ಕೂಡ ಆ ಗ್ರಾಮದ ಹೊರಗಿನ ಜನರ ಅಂದರೆ ಹತ್ತಿರದ ಪಟ್ಟಣ ಅಥವಾ ನಗರಗಳಲ್ಲಿ ವಾಸಿಸುತ್ತಿರುವ ಸಣ್ಣಪುಟ್ಟ ಭಂಡವಲಗಾರರ ಒಡೆತನದಲ್ಲಿತ್ತು. ಗ್ರಾಮಗಳಲ್ಲಿ ಕೃಷಿಕರು ಉತ್ತುಬಿತ್ತು ಬೆಳೆದು ತಮ್ಮ ಕುಟುಂಬದ ಖರ್ಚಿಗೆ ಸಾಲುವಷ್ಟು ಪಡೆಯುವುದು ಸಾಮಾನ್ಯವಾಗಿತ್ತು. ಅವರಿಗೆ ಹಣದ ಹೆಚ್ಚಿನ ಅವಶ್ಯಕತೆಯೇನೂ ಇರಲಿಲ್ಲ. ತಾವು ಬೆಳೆದುದನ್ನು ಅವರು ಪೇಟೆಗಳಿಗೆ ಮಾರಾಟಕ್ಕೆಂದು ತರುತ್ತಿರಲಿಲ್ಲ. ಕೃಷಿಕರು ತಮ್ಮ ಭೂಮಾಲಿಕರಿಗೆ ಶ್ರಮರೂಪದಲ್ಲಿ ಅಲ್ಪಸ್ವಲ್ಪ ಸೇವೆ ಸಲ್ಲಿಸಿದರೆ ಸಾಕಿತ್ತು. ಭೂಮಾಲಿಕರು ರೈತರಿಗೆ ಬೇಕಾದಷ್ಟು ಭೂಮಿಯನ್ನು ಉತ್ತುಬೆಳೆಯಲು ಅನುಮತಿ ಕೊಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ರೈತರು ತಮ್ಮ ಮಾಲಿಕರ ಹುಲ್ಲುಗಾವಲನ್ನು ದುರಸ್ತಿಯಿಂದ ಇಡುತ್ತಿದ್ದರು. ಹೆಚ್ಚಿನ ರೈತರು ಎರಡೋ ಮೂರೋ ವರ್ಷಕ್ಕೊಮ್ಮೆ ತಾವು ಇರುತ್ತಿದ್ದ ಭೂಮಿಯನ್ನು ಬಿಟ್ಟು ಬೇರೆಡೆ ಹೋಗಿ ಅಲ್ಲಿ ಸಾಗುವಳಿ ಮಾಡುತ್ತಿದ್ದರು. ಹೀಗೆ ಅವರು ಅರೆಸಂಚಾರಿಗಳಾಗಿರುವುದರಿಂದ ಹೆಚ್ಚು ಬೆಳೆಯುವುದಾಗಲೀ, ಉಳಿತಾಯ ಮಾಡುವುದಾಗಲೀ, ಭಂಡವಲ ಸಂಚಯ ಮಾಡುವುದಾಗಲೀ ಸಾಧ್ಯವಿರಲಿಲ್ಲ. ಎಷ್ಟು ಹೆಣಗಿದರೂ ರೈತ ಮಕ್ಕಳ ಹೊಟ್ಟೆ ಬಟ್ಟೆಗೆ ಮಾತ್ರ ಸಿಗುತ್ತಿತ್ತು. ಆದುದರಿಂದ ಈ ಗ್ರಾಮಾಂತರ ಆಸ್ತಿಪಾಸ್ತಿಯಿಂದ ನಗರದಲ್ಲಿರುವ ಭೂಮಾಲಿಕರಿಗೆ ಹೆಚ್ಚಿನ ಲಾಭ ಸಿಗುತ್ತಿರಲಿಲ್ಲ. ಅವರು ತಮ್ಮ ಒಕ್ಕಲುಗಳನ್ನು ಅವರಷ್ಟಕ್ಕೆ ಬಿಡುತ್ತಿದ್ದರು. ಹೀಗೆ ಹೊರಗಿನ ಭಂಡವಾಳವಾದಿ ಆರ್ಥಿಕ ವ್ಯವಸ್ಥೆಯ ಹೊಟ್ಟೆಯೊಳಗೆ ಲಾಸ್ ಬೊಕರೋನ್ಸದಂಥ ಹೊಟ್ಟೆಪಾಡಿನ ಕೃಷಿ ಸಮಾಜಗಳು ಹಾಗೂ ಹೀಗೂ ಬದುಕಿಕೊಂಡಿದ್ದವು.

ಮುಂದೆ ಒಂದು ದಿನ ಕಾರಣಾಂತರಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿದ್ದ ಭೂಮಿಗೆ ಹೆಚ್ಚು ಬೇಡಿಕೆ ಅಥವಾ ಬೆಲೆ ಬಂತು. ತಕ್ಷಣ ದೂರ ದೂರದಲ್ಲಿದ್ದ ಭೂಮಾಲಕರು ಚುರುಕುಗೊಂಡರು: ತಮ್ಮ ಭೂಮಿಯ ಮೇಲೆ ಕಪಿಮುಷ್ಟಿಯನ್ನು ಇಟ್ಟುಕೊಂಡರು. ಭೂಮಿಯೇ ಗ್ರಾಮ ವ್ಯವಸ್ಥೆಯ ಮೂಲಾಧಾರವಾಗಿದ್ದ ಕಾರಣ, ಇಡೀ ಅರ್ಥ ವ್ಯವಸ್ಥೆಯ ಮೇಲೆ ಅವರು ತಮ್ಮ ಹಿಡಿತವನ್ನು ಸಾಧಿಸಿಕೊಳ್ಳುವುದು ಸಾಧ್ಯವಾಯಿತು. ಕ್ರಮೇಣ ಹೊಟ್ಟೆಪಾಡಿನ ಕೃಷಿಯು ಸರಿಸಿ ಹೋಗಿ ಅದು ಭಂಡವಲ

ವಾದಿ ವ್ಯವಸ್ಥೆಯತ್ತ ತಿರುಗುತ್ತ ಬಂದಿತು. ಲಾಸ್ ಬೊಕರೋನ್ಸದಂಥ ಹಳ್ಳಿಯಲ್ಲಿ ಮಾತ್ರವಲ್ಲ, ವೆರಗಾಸ್ ಪ್ರಾಂತದ ಇತರ ಗ್ರಾಮಗಳಲ್ಲಿಯೂ, ಪನಾಮಾ ದೇಶದ ಇತರ ಭಾಗಗಳಲ್ಲಿಯೂ ಇಂಥ ಸಾಮಾಜಿಕ ಆರ್ಥಿಕ ಪರಿವರ್ತನೆಗಳುಂಟಾದುವು.

೨. ಹೊಟ್ಟೆಪಾಡಿನ ಕೃಷಿ

ಲಾಸ್ ಬೊಕರೋನ್ಸದ ಕೃಷಿಕರನ್ನು 'ಕೆಂಪೆಸಿನೊ' ಎನ್ನುತ್ತಾರೆ. ಕೆಂಪೆಸಿನೋ ಎಂದರೆ ಭೂಮಾಲಿಕರ ಕೃಪೆಯನ್ನು ಅವಲಂಬಿಸಿಕೊಂಡಿರುವ ಒಕ್ಕಲು ಮಕ್ಕಳು. ವೆರಗಾಸ್ ಪ್ರಾಂತದ ಇತರ ಗ್ರಾಮಗಳಂತೆ ಅವರ ಗ್ರಾಮ ಗಾತ್ರದಲ್ಲಿ ಚಿಕ್ಕದು. ಇತರ ಗ್ರಾಮಗಳಲ್ಲಿರುವಂತೆಯೇ ಅಲ್ಲಿ ವಸತಿಗಳು ಚದರಿದಂತಿವೆ. ಅವರ ಕೃಷಿ ವಿಧಾನಗಳೋ ಅತಿ ಸರಳ, ಹೊಲದಲ್ಲಿ ಬೆಳೆದುದನ್ನು ಮನೆಗೆ ತಂದು ಉಂಡುಬಿಡುತ್ತಿದ್ದರು. ಬೆಳೆಗಳು ಪೇಟೆಗೆ ಹೋಗುತ್ತಿರಲಿಲ್ಲ. ಹೊಟ್ಟೆಗೆ ಸಾಲುವಷ್ಟು ಬೆಳೆಯಬೇಕೆಂಬುದು ಅವರು ಒಪ್ಪಿದ ತತ್ವ. ಇದರಿಂದಾಗಿ ಸಂಪತ್ತು ವೃದ್ಧಿಗೊಳ್ಳುವ ಪ್ರಶ್ನೆಯೇ ಇರಲಿಲ್ಲ. ಅಂದರೆ ಅವರು ಬೆಳೆದುದರಲ್ಲಿ ಮಿಗುತ್ತಿರಲಿಲ್ಲ ಎಂದಲ್ಲ. ಮಿಕ್ಕಿದ್ದನ್ನು ಸಂಗ್ರಹಿಸುವುದು, ಸಂಗ್ರಹಿಸಿದ್ದನ್ನು ಮಾರುವುದು, ಮಾರಿಬಂದ ಹಣದಿಂದ ಯಂತ್ರ ಸಾಮಗ್ರಿಗಳನ್ನು ಕೊಳ್ಳುವುದು, ಯಂತ್ರಗಳ ಸಹಾಯದಿಂದ ಹೆಚ್ಚು ಹೆಚ್ಚಾಗಿ ಉತ್ಪಾದಿಸುವುದು ಇಂಥ ಭಂಡವಲವಾದ ಅವರಿಗೆ ತಿಳಿಯದು. ಬೆಳೆಯುವುದೆಲ್ಲ ಉಣ್ಣುವುದಕ್ಕೆ ಎಂಬುದಷ್ಟೇ ಅವರಿಗೆ ತಿಳಿಯುತ್ತಿದ್ದ ವಿಷಯ. ತಮ್ಮ ಮನೆಯ ಖರ್ಚಿಗೆ ಎಷ್ಟು ಬೇಕೆಂಬುದು ದೀರ್ಘಕಾಲದ ಅನುಭವದಿಂದ ಅವರಿಗೆ ತಿಳಿದಿತ್ತು. ಅಷ್ಟನ್ನು ಬೆಳೆಯಲು, ಸ್ವಯಂ ಪೂರ್ಣರಾಗಲು ಅವರು ಖಂಡಿತವಾಗಿ ಪ್ರಯತ್ನಿಸುತ್ತಿದ್ದರು. ಹೊರಗಿನವರಿಗೆ ಮಾರಾಟ ಮಾಡುವುದಕ್ಕೋಸ್ಕರ ಎಂದು ಅವರು ಏನನ್ನೂ ಬೆಳೆಯುವುದಿಲ್ಲ; ಆದರೆ ತಮಗೆ ಹೊರಗಿನಿಂದ ಏನಾದರೂ ವಸ್ತು ಒಡವೆಗಳನ್ನು ಖರೀದಿಸುವುದಿದ್ದರೆ ತಾವು ಬೆಳೆದ ಬೆಳೆಗಳನ್ನು ಮಾರಿ ಆ ವಸ್ತುಗಳನ್ನು ಕೊಳ್ಳುತ್ತಿದ್ದುದುಂಟು. ಇದಕ್ಕಿಂತ ಹೆಚ್ಚಿನ ವ್ಯಾಪಾರ ವಾಣಿಜ್ಯ ಅವರಿಗೆ ಗೊತ್ತಿರಲಿಲ್ಲ

ಅಲ್ಲಿಯ ಉತ್ಪಾದನೆಯ ಘಟಕವೆಂದರೆ ಮನೆ ಅಥವಾ ಕುಟುಂಬ. ಕುಟುಂಬದಲ್ಲಿರುವ ನಾಲ್ಕಾರು ಸದಸ್ಯರ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿಯೇ ಹೊಲಮನೆ ಕೆಲಸ ಇರುವುದು ಎಂಬುದನ್ನು ಅವರು ಚೆನ್ನಾಗಿ ಗ್ರಹಿಸಿದ್ದಾರೆ. ಬೆಳೆಯುವವರೂ ಅವರೇ, ಉಣ್ಣುವವರೂ ಅವರೇ. ಅವರ ಬಂಧು-ಬಳಗ ರಕ್ತ ಸಂಬಂಧಿಗಳೂ ಅಲ್ಲೇ ಹತ್ತಿರದಲ್ಲಿದ್ದಾರೆ. ಕೃಷಿ ಕೆಲಸದಲ್ಲಿ ಒಂದು ಕುಟುಂಬದೊಡನೆ ಇನ್ನೊಂದು ಕುಟುಂಬ ಸಹಕರಿಸುವುದಿದೆ. ಎಲ್ಲ ಕುಟುಂಬಗಳೂ ತಮ್ಮ ಕುಟುಂಬದ ಸದಸ್ಯರನ್ನು ಸಾಕುವ ಉದ್ದೇಶದಿಂದ ಕೆಲಸಮಾಡುತ್ತವೆ. ಕೆಲವು ಕುಟುಂಬಗಳು ಯಾವುದಾದರೊಂದು ವಿಶಿಷ್ಟ ಕಸಬು ಅಥವಾ ಕೆಲಸದಲ್ಲಿ ಪರಿಣತಿ ಹೊಂದಿರಬಹುದು. ಆದರೆ

ಅಂಥ ಕುಟುಂಬಗಳು ಕೂಡಾ ತಮ್ಮ ಕುಟುಂಬದ ಜನರನ್ನು ಸಾಕುವುದಕ್ಕಿಂತ ಹೆಚ್ಚಿನ ಮಹತ್ವಾಕಾಂಕ್ಷೆಯನ್ನು ಹೊಂದಿರುವುದಿಲ್ಲ. ಎಲ್ಲ ಗ್ರಾಮೀಣ ಜನರಿಗಿರುವಂತೆ ಲಾಸ್ ಬೊಕರೋನ್ಸ್ ಜನರಿಗೂ ತಮ್ಮ ಕಳ್ಳು-ಬಳ್ಳಿಗೆ ಸೇರಿದವರ ಮೇಲೆ ಮೋಹವಿದೆ. ಆದರೆ ಆ ಜನರು ತಮ್ಮೊಡನೆ ಇದ್ದರೆ ಮಾತ್ರ ನಂಟು ಗಟ್ಟಿ. ಒಟ್ಟಿಗೆ ದುಡಿದು ಒಟ್ಟಿಗೆ ಉಣ್ಣುವ ಬಂಧು ಬಳಗದವರನ್ನು ಅವರು ನೆಚ್ಚಿಕೊಳ್ಳುತ್ತಾರೆ. ಆದರೆ ಅವರು ಬೇರೆಯಾಗಿ ವಾಸಿಸುತ್ತಿದ್ದರೆ ಅಥವಾ ಊರಿನ ಹೊರಗೆ ಇದ್ದರೆ ಅಂಥವರ ಬಗ್ಗೆ ಹೆಚ್ಚಿನ ಕಾಳಜಿ ಇಲ್ಲ. ಎಷ್ಟೇ ಹತ್ತಿರದ ಬಳಗದವರಿದ್ದರೂ ಮನೆಯಿಂದ ದೂರವಿದ್ದರೆ ಅವರನ್ನು ಹಚ್ಚಿಕೊಳ್ಳುವುದಿಲ್ಲ.

ಅಲ್ಲಿನ ಶ್ರಮ ವಿಭಜನೆ ಭಾರತೀಯರಾದ ನಮಗೆ ತೀರ ಪರಿಚಿತವಿರುವ ಮಾದರಿಯದು. 'ಗಂಡು ಹೊಲಕ್ಕೆ, ಹೆಣ್ಣು ಮನೆಗೆ' ಎಂಬ ಗಾದೆಮಾತು ಎಲ್ಲರ ಬಾಯಿಯಲ್ಲೂ ಕೇಳಿಬರುತ್ತದೆ. ಗಂಡಸು ತಾನು ಗಂಡಸು ಎಂಬುದನ್ನು ಸದಾ ನೆನಪಿಸಿಕೊಳ್ಳುತ್ತಾನೆ. ತಾವು ಗಂಡಸರು ಎಂಬುದನ್ನು ತಮಗೆ ತಾವೇ ನೆನಪು ಮಾಡಿಕೊಳ್ಳುವುದಕ್ಕೋ ಏನೋ, ಹೊತ್ತಲ್ಲದ ಹೊತ್ತಿನಲ್ಲಿಯೂ ಅಲ್ಲಿಯ ರೈತರು ಒಂದು ಮಚ್ಚುಗತ್ತಿಯನ್ನು ಹಿಡಿದು ಹೋಗುವುದನ್ನು ನೋಡಬಹುದು. ಅಲ್ಲಿ ಹೆಣ್ಣು ಗಂಡುಗಳು ಕೆಲಸಕಾರ್ಯಗಳಲ್ಲಿ ಪರಸ್ಪರ ಸಹಕರಿಸುವುದಿಲ್ಲ ಎಂದು ತಿಳಿಯಬಾರದು. ಅಂಥ ಸಹಕಾರವಿದೆ. ಆದರೆ ಒಂದು ಕಟ್ಟುನಿಟ್ಟಾದ ಶ್ರಮ ವಿಭಜನೆಯಿದೆ. ಬೀಜ ಚೆಲ್ಲುವುದು, ಉಳುವುದು, ಅಗೆಯನ್ನು ಜೋಪಾನ ಮಾಡುವುದು, ಕೊಯ್ಲು ಮಾಡಿ ರಾಶಿಯನ್ನು ಮನೆಗೆ ತರುವುದು ಗಂಡಿನ ಕೆಲಸ; ಮನೆಗೆ ತಂದ ಭತ್ತವನ್ನು ಒಣ ಹಾಕುವುದು, ಅಕ್ಕಿ ಮಾಡುವುದು, ಹಸನುಮಾಡುವುದು, ಅಡಿಗೆ ಮಾಡಿ ಉಣಬಡಿಸುವುದು ಹೆಣ್ಣಿನ ಕೆಲಸ. ಈ ಶ್ರಮ ವಿಭಜನೆಯನ್ನು ಯಾರೂ ವೃಥಾ ಉಲ್ಲಂಘಿಸುವುದಿಲ್ಲ.

ಅಲ್ಲಿ ಇನ್ನೊಂದು ರೀತಿಯ ಶ್ರಮವಿಭಜನೆಯೂ ಇದೆ. ಗ್ರಾಮೀಣ ಆರ್ಥಿಕತೆಯ ದೃಷ್ಟಿಯಲ್ಲಿ ಇದಕ್ಕೆ ಬಹಳ ಮಹತ್ವವಿದೆ. ಮನೆಯ ಕಿರಿಯರಿಗೆ ಚಿಕ್ಕಂದಿನಲ್ಲೇ ಕೃಷಿಕಾರ್ಯದಲ್ಲಿ ಒಳ್ಳೆಯ ತರಬೇತಿ ಕೊಡಲಾಗುತ್ತದೆ. ಗಂಡು ಮಕ್ಕಳು ಹದಿಮೂರು ಹದಿನಾಲ್ಕು ವರ್ಷ ಪ್ರಾಯದವರಾಗುತ್ತಲೇ ಮನೆಯ ಹಿರಿಯರು ಅವರನ್ನು ದುಡಿಯುವ ಆಳುಗಳ ಲೆಕ್ಕಕ್ಕೆ ಹಿಡಿಯುತ್ತಾರೆ. ಅಂದರೆ ಈ ಕಿರಿಯರು ತಮ್ಮ ಮನೆಯಲ್ಲೇ ದುಡಿಯುವ ಆಳುಗಳಾಗುತ್ತಾರೆ. ಅವರಿಗೆ ದುಡಿದುದರಲ್ಲಿ ತಮಗೂ ಒಂದು ಪಾಲು ಸಲ್ಲಬೇಕು ಎಂಬ ಅರಿವು ಮೂಡುತ್ತದೆ. ಈ ಅರಿವನ್ನು ಮನ್ನಿಸಿ ಅವರ ತಂದೆ ತಾಯಿಗಳು ಅಥವಾ ಮನೆಯ ಹಿರಿಯರು ಮಕ್ಕಳು ಚಿಕ್ಕವರಿರುವಾಗಲೇ ಅವರ ಹೆಸರಿನಲ್ಲಿ ಒಂದಿಷ್ಟು ಕೋಳಿ, ಹಂದಿ ಅಥವಾ ಕೆಲವೊಮ್ಮೆ ಒಂದೆರಡು ದನಕರುಗಳನ್ನು

ತೆಗೆದಿಟ್ಟಿರುತ್ತಾರೆ. ದುಡಿಯಲು ಪ್ರಾರಂಭವಾದ ಕೂಡಲೇ ಅವರ ದುಡಿತಕ್ಕೆ ಅನುಗುಣವಾಗಿ ಆಸ್ತಿಪಾಸ್ತಿಯನ್ನು ಅಥವಾ ತಮ್ಮ ಹೊಲದಲ್ಲಿ ಒಂದು ಭಾಗವನ್ನು ಅವರಿಗೆಂದು ನಿಗದಿಮಾಡುತ್ತಾರೆ. ಬರಬರುತ್ತ ಈ ಪಾಲು ಬೆಳೆಯುತ್ತ ಹೋಗುತ್ತದೆ. ಪ್ರಾಯವಾಗುತ್ತಿದ್ದಂತೆ ಕಿರಿಯರು ಸ್ವತಂತ್ರರಾಗುತ್ತ ಹೋಗುತ್ತಾರೆ. ಮುಂದೊಂದು ದಿನ ತನ್ನ ದುಡಿತದ ಭಾಗವನ್ನು ತೆಗೆದುಕೊಂಡು ಮಗನು ಬೇರೆ ಮನೆ ಹೂಡ ಬಹುದು. ಇದಕ್ಕಿಂತ ಹೊರತಾದ ಪಿತ್ರಾರ್ಜಿತ ಆಸ್ತಿ, ಪಾಲು ಇತ್ಯಾದಿ ಗೊಂದಲ ವಿಲ್ಲ. ತನ್ನ ಹೆಸರಿನಲ್ಲಿ ಬೇರೆಯಾಗಿ ಇಡುತ್ತ ಬಂದ ಸರಕು ಸಾಮಗ್ರಿಗಳನ್ನು ತೆಗೆದು ಕೊಂಡು ಹೋಗಿ ಅದೇ ಊರಿನಲ್ಲಿ ಇನ್ನೊಂದು ರೈತ ಕುಟುಂಬವನ್ನು ಸ್ಥಾಪಿಸಬಹುದು. ಹೀಗೆ ಕುಟುಂಬ, ಆಸ್ತಿಪಾಸ್ತಿ, ಉತ್ಪಾದನೆಗಳಿಗೆ ಅವರದೇ ಆದ ಒಂದು ಲೆಕ್ಕಾಚಾರ ವಿದೆ.

ಈಗ ಈ ಗ್ರಾಮದ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಹೊಟ್ಟೆಪಾಡಿನ ಅರ್ಥವ್ಯವಸ್ಥೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ. ಲಾಸ್ ಬೊಕರೋನ್ಸ್ ಜನರು ಸ್ವಯಂಪೂರ್ಣತೆ ಪಡೆದಿದ್ದಾರೆ. ನಾವು ಈಗಾಗಲೇ ಹೇಳಿದಂತೆ ಅವರು ತಮ್ಮ ಬಳಕೆಗಾಗಿಯೇ ಉತ್ಪಾದಿಸುತ್ತಾರೆ. ಜಗತ್ತಿನ ಬಹುಭಾಗದಲ್ಲಿ ಹೆಚ್ಚಿನ ರೈತರು ಇಂಥ ವ್ಯವಸ್ಥೆಯನ್ನೇ ಹೊಂದಿದ್ದಾರೆ ಎಂಬ ಮಾತೂ ನಿಜ. ಅದೇನೇ ಇರಲಿ, ಇಲ್ಲಿಯ ಜನರು ಪೇಟೆಗೆಂದೇ ಬೆಳೆದು, ಪೇಟೆಗಳಿಗೆ ಮಾರಿ ಹಣ ಸಂಗ್ರಹಿಸುವುದನ್ನು ರೂಢಿ ಮಾಡಿಕೊಂಡಿಲ್ಲ. ಅವರು ತಮಗೆ ಏನು ಬೇಕು, ತಾವು ಏನನ್ನು ಉಣ್ಣಬೇಕು ಎಷ್ಟು ಉಣ್ಣ ಬೇಕು ಎಂದು ತಮ್ಮ ಆವಶ್ಯಕತೆಗಳ ಅಂದಾಜು ಮಾಡಬಲ್ಲರು. ಅದಕ್ಕೆ ಅನುಸಾರವಾಗಿ ಬೆಳೆಯುತ್ತಾರೆ ಅಥವಾ ತಾವು ಸಾಂಪ್ರದಾಯಿಕವಾಗಿ ಬೆಳೆಯುತ್ತ ಬಂದುದನ್ನೇ ತಮ್ಮ ಆವಶ್ಯಕತೆ ಎಂದು ನಂಬುತ್ತಾರೆ. ಅವರ ಪ್ರಮುಖ ಅವಶ್ಯಕತೆಗಳೆಂದರೆ ಅಕ್ಕಿ, ಮುಸುಕಿನ ಜೋಳ, ಅಡಿಗೆಯ ಎಣ್ಣೆ, ಹುರುಳಿಕಾಯಿ ಮತ್ತು ಒಂದಿಷ್ಟು ಮಾಂಸ. ಆದುದರಿಂದ ಅವರು ಇವಿಷ್ಟನ್ನೇ ಉತ್ಪಾದಿಸುತ್ತಾರೆ. ನೀವು ದುಡಿಯುವುದು ಏತಕ್ಕಾಗಿ ಎಂದು ಕೇಳಿದರೆ ಅವರು 'ಬದುಕುವುದಕ್ಕೆ, ಮತ್ತೇತಕ್ಕೆ?' ಎಂದು ಮರು ಪ್ರಶ್ನೆ ಹಾಕುತ್ತಾರೆ. ತಮಗ ಹಣಬೇಡ, ಮತ್ತೇನೂ ಬೇಡ. ಹೊಟ್ಟೆತುಂಬ ಊಟ ಬೇಕಲ್ಲ, ಎಂದು ಹೇಳುತ್ತಾರೆ. ಇಷ್ಟೇ ಅವರಿಗಿರುವ ಪರಿಜ್ಞಾನ. ಇದೇ 'ಹೊಟ್ಟೆ ಪಾಡಿನ ಅರ್ಥವ್ಯವಸ್ಥೆ'ಯ ಮನೋಭಾವ.

ಲಾಸ್ ಬೊಕರೋನ್ಸ್ ಗ್ರಾಮವು ಕೃಷಿ ಗ್ರಾಮವಾದರೂ ಅಲ್ಲಿ ನೇರವಾಗಿ ಕೃಷಿಗೆ ಸಂಬಂಧ ಪಡೆದ ಕೆಲವಾದರೂ ಕೆಲಸ ಹಾಗೂ ಕಸಬುಗಳನ್ನು ನಾವು ಕಾಣ ಬಹುದು. ಉದಾಹರಣೆಗೆ ಅಲ್ಲಿನ ಕೆಲವು ಕುಟುಂಬಗಳು ಹಕ್ಕಿ ಗೂಡುಗಳನ್ನು ಅಥವಾ ಮೀನಿನ ಬಲೆಗಳನ್ನು ಹೆಣೆಯುತ್ತವೆ. ಮತ್ತೆ ಕೆಲವು ಕುಟುಂಬಗಳು ಚಿಕ್ಕ ಕೈಚೀಲ,

ಚರ್ಮದ ಚಪ್ಪಲಿ, ಮರದ ಬೆಂಚು, ತಟ್ಟೆ, ಹೊಲಕ್ಕೆ ಒಯ್ಯುವ ಬುಟ್ಟಿ, ತಲೆಗೆ ಹಾಕಿಕೊಳ್ಳುವ ಹ್ಯಾಟು, ಹುರಿ ಹಗ್ಗ ಇತ್ಯಾದಿ ವಸ್ತುಗಳನ್ನು ಉತ್ಪಾದಿಸುತ್ತವೆ. ಬೇರೆ ಕೆಲವರು ಬಿದಿರು ಮತ್ತು ಮಣ್ಣಿನಿಂದ ಮಾಡಿದ ಮನೆಗಳನ್ನು ಕಟ್ಟಿದರೆ ಕೆಲವರು ಬಟ್ಟೆಬರೆ ಹೊಲಿಯುವುದು ಅಥವಾ ದುರಸ್ತಿ ಮಾಡುವುದು, ಕೋಳಿಮರಿ ಹಂದಿಗಳನ್ನು ಸಾಕಿ ಮಾರುವುದು, ಜಾತ್ರೆಗಳಲ್ಲಿ ಮಾರುವ ತಿಂಡಿತಿನಿಸುಗಳನ್ನು ತಯಾರಿಸುವುದು, ಊರವರಿಗಾಗಿ ಬಟ್ಟೆ ತೊಳೆದು ಮಡಿಮಾಡಿ ಕೊಡುವುದು, ಇತರ ರೈತರಿಗಾಗಿ ಬ್ರೆಡ್ಡು ತಯಾರು ಮಾಡಿಕೊಡುವುದು, ಚಿಕ್ಕ ಕಿರಾಣಿ ಅಂಗಡಿ ನಡೆಸುವುದು, ಲಾರಿಗಳಲ್ಲಿ ಹೇರು ಸಾಗಿಸುವುದು, ಶವಸಂಸ್ಕಾರ ಸಮಯದಲ್ಲಿ ಪ್ರಾರ್ಥನೆ ಸಲ್ಲಿಸಿ ದಕ್ಷಿಣೆ ಪಡೆಯುವುದು ಮುಂತಾದ ಕೃಷಿಯೇತರ ಕೆಲಸಗಳಲ್ಲಿ ತೊಡಗಿರುತ್ತಾರೆ. ಆದರೆ ಇವೆಲ್ಲ ಕೆಲಸಗಳು ದೊಡ್ಡ ಭಂಡವಲವನ್ನು ಆಶ್ರಯಿಸಿಲ್ಲ. ಇವನ್ನು ಕೇವಲ ವಿನಿಮಯಕ್ಕಾಗಿಯೇ ವ್ಯವಸ್ಥೆ ಮಾಡಿಲ್ಲ. ಇಲ್ಲಿ ಭಂಡವಲಕ್ಕಿಂತ ಶ್ರಮವೇ ಮುಖ್ಯ. ಸಾಂಪ್ರದಾಯಿಕವಾಗಿ ಒಪ್ಪಿಕೊಂಡ ಅಥವಾ ಸ್ವೀಕರಿಸಿದ ಯಾವುದೇ ವೃತ್ತಿಯನ್ನು ಗ್ರಾಮಸ್ಥರು ಅನುಸರಿಸಬಹುದು. ಈ ವೃತ್ತಿಗಳಿಂದ ಬಂದ ಲಾಭವನ್ನು ಸಂಗ್ರಹಿಸಿ, ಉತ್ಪಾದನೆಯನ್ನು ಹೆಚ್ಚಿಸಿ, ಹೆಚ್ಚು ಹೆಚ್ಚು ಗಿರಾಕಿಗಳಿಗೆ ಮಾರಿ, ವಿನಿಮಯದಿಂದ ಬಂದ ಉಳಿತಾಯದಿಂದ ತಮ್ಮ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಿಸುವ ಮಹಾತ್ವಾಕಾಂಕ್ಷೆ ಈ ಗ್ರಾಮೀಣರಿಗಿಲ್ಲ.

೩. ಶ್ರಮ ವ್ಯವಸ್ಥೆ

ಎಲ್ಲ ಸರಳ ಆರ್ಥಿಕ ವ್ಯವಸ್ಥೆಗಳಲ್ಲಿಯೂ ಶ್ರಮವೇ ಉತ್ಪಾದನೆಯ ಮೂಲಾಧಾರ. ಹೊಟ್ಟೆಪಾಡಿನ ಕೃಷಿಯ ಮಟ್ಟಿಗೆ ಹೇಳುವುದಾದರೆ ಅವಶ್ಯವಿರುವ ಭೂಮಿ, ನೀರು, ಬೀಜಗಳು ಸಾಕಷ್ಟಿದ್ದಾಗ ಉತ್ಪಾದನೆಯ ಪ್ರಮಾಣವನ್ನು ನಿರ್ಧರಿಸುವ ಅಂಶವೆಂದರೆ ರೈತರು ಕೊಡಬಹುದಾದ ಶ್ರಮವೊಂದೇ. ಈ ಶ್ರಮ ಎಷ್ಟಿರಬೇಕು, ಯಾವಾಗ ಬೇಕು, ಅದಕ್ಕೆ ಎಂಥ ಪ್ರತಿಫಲಸಿಗಬೇಕು ಎಂಬುದನ್ನು ಪ್ರತಿ ಗ್ರಾಮವೂ ನಿರ್ಧರಿಸಬೇಕಾಗುತ್ತದೆ. ಪ್ರತಿಯೊಂದು ಸಮುದಾಯದಲ್ಲಿಯೂ ಅಂಥ ಶ್ರಮವನ್ನು ವ್ಯವಸ್ಥೆಗೊಳಿಸುವ ರೂಢಿಗಳು ಅಥವಾ ಸಂಪ್ರದಾಯಗಳು ಹುಟ್ಟಿಕೊಂಡಿರುತ್ತವೆ. ಲಾಸ್‌ಬೊಕರೋನ್ಸ್‌ದಲ್ಲಿ ಈ ವ್ಯವಸ್ಥೆಯು ಕುಟುಂಬ ಘಟಕಕ್ಕೆ ಅನುಗುಣವಾಗಿ ಬೆಳೆದುಬಂದಿದೆ. ಇಲ್ಲಿ ಕೂಡಾ ಭಂಡವಲು ವ್ಯವಸ್ಥೆ ಹೆಚ್ಚೇನೂ ಮಧ್ಯ ಪ್ರವೇಶಿಸದೇ ಇರುವುದನ್ನು ಕಾಣುತ್ತೇವೆ. ಆದರೆ ತೀರ ಇತ್ತೀಚೆಗೆ, ಅಂದರೆ ಸಕ್ಕರೆ ಗಿರಣಿಗಳು ಬಂದ ಮೇಲೆ, ಗ್ರಾಮದ ಶ್ರಮ ವ್ಯವಸ್ಥೆಯೂ ಆಮೂಲಾಗ್ರವಾದ ಪರಿವರ್ತನೆ ಹೊಂದುವ ಸ್ಥಿತಿಯಲ್ಲಿದೆ.

ನಾವು ಈ ಮೊದಲೇ ನೋಡಿದಂತೆ ಕುಟುಂಬದ ಆರ್ಥಿಕ ಉತ್ಪಾದನಾ ಕ್ರಿಯೆಯಲ್ಲಿ ಲಿಂಗಭೇದ ಹಾಗೂ ವಯೋಭೇದಕ್ಕನುಗುಣವಾಗಿ ಶ್ರಮ ವಿಭಜನೆ ಇದೆ. ಹೆಣ್ಣುಮಕ್ಕಳು ಬೀಜ ಬಿತ್ತುವಲ್ಲಿ ಅಥವಾ ಕೊಯ್ಲಿನಲ್ಲಿ ಅಥವಾ ಧಾನ್ಯ ಹಸನು ಮಾಡುವುದರಲ್ಲಿ ಸಹಕಾರ ಮಾಡುತ್ತಾರೆಂಬುದು ನಿಜವಾದರೂ ಸ್ಥೂಲವಾಗಿ ನೋಡಿದರೆ ಅವರಿಗೆ ಮನೆಗೆಲಸ ಮೀಸಲು; ಅಂತೆಯೇ ಗಂಡಸರಿಗೆ ಹೊಲಗೆಲಸ ಮೀಸಲು. ಹೀಗಾಗಿ ಶ್ರಮ ಸಂಘಟನೆಗಳಲ್ಲಿ ಗಂಡಾಳುಗಳೇ ಇರುತ್ತಾರೆ.

ಜಂಟಾ, ಪ್ಯೂನಡಾ ಮತ್ತು ಎಜುಸ್ತೆ : ಮುಯ್ಯ ಮತ್ತು ಗುತ್ತಿಗೆ ಕೆಲಸ: ಗಂಡಾಳುಗಳೇ ಇರುವ ಅಂಥ ಒಂದು ಶ್ರಮ ಸಂಘಟನೆಯೆಂದರೆ 'ಜಂಟಾ'-'ಜಂಟಾ' ಎಂದರೆ ಕೂಟ. ಬಹಳಷ್ಟು ಕೆಲಸಗಾರರು ಬೇಕಾಗುವ ಹೂಲಮನೆ ಕೆಲಸಗಳಿಗಾಗಿ ಅದರಲ್ಲೂ ಬೇಗ ಬೇಗ ಮುಗಿಸಬೇಕಾದ ಕೆಲಸಗಳಿಗಾಗಿ ಅಂಥ ಜಂಟಾಗಳನ್ನು ಕಟ್ಟುತ್ತಾರೆ. ಉದಾಹರಣೆಗೆ, ಕಾಡನ್ನು ಕಡಿಯುವುದಿದ್ದರೆ. ಕಟ್ಟಿಗೆಯ ಬೇಲಿ ಹಾಕುವುದಿದ್ದರೆ, ಕಳೆ ತೆಗೆಯುವುದಿದ್ದರೆ, ಮಣ್ಣು ಬಿದಿರಿನ ತಟ್ಟಿಗಳನ್ನು ಹೊತ್ತು ಸಾಗಿಸುವುದಿದ್ದರೆ ಅಥವಾ ಮನೆ ಕಟ್ಟುವುದಿದ್ದರೆ ಅಥವಾ ಬೆಳೆ ಕೊಯ್ಯುವುದಿದ್ದರೆ ಇಂಥ ಜಂಟಾಗಳನು ಏರ್ಪಡಿಸುತ್ತಾರೆ. ಜಂಟಾ ಏರ್ಪಡುವ ರೀತಿ ಹೀಗಿದೆ : ಯಾವನಾದರೂ ಒಬ್ಬ ರೈತನಿಗೆ ಇತರ ಕೆಲವು ಕುಟುಂಬಗಳ ಕೆಲಸಗಾರರ ಸಹಾಯ ಬೇಕಾಗಿದ್ದರೆ ಅವನು ಒಂದೆರಡು ವಾರಗಳ ಮೊದಲೇ ಆ ಮನೆಗಳಿಗೆ ಹೋಗಿ ಆಮಂತ್ರಣ ಕೊಡುತ್ತಾನೆ. ನಿಗದಿಪಡಿಸಿದ ದಿನ ಎಲ್ಲ ಗಂಡಾಳುಗಳೂ ಪುರುಸೊತ್ತು ಮಾಡಿಕೊಂಡು ಆ 'ಯಜಮಾನ'ನ ಮನೆಗೆ ಕೆಲಸಕ್ಕಾಗಿ ಬರುತ್ತಾರೆ. ಅವರು ಮಾಡುವ ಕೆಲಸಕ್ಕೆ ಸಂಬಳ ವಿಲ್ಲ. ಆದರೆ ಅಲ್ಲಿಗೆ ಬಂದ ಪ್ರತಿಯೊಬ್ಬರ ಮನೆಗೂ ಅಂಥದೇ ಕೆಲಸಕ್ಕಾಗಿ ಮುಂದೆ ಒಂದು ದಿವಸದ ಮಟ್ಟಿಗೆ ಅವನು ದುಡಿಯಲು ಹೋಗಬೇಕಾಗುತ್ತದೆ. ಅಂದರೆ ಬೇಲಿ ಹಾಕುವಾಗ ಅಥವಾ ಮನೆಕಟ್ಟುವಾಗ ಅಥವಾ ಕೊಯ್ಲು ನಡೆದಾಗ ತಾನು ಹಿಂದೆ ಯಾವ ಮನೆಯವರನ್ನು ಕರೆದಿದ್ದನೋ ಅವರ ಮನೆಗೆ 'ಮುಯ್ಯ'ದ ಋಣ ತೀರಿಸಲು ಹೋಗುತ್ತಾನೆ. ಆ ಋಣ ತೀರಿಸುವ ಸಂದರ್ಭ ಕೆಲವೊಮ್ಮೆ ಕೂಡಲೇ ಬರಬಹುದು, ಕೆಲವೊಮ್ಮೆ ವಾರಗಳ ನಂತರ ಅಥವಾ ತಿಂಗಳುಗಳ ನಂತರ ಹಾಗೂ ಕೆಲವೊಮ್ಮೆ ವರ್ಷಗಳ ನಂತರ ಬರಬಹುದು. ಸಾಧಾರಣವಾಗಿ ಮುಯ್ಯದ ಕಟ್ಟುಪಾಡುಗಳನ್ನು ರೈತರು ಮುರಿಯುವುದಿಲ್ಲ. ಅಲ್ಲದೆ ಸುವ್ಯವಸ್ಥಿತವಾಗಿ ಏರ್ಪಟ್ಟ ಜಂಟಾ ರೈತರಿಗೆ ಒಂದು ಒಳ್ಳೇ ಉತ್ಸಾಹದ ಸಂದರ್ಭ. ಹಳ್ಳಿಯ ಇತರ ರೈತರು ಒಟ್ಟಿಗೆ ದುಡಿಯುವುದೇ ಒಂದು ಸಂಭ್ರಮ. ಕೆಲವು ಗಂಟೆಗಳ ಕಾಲ ಎಲ್ಲರೂ ಶ್ರಮ ಪಟ್ಟು ದುಡಿಯುವುದೇನೋ ನಿಜ; ಆದರೂ ಅಲ್ಲಿ ಸಾಕಷ್ಟು ಹಾಡುವುದು, ಹರಟೆ ಹೊಡೆಯುವುದು, ತಿನ್ನುವುದು, ಕುಡಿಯುವುದು ನಡೆದೇ ಇರುತ್ತದೆ. ಜಂಟಾ ಏರ್ಪಡಿಸಿದ ಯಜಮಾನನು ಬಂದವರಿಗೆಲ್ಲ ಕುಡಿಯಲು ಮದ್ಯವನ್ನು ಹಾಗೂ ಒಳ್ಳೇ

ಸವಿಯಾದ ಊಟವನ್ನು ಕೊಡುವುದಿದೆ. ಇದೇ ಎಲ್ಲರಿಗೂ ಸಿಗುವ ತಕ್ಷಣ ಪ್ರತಿಫಲ ಅಥವಾ ಸಂಬಳ ಎಂದರೂ ತಪ್ಪಿಲ್ಲ. ತಾನು ಒಂದು ದಿನ ಹೀಗೆ ದುಡಿದರೆ ಮುಂದೆ ತನಗೆ ಬೇಕಾಗುವ ಒಂದಾಳಿನ ಕೆಲಸವನ್ನು ಈಗಲೇ ಶೇಖರಿಸಿ ಇಟ್ಟುಕೊಂಡಂತಾಯಿತು.

ಇನ್ನೊಂದು ರೀತಿಯ ಜಂಟಾ ಇದೆ. ಯಾವುದಾದರೂ ಒಂದು ಸಣ್ಣ ಬೇಸಾಯದ ಕೆಲಸವಾಗಬೇಕಿದ್ದರೆ ಸುದ್ದಿ ತಿಳಿದ ಜನರು ಹೇಗಾದರೂ ಬಂದು ಸೇರಿಕೊಳ್ಳುತ್ತಾರೆ; ಅವರನ್ನು ಕರೆಯಬೇಕೆಂದಿಲ್ಲ. ಇದೊಂದು ರೀತಿಯ ಪರಸ್ಪರ ಸಹಾಯವೇ ಹೊರತು ಮುಯ್ಯಿದ ಋಣವನ್ನು ತೀರಿಸಬೇಕೆಂಬ ಕಟ್ಟುಪಾಡಿಲ್ಲ. ಹಾಗೆ ಸಹಾಯಕ್ಕೆ ಬಂದವರಿಗೆ ಯಜಮಾನ ಕುಡಿಯಲು, ಉಣ್ಣಲು ಕೊಡುತ್ತಾನೆ. ಇದಕ್ಕೂ ಸಣ್ಣ ಪ್ರಮಾಣದ ಜಂಟಾ ಏರ್ಪಡುವುದಿದೆ. ಉದಾಹರಣೆಗೆ, ಯಾವುದಾದರೊಂದು ಮನೆಯ ಗೋಡೆಯನ್ನು ಕೆಡಹುವುದಿದೆ ಎಂದಿಟ್ಟುಕೊಳ್ಳಿ. ಆಗ ಒಂದು ಅರ್ಧ ಗಂಟೆಯ ಕಾಲ ಹತ್ತಾರು ಜನ ಬೇಕಾಗುತ್ತಾರೆ. ಯಜಮಾನ ಹತ್ತಿರದ ಕುಟುಂಬಗಳ ಗಂಡಸರನ್ನು ಕರೆಯುತ್ತಾನೆ. ಯಾವ ಪ್ರತಿಫಲ ಅಥವಾ ಊಟೋಪಚಾರದ ಆಸೆಯಿಲ್ಲದೆ ಜನರು ಒಟ್ಟಿಗೆ ಬರುತ್ತಾರೆ. ಮತ್ತೊಂದು ರೀತಿಯ ಜಂಟಾ ಎಂದರೆ 'ಸಹಕಾರೀ ಜಂಟಾ'. ಕಷ್ಟದಲ್ಲಿರುವವನು ಅಥವಾ ಕಾಹಿಲೆಬಿದ್ದ ರೈತನು ತನ್ನ ಕೆಲಸವಾಗದೇ ಒದ್ದಾಡುತ್ತಿರುವಾಗ ನೆರೆಹೊರೆಯವರು ತಾವೇ ಒಟ್ಟಾಗಿ ಅವನ ಕೆಲಸಮಾಡಿಕೊಡುತ್ತಾನೆ. ಆ ಸಂದರ್ಭಗಳಲ್ಲಿ ಆಳುಗಳು ತಾವೇ ತಮ್ಮ ಊಟ ತಿಂಡಿಗಳನ್ನು ತರುತ್ತಾರೆ.

'ಪ್ಯನಾಡಾ' ಎಂಬ ಸಂಘಟನೆಯೂ ಜಂಟಾವನ್ನು ಹೋಲುವ ವ್ಯವಸ್ಥೆ. ಹತ್ತರಿಂದ ಇಪ್ಪತ್ತರೊಳಗಿನ ಸಂಖ್ಯೆಯಲ್ಲಿ ಗಂಡಾಳುಗಳು ಒಟ್ಟಿಗೆ ಬರುತ್ತಾರೆ. ಕಳೆ ಕೀಳುವುದೇ ಇರಲಿ, ಬೆಳೆ ಕೊಯ್ಯುವುದೇ ಇರಲಿ, ಅಥವಾ ಬೇರೆ ಯಾವ ಕೃಷಿ ಕೆಲಸವೇ ಇರಲಿ, ಇವರೆಲ್ಲ ಒಂದು ಗುಂಪನ್ನು ಸಂಘಟಿಸಿಕೊಂಡು ಸರತಿಯಂತೆ ತಮ್ಮಲ್ಲೊಬ್ಬರ ಮನೆಯ ಕೆಲಸ ಮುಗಿಸಿ, ಮತ್ತೊಬ್ಬನ ಹೊಲದ ಕೆಲಸ ಪೂರೈಸಿಕೊಂಡು, ಇನ್ನೊಬ್ಬನ ಮನೆಗೆ ಹೋಗುತ್ತಾರೆ. ಹೀಗೆ ಪ್ಯೂನಾಡಾ ಸಂಘಟನೆಯ ಎಲ್ಲ ಸದಸ್ಯರಿಗೂ ಒಂದೇ ಹೊತ್ತಿಗೆ ಇಷ್ಟು ಜನ ಕೆಲಸಗಾರರ ಸೇವೆ ಲಭ್ಯವಾಗುತ್ತದೆ ಯಾವ ಸಂಬಳ ಕೊಡುವ ಪ್ರಶ್ನೆಯೇ ಇಲ್ಲ. ತಿಂಡಿ ತೀರ್ಥ ತಯಾರಿಸಿ ಎಲ್ಲರಿಗೂ ಹಂಚುವ ಗೋಜೂ ಇಲ್ಲ. ಪ್ರತಿಯೊಬ್ಬನೂ ತನ್ನ ಕೈಲಾದಷ್ಟು ಕಠಿಣ ಪರಿಶ್ರಮವನ್ನು ಮಾಡುತ್ತಾನೆ. ಹಾಗೆ ಮಾಡದಿದ್ದರೆ ನಾಳೆ ತನ್ನ ಹೊಲಕ್ಕೆ ಬರುವ ಜಂಟಾದ ಜನರು ಕೆಲಸ ಮಾಡದೇ ತನಗೆ ನಷ್ಟವಾಗುತ್ತದೆ ಎಂಬ ಹೆದರಿಕೆ ಪ್ರತಿಯೊಬ್ಬನಿಗೂ ಇರುತ್ತದೆ. ಎಷ್ಟು ಜನರ ಜಂಟಾ ಗುಂಪು ಕಟ್ಟಬೇಕೆಂಬುದು ಅವರಿಗೆ ಅನುಭವದಿಂದ ತಿಳಿದಿದೆ. ನಾಲ್ಕು ಜನರು

ಮಾಡುವ ಕೆಲಸಕ್ಕೆ ನಾಲ್ವತ್ತು ಜನರ ಗುಂಪುಕಟ್ಟಿದರೆ ವೃಥಾ ನಷ್ಟ ಎಂದು ಅವರಿಗೆ ಗೊತ್ತು. ಪ್ಯನಡಾ ರೀತಿಯ ಸಂಘಟನೆಯಲ್ಲಿ ಒಂದು ಅನುಕೂಲವಿದೆ. ಅದೇನೆಂದರೆ ಇಲ್ಲಿ ಒಂದೇ ಋತುವಿನಲ್ಲಿ ಎಲ್ಲರ ಮನೆಯ ಕೆಲಸಗಳೂ ಮುಗಿದು ಹೋಗುವುದರಿಂದ ಯಾರಿಗೂ ಶ್ರಮರೂಪದ ಭಾರವಿಲ್ಲ; ಮುಯ್ಯಿದ ಹಂಗಿಲ್ಲ.

ಪ್ಯೂನಾಡಾಕ್ಕೆ ಭಿನ್ನವಾದ ಇನ್ನೊಂದು ವಿನಿಮಯ ಸಂಪ್ರದಾಯವಿದೆ. ಇದನ್ನು 'ಆಳುಗಳಿಸುವುದು' ಎನ್ನುತ್ತಾರೆ. ಇದೊಂದು ಸರಳ ಶ್ರಮ ವಿನಿಮಯ ಪದ್ಧತಿ. 'ಅ' ಎಂಬಾತನು 'ಬ' ಎಂಬಾತನ ಕೆಲಸದಲ್ಲಿ ಸಹಾಯಮಾಡುತ್ತಾನೆ. ಇದಕ್ಕೆ ಪ್ರತಿಯಾಗಿ 'ಬ'ನು ಅಂಥದೇ ಇನ್ನೊಂದು ಸಂದರ್ಭದಲ್ಲಿ 'ಅ'ನಿಗಾಗಿ ಸಮಪ್ರಮಾಣದಲ್ಲಿ ದುಡಿಯಬೇಕು. ಇಲ್ಲಿ ಒಬ್ಬನ ಸಹಾಯವನ್ನೇ ಪಡೆಯಬೇಕೆಂಬ ಕಟ್ಟುಪಾಡಿಲ್ಲ. ತನ್ನಂತೆಯೇ ದುಡಿಯಬಲ್ಲ ಇಬ್ಬರ ಅಥವಾ ಮೂವರ ಸಹಾಯ ಪಡೆಯಬಹುದು. ಮುಂದೆ ಅವರಿಗೆ ಅಗತ್ಯ ಬಿದ್ದಾಗ ಅವರಲ್ಲಿಗೆ ಹೋಗಿ ತಾನು ಶ್ರಮದ ಸಂದಾಯ ಮಾಡಬೇಕು. ತಾನು ಬೇರೆಯವರ ಸಹಾಯಕ್ಕೆ ಹೋದರೆ ಅವರ ಶ್ರಮವನ್ನು ಮುಂದೆ ತನಗೆ ಬೇಕಾದಾಗ ಉಪಯೋಗಿಸುವಂತೆ ಕಾದಿರಿಸಿದಂತಾಯಿತು.

ಇನ್ನುಳಿದಂತೆ ಶ್ರಮವನ್ನು ಸಂಬಳದ ಮೇಲೆ ಪಡೆಯಬಹುದು, ಅಥವಾ ಗುತ್ತಿಗೆಯ ಮೇಲೆ ಪಡೆಯಬಹುದು. ಹೊಟ್ಟೆಪಾಡಿನ ಕೃಷಿಯನ್ನು ಅನುಸರಿಸುತ್ತಿದ್ದಾಗಲೂ ಕೆಲವೊಂದು ಕೆಲಸಕ್ಕಾಗಿ ಸಂಬಳದ ಆಳುಗಳನ್ನು ರೈತರು ಕ್ವಚಿತ್ತಾಗಿ ಇಟ್ಟುಕೊಳ್ಳುತ್ತಿದ್ದುದು ಉಂಟು. ಈಗಂತೂ ಹಣದ ಬೆಳೆಗಳನ್ನು ಬೆಳೆಸಲು ತೊಡಗಿದ ಮೇಲೆ ಲಾಸ್ ಬೊಕರೋನ್ನಸದ ರೈತರು ಹೆಚ್ಚಾಗಿ ಸಂಬಳದ ಆಳುಗಳ ಮೇಲೆ ಅವಲಂಬಿಸಿಕೊಂಡಿದ್ದಾರೆ. ಈ ಕೃಷಿಕಾರ್ಮಿಕರ ಮೇಲ್ವಿಚಾರಣೆಗಾಗಿ ಮ್ಯೊಂಡದೋರ್ ಎಂಬ ಮೇಲ್ವಿಚಾರಕರನ್ನು ಇಟ್ಟುಕೊಳ್ಳುತ್ತಾರೆ. ಗುತ್ತಿಗೆ ಅಥವಾ 'ಎಲ್ ಎಜುಸ್ತೆ' ಅಂದರೆ ಯಾವುದಾದರೊಂದು ಕೆಲಸವನ್ನು ಒಬ್ಬರಿಗೆ ಇಷ್ಟು ಹಣ ಎಂದು ನಿಗದಿಪಡಿಸಿ ಒಪ್ಪಿಸಿ ಬಿಡುವುದು. ಗುತ್ತಿಗೆಗೆ ಕೊಟ್ಟ ಕೆಲಸವನ್ನು ಮಾಡಿ ಮುಗಿಸುವ ಹೊಣೆ ಗುತ್ತಿಗೆದಾರರದ್ದು. ಅವರಿಗೆ ಆಳುಕಾಳು ಬೇಕಾದರೆ ತಾವೇ ನೋಡಿಕೊಳ್ಳುತ್ತಾರೆ. ಕಬ್ಬಿನ ಬೆಳೆಯ ಋತುವಿನಲ್ಲಿ ಇಂಥ ಗುತ್ತಿಗೆಗಳು ಹೆಚ್ಚು ಪ್ರಚಾರಕ್ಕೆ ಬಂದವು. ಹೊಟ್ಟೆಪಾಡಿನ ಕೃಷಿಯ ವ್ಯವಸ್ಥೆಯಿಂದ ತ್ವರಿತವಾಗಿ ವಿನಿಮಯದ ಅರ್ಥವ್ಯವಸ್ಥೆಗೆ ತಿರುಗುತ್ತಿರುವ ಲಾಸ್ ಬೊಕರೋನ್ನಸದಂಥ ಗ್ರಾಮಗಳಲ್ಲಿ ಪರಸ್ಪರ ಸಹಕಾರ ತತ್ವದ ಮೇಲೆ ಆಧರಿಸಿರುವ ಜಂಟಾ, ಪ್ಯನಾಡಾದಂಥ ವ್ಯವಸ್ಥೆಗಳು ಮಾಯವಾಗಿ ಈಗ ಹಣಕ್ಕಾಗಿ ಶ್ರಮವನ್ನು ಮಾರುವ ಪದ್ಧತಿಗಳು ಪ್ರಚಾರಕ್ಕೆ ಬಂದಿವೆ.

೪. ಬದಲಾವಣೆಯ ಬೀಜಗಳು : ಕಬ್ಬಿನ ಬೆಳೆ

ಪನಾಮಾದ ಗ್ರಾಮಾಂತರ ಪ್ರದೇಶದಲ್ಲಿ ಬಹುದಿನಗಳಿಂದಲೂ ಕಬ್ಬನ್ನು ಬೆಳೆಸುತ್ತಿದ್ದರು. ಜನರ ತಿಂಡಿತಿನಿಸುಗಳಿಗೆ ಬೇಕಾದ ಕಾಕಂಬಿ ಅಥವಾ ಕಬ್ಬಿನರಸಕ್ಕೆ ಆ ಕಬ್ಬು ಉಪಯೋಗವಾಗುತ್ತಿತ್ತು. ಕಬ್ಬಿನ ರಸದಿಂದ ತಯಾರಿಸಿದ ಮದ್ಯ ಅವರಿಗೆ ಶ್ರೇಷ್ಠ ಪಾನೀಯ. ಇತ್ತೀಚಿತ್ತಲಾಗಿ ಕೆಲವರು ಕಂದು ಸಕ್ಕರೆ ತಯಾರಿಸುವುದನ್ನೂ ಕಲಿತಿದ್ದರು. ಅದೇನೇ ಇದ್ದರೂ ಅವರು ಕಬ್ಬನ್ನು ಬೆಳೆಯುತ್ತಿದ್ದುದು ತಮ್ಮ ಮನೆಯ ಅಥವಾ ನೆರೆಹೊರೆಯವರ ಖರ್ಚಿಗೆ, ಅಂದರೆ ಉಪಯೋಗಕ್ಕೆ. ಹೊರಗಿನ ಪೇಟೆಗಳಲ್ಲಿ ಮಾರಾಟಮಾಡಲೆಂದು ಬೆಳೆಯುತ್ತಿರಲಿಲ್ಲ. ಲಾಸ್ ಬೊಕರೋನ್ಸ್ ಗ್ರಾಮವು ದೊಡ್ಡ ಪ್ರಮಾಣದಲ್ಲಿ ಕಬ್ಬಿನ ಬೆಳೆಗೆ ಮನಸ್ಸು ಮಾಡಿದ್ದು ೧೯೫೦ರ ನಂತರ. ಹೀಗೆ ಆಗುವುದಕ್ಕೆ ಹಲವು ಸಂದರ್ಭ ಸನ್ನಿವೇಶಗಳು ಕೂಡಿ ಬಂದವು. ಹಿಂದೆ ಆ ಗ್ರಾಮವನ್ನು ಪೇಟೆಗೆ ಜೋಡಿಸುವ ಒಳ್ಳೇ ರಸ್ತೆಯಿರಲಿಲ್ಲ. ೧೯೫೪ರ ಹೊತ್ತಿಗೆ ಅಲ್ಲಿಂದ ಹಾದುಹೋಗುವ ಪನಾಮಾ ನಗರದ ಹೆದ್ದಾರಿ ಸಿಮೆಂಟು ಕಾಂಕ್ರೀಟು ರಸ್ತೆಯಾಗಿ ಮಾರ್ಪಟ್ಟಿತು. ಇದರಿಂದ ಟ್ರಕ್ಕುಗಳಲ್ಲಿ ಸರಕು ಹೇರಿಕೊಂಡು ಹೋಗುವುದಕ್ಕೆ ಅನುಕೂಲವಾಯಿತು. ಇದೇ ಹೊತ್ತಿಗೆ ನೆರೆಯ ಕೋಕ್ಲೆ ಪ್ರಾಂತದಲ್ಲಿದ್ದ ಎರಡು ಸಕ್ಕರೆ ಗಿರಣಿಗಳು ಪೂರ್ಣಪ್ರಮಾಣದ ವಿಸ್ತರಣಾ ಕಾರ್ಯಕ್ರಮಗಳಲ್ಲಿ ಮನಸ್ಸು ಹಾಕಿ ಲಾಸ್ ಬೊಕರೋನ್ಸ್ ಗ್ರಾಮದವರೆಗೂ ತಮ್ಮ ಗಾಳ ಬೀಸಿದ್ದವು. ಅಲ್ಲಿಯ ರೈತರಿಗೆ ಬಡ್ಡಿರಹಿತ ಸಾಲ ಒದಗಿಸುವುದಲ್ಲದೆ, ಕಬ್ಬಿನ ಬೀಜ, ಗೊಬ್ಬರ, ಸಲಕರಣೆಗಳನ್ನು ಸಾಲ ರೂಪದಲ್ಲಿ ಕೊಡಲು ಮುಂದೆ ಬಂದವು. ತಮ್ಮ ಭೂಮಿಯು ನಿಸ್ಸಾರವಾಗಿ ಭತ್ತ, ಮುಸುಕಿನ ಜೋಳ ಮುಂತಾದ ಬೆಳೆಗಳು ಹಿಂದಿನಂತೆ ಚೆನ್ನಾಗಿ ಬೆಳೆಯದೇ ಇರುವುದನ್ನು ನೋಡಿದ ರೈತರಿಗೆ ಕಬ್ಬಿನ ಬೆಳೆಯ ಸಹಾಯದಿಂದ ತಮಗೆ ಹೆಚ್ಚಿನ ಆದಾಯ ಬರುವುದಾದರೆ ಇದನ್ನೂ ತಮ್ಮ ಬೇಸಾಯದಲ್ಲಿ ರೂಢಿಸಿಕೊಂಡರೆ ಲಾಭಕರ ಎಂಬ ಭಾವನೆ ಉಂಟಾಯಿತು. ಆದುದರಿಂದ ರೈತರು ಗಿರಣಿಯ ಮಾಲಿಕರಿಗಾಗಿ ಕಬ್ಬಿನ ಬೆಳೆಯನ್ನು ಬೆಳೆದುಕೊಡುವ ಗುತ್ತಿಗೆ ವಹಿಸಿಕೊಂಡರು. ಮೊದಮೊದಲು ಕೆಲವೇ ಕೆಲವು ರೈತರು ಇದಕ್ಕೆ ಒಪ್ಪಿಕೊಂಡರೂ ಮುಂದೆ ಹೆಚ್ಚಿನವರು ಕಬ್ಬು ಬೆಳೆಯತೊಡಗಿದರು. ಇದಕ್ಕೆ ಗಿರಣಿಯವರೇ ಕೊಡುತ್ತಿದ್ದ ಬೀಜ, ಉಪಕರಣ ಹಾಗೂ ಸಾಲ ಸಿಕ್ಕುತ್ತಿತ್ತು. ರೈತರ ಶ್ರಮವೊಂದು ಇದಕ್ಕೆ ಸೇರುತ್ತಿತ್ತು. ದಿನನಿತ್ಯದ ಖರ್ಚಿಗೆ ಬೇಕಾದ ವಸ್ತುಗಳನ್ನೂ ಗಿರಣಿಯವರು ಕೊಡುವ ಮುಂಗಡ ಹಣದಿಂದ ಕೊಂಡುಕೊಳ್ಳಬಹುದಿತ್ತು. ಹೀಗಾಗಿ ರೈತರು ಈ ಕಬ್ಬಿನ ವ್ಯವಹಾರ ಒಳ್ಳೇ ಸುಲಭ ಎಂದುಕೊಂಡರು. ತಾವು ಬೆಳೆದ ಕಬ್ಬನ್ನು ಗಿರಣಿಯವರೇ ಕಳುಹಿಸುವ ಟ್ರಕ್ಕುಗಳಲ್ಲಿ ಹೇರಿ ಕಳುಹಿಸಿಬಿಟ್ಟರೆ ಅವರ ಕೆಲಸ ಮುಗಿಯಿತು. ತಮ್ಮ ಸಾಂಪ್ರದಾಯಿಕ ಆಹಾರದ ಬೆಳೆಯೊಂದಿಗೆ ಕಬ್ಬನ್ನೂ ಬೆಳೆಸುವುದು ಸಹಜವೂ ಸರಳವೂ ಆದ ಪ್ರಗತಿಯ ಮಾರ್ಗ

ಎಂದು ರೈತರು ನಂಬಿದರು. ರೈತರ ಕೈಯಲ್ಲಿ ಹಣ ಬರುತ್ತಿದ್ದಂತೆಯೇ ಅವರು ಪೇಟೆಯ ಜನರಂತೆ ತಾವೂ ರೇಡಿಯೋ, ಸಿದ್ಧ ಉಡುಪು, ಕಾರ್ಖಾನೆಯಲ್ಲಿ ತಯಾರಿಸಿದ ಹ್ಯಾಟು ಮುಂತಾದ ವಸ್ತುಗಳನ್ನು ಕೊಂಡುಕೊಳ್ಳುವುದನ್ನು ಕಲಿತರು. ಪೇಟೆಯ ಶ್ರೀಮಂತರಂತೆ ಸಂಗೀತದ ಬ್ಯಾಂಡುಗಳ ಸಮೇತ ನರ್ತಿಸುವುದನ್ನು ಕಲಿತರು. 'ನಾಗರಿಕ' ಅಥವಾ 'ಸುಸಂಸ್ಕೃತ'ರಾಗಲು ಸನ್ನದ್ಧರಾದರು. ನಾಗರಿಕತೆಯ ಈ ಹೊಸ ರುಚಿಯನ್ನು ಕಂಡ ಗ್ರಾಮಸ್ಥರಿಗೆ ಹೆಚ್ಚು ಹೆಚ್ಚು ನಗದು ಹಣದ ದಾಹ ಹುಟ್ಟಿ ಕೊಂಡಿತು. ಆದರೆ ಆ ಹಣವನ್ನು ಕೂಡಿಡುವುದನ್ನು ಅಥವಾ ಹೊಸ ಉತ್ಪಾದನೆಗಾಗಿ ವಿನಿಯೋಗಿಸುವುದನ್ನು ಅವರು ರೂಢಿಸಿಕೊಳ್ಳಲಿಲ್ಲ. ಗಿರಣಿ ಮಾಲಿಕರಿಂದ ಹೆಚ್ಚು ಹೆಚ್ಚು ಹಣಪಡೆದು ಅಥವಾ ಸಾಲಪಡೆದು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಿದ್ಧಪಡಿಸಿದ ಬಳಕೆ ವಸ್ತುಗಳನ್ನು ಕೊಳ್ಳುತ್ತ ಗ್ರಾಮದ ಹೊರಗಿನ ಆರ್ಥಿಕತೆಯ ಅಂಗವಾಗಿ ಬಿಟ್ಟರು. ತಾವು ಬರಬರುತ್ತ ಆರ್ಥಿಕವಾಗಿ ಪರಾವಲಂಬಿ ಗಳಾಗುತ್ತಿದ್ದೇವೆ ಎಂಬ ಅರಿವು ಆಗ ಅವರಿಗೆ ಆಗಲಿಲ್ಲ. ಗಿರಣಿಗಾಗಿ ಕಬ್ಬು ಬೆಳೆದು ತಾವು ತೆಗೆದುಕೊಂಡ ಸಾಲವನ್ನು ಪಾವತಿ ಮಾಡಿದರಾಯಿತು ಎಂಬ ಸರಳ ಧೋರಣೆ ಯೊಂದೇ ಅವರಿಗೆ ತಿಳಿದಿತ್ತು. ಬರಬರುತ್ತ ತಾವೆಲ್ಲ ಗಿರಣಿಯ ಗುಲಾಮರಾಗುತ್ತಿದ್ದೇವೆ ಅಥವಾ ತಾವು ತಯಾರಿಸುವ ಉತ್ಪಾದನೆಗಳಿಂದ ತಾವು ದೂರವಾಗುತ್ತಿದ್ದೇವೆ ಎಂದಾ ಗಲೀ, ತಾವು ಗ್ರಾಮದ ಆರ್ಥಿಕ ಸಾಮಾಜಿಕ ವ್ಯವಸ್ಥೆಗೆ ಶರಣು ಹೊಡೆದು ಬೇರೊಂದು ವ್ಯವಸ್ಥೆಗೆ ತಲೆಬಾಗುತ್ತಿದ್ದೇವೆ ಅಥವಾ ಹೊಸ ಬೆಳೆಯಾದ ಕಬ್ಬನ್ನು ಬೆಳೆಯುತ್ತ ತಮ್ಮ ಭೂಮಿಯ ಸಾರವನ್ನೆಲ್ಲ ನಾಶಮಾಡುತ್ತಿದ್ದೇವೆ ಎಂದಾಗಲೀ ಅವರಿಗೆ ಆಗ ಹೊಳೆಯ ಲಿಲ್ಲ. ಹೌದು, ಮುಂದೆ ನಿಧಾನವಾಗಿ ಅವರಿಗೆ ಈ ವಿಷಯಗಳೆಲ್ಲ ಒಂದೊಂದಾಗಿ ತಿಳಿದವು. ಆದರೆ ಹಳೆಯ ಆರ್ಥಿಕ ವ್ಯವಸ್ಥೆಯನ್ನು ಮರಳಿ ಪಡೆಯುವುದು ಅವರಿಗೆ ಸಾಧ್ಯವಿರಲಿಲ್ಲ. ಸಾರಹೀನವಾದ ತಮ್ಮ ಭೂಮಿಗೆ ಗೊಬ್ಬರ, ಕಳೆನಾಶಕ, ರಂಟೆ ಇತ್ಯಾದಿ ವಸ್ತುಗಳು ಬೇಕಾದಾಗ ಅವರು ಮತ್ತೆ ಗಿರಣಿಯ ಮಾಲಕರನ್ನು ಮೊರೆ ಹೊಕ್ಕು ಸಹಾಯ ಪಡೆಯಬೇಕಾಯಿತು. ಅವರ ಸಾಲಗಳು ಅಥವಾ ಮುಂಗಡಗಳು ಹೆಚ್ಚುತ್ತ ಹೋದವು.

ಈಗ ಗಿರಣಿಯ ಮಾಲಕರೇ ರೈತರಿಗೆ ಟ್ರಕ್ಕುಗಳನ್ನು ಒದಗಿಸಿದರು. ಚಿಕ್ಕಪುಟ್ಟ ರಸ್ತೆಗಳನ್ನೂ ಅವರು ಕಟ್ಟಿದರು. ಅಷ್ಟೇ ಅಲ್ಲ, ಕಬ್ಬು ಬೆಳೆಯುವ ರೈತರ ಜಗಳ ಗಳನ್ನೂ ಆ ಗಿರಣಿಯ ಜನರೇ ಬಗೆಹರಿಸತೊಡಗಿದರು. ರಾಜಕೀಯವಾಗಿಯೂ ರೈತರ ಮೇಲೆ ಪ್ರಭಾವ ಬೀರಿದರು. ಹಳೆಯ ದಿನಗಳಲ್ಲಿದ್ದ ಊಳಿಗಮಾನ್ಯ ಪದ್ಧತಿಯ ಒಡೆಯ ಒಕ್ಕಲುಗಳ ಸಂಬಂಧದ ಪುನರಾವರ್ತನೆಯಾದಂತೆ ಅನ್ನಿಸತೊಡಗಿತು. ಆದರೆ ವಸ್ತುಸ್ಥಿತಿ ಹಾಗಿರಲಿಲ್ಲ, ನಿಜವಾಗಿ ರೈತರು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳಿಗಾಗಿ ತಮ್ಮ ಶ್ರಮವನ್ನೂ ಭೂಸಂಪತ್ತನ್ನೂ ಮಾರುವ ಕೂಲಿಕಾರ

ರಾದರು. ಅವರು ಬೆಳೆದ ಕಬ್ಬಿನಿಂದ ತಯಾರಾದ ಕಂದು ಸಕ್ಕರೆ ಅಮೇರಿಕೆಯ ಸಂಯುಕ್ತ ಸಂಸ್ಥಾನದ ಜನರು ಉಣ್ಣುತ್ತಿದ್ದರೆ, ಲಾಸ್ ಬೊಕರೋನ್ಸದ ಜನರು ಅಮೇರಿಕೆಯ ಬೃಹತ್ ಕಾರ್ಖಾನೆಗಳು ಉತ್ಪಾದಿಸುತ್ತಿದ್ದ ವಸ್ತುಗಳನ್ನು ಮಾರುಕಟ್ಟೆಗಳಲ್ಲಿ ಕೊಳ್ಳುವಂತಾಯಿತು. ತಮ್ಮಂತೆಯೇ ಉಡುವ ಉಣುವ ಇತರ ಹಳ್ಳಿಗರನ್ನು ನೋಡಿ ಸಮಾಧಾನ ಪಡುತ್ತಿದ್ದ ಅವರಿಗೆ ಈಗ ಪೇಟೆಯ ಜನರ ಹಾಗೂ ಶ್ರೀಮಂತರ ಉಡಿಗೆ–ತೊಡಿಗೆ ಆಹಾರ–ವಿಹಾರಗಳನ್ನು ಕಂಡು ಮನಸ್ಸು ಚಂಚಲವಾಯಿತು. ಪೇಟೆಯ ಬೆಲೆಗಳಂತೆ ಅವರ ಮನಸ್ಸು ಅಸ್ಥಿರವಾಯಿತು.

ಹಿನ್ನೋಟದಲ್ಲಿ ಹೇಳುವುದಾದರೆ ಹೊರಗಿನ ವ್ಯವಸ್ಥೆಯು ಈ ಗ್ರಾಮದಲ್ಲಿ ಹಲವು ವಿಧಗಳಲ್ಲಿ ಪರಿವರ್ತನೆಗಳನ್ನು ತಂದಿತು. ಮೊದಮೊದಲು ಸ್ವಂತ ಬಳಕೆಗಾಗಿ ಬೆಳೆಯುತ್ತಿದ್ದ ಭತ್ತ ಜೋಳಗಳ ಕೃಷಿ ಮಹತ್ವ ಕಳೆದುಕೊಂಡಿತು. ಅವರ ಶ್ರಮ ಬೇರೆಡೆಗೆ ವರ್ಗಾಯಿಸಲ್ಪಟ್ಟಿತು. ನಿಧಾನವಾಗಿ ಗ್ರಾಮದ ಹೆಚ್ಚು ಹೆಚ್ಚು ಭೂಮಿಯು ವಾಣಿಜ್ಯ ಬೆಳೆಗಳಿಗೆ ಮೀಸಲಾಯಿತು. ಅನಂತರದ ಹಂತದಲ್ಲಿ ಕೂಲಿಕೆಲಸಕ್ಕಾಗಿ ಹೊರಗಿನ ಆಳುಗಳು ಕೂಡಾ ಬರಬೇಕಾಯಿತು. ಗ್ರಾಮದ ಶ್ರಮ ವ್ಯವಸ್ಥೆಯು ಭಂಡವಲ ವ್ಯವಸ್ಥೆಯ ರೂಪವನ್ನು ತಳೆಯಿತು.

ಒಟ್ಟಿನಲ್ಲಿ ಲಾಸ್ ಬೊಕರೋನ್ಸ್ ಗ್ರಾಮವು ಹೊಟ್ಟೆಪಾಡಿನ ಕೃಷಿಯನ್ನು ಹೆಚ್ಚು ಕಡಿಮೆ ಬಿಟ್ಟುಕೊಟ್ಟು ಭಂಡವಲ ಪ್ರಧಾನ ಕೃಷಿಯನ್ನು ಅಳವಡಿಸಿಕೊಳ್ಳುವ ದಾರಿಯಲ್ಲಿತ್ತು.

೫. ಕಳೆದ ಹತ್ತು ವರ್ಷಗಳು: ಗ್ರಾಮೀಣ ಆರ್ಥಿಕತೆಯ ಕೊನೆಯುಸಿರು

ಕಳೆದ ಹತ್ತು ವರ್ಷಗಳಲ್ಲಿ ಹಿಂದಿನ ನಾಲ್ಕುನೂರು ವರ್ಷಗಳಲ್ಲಿ ಉಂಟಾದ ಬದಲಾವಣೆಗಳಿಗಿಂತ ಹೆಚ್ಚಿನ ಮಹತ್ವದ ಬದಲಾವಣೆಗಳು ಉಂಟಾಗಿವೆಯೆಂದು ನಿರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಈ ಬದಲಾವಣೆಯ ಅಂಶಗಳು ಲಾಸ್ ಬೊಕರೋನ್ಸ್ ಗ್ರಾಮದಲ್ಲಿ ರೂಪುಗೊಂಡವುಗಳಲ್ಲ, ಅವು ಹೆಚ್ಚಾಗಿ ಹೊರಗಿನವು. ಕೆಲವು ಆಕಸ್ಮಿಕವಾಗಿ ಬಂದವು. ಉದಾಹರಣೆಗೆ, ೧೯೬೮ರಲ್ಲಿ ನಡೆದ ಚುನಾವಣೆಯಲ್ಲಿ ಆರಿಸಿ ಬಂದ ಅಧ್ಯಕ್ಷನನ್ನು ಮಿಲಿಟರಿಯು ಪದಚ್ಯುತಗೊಳಿಸಿತು. ಟೊರಿಜೋಸ್ ಎಂಬಾತ ಕ್ರಾಂತಿಕಾರಿ ಸರಕಾರದ ಅಧಿಕಾರ ವಹಿಸಿಕೊಂಡ. ಅವನು ವೆರಗಾಸ್ ಪ್ರಾಂತದ ಗ್ರಾಮಾಂತರ ಪ್ರದೇಶದಿಂದ ಬಂದವನಾದ್ದರಿಂದ ಆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗಾಗಿ ತಡವಿಲ್ಲದೆ ಪ್ರಯತ್ನಶೀಲನಾದ ಒಂದು ಯೋಜನೆ ಸಿದ್ಧವಾಯಿತು. ಇದರ ಅಂಗವಾಗಿ ಒಂದು ಬೃಹತ್ ಸಕ್ಕರೆ ಗಿರಣಿ ಪ್ರಾರಂಭವಾಯಿತು. ಮುಂದೆ ಅದನ್ನು ರೈತರ ಸಹಕಾರಿ ಸಂಸ್ಥೆಯಾಗಿ ಮಾರ್ಪಡಿಸುವ ಯೋಜನೆಯಿತ್ತು. ವೆರಗ್ವಾ

ಯೋಜನೆಯಂತೆ ಲಾಸ್ ಬೊಕರೋನ್ಸದ ಸುತ್ತಮುತ್ತ ರಸ್ತೆಗಳು, ಸಾರಿಗೆ ಬಸ್ಸುಗಳು, ಕಾರ್ಮಿಕ ಕಲ್ಯಾಣ ಯೋಜನೆಗಳು, ರಸಗೊಬ್ಬರ, ಕೀಟನಾಶಕ ಇತ್ಯಾದಿ ಬಂದವು. ಹೊಸಗಿರಣಿಯು ಸುಮಾರು ೫೦೦-೭೦೦ ಜನರಿಗೆ ಶಾಶ್ವತ ಉದ್ಯೋಗ ಒದಗಿಸಿ ಕೊಟ್ಟಿತು. ಸುಗ್ಗಿಯ ಕಾಲದಲ್ಲಿ ಇನ್ನೂ ಸುಮಾರು ೩೦೦೦ ಜನರಿಗೆ ದುಡಿಯುವ ಅವಕಾಶ ಸಿಗುವಂತಾಯಿತು. ಹೊಸ ಗಿರಣಿಯು ರೈತರ ಸಹಕಾರಿ ಸಂಸ್ಥೆಯಾಗುವ ಬದಲು ಅರೆ ಸರಕಾರಿ ಸಂಸ್ಥೆಯಾಯಿತು. ಅದು ರೈತರ ಸಾಲಗಳನ್ನು ತೀರಿಸುವ ಹೊಣೆ ಹೊತ್ತಿತು; ಅವರಿಗೆ ಮನೆಗಳನ್ನು ಕಟ್ಟಿಕೊಟ್ಟಿತು; ಅವರ ಭೂಮಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಬೃಹತ್ ಪ್ರಮಾಣದಲ್ಲಿ ಕಬ್ಬನ್ನು ಬೆಳೆಸಿತು; ಹೊಸ ಯಂತ್ರೋಪಕರಣಗಳನ್ನು ಬಳಕೆಗೆ ತಂದಿತು; ಹೊರಗಿನ ಕೂಲಿಯಾಳುಗಳು ಗ್ರಾಮದಲ್ಲಿ ದುಡಿಯಲು ಬಂದರು. ಜಂಟಾ, ಪ್ಯಾನಡಾಗಳಂಥ ಹಳೆಯ ಶ್ರಮ ವ್ಯವಸ್ಥೆಗಳು ನಿರುಪಯೋಗಿಯಾದವು. ಹಳೆಯ ಬೆಳೆಗಳೂ ಬೆಳೆತೆಗೆಯುವ ವಿಧಾನಗಳೂ ಮಾಯ ವಾದವು. ಬಲೆ ಹೆಣೆಯುವ ಅಥವಾ ಹುಲ್ಲು ಕಡ್ಡಿಯ ಚಾಪೆ ಹೆಣೆಯುವ ಕಲೆಗಳು ಮಾಯವಾದವು. ಹಂದಿ ಮತ್ತಿತರ ಜಾನುವಾರು ಸಾಕುವುದು ನಿಂತುಹೋಯಿತು.

ಹೊಸ ಬೆಳೆ, ಹೊಸ ಗಿರಣಿಗಳು ಬಂದು ಎಲ್ಲವೂ ನಾಶವಾಯಿತು ಎಂದು ನಾವು ಅಭಿಪ್ರಾಯಪಡಬಾರದು. ಜನರು ತಮ್ಮ ಭೂಮಿಯಲ್ಲಿ ಕಬ್ಬು ಬೆಳೆದುದಕ್ಕೆ ಗಿರಣಿ ಯಿಂದ ಸಾಕಷ್ಟು ಧಾರಾಳವಾಗಿಯೇ ಪ್ರತಿಫಲ ಪಡೆಯುವುದು ಸುಳ್ಳಲ್ಲ. ಆ ಪ್ರದೇಶ ದಲ್ಲಿರುವ ಜನರ ಪೈಕಿ ಉದ್ಯೋಗ ಬಯಸುವ ಎಲ್ಲರಿಗೂ ಗಿರಣಿಯು ಉದ್ಯೋಗ ಕೊಡುವ ಭರವಸೆ ಕೊಟ್ಟಿದೆ. ಒಳ್ಳೇ ಕೂಲಿಯನ್ನೂ ಕೊಡುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಸಕ್ಕರೆಯ ಬೆಲೆ ವಿಪರೀತ ಏರಿರುವುದರಿಂದ ಗಿರಣಿಯ ಆಡಳಿತ ಗಾರರು ತಮ್ಮ ಬೆಳೆಗಾರರಿಗೆ ಹಾಗೂ ಕೂಲಿಯವರಿಗೆ ಹೆಚ್ಚಿನ ಪಾಲು ಕೊಡುತ್ತಿದ್ದಾರೆ. ಇದರಿಂದಾಗಿ ಲಾಸ್ ಬೊಕರೋನ್ಸ್ ಗ್ರಾಮವು ಸದ್ಯ ಪನಾಮಾದ ಇನ್ನೂ ಅನೇಕ ಗ್ರಾಮಗಳಂತೆ ಸಮೃದ್ಧಿಯ ಫಲವನ್ನು ಉಣ್ಣುತ್ತಿದೆ.

ಇದೇ ಹೊತ್ತಿಗೆ ಇನ್ನೂ ಕೆಲವು ಸಂಗತಿಗಳನ್ನೂ ನಾವು ಗಮನಿಸಬೇಕು. ರೈತರ ಪ್ರಗತಿಯನ್ನೇ ಬಯಸುವ ಗಿರಣಿಯ ಹೊಸ ಆಡಳಿತವು ಹಾಗೂ ಪನಾಮಾ ಸರಕಾರವು ಅವರ ಬೇಕು ಬೇಡಗಳನ್ನು ಗಮನಿಸುವಲ್ಲಿ ವ್ಯವಧಾನ ತೋರಿಸುತ್ತಿಲ್ಲ. ತಾವು ನಿಧಾನವಾಗಿ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದ್ದೇವೆ ಎಂಬ ಶಂಕೆ ಹೆದರಿಕೆಗಳು ಜನರಲ್ಲಿ ಹುಟ್ಟಿಕೊಂಡಿವೆ. ಹಳೆಯ ಕಾಲದ ಜನರು ತಮ್ಮ ಕುಟುಂಬ ಗಳು ಸಹಕಾರ, ಮುಯ್ಯಿ, ಸಾಲಗಳಿಂದ ಒಬ್ಬರಿಗೊಬ್ಬರು ಅಂಟಿಕೊಂಡಿದ್ದ ದಿನಗಳನ್ನು ನೆನೆದು ಬಣ್ಣಿಸುತ್ತಾರೆ. ಕುಟುಂಬದ ಸದಸ್ಯರ ಸಂಬಂಧಗಳು ಅಲ್ಪಸ್ವಲ್ಪ ಸಡಲಿವೆ ಯಾದರೂ ಆಮೂಲಾಗ್ರವಾಗಿ ಬದಲಾಗಿಲ್ಲ. ಇನ್ನೂ ಗಂಡಸೇ ಮನೆಯ ಒಡೆಯನಾಗಿ

ಮುಂದುವರಿದಿದ್ದಾನೆ. ಹಿಂದೆ ಹೊಲಕ್ಕೆ ಹೋಗಿ ದುಡಿಯುತ್ತಿದ್ದ ಅವನು ಈಗ ಗಿರಣಿಗೆ ಹೋಗಿ ಬರುತ್ತಿದ್ದಾನೆ. ಹೆಣ್ಣಿನ ಮನೆಗೆಲಸ ಎಷ್ಟೋ ಹಗುರಾಗಿದೆ. ಕೆಲವು ಹೆಣ್ಣುಮಕ್ಕಳು ಗಿರಣಿಗಳಲ್ಲಿ ದುಡಿಯುತ್ತಿದ್ದರೆ ಕೆಲವರು ಶಾಲಾ ಶಿಕ್ಷಕಿಯರಾಗಿದ್ದಾರೆ. ಕುಟುಂಬದಲ್ಲಾದ ಒಂದು ಮಹತ್ವದ ಬದಲಾವಣೆಯೆಂದರೆ ಕಿರಿಯರು ಅದರಲ್ಲೂ ಹೆಚ್ಚಿನ ತರಬೇತಿ ಪಡೆದು ಕೈತುಂಬ ಗಳಿಸುವ ಕಿರಿಯರು ಈಗ ಕುಟುಂಬದಲ್ಲಿ ಅತ್ಯುತ್ತಮ ಸ್ಥಾನ ಪಡೆದಿದ್ದಾರೆ ಹಳೆಯ ಮತ್ತು ಹೊಸ ತಲೆಮಾರುಗಳಲ್ಲಿ ಅಂತರ ನಿಚ್ಚಳವಾಗಿ ಕಂಡುಬರುತ್ತಿದೆ. ಧಾರ್ಮಿಕ ಭಾವನೆಗಳು ಪೂರ್ಣವಾಗಿ ಬದಲಾಗಿಲ್ಲ, ಆದರೆ ಧಾರ್ಮಿಕ ಭಾವನೆಗಳಷ್ಟೇ ರಾಷ್ಟ್ರೀಯತಾ ಭಾವನೆಗಳನ್ನು ಗೌರವಿಸಲಾಗುತ್ತಿದೆ. ರಾಜಕೀಯ ಧುರೀಣರು ಸಮಾಜವಾದ ಮತ್ತು ರಾಷ್ಟ್ರೀಯತಾವಾದದ ಹೊಸ ಹೊಸ ಘೋಷಣೆಗಳನ್ನು ಕೊಡುತ್ತಿದ್ದಾರೆ. 'ಕೆಡೆ ಇಲ್ಲವೆ ಮಡಿ; ಆದರೆ ಎಂದೂ ಬಾಗಬೇಡ', 'ಕ್ರಿಸ್ತನ ಬಗ್ಗೆ ನನಗೆ ಬೇರೆ ದೂರುಗಳೇನೂ ಇಲ್ಲ; ಆದರೆ ಅವನು ಹೋರಾಡುತ್ತ ಮಡಿಯಲಿಲ್ಲವಲ್ಲ!' ಎಂಬಿತ್ಯಾದಿ ವೀರ ವಾಕ್ಯಗಳು ಹೆದ್ದಾರಿಗಳಲ್ಲಿ ಕಂಡುಬರುತ್ತಿವೆ. ಒಟ್ಟಿನಲ್ಲಿ ಹಳೆಯ ಸಾಮಾಜಿಕ ಆರ್ಥಿಕ ವ್ಯವಸ್ಥೆಯು ಕೊನೆಯುಸಿರನ್ನು ಎಳೆಯುತ್ತಿದೆ ಹಾಗೂ ಪನಾಮಾದ ಹೊಸ ಚಾರಿತ್ರ್ಯವು ರೂಪಗೊಳ್ಳುತ್ತಿದೆ.

ಆಧಾರ ಗ್ರಂಥ :

Gudeman, Stephen : The Demise of a Rural Economy From Subsistence to Capitalism in a Latin American Village (R&K. Paul, London, 1977)

ಹಿನ್ನೆಲೆ ಓದು :

Frank, Andre Gunder : Latin America : Under-Development or Revolution (Monthly Review Press, New York, 1969)

Robe, Stanley : The Spanish of Rural Panama (University of California Press, Berkely. 1960)

ಆದಿವಾಸಿಗಳ ಅಭ್ಯಾಸದಲ್ಲಿ ಅಡ್ಡಿ-ಆತಂಕಗಳು : ಅಂಡಮಾನ್ ದ್ವೀಪವಾಸಿಗಳು-ಒಂದು ವಿಶ್ಲೇಷಣೆ*

● ಎಸ್. ಎ. ಅವರಾದಿ

ಮಾನವನು ನಿಸರ್ಗದ ಚಮತ್ಕಾರಕ ಸಂಗತಿಗಳಲ್ಲಿ ಸ್ವಾಭಾವಿಕವಾಗಿ ಆಸ್ಥೆಯನ್ನು ತೋರಿಸುತ್ತಾ, ವಿಕಾಸದ ಪಥದಲ್ಲಿ ತನ್ನ ಜೀವನದ ಹಾಗೂ ಸಮಾಜದ ಏಳಿಗೆಗಾಗಿ ನಿಸರ್ಗ ಹಾಗೂ ಅದರ ಸಂಪನ್ಮೂಲಗಳನ್ನು ಉಪಯೋಗಿಸುವ ಕೌಶಲ್ಯವನ್ನು ಅರಿತು ಕೊಳ್ಳುತ್ತಾ ಬಂದಿದ್ದಾನೆ. ಇದು ಮಾನವನು ಇಂದು ಜೀವ ವರ್ಗದಲ್ಲಿಯೇ ಅತ್ಯುನ್ನತ ಸ್ಥಾನದನಲ್ಲಿರಲು ಮತ್ತು ಸಂಶೋಧನಾತ್ಮಕ ಮನಸ್ಸು ಹೊಂದಲು ಬಹು ವಾಗಿ ಕಾರಣವಾಗಿದೆ. ಪೂರ್ವದಲ್ಲಿ ಮಾನವನು ತಾನು ವಾಸವಾಗಿರುವ ಜಗತ್ತೇ ಮಹಾದೊಡ್ಡದು, ತಾನೇ ಮನುಷ್ಯ, ಸರ್ವಜ್ಞ ಎಂದು ತಿಳಿದಿದ್ದನು. ಅವನ ಈ ಕೂಪ ಮಂಡೂಕತನಕ್ಕೆ ಹಿಂದೆ ಅವನಿಗೆ ದೂರ ಸಂಚಾರ ಮಾಡಿ, ಭೂಮಿಯ ಮೇಲೆ ಅಲ್ಲಲ್ಲಿ, ವಿವಿಧ ಸನ್ನಿವೇಶದಲ್ಲಿ ವಾಸವಾಗಿರುವ ಮಾನವರನ್ನು ಕಂಡರಿಯಲು ಸಾಧ್ಯ ವಿರಲಿಲ್ಲ. ಇದಕ್ಕೆ ನಮ್ಮ ಅಭ್ಯಾಸ ವಿಷಯದ ಗುಂಪಾದ ಅಂಡಮಾನ್ ದ್ವೀಪ ವಾಸಿಗಳು ಸಾಕ್ಷಿ. ಇವರು ಭೂಮಿಯ ಮೇಲೆ ಇರುವ ಮನುಷ್ಯರೆಂದರೆ ತಾವೇ ಎಂಬ ಭಾವನೆಯನ್ನು ಹೊಂದಿದ್ದು ಕೇವಲ ಒಂದು ನೂರು ವರ್ಷಗಳ ಹಿಂದೆ ನಮ್ಮ ಈ ನಂಬಿಕೆಯನ್ನು ಬದಲಿಸಿದರು.

ಹಂದಿನೆಂಟನೆಯ ಶತಮಾನದ ಕೊನೆಯಲ್ಲಿ ಆಂಗ್ಲರು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ತಮ್ಮ ವಸಾಹತು ಸ್ಥಾಪಿಸಿ ಇಲ್ಲಿ ಬಂದಿಳಿದಾಗ ಅವರು ಸ್ಥಳೀಯ ಹಿರಿಯ ಅಂಡಮಾನಿಯರನ್ನು (The great Andamanees) ಅನೇಕ

ರೀತಿಯಲ್ಲಿ ಎದುರಿಸಬೇಕಾಯಿತು. ಏಕೆಂದರೆ ಬಿಳಿ ಚರ್ಮದ ಇವರನ್ನು ನೋಡಿ ಅಂಡಮಾನಿಗಳಿಗೆ ಬಹಳ ಆಶ್ಚರ್ಯವಾಯಿತು. ತಮ್ಮನ್ನು ಹೊರತುಪಡಿಸಿ ಮಾನವ ರನ್ನು, ಆದರಲ್ಲೂ ಬಿಳಿ ಬಣ್ಣದ ಮನುಷ್ಯರನ್ನು, ಅವರು ಪೂರ್ವದಲ್ಲಿ ಕಂಡಿರಲಿಲ್ಲ. ಆದ್ದರಿಂದ ಬ್ರಿಟಿಷರನ್ನು 'ಲಾವ್', ಎಂದರೆ ಅಂಡಮಾನಿಗಳ ಭಾಷೆಯಲ್ಲಿ ಪಿಶಾಚಿ (Spirit), ಎಂದು ಕರೆದರು. ಅಲ್ಲದೆ ಅವರ ನಂಬಿಕೆಯಂತೆ ಪಿಶಾಚಿಗಳು (ಸತ್ತ ವ್ಯಕ್ತಿಯ ಪ್ರೇತಗಳು) ಮಾತ್ರ ಬಿಳಿ ಬಣ್ಣವನ್ನು ಪಡೆದಿರುತ್ತಾರೆ. ಇದರಂತೆ ಆಂಗ್ಲರ ಠಾಣೆಗಳನ್ನು "ಪಿಶಾಚಿಗಳ ಪಟ್ಟಣ" ಎಂದೂ ಕರೆದರು. ಆದರೆ ಬಂದೂಕು, ಹಡಗು ಹಾಗೂ ವಿಮಾನಗಳನ್ನು ಪಡೆದ ಹೊರ ಜಗತ್ತಿನ ಜನಾಂಗಗಳ ಮುಂದೆ ತಾವು ಬಹಳ ಹಿಂದುಳಿದವರೆಂದು ಅವರಿಗೆ ಮನವರಿಕೆಯಾಗಲು ನೂರೈವತ್ತು ವರ್ಷಗಳೇ ಬೇಕಾದವು. ಆದಿವಾಸಿಗಳಲ್ಲಿ ಒಂದಾದ ಓಂಗಿ (Onge) ಭಾಷೆಯಲ್ಲಿ 'ಓಂಗಿ' ಎಂದರೆ 'ನಾನು ಮನುಷ್ಯ' ಎಂದು ಅರ್ಥ. ಇಂದು ಅವರು ಹೊರ ಜನರೊಂದಿಗೆ ಹಗೆತನ (hostility) ವನ್ನು ಬಿಟ್ಟು ಗೆಳೆತನವನ್ನು ಹೊಂದಿರುತ್ತಾರೆ. ಆದರೆ ಅಂಡಮಾನ್ ದ್ವೀಪಗಳ ಇನ್ನೊಂದು ಗುಂಪಾದ ಸೆಂಟಿನೆಲೆಯುರು (Sentinele) ಇಂದಿಗೂ ತಮ್ಮನ್ನು ಉಳಿದು ಮನುಷ್ಯರಿಲ್ಲ ಎಂಬ ಭಾವನೆಯನ್ನು ಹೊಂದಿದ್ದಾರೆ.

ಆಧುನಿಕ ಜಗತ್ತಿನ ಹಾಗೂ ವಿಜ್ಞಾನಿಗಳ ದೃಷ್ಟಿ ಆದಿವಾಸಿಗಳೆಡೆಗೆ ತಿರುಗಿದ್ದು ತೀರ ಇತ್ತೀಚೆಗೆ. ಇಷ್ಟರಲ್ಲಿ ಪ್ರವಾಸಿಗರು ಆದಿವಾಸಿಗಳ ಬಗೆಗೆ ಅನೇಕ ಕಾಲ್ಪನಿಕ ಕಥೆ ಕಟ್ಟಿ ಹೊರ ಜಗತ್ತಿಗೆ ಹೇಳಿದ್ದರು. ಅಂಡಮಾನದ ಆದಿವಾಸಿಗಳು ನರಭಕ್ಷಕರು (Cannibals) ಹಾಗೂ ನಿಕೋಬರದ ಆದಿವಾಸಿಗಳು ಕಪಿಯಂತೆ ಬಾಲ ಉಳ್ಳ ಪ್ರಾಣಿಗಳೆಂದೂ ವದಂತಿ ಇತ್ತು. ನಿಜವೆಂದರೆ ನಿಕೋಬಾರಿಗಳು (Nicobars) ತಮ್ಮ ನಡುವಿಗೆ ಮರದ ತೊಗಟೆಯನ್ನು ಸುತ್ತಿಕೊಳ್ಳುತ್ತಿದ್ದರು. ಈ ತೊಗಟೆ ವಸ್ತ್ರದ ಒಂದು ತುದಿ ಅವರ ಪೃಷ್ಠಗಳ ಮೇಲೆ ಬಾಲದಂತೆ ನೇತಾಡುತ್ತಿತ್ತು. ದೂರ ದಿಂದಲೇ ಇವರನ್ನು ನೋಡಿದ್ದ ನಾವಿಕರು ತಾವು ನಿಕೋಬರ್ ದ್ವೀಪದಲ್ಲಿ ಬಾಲವಿದ್ದ ಮಾನವರನ್ನು ಕಂಡೆವೆಂದು ವದಂತಿ ಹರಡಿದರು.

ಪಾಶ್ಚಿಮಾತ್ಯರು ವಸಾಹತು ಸ್ಥಾಪಿಸುವ ನೀತಿಯನ್ನು ಬೆಳಸಿಕೊಂಡನಂತರ ಆ ನಾಡಿನ ಅಧಿಕಾರಿಗಳು, ಮತ ಪ್ರಚಾರಕರು ದೂರ ದೂರದ ನಾಡು, ನಡುಗಡ್ಡೆಗಳನ್ನು ಅರಸಿಕೊಂಡು ಹೊರಟಿದ್ದರಿಂದ ಅವರು ಬೇರೆ ಬೇರೆ ಆದಿವಾಸಿಗಳೊಂದಿಗೆ ಹೋರಾಟ ನಡೆಸಬೇಕಾಯಿತು. ಏಕೆಂದರೆ ಸಾಮಾನ್ಯವಾಗಿ ಹೊರ ಜಗತ್ತಿನಿಂದ ದೂರವಿದ್ದ ಈ ಆದಿವಾಸಿಗಳು ಹೊರ ಜಗತ್ತಿನವರನ್ನು ವೈರಿಗಳೆಂದು ತಿಳಿದು ಅವರನ್ನು ದೂರವಿಡಲು ಪ್ರಯತ್ನಿಸಿದರು. ಹೀಗಾಗಿ ಅಧಿಕಾರಿಗಳು ಆದಿವಾಸಿಗಳೊಂದಿಗೆ ನಡೆಸಿದ ಹೋರಾಟ ವನ್ನೂ ಸಾಹಸ ಕಥೆಯಾಗಿ, ಶೌರ್ಯರಸದಲ್ಲಿ ಬಣ್ಣಿಸಲಾಗಿದೆ.

ಆಂಗ್ಲರು ಅಂಡಮಾನದಲ್ಲಿ ವಸಾಹತು ಸ್ಥಾಪಿಸುವ ಇಚ್ಛೆಯಿಂದಲೇ ಈ ನಡು ಗಡ್ಡೆಗಳನ್ನು ಪ್ರವೇಶಿಸಿದರು. ಅನೇಕ ಬ್ರಿಟಿಷ್ ಅಧಿಕಾರಿಗಳು ಅಂಡಮಾನದಲ್ಲಿನ ತಮ್ಮ ಅನುಭವ ಕುರಿತು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮೌಂಟ್ (೧೮೬೩), ಮ್ಯಾನ್ (೧೮೮೩), ಪೋರ್ಟ್‌ಮನ್ (೧೮೮೯) ಮತ್ತು ಬೋಡನ್ ಕ್ಲೋಸ್ (೧೯೦೨) ಬರೆದ ಗ್ರಂಥಗಳು ಪ್ರಸಿದ್ಧವಾದವುಗಳು.

ಆದರೆ ಈ ಅಧಿಕಾರಿಗಳು, ಪ್ರವಾಸಿಕರು ಹಾಗೂ ಮಿಶನರಿಗಳು ಮಾನವ ವಿಜ್ಞಾನದಲ್ಲಿ ತರಬೇತಿ ಪಡೆಯದಿದ್ದುದರಿಂದ ಅವರು ವರ್ಣಿಸಿದ ಆದಿವಾಸಿಗಳ ಚರಿತ್ರೆ ವೈಜ್ಞಾನಿಕವಾಗಿರಲಿಲ್ಲ. ಮುಂದೆ ಸುಖೀಭೋಗಿ (Arm-Chair) ಮಾನವ ವಿಜ್ಞಾನಿಗಳು ಈ ಮೂಲ ಸಂಗತಿಗಳನ್ನೇ ಉಪಯೋಗಿಸಿ ಆದಿವಾಸಿಗಳ ಸಂಸ್ಕೃತಿಯ ಚಿತ್ರಣವನ್ನು ನೀಡಲು ಪ್ರಯತ್ನಿಸಿದರು. ಆದರೆ ಪ್ರವಾಸಿಗಳು, ಮಿಶನರಿಗಳು ಮುಂತಾದವರು ಆದಿವಾಸಿಗಳಲ್ಲಿ ತಮಗೆ ವಿಚಿತ್ರವೆನಿಸಿದ ಸಂಗತಿಗಳನ್ನು ಮಾತ್ರ ನೆನಪಿನಲ್ಲಿ ಇಟ್ಟು ಕೊಂಡು ಬರೆದಿದ್ದುದರಿಂದ ಈ ಮೂಲ ಸಂಗತಿಗಳು ಆದಿವಾಸಿಗಳ ನಿಜವಾದ ಹಾಗೂ ಇಡೀ ಸಂಸ್ಕೃತಿಯನ್ನು ನಿರೂಪಿಸಲು ಶಕ್ಯವಾಗಿರಲಿಲ್ಲ.

ಈ ಶತಮಾನದ ಉದಯದೊಂದಿಗೆ ಮಾನವ ವಿಜ್ಞಾನದ ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಇದರಂತೆ ಮಾನವ ವಿಜ್ಞಾನಿಗಳು ಮೂಲ ಸಂಗತಿಗಳಿಗಾಗಿ ಬೇರೆಯವರ ಮೇಲೆ ಅವಲಂಬಿಸದೆ ಸ್ವತಃ ತಾವೇ ಆದಿವಾಸಿಗಳೊಂದಿಗೆ ಹಲವಾರು ತಿಂಗಳುಗಳಿಂದ ೧–೨ ವರ್ಷಗಳವರೆಗೆ ವಾಸಮಾಡಿ, ಅವರ ಸಂಸ್ಕೃತಿಯನ್ನು ಅಭ್ಯಾಸ ಮಾಡತೊಡಗಿದರು. ಅಲ್ಲದೆ ಮಾನವ ವಿಜ್ಞಾನಿಗಳು ಆದಿವಾಸಿಗಳ ಅಭ್ಯಾಸ ಕೈಗೊಳ್ಳುವ ಪೂರ್ವದಲ್ಲಿ ಯೋಗ್ಯ ತರಬೇತಿ ಪಡೆದು, ಅಧ್ಯಯನದ ಪದ್ಧತಿ, ಮೂಲ ಸಂಗತಿಗಳನ್ನು ಪಡೆಯುವ ರೀತಿ, ಮುಂತಾದ ಎಲ್ಲಾ ವಿಷಯಗಳ ಮೇಲೆ ಬೇಕಾದ ಜ್ಞಾನವನ್ನು ಪಡೆಯುತ್ತಾರೆ. ಆದಿವಾಸಿಗಳ ಭಾಷೆಯನ್ನು ಕೂಡ ಸಾಧ್ಯವಾದಮಟ್ಟಿಗೆ ಕಲಿಯುವರು. ಈ ತರದ ಸಂಶೋಧನೆಯ ಪದ್ಧತಿಯನ್ನು ಮೊದಲಿಗೆ ಮೆಲಿನವಾಸ್ಕಿ (Malinowaski) ಹಾಗೂ ರಾಡ್-ಕ್ಲಿಫ್ ಬ್ರೌನ್ (Rad-Cliffe-Brown) ಅಳವಡಿಸಿಕೊಂಡು, ವೈಜ್ಞಾನಿಕ ಸಂಶೋಧನೆಯ ಪರಂಪರೆಯನ್ನು ಸ್ಥಾಪಿಸಿದರು. ಈ ಪರಂಪರೆಯಂತೆ ಯಾವುದೇ ಆದಿವಾಸಿಗಳ ವೈಜ್ಞಾನಿಕ ಸಂಶೋಧನೆಯನ್ನು ಈ ಕೆಳಗಿನ ಹಂತವಾಗಿ ಭಾಗ ಮಾಡಬಹುದು.

೧ ಪ್ರವೇಶ–ಆದಿವಾಸಿಗಳನ್ನು ಸಂದರ್ಶಿಸುವುದು,

೨ ಬಳಿಕೆ–ಆದಿವಾಸಿಗಳೊಂದಿಗೆ ಸೂಕ್ತ ಸಾಮಾಜಿಕ ಸಂಬಂಧ ಬೆಳೆಸಿಕೊಳ್ಳುವುದು.

೩ ಮೂಲ ಸಂಗತಿಗಳನ್ನು ಸೂಕ್ಷ್ಮವಾಗಿ ಹಾಗೂ ಕೂಲಂಕಷವಾಗಿ ಕಲೆ ಹಾಕುವದು, ಮತ್ತು

೪ ಪೃಥಕ್ಕರಣ (Analysis)–ಮೂಲ ಸಂಗತಿಗಳ ವಿಶ್ಲೇಷಣೆ ಮತ್ತು ಅಂತಿಮವಾಗಿ ಸಾಧ್ಯವಿದ್ದರೆ ಉಪಪತ್ತಿ (Theory)ಗಳನ್ನು ಸ್ಥಾಪಿಸುವುದು.

ಈ ಪದ್ಧತಿಯಲ್ಲಿ ಅಂಡಮಾನ್ ನಿವಾಸಿಗಳ ಅಭ್ಯಾಸಮಾಡುವಾಗ ಸಂಶೋಧಕರು ಎದುರಿಸಬೇಕಾದ ಕೆಲವೊಂದು ವಿಷಯಗಳನ್ನು ಇಲ್ಲಿ ನೀಡಲಾಗಿದೆ.

೧ ಪ್ರವೇಶ (Approach)

ಹೊರಜಗತ್ತಿನೊಂದಿಗೆ ಯಾವ ತರಹದ ಸಂಬಂಧವನ್ನು ಹೊಂದದ, ಅಥವಾ ಉತ್ತಮ ಸಂಬಂಧ ಹೊಂದದ ಆದಿವಾಸಿ ಗುಂಪುಗಳೊಂದಿಗೆ ಸಂಪರ್ಕ ಮಾಡುವುದು ಬಹಳ ಕಷ್ಟಕರ ಕೆಲಸ. ಅಂಡಮಾನ್ ಮತ್ತು ನಿಕೋಬರ್ ನಡುಗಡ್ಡೆಗಳು ಹಿಂದಿನಿಂದಲೂ ಹೊರ ಜಗತ್ತಿನಿಂದ ದೂರ ಉಳಿದುಕೊಂಡು ಬಂದಿದ್ದವು. ದ್ವೀಪ ಸಮೂಹದ ಭೌಗೋಳಿಕ ಪರಿಸ್ಥಿತಿ ಹಾಗೂ ಆದಿವಾಸಿಗಳ ಭಯದಿಂದ ಅಂಡಮಾನಕ್ಕೆ ಹೋಗುವ ಸಾಹಸವನ್ನು ಹಿಂದೆ ಯಾರೂ ಮಾಡಲಿಲ್ಲ. ಈ ನಡುಗಡ್ಡೆಗಳನ್ನು ತಲುಪಲು ಇದ್ದ ಒಂದೇ ಒಂದು ಸಾಧನವೆಂದರೆ ಹಡಗಿನ ಮೂಲಕ ಸಮುದ್ರಯಾನ. ಭಯಂಕರವಾದ ಚಂಡಮಾರುತಗಳು ಅಂಡಮಾನದ ದ್ವೀಪಗಳನ್ನು ಮೇಲಿಂದ ಮೇಲೆ ಅಪ್ಪಳಿಸುತ್ತಿದ್ದುದರಿಂದ ಸಣ್ಣಪುಟ್ಟ, ಕೆಲವೊಂದು ಬಾರಿ ದೊಡ್ಡ ಹಡಗುಗಳು ಇಲ್ಲಿಗೆ ತಲುಪುವುದು ಅಪಾಯಕರವಾಗಿತ್ತು. ಅಲ್ಲದೆ ಇಲ್ಲಿಯ ಆದಿವಾಸಿಗಳು ನರಭಕ್ಷಕರು, ಕ್ರೂರಿಗಳು ಮುಂತಾಗಿ ಭಯವನ್ನುಂಟುಮಾಡುವ ಅನೇಕ ವದಂತಿಗಳಿದ್ದವು.

ಅಂಡಮಾನ ನಡುಗಡ್ಡೆಗಳಲ್ಲಿ ಇಂದು ನೆಗ್ರಿಟೋ (Negrito) ಜನಾಂಗಕ್ಕೆ ಸೇರಿದ ನಾಲ್ಕು ಪಂಗಡ (Tribe)ಗಳಾದ ಹಿರಿಯ ಅಂಡಮಾನಿಯರು, ಓಂಗಿ, ಸೆಂಟಿನೆಲಿಯರು ಮತ್ತು ಜರವಾ (Jarowa) ನಿಕೋಬಾರ್ ದ್ವೀಪಗಳಲ್ಲಿ ಮಂಗೋಲಾಯಿಡ್ (Mangoloid) ಜನಾಂಗಕ್ಕೆ ಸೇರಿದ ಎರಡು ಪಂಗಡಗಳಾದ ನಿಕೋಬಾರಿಗಳು ಹಾಗೂ ಶೊಂಪೆನ್ (Shompen)ಗಳಿವೆ (ಹೆಚ್ಚಿನ ವಿವರಗಳಿಗೆ ಅವರಾದಿ, ೧೯೭೮, ಓದಬಹುದು). ಹಿರಿಯ ಅಂಡಮಾನಿಯರು, ಓಂಗಿಗಳು, ನಿಕೋಬಾರಿಗಳು ಹಾಗೂ ಶೊಂಪೆನ್‌ಗಳು ಇಂದು ಹೊರ ಜಗತ್ತಿನೊಂದಿಗೆ ಉತ್ತಮ ಸಂಬಂಧ ಹೊಂದಿರುವರು. ಆದರೆ ಜರವಾ ಹಾಗೂ ಸೆಂಟಿನೆಲಿಯರು ಇಂದಿಗೂ ಹೊರಗಿನವರೊಂದಿಗೆ ಹಗೆತನವನ್ನು ಮುಂದುವರೆಸಿಕೊಂಡು ಬಂದಿರುವರು. ಅವರೊಂದಿಗೆ ಮಿತ್ರತ್ವವನ್ನು ಬೆಳೆಸಲು ನಿರಂತರ ಪ್ರಯತ್ನ ಮಾಡಲಾಗುತ್ತಿದೆಯಾದರೂ ಸಾಧ್ಯವಾಗಿಲ್ಲ.

ಈ ಪ್ರಯತ್ನದ ಅಂಗವಾಗಿ ೧೯೬೮ರಲ್ಲಿ ಮೂರು ಜನ ಜರವಾಗಳನ್ನು ಹಿಡಿದು ಪೋರ್ಟ್ ಬ್ಲೇರಕ್ಕೆ ತರಲಾಗಿತ್ತು. ಅವರನ್ನು ಬಹಳ ಆದರದಿಂದ ನೋಡಿಕೊಂಡು ಗೆಳೆತನವನ್ನು ಬೆಳೆಯಿಸುವ ಇಚ್ಛೆಯನ್ನು ತೋರಿಸಲಾಯಿತು. ಆದರೆ ಅದು ಅವರ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ. ಅವರಲ್ಲೊಬ್ಬನು ಕೊನೆಯವರೆಗೂ ಆಹಾರ ಸ್ವೀಕರಿಸಲಿಲ್ಲ. ಕಾರಣ ಅವರನ್ನು ಮತ್ತೆ ತಮ್ಮ ಸ್ಥಳಕ್ಕೆ ಕಳಿಸಿಕೊಡಲಾಯಿತು. ಮುಂದೆ ಅವರನ್ನು ಅವರ ಗುಂಪಿನವರು ಯಾವ ರೀತಿಯಲ್ಲಿ ನಡೆಸಿಕೊಂಡರೆಂಬ ಬಗ್ಗೆ ನಿಜ ಸಂಗತಿ ತಿಳಿಯಲಿಲ್ಲ. ಒಂದು ವದಂತಿಯಂತೆ ಜರವಾಗಳು ಅವರನ್ನು ಕೊಲೆ ಮಾಡಿರಬೇಕು, ಮತ್ತೆ ಕೆಲವರ ಅಭಿಪ್ರಾಯದಂತೆ ಅವರನ್ನು ಪ್ರತ್ಯೇಕವಾಗಿಟ್ಟಿರಬೇಕೆಂದು. ಏಕೆಂದರೆ ಈ ಮೂವರೂ ಪಿಶಾಚಿಗಳ ಲೋಕಕ್ಕೆ ಹೋಗಿ ಬಂದುದರಿಂದ ಕುಲಗೆಟ್ಟ ಇವರನ್ನು ಜರವಾಗಳು ಮರಳಿ ತಮ್ಮ ಗುಂಪಿನಲ್ಲಿ ಸ್ವಾಗತಿಸಿರಲಿಕ್ಕಿಲ್ಲ. ಹಿಂದೊಮ್ಮೆ ಈ ತರಹ ಹಗೆತನ ಸಾಧಿಸುತ್ತಿದ್ದ ಹಿರಿಯ ಅಂಡಮಾನಿಗಳೊಂದಿಗೆ ಪೋರ್ಟ್ ಬ್ಲೇರ್‌ದಲ್ಲಿದ್ದ ಆಂಗ್ಲ ಅಧಿಕಾರಿಗಳು ಇದೇ ಮಾದರಿಯ ಪ್ರಯೋಗ ಮಾಡಿ ಗೆಳೆತನ ಗಳಿಸಲು ಸಫಲರಾಗಿದ್ದರು. ಅವರು ಪೋರ್ಟ್ ಬ್ಲೇರ್‌ನಲ್ಲಿ "ಅಂಡಮಾನಿಯರ ಮನೆ"ಯೊಂದನ್ನು ತೆರೆದಾಗ ಅಂಡಮಾನಿಗಳು ಬಂದಾಗ ಅದರಲ್ಲಿ ಉಳಿದುಕೊಂಡು ತಮಗೆ ಬೇಕಾದ ಸಾಮಾನುಗಳನ್ನು, ಸಹಾಯವನ್ನು ಆಂಗ್ಲ ಅಧಿಕಾರಿಗಳಿಂದ ಪಡೆದು ಕೊಂಡು ಹೋಗುವುದನ್ನು ಪ್ರಾರಂಭಿಸಿದ್ದರು. ಮುಂದೆ ೧೯೬೯ ರಿಂದ ಈಚೆಗೆ ಜರವಾಗಳನ್ನು ಮೇಲಿಂದ ಮೇಲೆ ಭೆಟ್ಟಿಯಾಗಿ ಅವರಿಗಾಗಿ ಕಾಣಿಕೆಗಳನ್ನು ಬಿಟ್ಟು ಬರುವ ಪದ್ಧತಿಯನ್ನು ಕೈಗೊಳ್ಳಲಾಗಿದೆ. ಪೋರ್ಟ್ ಬ್ಲೇರದಿಂದ ಪೋಲೀಸ್ ಪಡೆಯೊಂದಿಗೆ ಜರವಾಗಳ ಒಂದು ಗುಂಪನ್ನು ಸಾಕಷ್ಟು ಸಲ ಭೆಟ್ಟಿಯಾಗಿ ಬಂದಿದ್ದರಿಂದ ಆ ಒಂದು ಗುಂಪು ತಾತ್ಕಾಲಿಕವಾಗಿ ಗೆಳೆತನವನ್ನು ತೋರಿಸತೊಡಗಿದೆ. (ಇವೇ ಗುಂಪಿನ ೧೨ ಜನ ಗಂಡಸರನ್ನು ಮಾರ್ಚ ೧೨, ೧೯೭೪ರಂದು ಪೋರ್ಟ್ ಬ್ಲೇರಕ್ಕೆ ಕರೆತಂದು, ಸರಕಾರದ ಆಸೆ ಮತ್ತು ಉದ್ದೇಶಗಳನ್ನು ವಿವರಿಸಿ ನಂತರ ಕಳುಹಿಸಿ ಕೊಡಲಾಯಿತು.

ಉತ್ತರ ಸೆಂಟಿನೆಲ್ ನಡುಗಡ್ಡೆಯ ಸೆಂಟಿನೆಲಿಯರು ಇಂದಿಗೂ ಹೊರ ಜನರೊಂದಿಗೆ ಹಗೆತನ ತೋರುತ್ತಿದ್ದಾರೆ. ಆ ನಡುಗಡ್ಡೆಯ ತೀರದ ಮೇಲೆ ಕೂಡ ಇಳಿಯಲು ಅವರು ಅವಕಾಶಕೊಡುತ್ತಿಲ್ಲ. ಪೋರ್ಟ್ ಬ್ಲೇರ್‌ದಿಂದ ೧೯೭೪ರಲ್ಲಿ ಒಂದು ಪಡೆಯು ಸೆಂಟಿನೆಲಿಯರನ್ನು ಬೆಟ್ಟಿಮಾಡಲು ಹಡಗಿನಲ್ಲಿ ಹೋಗಿತ್ತು. ಸಹಾಯಕ್ಕೆ ಇಬ್ಬರು ಓಂಗಿಗಳನ್ನೂ ಜೊತೆಗೆ ಕರೆದೊಯ್ಯಲಾಗಿತ್ತು. ಸೆಂಟಿನೆಲಿಯರ ಬಾಣಗಳು ಬಂದು ಬಡಿಯದಷ್ಟು ದೂರದಲ್ಲಿ ಹಡಗುಗಳನ್ನು ನಿಲ್ಲಿಸಿ, ಧ್ವನಿವರ್ಧಕದ ಮೂಲಕ "ನಾವು ನಿಮಗೆ ಕೇಡು ಮಾಡುವುದಿಲ್ಲ. ನಿಮ್ಮೊಂದಿಗೆ ಮಿತ್ರತ್ವ ಬಯಸುತ್ತೇವೆ. ನಿಮಗೆ ಸಹಾಯ ಮಾಡಬಯಸುತ್ತೇವೆ"– ಎಂಬ ಅರ್ಥ ಕೊಡುವ ವಾಕ್ಯಗಳನ್ನು ಓಂಗಿ

ಭಾಷೆಯಲ್ಲಿ ಹೇಳಿಸಲಾಯಿತು. ಅದಕ್ಕೆ ಪ್ರತ್ಯುತ್ತರವಾಗಿ ಸೆಂಟಿಲಿಯರು- 'ನಾವು ನಿಮ್ಮನ್ನು ಕೊಂದುಬಿಡುತ್ತೇವೆ. ನೀವು ಇಲ್ಲಿಂದ ಹೊರಟು ಹೋಗಿರಿ" ಎಂದು ಹೇಳಿದರು. ಅವರಿಗೆ ಸಹಾಯಮಾಡುವುದು ಸಾಧ್ಯವಾಗದಿದ್ದರೂ ಈ ಪ್ರಯತ್ನ ದಿಂದ ತಿಳಿದುಬಂದ ವಿಷಯವೇನೆಂದರೆ ಒಂದು ಪಂಗಡದವರು ಇನ್ನೊಂದು ಪಂಗಡದ ಭಾಷೆಯನ್ನು ಸ್ವಲ್ಪ ಮಟ್ಟಿಗಾದರೂ ಅರ್ಥಮಾಡಿಕೊಳ್ಳಬಲ್ಲರು ಎಂಬುದು (ಅಂಡ ಮಾನ್-ನಿಕೋಬಾರ್ ದ್ವೀಪಗಳಲ್ಲಿ ನಾಲ್ಕು ಪಂಗಡಗಳ ಭಾಷೆಗಳು ಒಂದೇ ಕುಟುಂಬಕ್ಕೆ ಸೇರಿದ್ದರೂ ಆಯಾ ಗುಂಪಿನ ಭಾಷೆ ಭಿನ್ನವಾಗಿ ಬೆಳೆದು ಬಂದಿವೆ). ಸೆಂಟಿನೆಲಿಯ ದಂತಹ ಆದಿವಾಸಿಗಳೊಂದಿಗೆ ವಾಸಮಾಡಿಕೊಂಡು ಅದರ ಅಧ್ಯಯನ ಮಾಡುವುದು ಅಸಾಧ್ಯವಾದುದರಿಂದ ಅವರ ಅಭ್ಯಾಸಕ್ಕೆ ಮಾನವಶಾಸ್ತ್ರಜ್ಞರು ಬೇರೆ ತಂತ್ರಗಳನ್ನು (techniques) ಉಪಯೋಗಿಸಿದ್ದಾರೆ.

ಆದಿವಾಸಿಗಳೊಂದಿಗೆ ವಾಸ :

ಅಂಡಮಾನದ ಆದಿವಾಸಿಗಳು ಸಂಚಾರಿ ಜನಾಂಗಕ್ಕೆ (nomadic) ಸೇರಿ ದವರು. ವಿಷಮ ವೃತ್ತ ಪ್ರದೇಶದಲ್ಲಿರುವ (Tropical) ಅಂಡಮಾನದ ಅರಣ್ಯಗಳು ಬಹಳ ಭೀಕರವಾಗಿವೆ. ಅನುಭವಿಕ ಮಾರ್ಗದರ್ಶಿ ಇಲ್ಲದಿದ್ದರೆ ಅಡವಿಯಲ್ಲಿ ತಪ್ಪಿಸಿ ಕೊಳ್ಳುವ ಸಂಭವ ಹೆಚ್ಚು. ಅಲ್ಲದೆ ಭಯಂಕರ ಸೊಳ್ಳೆಗಳು ಮತ್ತು ವಿಷದ ಹಾವು ಗಳಿಂದ ತಪ್ಪಿಸಿಕೊಳ್ಳಲು ಸಾಕಷ್ಟು ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಬೇಕಾಗು ವುದು. ಹೆಚ್ಚು ಕಾಲ ಅವರೊಂದಿಗೆ ವಾಸಿಸಿದರೆ ಮಾತ್ರ ಆದಿವಾಸಿಗಳ ಸಮಾಜದಲ್ಲಿ ಜರುಗುವ ಜನನ, ಮರಣ, ಮದುವೆ, ಮುಂಜುವೆ ಮೊದಲಾದ ಸಮಾರಂಭಗಳನ್ನು ಅಧ್ಯಯನ ಮಾಡುವ ಅವಕಾಶ ದೊರೆಯುವುದು.

ಮಾನವ ಶಾಸ್ತ್ರೀಯ ವೈಜ್ಞಾನಿಕ ಅಧ್ಯಯನಗಳಲ್ಲಿ ತಾವು ಅಭ್ಯಾಸ ಮಾಡುವ ಗುಂಪಿನ ಜನಗಣತಿ (Census) ತೆಗೆದುಕೊಳ್ಳುವುದು ರೂಢಿ. ಅದರಲ್ಲೂ ಕಡಿಮೆ ಸಂಖ್ಯೆಯಲ್ಲಿರುವ ಜನಾಂಗಗಳ ಅಧ್ಯಯನದಲ್ಲಿ ಅವರ ನಿಜ ಜನಸಂಖ್ಯೆಯನ್ನು ಅರಿಯು ವುದು ಅತೀ ಮುಖ್ಯವಾದ ಅಂಶ. ಅಂಡಮಾನ ಆದಿವಾಸಿಗಳಂತಹ ಗುಂಪುಗಳಲ್ಲಿ ಜನಗಣತಿ ಮಾಡುವುದು ತುಂಬಾ ಕಷ್ಟಕರವಾದ ಕೆಲಸ. ಸಂಚಾರಿಗಳಾದ ಇವರಿಗೆ ತಮ್ಮದೇ ಆದ ನಿರ್ದಿಷ್ಟ ನಿವಾಸ ತಾಣವಿಲ್ಲ. ಸಾಮಾನ್ಯವಾಗಿ ಗಣತಿ ಮಾಡುವಂತೆ ಅವರ ಹೆಸರುಗಳನ್ನು ಬರೆದುಕೊಂಡು ಗಣತಿ ಮಾಡಿದರೆ ದೊರೆಯುವ ಮೂಲ ಸಂಗತಿಯು ನಿಜವಾಗಿರುವುದಿಲ್ಲ. ಏಕೆಂದರೆ ಈ ಆದಿವಾಸಿಗಳು ಒಂದಕ್ಕಿಂತ ಹೆಚ್ಚು ವೈಯಕ್ತಿಕ ಹೆಸರುಗಳನ್ನು ಪಡೆದಿರುತ್ತಾರೆ. ಅಲ್ಲದೆ ತಮ್ಮ ಹೆಸರುಗಳನ್ನು ಮೇಲಿಂದ ಮೇಲೆ ಬದಲಾಯಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಅಂಡಮಾನಿಯರು

ಆಶ್ಚರ್ಯಕರ ರೀತಿಯಲ್ಲಿ ಒಂದೇ ರೀತಿಯಾಗಿ ತೋರುವ ಮುಖ ಲಕ್ಷಣಗಳನ್ನು ಹೊಂದಿರುವುದರಿಂದ ವ್ಯಕ್ತಿಯ ಮುಖಚರ್ಯದ ಮೇಲೆ ಅವರನ್ನು ಗುರುತಿಸುವುದು ಅಸಾಧ್ಯ. ಶಿಪ್ರಿಯಾನಿ (Cipriani. 1954) ಎಂಬ ಇಟಲಿಯ ಮಾನವ ವಿಜ್ಞಾನಿಯು ಓಂಗಗಳ "ಮಂಜ" (Raised flat form of logs and canes)ಗಳನ್ನು ಮತ್ತು ಅವುಗಳ ಮೇಲೆ ಮಲಗುವ ವ್ಯಕ್ತಿಗಳ ಹೆಸರನ್ನು ಕಲೆಹಾಕಿ, ಅವರ ಜನ ಸಂಖ್ಯೆ ೫೭೯ ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಂತರ ಅವರೇ ತಮ್ಮ ಜನಗಣತಿ ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆ (C. F. Awaradi,1978). ಇದಕ್ಕೆ ಕಾರಣವೆಂದರೆ ಓಂಗಿಗಳಲ್ಲಿ ಮೂರು ತರೆಹದ ವಸತಿಗಳಿದ್ದು, ಈ ಎಲ್ಲಾ ಮೂರು ಕಡೆ ಇದ್ದ ಮಂಜಗಳನ್ನು ಎಣಿಸಿದ್ದರಿಂದ ಮಂಚಗಳ ಸಂಖ್ಯೆ ಮೂರು ಪಟ್ಟಾಗಿತ್ತು. ಅಲ್ಲದೆ ಓಂಗಿಗಳಲ್ಲಿ ಒಂದಕ್ಕಿಂತ ಹೆಚ್ಚು ಹೆಸರುಗಳನ್ನು ಇಟ್ಟುಕೊಳ್ಳುವ ಪದ್ಧತಿ ಇದ್ದು ಒಂದೇ ಹೆಸರಿನ ಅನೇಕ ಓಂಗಿಗಳು ಇರುವುದು ಸಾಧ್ಯವಿದ್ದಿತು. ಆದ್ದರಿಂದ ಈ ಪದ್ಧತಿಗಳಿಂದ ನಿಜವಾದ ಜನಸಂಖ್ಯೆಯನ್ನು ಅರಿಯಲು ಸಾಧ್ಯವಿಲ್ಲವಾಯಿತು. ಮುಂದೆ ಪ್ರತಿಯೊಬ್ಬ ಓಂಗಿಯ ಫೋಟೋ ತೆಗೆದು ಗುಣಿಸಿದ ನಂತರ ತಿಳಿದಂತೆ ಅವರ ನಿಜವಾದ ಜನಸಂಖ್ಯೆ ೧೧೩ ಎಂದು.

ಜರವಾ ಹಾಗೂ ಸೆಂಟಿನೆಲಿಯರ ನಿಜವಾದ ಜನಸಂಖ್ಯೆಯನ್ನು ಅರಿಯಲು ಇನ್ನೂ ಸಾಧ್ಯವಾಗಿಲ್ಲ. ಆದರೆ ಅವರ ಸಂಖ್ಯೆಯನ್ನು ಅಂದಾಜು ಮಾಡಲಾಗಿದೆ. ಇದಕ್ಕೆ ಬಳಸಿದ ಮಾರ್ಗದಂತೆ ಗೊತ್ತುಪಡಿಸಿದ ಒಂದು ಅಡವಿಯ ವಿಸ್ತಾರವು ಸಂಭಾಳಿಸಬಹುದಾದ (Support for Subsistance) ಜನಸಂಖ್ಯೆಯನ್ನು ಅಂದಾಜು ಮಾಡಿ. ಈ ಗಣನೆಯನ್ನು ಆದಿವಾಸಿಗಳಿರುವ ಒಟ್ಟು ವಿಸ್ತಾರಕ್ಕೆ ಗುಣಿಸಿ ಅವರ ಜನಸಂಖ್ಯೆಯ ಅಂದಾಜು ಕಟ್ಟಬಹುದು. ಆದರೆ ಈ ಪದ್ಧತಿಯನ್ನು ಜರವಾ ಹಾಗೂ ಸೆಂಟಿನೆಲಿಯರಿಗೆ ಅಳವಡಿಸುವುದು ಸಮಂಜಸವಾಗಿಲ್ಲ. ಏಕೆಂದರೆ ಅವರು ಕೇವಲ ತಮ್ಮ ಅಡವಿಯ ಸಂಪತ್ತಿನ ಮೇಲೆ ಮಾತ್ರ ಅವಲಂಬಿಸಿರದೆ ಅಪಾರವಾದ ಸಮುದ್ರ ಸಂಪತ್ತನ್ನೂ ತಮ್ಮ ಜೀವನ ಹಾಗೂ ಆಹಾರಕ್ಕಾಗಿ ಉಪಯೋಗಿಸುವರು. ಆದರೂ ಜರವಾಗಳ ಜನಸಂಖ್ಯೆ ೨೫೦ ಎಂದು, ಸೆಂಟಿನೆಲಿಯರ ಸಂಖ್ಯೆ ೧೦೦ ಎಂದು ಅಂದಾಜ ಮಾಡಬಹುದು. ಹಿರಿಯ ಅಂಡಮಾನಿಗಳ ಸಂಖ್ಯೆ ಒಂದು ಕಾಲದಲ್ಲಿ ೫೦೦೦ ಮಿಕ್ಕಿದ್ದು ಇಂದು ಕೇವಲ ೨೫ ಇರಬಹುದು.

ಜನಗಣತಿಯಂತೆ ವ್ಯಕ್ತಿಗಳ ವಯಸ್ಸಿನ ದಾಖಲೆಯೂ ಮಾನವ ಶಾಸ್ತ್ರಜ್ಞರಿಗೆ ಅತ್ಯವಶ್ಯಕ. ಅದರಲ್ಲೂ ಜೈವಿಕ ಮಾನವ ಶಾಸ್ತ್ರಜ್ಞರಿಗೆ (Physical Anthropologits) ತಾವು ಅಭ್ಯಾಸ ಮಾಡುವ ವ್ಯಕ್ತಿಗಳ ವಯಸ್ಸನ್ನು ತಿಳಿಯುವುದು ಅವಶ್ಯಕ. ಆದರೆ ಇದನ್ನು ಪಡೆಯುವುದು ಅಷ್ಟು ಸುಲಭಸಾಧ್ಯವಲ್ಲ. ಅದರಲ್ಲೂ ಅಂಡಮಾನಿನ

ಆದಿವಾಸಿಗಳಲ್ಲಿ ಅಂಕೆ ಸಂಖ್ಯೆಗಳ ಜ್ಞಾನವಿಲ್ಲ. ಅವರು "ಸಣ್ಣದು" "ದೊಡ್ಡದು" ಎಂದು ಮಾಪನಗಳನ್ನು ಮಾತ್ರ ಬಲ್ಲರು. ಇವರಲ್ಲಿ ಓಂಗಿಗಳು ಮಾತ್ರ ಇಂದು ಒಂದರಿಂದ ಮೂರು ಅಂಕೆಗಳನ್ನು ಎಣಿಸಲು ಕಲಿತುಕೊಂಡಿದ್ದಾರೆ. ಹೀಗಿರುವಾಗ ಇಂತಿಷ್ಟು ವರ್ಷವೆಂದು ಅವರ ವಯಸ್ಸನ್ನು ಅವರಿಂದ ಕೇಳಿ ತಿಳಿಯುವುದು ಸಾಧ್ಯವಿಲ್ಲ. ಹೀಗೆ ಕೇಳಿ ವಯಸ್ಸನ್ನು ವರ್ಷಗಳಲ್ಲಿ ಪಡೆಯುವುದು ಅಸಾಧ್ಯವಾದಾಗ ಮಾನವ ಶಾಸ್ತ್ರಜ್ಞರು ಬೇರೆ ಮಾರ್ಗವನ್ನು ಬಳಸಿದ್ದಾರೆ. ಇವುಗಳಲ್ಲಿ ದೇಹದ ಬೆಳವಣಿಗೆ, ಅವರು ಧರಿಸುವ ವಸ್ತ್ರ, ದೇಹದ ಮೇಲಿನ ಲೇಪನ ಚಿನ್ಹೆಗಳು ಮುಂತಾದವನ್ನು ಬಳಸಿದ್ದಾರೆ. ಆದರೆ ನಿಗ್ರಿಟೋ ಜನಾಂಗದಲ್ಲಿ ಇನ್ನುಳಿದ ಜನಾಂಗಗಳಲ್ಲಿಯಂತೆ ವಯಸ್ಸನ್ನು ಸೂಚಿಸುವ ದೇಹದ ಬೆಳವಣಿಗೆ ಅಥವಾ ದೇಹದಲ್ಲಿನ ಮಾರ್ಪಾಡುಗಳು ಎದ್ದು ಕಂಡುಬರುವುದಿಲ್ಲ. ಅವರು ವಯಸ್ಸಾದರೂ ಚಿಕ್ಕವರಂತೆ ಕಾಣುವರು. ದೇಹದ ವಿವಿಧ ಭಾಗಗಳ ಮೇಲೆ ಕೂದಲು ಬೆಳೆಯುವದೂ ವಿರಳ, ತಲೆಕೂದಲು ಬೆಳೆಯುವದೂ ವಿರಳ. ತಲೆಕೂದಲು ಕರಿದಾಗಿದ್ದು ಸುರುಳಿಯಾಕಾರದ ಗೊಂಚಲು ಗಳಲ್ಲಿರುತ್ತವೆ. ಹುಡುಗಿಯರು ಬೆಳೆದಂತೆ ಅವರ ಸ್ತನಗಳು ಬೆಳೆಯುವುದರಿಂದ ಉಳಿದ ಗುಂಪುಗಳಲ್ಲಿ ಅವರ ವಯಸ್ಸು ತಿಳಿಯುವುದು ಸುಲಭ. ಆದರೆ ನಿಗ್ರಿಟೋ ಬುಡಕಟ್ಟಿಗೆ ಸೇರಿದ ಜನರಲ್ಲಿ ಮೈ ಚರ್ಮ ಹೆಚ್ಚು ಸ್ಥಿತಿ–ಸ್ಥಾಪಕತ್ವ (elasticity) ಯನ್ನು ಹೊಂದಿರುವುದರಿಂದ ವಯಸ್ಸಾದ ವ್ಯಕ್ತಿಗಳ ದೇಹದ ಮೇಲೂ ಸುಕ್ಕು ಅಥವಾ ನಿರಿಗೆ (wrinkles)ಗಳು ಬೀಳುವುದಿಲ್ಲ. ಆದ್ದರಿಂದ ಮಹಿಳೆಯರು ಮುದುಕಿಯ ರಾದರೂ ಅವರ ಸ್ತನಗಳು ಜೋತು ಬೀಳುವುದಿಲ್ಲ. ಇದರಂತೆ ಹುಡುಗರು ಬೆಳೆದಂತೆ ಅವರ ಗಡ್ಡ–ಮೀಸೆಗಳು ಬೆಳೆಯುವುದಿಲ್ಲ. ವಯಸ್ಸಾದ ವ್ಯಕ್ತಿಗಳ ತಲೆಕೂದಲೂ ಬೆಳ್ಳಗಾಗುವುದಿಲ್ಲ ಮತ್ತು ತಲೆ ಬೋಳಾಗುವುದಿಲ್ಲ (bald head) ಇವರ ದೇಹದಲ್ಲಿ ಹೆಚ್ಚು ಕೊಬ್ಬಿನ ಸಂಗ್ರಹಣೆಯಾಗುವುದರಿಂದ ವಯಸ್ಸಾದಂತೆ ಅವರ ದೇಹವು ಕ್ಷೀಣ ವಾಗುವುದೂ ಇಲ್ಲ. ಆದ್ದರಿಂದ ಈ ಮೇಲಿನ ಸಾಮಾನ್ಯ ಪದ್ಧತಿಯನ್ನು ಬಳಸಿ ಅವರ ವಯಸ್ಸನ್ನು ತಿಳಿಯುವುದು ಕಷ್ಟ. ಆದುದರಿಂದ ಆದಿವಾಸಿಗಳ ಸರಾಸರಿ ವಯಸ್ಸನ್ನು ವೈಜ್ಞಾನಿಕವಾಗಿ ಅರಿಯಲು ಕೆಳಗಿನ ಸಂಗತಿಗಳನ್ನು ಕಲೆಹಾಕಬೇಕು. ಮೊದಲಿಗೆ ಮೂರನೆಯ ದವಡೆ ಹಲ್ಲು ಹುಟ್ಟಿದೆಯೋ ಇಲ್ಲವೋ ಎಂಬುದನ್ನು ನೋಡ ಬೇಕು. ಈ ಹಲ್ಲು ಸಾಮಾನ್ಯವಾಗಿ ೧೮ನೇ ವಯಸ್ಸಿನ ನಂತರ ಹುಟ್ಟುವುದು. ನಂತರ ವಯಸ್ಸು ಹೆಚ್ಚಾದಂತೆ ಹಲ್ಲಿನ ಸವುಕಳಿಯೂ ಹೆಚ್ಚು ಆಳವಾಗುವುದರಿಂದ ಹಲ್ಲುಗಳ ಸವುಕಳಿ (attoition) ಎಷ್ಟಾಗಿದೆ ಎಂಬುದನ್ನು ಅರಿತುಕೊಳ್ಳುವುದರಿಂದ ವಯಸ್ಸನ್ನು ನಿರ್ಣಯಿಸಬಹುದು. ಕೊನೆಯದಾಗಿ, ದೇಹದಲ್ಲಿನ ಎಲಬುಗಳ ಗಡಸುತನವನು (ossification) ಅಳೆಯುವ ಮೂಲಕವೂ ವಯಸ್ಸನ್ನು ತಿಳಿಯಬಹುದು. ಇದಕ್ಕೆ ರೇಡಿಯೋ ಗ್ರಾಂ ಪದ್ಧತಿಯನ್ನು ಅನುಸರಿಸಿ ಎಲಬುಗಳಲ್ಲಿಯ ಈ ಸ್ಥಿತಿಯನ್ನು ತಿಳಿದು

ಅದರಿಂದ ವ್ಯಕ್ತಿಯ ವಯಸ್ಸನ್ನು ತಿಳಿಯಲಾಗುವುದು. ಹೀಗೆ ಒಂದೇ ವಾಕ್ಯದಲ್ಲಿ ಪಡೆಯಬಹುದಾದಂತಹ ಪ್ರಶ್ನೆಗಳಿಗೆ ಉತ್ತರಕ್ಕೆ ಅಂಡಮಾನ್‌ದಲ್ಲಿನ ಆದಿವಾಸಿಗಳಲ್ಲಿ ಅನೇಕ ಕ್ಲಿಷ್ಟ ತಂತ್ರಗಳನ್ನು ಅನುಸರಿಸಬೇಕಾಗುತ್ತದೆ.

ಸಂಸ್ಕೃತಿಯ ಅಧ್ಯಯನ :

ಆದಿವಾಸಿಗಳ ಸಂಸ್ಕೃತಿಯ ಕೂಲಂಕಷವಾದ ಅಭ್ಯಾಸದಿಂದಲೂ ಅವರನ್ನು ತಿಳಿಯಬಹುದು. ಆದರೆ ಅವರ ಭೌತಿಕ ಆಚರಣೆಗಳ ಮುಖ ಬೆಲೆಗಳ ಮೇಲೆ ತೀರ್ಮಾನ ಮಾಡಿದರೆ ಅವರ ನಿಜವಾದ ಸಂಸ್ಕೃತಿಯು ಅರಿವಾಗುವದಿಲ್ಲ. ಉದಾಹರಣೆಗೆ ಹಿರಿಯ ಅಂಡಮಾನಿಗಳಲ್ಲಿ ಹುಡುಗಿ ಮೈ ನೆರೆದಾಗ (puberty) ಹುಡುಗನಿಗೆ ದೀಕ್ಷೆ ಕೊಡುವಾಗ (Initiation) ಮತ್ತು ಮದುವೆ ಮುಂತಾದ ಸಮಾರಂಭದಲ್ಲಿ ಅವರು ತಮ್ಮ ಹಗೆತನವನ್ನು ಮರೆತು ಮಿತ್ರತ್ವವನ್ನು ತೋರುವರು. ಸಾವು ಮುಂತಾದ ಸಂದಿಗ್ಧ ಸಂದರ್ಭಗಳಲ್ಲಿ ಒಬ್ಬರನ್ನೊಬ್ಬರು ಸಂತೈಸಲು ಧಾರಾಳವಾಗಿ ಕಣ್ಣೀರು ಸುರಿಸುವರು. ಹೀಗೆ ಅಳುವುದನ್ನು ಕಂಡು, ಈ ಎಲ್ಲ ಸಂದರ್ಭಗಳು ಎಲ್ಲ ಅಂಡಮಾನಿಯರು ದುಃಖದ ಸಂದರ್ಭಗಳೆಂದು ತೀರ್ಮಾನಿಸುವುದು ತಪ್ಪು. ಮಕ್ಕಳು ಬೆಳೆದು ದೊಡ್ಡವರಾದಾಗ, ಮದುವೆಯಾದಾಗ ಅಥವಾ ಗೆಳೆತನವನ್ನು ಮರಳಿ ಸಂಪಾದಿಸಿದಾಗ ಜನರು ಸಂತೋಷ ಪಡುವರೇ ವಿನಃ ದುಃಖಿಸುವುದಿಲ್ಲ. ಆದ್ದರಿಂದ ಅಂಡಮಾನಿಗಳಲ್ಲಿ ಅಳುವುದು ಒಂದು ವಿಧಿವತ್ತಾದ ಪದ್ಧತಿ (Ceremonial rite) ಯಾಗಿದ್ದು ಆಯಾ ಸಂದರ್ಭಕ್ಕೆ ಅನುಸಾರವಾಗಿ ವಿಧಿ ಪೂರ್ವಕವಾಗಿ. ಧಾರಾಳವಾಗಿ ಕಣ್ಣೀರು ಹಾಕಬೇಕಾದದ್ದು ಒಂದು ಸಾಮಾಜಿಕ ಕರ್ತವ್ಯ ಮಾತ್ರ ಎಂಬುದನ್ನು ಸಂಶೋಧಕ ತಿಳಿದಿರಬೇಕು.

ಆದಿವಾಸಿಗಳ ಆಚಾರ ವಿಚಾರಗಳನ್ನು ಕೂಲಂಕಷವಾಗಿ ಅರಿಯಬೇಕಾದರೆ ಮಾನವ ಶಾಸ್ತ್ರಜ್ಞನು ಬಹಳ ಸೂಕ್ಷ್ಮ ದೃಷ್ಟಿಯುಳ್ಳವನಿರಬೇಕು. ಉದಾಹರಣೆಗೆ, ಅಂಡಮಾನದ ಆದಿವಾಸಿಗಳಲ್ಲಿ ಮೈಯನ್ನು ಮಣ್ಣಿನಿಂದ ಲೇಪಿಸಿಕೊಳ್ಳುವ ಪದ್ಧತಿಯನ್ನು ತೆಗೆದುಕೊಳ್ಳೋಣ. ಈ ಲೇಪನ ವಿಧಾನ ಸಂದರ್ಭಕ್ಕೆ ತಕ್ಕಂತೆ ಬೇರೆಯಾಗುತ್ತದೆ. ಮದುವೆಯ ಸಮಾರಂಭದಲ್ಲಿ ಒಂದು ತೆರನಾಗಿದ್ದರೆ ಶವಸಂಸ್ಕಾರದ ಸಂದರ್ಭಗಳಲ್ಲಿ ಇನ್ನೊಂದು ರೀತಿಯಾಗಿರುವುದು. ಅವರು ರೋಗ ನಿವಾರಣೆಗೆ ಅಥವಾ ದೇಹದ ತೊಂದರೆಗಳಿಗೂ ಬೇರೆ ಬೇರೆ ರೀತಿಯಲ್ಲಿ ದೇಹದ ಬೇರೆ ಬೇರೆ ಭಾಗಗಳನ್ನು ಲೇಪಿಸಿ ಕೊಳ್ಳುವರು.

ಅಂಡಮಾನದ ಆದಿವಾಸಿಗಳ ಮತ್ತೊಂದು ಪದ್ಧತಿ ಎಂದರೆ ತಮ್ಮ ಗುಡಿಸಲಲ್ಲಿ, ಬೇಟೆಗೆ ಹೋದಾಗ ಅಥವಾ ಯಾವುದೇ ಕಾರ್ಯದಲ್ಲಿದ್ದಾಗ ಸದಾ ಬೆಂಕಿ ಉಳಿಸುತ್ತಿರು

ತ್ತಾರೆ. ಆದರೆ ಇದೊಂದು ಧಾರ್ಮಿಕ ಕ್ರಿಯೆಯಲ್ಲ. ಅವರ ನಂಬಿಕೆ ಹಾಗೂ ವಿಚಾರಧಾರೆಗಳನ್ನು ಅವಲೋಕಿಸಿದಾಗ ತಿಳಿದುಬರುವಂತೆ ಪೂರ್ವಕಾಲದಲ್ಲಿ ಮಹಾ ಪಿತೃಗಳು ಆದಿವಾಸಿಗಳಿಗೆ ಅಗ್ನಿಯನ್ನು ದಯಪಾಲಿಸಿದರು. ಈ ಅಗ್ನಿಯನ್ನೇ ಅವರು ಇಂದಿಗೂ ಉಳಿಸಿಕೊಂಡಿದ್ದಾರೆ. ಇದರಿಂದಾಗಿ ಇಂದಿಗೂ ಅಂಡಮಾನಿನ ಆದಿವಾಸಿಗಳು ಬೆಂಕಿ ಪಡೆಯಲು ಇರುವ ಯಾವ ಸಾಮಾನ್ಯ ತಂತ್ರಗಳನ್ನು ಕಲಿತಿಲ್ಲ.

ಜರವಾ ಹಾಗೂ ಸೆಂಟಿನೆಲಿಯರನ್ನೊಳಗೊಂಡು ಅಂಡಮಾನದ ಎಲ್ಲಾ ಆದಿವಾಸಿಗಳು ತಮ್ಮ ಉಪಯುಕ್ತ ಸಲಕರಣೆಗಳು ಹಾಗೂ ಆಯುಧಗಳ ತುದಿಗಳನ್ನು ಕಬ್ಬಿಣದಿಂದ ತಯಾರಿಸುವುದನ್ನು ಕಾಣುತ್ತೇವೆ. ಇದರಿಂದ ಅವರು ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಮುಂದುವರೆದ ಗುಂಪುಗಳೆಂದು ತಿಳಿಯಬಾರದು. ಏಕೆಂದರೆ ಅವರು ಕಬ್ಬಿಣದ ಅದಿರಿನಿಂದ ಕಬ್ಬಿಣವನ್ನು ಪಡೆಯುವುದಿಲ್ಲ. ಇಂದಿಗೂ ಸಮುದ್ರ ದಡದಲ್ಲಿ ಸಿಗುವ ಬಿರುಗಾಳಿಗೆ ಸಿಕ್ಕು ಒಡೆದು ಹೋದ, ಮುಳುಗಿದ ಹಡಗುಗಳ ತುಂಡುಗಳಿಂದ ಕಬ್ಬಿಣದ ತುಂಡುಗಳನ್ನು ಆಯ್ದು ತಂದು, ಅವನ್ನು ಕರಗಿಸದೆ, ಬೆಂಕಿಯಲ್ಲಿ ಕಾಯಿಸದೇ ಒಣ ಕಬ್ಬಿಣವನ್ನೇ ಜಜ್ಜಿ ಜಜ್ಜಿ ತಮಗೆ ಬೇಕಾದ ಸಲಕರಣೆಗಳನ್ನು ತಯಾರಿಸಿಕೊಳ್ಳುವರು.

ಸಂಸ್ಕೃತಿಯ ತುಲನೆ (Culture Comparison)

ಜಗತ್ತಿನ ವಿವಿಧ ಸಂಸ್ಕೃತಿಗಳನ್ನು ಒಂದಕ್ಕೊಂದು ತುಲನೆ ಮಾಡಿ ಅಭ್ಯಾಸ ಮಾಡುವುದರಿಂದ ಸಂಸ್ಕೃತಿಗಳ ರೂಪ ರೇಖೆ, ಗಮನ, ವಿಕಾಸ ಮುಂತಾದ ವಿಷಯಗಳ ಬಗ್ಗೆ ಮಹತ್ವದ ಸಂಗತಿಗಳನ್ನು ಅರಿಯಬಹುದು. ಸಂಸ್ಕೃತಿಗಳ ಸಾಮ್ಯ ಮತ್ತು ವೈಷಮ್ಯದ ಆಧಾರದಿಂದ ಅವನ್ನು ವಿವಿಧ ಗುಂಪುಗಳಾಗಿ ವಿಂಗಡಿಸಬಹುದು. ಈ ಪದ್ಧತಿಯ ಅಭ್ಯಾಸದ ಸಹಾಯದಿಂದ ಇಂದಿಗೂ ಹಗೆತನ ಸಾಧಿಸಿಕೊಂಡು ಬಂದ, ಹೊರಜಗತ್ತಿನಿಂದ ದೂರವಿರುವ ಜನಾಂಗಗಳ ಸಂಸ್ಕೃತಿಯನ್ನು, ಸಾಧ್ಯವಾದ ಮಟ್ಟಿಗೆ ವೈಜ್ಞಾನಿಕವಾಗಿ ಅರಿಯಬಹುದು. ನಿಗ್ರಿಟೋ ಜನಾಂಗಕ್ಕೇ ಸೇರಿದ "ಸಿಮ್ಯಾಂಗ್" (ಮಲೇಶಿಯಾ) ಮತ್ತು "ಇಟು" (ಫಿಲಿಫಾಯಿನ್ಸ್) ಗುಂಪುಗಳ ಸಂಸ್ಕೃತಿಯು ಅಂಡಮಾನದ ನಿಗ್ರಿಟೋ ಸಂಸ್ಕೃತಿಗೆ ಹೆಚ್ಚು ಸಾಮ್ಯತೆಯನ್ನು ಪಡೆದಿರುವುದು ಕಂಡು ಬರುತ್ತದೆ. ಈ ಅಭ್ಯಾಸತಂತ್ರದಿಂದ ಜರವಾ ಹಾಗೂ ಸೆಂಟಿನೆಲಿಯರ ಸಂಸ್ಕೃತಿಯನ್ನು ದೂರದಿಂದಲೇ ಅರಿಯಬಹುದು.

ಕಾರ್ಯತತ್ವ ಸಿದ್ಧಾಂತ :

ಕಾರ್ಯತತ್ವ ಸಿದ್ಧಾಂತವು ಸಂಸ್ಕೃತಿಗಳ ಅಧ್ಯಯನದಲ್ಲಿ ಉಪಯೋಗಿಸಲಾದ ಹೊಸದಾದ ಮತ್ತುಪ್ರಾಮುಖ್ಯ ತಂತ್ರ. ಈ ತಂತ್ರದ ಪ್ರಕಾರ ಮಾನವ ಸಂಸ್ಕೃತಿಯ

ವೈಯಕ್ತಿಕ ಅಂಗಗಳು ಕೇವಲ 'ರಾಶಿ'ಯಾಗಿರದೆ, ಪ್ರತಿಯೊಂದು ಅಂಗವೂ ಇನ್ನೊಂದಕ್ಕೆ ಕಾರ್ಯಕಾರವಾದ ಜೈವಿಕ ಸಂಬಂಧ ಪಡೆದಿದೆ. ಮಾನವ ಸಂಸ್ಕೃತಿಯನ್ನು ಒಂದು ಜೀವಿಗೆ ಹೋಲಿಸಲಾಗಿದೆ. ಜೀವಿಯ ಎಲ್ಲ ಅಂಗಾಂಗಗಳು ಒಂದಕ್ಕೊಂದು ಸಂಬಂಧ ಪಡೆದಿರುವಂತೆ ಸಂಸ್ಕೃತಿಯ ವಿವಿಧ ಅಂಗಗಳೂ ಅದೇ ಮಾದರಿಯ ಸಂಬಂಧವನ್ನು ಹೊಂದಿರುತ್ತವೆ. ಸಂಸ್ಕೃತಿಯ ಯಾವುದೇ ಒಂದು ವೈಯಕ್ತಿಕ ಅಂಗವು ತನ್ನಷ್ಟರಲ್ಲಿಯೇ ಸಂಪೂರ್ಣತ್ವವನ್ನು ಪಡೆಯದೆ ಉಳಿದ ಅಂಗಗಳೊಂದಿಗೆ ಹೊಂದಿರುವ ಸಂಬಂಧದಲ್ಲಿ ತನ್ನ ಅರ್ಥವನ್ನು ಪಡೆದಿರುತ್ತವೆ. ಸಂಸ್ಕೃತಿಗಳ ಜೈವಿಕ ರಚನೆಯಲ್ಲಿ ಯಾವುದೇ ಒಂದು ಅಂಗವು ನೆರವೇರಿಸುವ ಕಾರ್ಯವೇನೆಂಬುದನ್ನು ಅರಿತು, ಆಯಾ ಸಂಸ್ಕೃತಿಗಳಲ್ಲಿ ಅದೇ ತರದ ಕಾರ್ಯವನ್ನು ಮಾಡುವ ಅಂಗಗಳ ತುಲನಾತ್ಮಕ ಅಧ್ಯಯನವನ್ನು ಮಾಡಬಹುದು. ಉದಾಹರಣೆಗೆ ಸುಮಾರು ೭೫ ವರ್ಷಗಳ ಪೂರ್ವದಲ್ಲಿ ಹಿರಿಯ ಅಂಡಮಾನಿ ಪುರುಷರು ತಮ್ಮ ಕೊರಳಲ್ಲಿ ತೊಗಟೆಯ ಹಾರವನ್ನು ಧರಿಸುತ್ತಿದ್ದರು. ಅದರಲ್ಲಿ ಚಾಕು, ಚಮಚೆ ಮುಂತಾದ ಸಣ್ಣ ಪುಟ್ಟ ಸಲಕರಣೆಗಳನ್ನು ಸಿಕ್ಕಿಸಿಕೊಳ್ಳಲಾಗುತ್ತಿತ್ತು. ಆದುದರಿಂದ ಕೊರಳ ಹಾರವು ಶೃಂಗಾರ ಕಾರ್ಯಕ್ಕಿಂತ ಹೆಚ್ಚಾಗಿ ಉಪಯುಕ್ತ ಕಾರ್ಯವನ್ನು ಮಾಡುತ್ತಿತ್ತು. ಅವರಂತೆ ಇಂದು ಜರವಾ ಪುರುಷರೂ ತಮ್ಮ ಎದೆಯ ಮೇಲೆ ೬"-೧೨" ಅಗಲದ ತೊಗಟೆಯ ಪಟ್ಟಿಯನ್ನು ಧರಿಸುವರು. ಈ ಪಟ್ಟಿಯಲ್ಲಿ ಚಾಕು ಮುಂತಾದವುಗಳನ್ನು ಇಟ್ಟುಕೊಂಡು ಅದನ್ನು ಚಾನೆಯಂತೆ (Kit) ಉಪಯೋಗಿಸುವರು. ಇದನ್ನು ಓಂಗಿಗಳ ಕೊರಳ ಹಾರಕ್ಕೂ ಹೋಲಿಸಬಹುದು. ಈ ರೀತಿ ಒಂದೇ ಕಾರ್ಯವನ್ನು ಮಾಡುವ ಬೇರೆ ಬೇರೆ ಸಂಸ್ಕೃತಿಗಳ ಅಂಗಗಳನ್ನು ತುಲನೆ ಮಾಡುವುದರಿಂದ ಆಯಾ ಸಂಸ್ಕೃತಿಗಳು ತಾವಿರುವ ಪರಿಸರದಲ್ಲಿ ಯಾವ ಮಾದರಿಯಲ್ಲಿ ಹೊಂದಿಕೊಂಡಿರುವವು ಎಂಬುದನ್ನೂ ಅರಿಯಬಹುದು.

ಇದೇ ರೀತಿ ಓಂಗಿ ಮಹಿಳೆಯರು ತಮ್ಮ ಜನನೇಂದ್ರಿಯದ ಮೇಲೆ ತಾಡೆ ಎಲೆಗಳ ಗೊಂಡೆ (Tessel)ಯನ್ನು ಧರಿಸುತ್ತಾರೆ. ಜರವಾ ಮಹಿಳೆಯರೂ ತಮ್ಮ ಮರ್ಮಾಂಗಗಳನ್ನು ಮುಚ್ಚುವಲ್ಲಿ ತಮ್ಮ ನಡುವಿನ ಪಟ್ಟಿಯಿಂದ ಕೆಲವು ಎಲೆಗಳನ್ನು ಮಾತ್ರ ಸೇತು ಹಾಕಿಕೊಂಡಿರುತ್ತಾರೆ. ಆದರೆ ಜರವಾಗಳ, ಈ ಎಲೆಪಟ್ಟಿಯನ್ನು ಓಂಗಿಗಳ ಗೊಂಡೆಗೆ ಹೋಲಿಸಬರುವುದಿಲ್ಲ. ಏಕೆಂದರೆ ಈ ಉಡಿಗೆಗಳು ಓಂಗಿ ಹಾಗೂ ಜರವಾಗಳಲ್ಲಿ ಬೇರೆ ಬೇರೆ ಕಾರ್ಯವನ್ನು ಮಾಡುತ್ತವೆ. ಮತ್ತು ಕೇವಲ ಕೆಲವು ಎಲೆಗಳು ಜರವಾ ಮಹಿಳೆಯ ಜನನೇಂದ್ರಿಯವನ್ನು ಮುಚ್ಚಲು ಸಾಧ್ಯವಿಲ್ಲ. ಓಂಗಿಗಳು ತಮ್ಮ ಮರ್ಯಾದೆ (Privacy for Pudenda)ಗಾಗಿ ಗೊಂಡೆಯನ್ನು ಉಪಯೋಗಿಸುತ್ತಿದ್ದರೆ ಜರವಾ ಹೆಂಗಸರು ಎಲೆಪಟ್ಟಿಯನ್ನು ತಮ್ಮ ಸೌಂದರ್ಯ ವರ್ಧಕದಂತೆ ಉಪಯೋಗಿಸುತ್ತಿರಬಹುದು.[೧] ಆದರೆ ಜರವಾಗಳಲ್ಲಿ ಆ ಪಟ್ಟಿಯ ಕಾರ್ಯವೇನೆಂಬುದನ್ನು ಕೇಳಲು ಇಂದು ಸಾಧ್ಯವಿಲ್ಲ.

ಮಾನವ ಸಂಸ್ಕೃತಿಗಳ ತುಲನೆಯಿಂದ ವಿವಿಧ ಸಂಸ್ಕೃತಿಗಳಲ್ಲಿ ಕೆಲವು ಸಾಮ್ಯಗಳನ್ನು ಕಾಣುವುದರಿಂದ ಆ ಸಂಸ್ಕೃತಿಗಳು ಒಂದಕ್ಕೊಂದು ನೇರವಾಗಿ ಪ್ರಭಾವ ಬೀರಿವೆ ಎಂದು ತೀರ್ಮಾನಿಸುವುದು ಸರಿಯಲ್ಲ. ಹಲವು ಮಾನವಿಕ ಬೇಕು ಬೇಡಿಕೆಗಳು, ಉದಾಹರಣೆಗೆ, ಆಹಾರ, ವಸತಿ ಮತ್ತು ಲೈಂಗಿಕ ತೃಷೆ ಎಲ್ಲಾ ಮಾನವ ಜನಾಂಗಗಳಲ್ಲಿ ಒಂದೇ ರೀತಿಯದಾಗಿರುವುದರಿಂದ ವಿವಿಧ ಸಂಸ್ಕೃತಿಗಳು ಕೆಲವು ಸಾಮ್ಯಗಳನ್ನು ತೋರಿಸುತ್ತವೆ. ಏಕೆಂದರೆ ಸಂಸ್ಕೃತಿಯು ಮಾನವನು ತಾನಿರುವ ನಿಸರ್ಗಕ್ಕೆ ಉತ್ತಮ ಸಾಧ್ಯವಾದ ರೀತಿಯಲ್ಲಿ ಹೊಂದಿಕೊಂಡು ಬಾಳಲು ಮತ್ತು ತನ್ನ ಪೀಳಿಗೆಯನ್ನು ಮುಂದುವರೆಸಲು ಅಳವಡಿಸಿಕೊಂಡಿರುವ ಸಾಧನವಾಗಿರುವುದು.

ನಮ್ಮ ಸಂಸ್ಕೃತಿಯಲ್ಲಿ ಭೂತಗಳ ವರ್ಣನೆಯನ್ನು ಭಯಾನಕ ರೂಪದಲ್ಲಿ ವರ್ಣಿಸುವಂತೆ ಹಿರಿಯ ಅಂಡಮಾನಿಯರು ಭೂತಗಳಿಗೆ ದಟ್ಟ ಹಾಗೂ ಉದ್ದವಾದ ಕೈಕಾಲುಗಳಿರುವವು ಎಂದು ನಂಬುತ್ತಾರೆ. ಆದುದರಿಂದ ಕರ್ನಾಟಕದ ಸಂಸ್ಕೃತಿಯು ಅಂಡಮಾನಿಯರ ಮೇಲೆ ಪ್ರಭಾವ ಬೀರಿರಬೇಕು ಎಂದು ತೀರ್ಮಾನಿಸಿಸುವುದು ತಪ್ಪು. ಮಾನವನ ಮಾನಸಿಕ ಏಕೀ ಭಾವ (Psychological unity of mind)ದಿಂದಲೂ ವಿವಿಧ ಸಂಸ್ಕೃತಿಗಳ ಆಚಾರ ಹಾಗೂ ವಿಚಾರ ಧಾರೆಗಳು ಸೌಮ್ಯತನ ತೋರಿಸಬಹುದು. ಹೀಗೆ ಯಾವುದಾದರೊಂದು ಸಂಸ್ಕೃತಿಯನ್ನು ಮೊಟ್ಟ ಮೊದಲಬಾರಿಗೆ ಅಭ್ಯಾಸ ಮಾಡುವಾಗ, ಅದರಲ್ಲೂ ಈ ಗುಂಪು ಹೊರ ಜಗತ್ತಿನೊಂದಿಗೆ ಸೂಕ್ತ ಸಂಬಂಧ ಹೊಂದದಿದ್ದರೆ, ಸಂಶೋಧಕನು ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಮಾನವ ಶಾಸ್ತ್ರಜ್ಞರು ಮೊದಲಿಂದಲೂ ಇಂತಹ ಅಭ್ಯಾಸ ಕ್ರಮವನ್ನು ಇಟ್ಟುಕೊಂಡು ಬಂದಿದ್ದಾರೆ.

---

* ಈ ಲೇಖನವನ್ನು ಬರೆಯುವಲ್ಲಿ ಮತ್ತು ಪ್ರಕಟನೆಗೆ ಸಿದ್ಧಪಡಿಸುವಲ್ಲಿ ನೆರವಾದ ಡಾ. ಕೆ. ಜಿ. ಗುರುಮೂರ್ತಿಯವರಿಗೆ ನಾನು ಚಿರಋಣಿ.

೧ ಓಂಗಿ ಮಹಿಳೆಯರ ಕಾಲುಗಳ ಅಳತೆಯನ್ನು ತೆಗೆದುಕೊಳ್ಳುತ್ತಿದ್ದಾಗ ಅವರ ಒಂದು ಕೈ ಸದಾ ಗೊಂಡೆಯ ಮೇಲಿರುತ್ತಿತ್ತು. ಏಕೆಂದರೆ ಅಳತೆಗಳನ್ನು ತೆಗೆದುಕೊಳ್ಳುವಾಗ ಅವರ ಗೊಂಡೆಗೆ ಅಳತೆ ತೆಗೆದುಕೊಳ್ಳುವವನ ತಲೆ ತಾಗಿ ಅದು ಸ್ಥಾನಪಲ್ಲಟವಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅವರು ಗೊಂಡೆಯು ತನ್ನ ಸ್ಥಾನದಲ್ಲಿಯೇ ಭದ್ರವಾಗಿರುವಂತೆ ಕಾಳಜಿ ವಹಿಸುತ್ತಿದ್ದರು.

ಗ್ರಂಥ ಋಣ

Boden Kloss. C., Andamans and Nichobars, 1902.

Man, E. H., Aboriginal Inhabitants of the Andaman Islands, 1883

The Nihcobar Islands and their people, 1883

Mount, Frederick J. Adventures and Researches among Andaman Islands, 1863

Portman, M. V., A History of our relations with the Andamancese, Vol. I & II 1819

Radcliffe—Brown, A. R., The Andaman Islanders. Illinois Uni Press. 1948

Awaradi, S. A. "Anthropological demography of Onge of little Andamans"–Paper prsented at the post plenary session of Xth International Congress of Anthropological and Ethnological Sciences, 1978. Port Blair. "ಅಂಡಮಾನ ಮತ್ತು ನಿಕೋಬಾರ್ (ಹಸ್ತ ಲೇಖನಗಳು) ೧೯೭೯

Cipriani, L. "Survey of little Andaman during 1954". Buleletin of Anthropology, Vol. III. No. 2, 1954, Pp. 66–94.

ದೇವದಾಸಿ ಪದ್ಧತಿ

● ಕೆ. ಜಿ. ಗುರುಮೂರ್ತಿ
● ಎನ್. ಕೆ. ಕಡೆತೋಟದ

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಚಾರಕ್ಕೆ, ನಿಂದನೆಗೆ ಒಳಗಾಗಿರುವ ಪ್ರಾಚೀನ ಪದ್ಧತಿಗಳಲ್ಲಿ ದೇವದಾಸಿ ಪದ್ಧತಿಯೂ ಒಂದು. ತನ್ನದೇ ಆದ ಚಾರಿತ್ರಿಕ, ಧಾರ್ಮಿಕ, ಆರ್ಥಿಕ ಹಾಗೂ ಸಾಮಾಜಿಕ ಬೆಂಬಲ ಹೊಂದಿರುವ ದೇವದಾಸಿ ಪದ್ಧತಿಗೆ ಪರ ಮತ್ತು ವಿರುದ್ಧವಾದ ವಾದಗಳೆದ್ದಿವೆ. ಈ ಪದ್ಧತಿಯನ್ನು ತಮ್ಮ ರಾಜಕೀಯ ನೀತಿಯ ಬೆಂಬಲಕ್ಕೆ ಅಥವಾ ಹಿಂದುಳಿದ-ಮುಂದುವರೆದ ಜಾತಿಗಳ ರಾಜಕೀಯಕ್ಕೆ ಬಳಸಿಕೊಂಡ ಉದಾಹರಣೆಗಳು ಇವೆ. ಈ ಪ್ರಾಚೀನ ಪದ್ಧತಿಯು ಒಂದು ಪುರೋಹಿತ ವರ್ಗದವರು ಮತ್ತು ಗುಡಿಗಳು ಒಂದು ಕಡೆ ಸೂಳೆಗೇರಿಯಮಾಲಿಕರು ಇನ್ನೊಂದುಕಡೆ ತಮ್ಮದೇ ಆದ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ. ದೇವದಾಸಿ ಪದ್ಧತಿಯನ್ನು ಒಂದು ಸಾಮಾಜಿಕ ಪಿಡುಗೆಂದು ಗಣನೆ. ಇದು ಸೂಳೆಗಾರಿಕೆಯಂತಹ ಸಾಮಾಜಿಕ ಸಮಸ್ಯೆಗೆ ಪೂರಕವಾಗಿದೆ ಎಂದು ತಿಳಿದು ಇದನ್ನು ಕಾನೂನಿನ ಮೂಲಕ ನಿವಾರಿಸುವ ಅನೇಕ ಪ್ರಯತ್ನಗಳೂ ನಡೆದಿವೆ. ಆದರೆ ತನ್ನ ಧಾರ್ಮಿಕ ಹಿನ್ನೆಲೆ, ಸಮಾಜದಲ್ಲಿನ ಅಜ್ಞಾನ, ಮೂಢ ನಂಬಿಕೆ, ಬಡತನ ಮುಂತಾದವುಗಳಿಂದ, ಕಾನೂನಿನಲ್ಲಿರುವ ಅನೇಕ ಬಿರುಕುಗಳಿಂದಾಗಿ ಇಂದು ದೇವದಾಸಿ ಪದ್ಧತಿಯನ್ನು ಸೂಳೆಗಾರಿಕೆಯಂತಹ ಸಮಾಜ ಅವನತಿಯ ಕಾರ್ಯಕ್ಕೆ ಪೂರಕವಾಗಿ ಬಳಸಲಾಗಿದೆ. ಇಂತಹ ಸನ್ನಿವೇಶಕ್ಕೆ ಕಾರಣವೇನು? ದೇವದಾಸಿ ಪದ್ಧತಿ ಇನ್ನೂ ತನ್ನ ನಿಜರೂಪದಲ್ಲಿ ಜೀವಂತವಿದೆಯೆ? ಇದ್ದರೆ ಯಾವ ರೂಪದಲ್ಲಿದೆ? ಇದಕ್ಕೆ ಮತ್ತು ಸೂಳೆಗಾರಿಕೆಗೂ ಇರುವ ಸಂಬಂಧ ಯಾವ ರೀತಿಯದು, ಈ ಎಲ್ಲಾ ಸಮಸ್ಯೆಗಳನ್ನು ಸಮಾಜದಲ್ಲಿನ ಜನಸಾಮಾನ್ಯರು ತಿಳಿದಿದ್ದಾರೆಯೆ? ಮುಂತಾದವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ದೇವದಾಸಿ ಪದ್ಧತಿ ಬಹು ಪ್ರಾಚೀನವಾದದ್ದು. ಇದು ಮಾನವ ಮತ್ತು ಅವನ ಧರ್ಮಗಳು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇವೆ ಎಂದು ವಾದಮಾಡುವವರೂ ಇದ್ದಾರೆ. ಇದಕ್ಕೆ ಸೂಕ್ತ ಆಧಾರಗಳಿಲ್ಲವಾದರೂ ಅನೈತಿಕ ಸ್ತ್ರೀ ಸಂಬಂಧ ಎಲ್ಲಾ ಕಾಲದಲ್ಲೂ, ಎಲ್ಲಾ ಸಮಾಜಗಳಲ್ಲಿಯೂ ಕಂಡುಬಂದಿದೆ. ಆದರೆ ಸೂಳೆಗಾರಿಕೆಯಂತಹ ಒಂದು ಸಂಸ್ಥೆಯನ್ನು ಧಾರ್ಮಿಕ ಬಣ್ಣದಲ್ಲಿ ಕಂಡ ನಿದರ್ಶನಗಳೂ ಇವೆ. ದೇವರಿಗೆ ಕಾಣಿಕೆಯಾಗಿ, ಮುಡಿಪಾಗಿ, ಸೇವೆಗಾಗಿ ನೀಡಲಾದ ಹೆಂಗಸರೇ ದೇವದಾಸಿಯರು. ದೇವರಿಂದ ರಕ್ಷೆ, ಅನುಕಂಪ, ಲಾಭ, ಬೆಂಬಲ, ಹೀಗೆ ಅನೇಕ ರೀತಿಯ ನೆರವು ಬೇಡಿದ ಜನ ತಮ್ಮ ತಂಗಿ, ಮಗಳು ಅಥವಾ ಒಂದು ಹುಡುಗಿಯನ್ನು ಹಣಕೊಟ್ಟು ಕೊಂಡು ತಂದಾದರೂ ದೇವರಿಗೆ ನೀಡಿದ ಉದಾಹರಣೆಗಳಿವೆ. ಹೀಗೆ ದೇವರಿಗೆ ಸ್ತ್ರೀಯರನ್ನು ನೀಡುವುದು ಜನಸಾಮಾನ್ಯರು ದೇವರನ್ನು ತಮ್ಮಂತೆ ಮಾನವ ಮಟ್ಟಕ್ಕಿಳಿಸಿ, ತಮ್ಮಂತೆ ದೇವರಿಗೂ ಅನಿಸಿಕೆಗಳಿವೆ ಎಂದು ನಂಬಿ, ಮನುಷ್ಯರಂತೆ ಇದನ್ನು ಪಡೆದಾಗ ದೇವರು ಪ್ರಸನ್ನನಾಗುವನೆಂದು ನಂಬಿ, ಕಾಣಿಕೆಯಾಗಿ, ಲಂಚವಾಗಿ, ಸೇವೆಗಾಗಿ ನೀಡಿದ ಅನೇಕ ವಸ್ತುಗಳಲ್ಲಿ ಸ್ತ್ರೀಯೂ ಒಬ್ಬಳು.

ಮೊಟ್ಟಮೊದಲ ಬಾರಿಗೆ ಚರಿತ್ರೆಯಿಂದ ತಿಳಿದು ಬಂದಂತೆ ಈ ದೇವದಾಸಿಯಂತಹ ಪದ್ಧತಿ ಸುಮೇರಿಯನ್ ನಗರ ರಾಜ್ಯಗಳ ಸಂಸ್ಕೃತಿಯಲ್ಲಿದ್ದುದು ಕಂಡು ಬರುತ್ತದೆ.[೧] ದೇವರಿಗೆ ಪ್ರಿಯವಾದ ಎಲ್ಲಾ ವ್ಯವಸ್ಥೆಗಳನ್ನು ನೀಡಿದರೆ ಅವನು ಪ್ರಸನ್ನನಾಗಿ ತಮಗೆ ಬೆಂಬಲ ನೀಡುವನೆಂಬ ನಂಬಿಕೆ ಇದ್ದ ಆ ಕಾಲದಲ್ಲಿ, ನಗರ ದೇವತೆಗೆ ನಗರದ ರಾಜನೇ ತನ್ನ ತಂಗಿ ಅಥವಾ ಮಗಳನ್ನು ದಾಸಿಯಾಗಿ ನೇಮಿಸಿ, ಆಕೆಯಿಂದ ದೇವರ ಸೇವೆ ಮಾಡಿಸಿ, ದೇವರ ಬೆಂಬಲ ಪಡೆಯುತ್ತಿದ್ದ ಪದ್ಧತಿ ಇದ್ದಿತು. ರಾಜ್ಯಕಾರ್ಯದಲ್ಲಿ ತೆಗೆದುಕೊಳ್ಳಬೇಕಾದ ಅನೇಕ ಮಹತ್ವದ ನಿರ್ಣಯಗಳಿಗೆ ಜನ ಬೆಂಬಲ ಪಡೆಯಲು ದೈವ ಬೆಂಬಲವನ್ನು ಬಳಸುತ್ತಿದ್ದ ಕಾಲವದು. ಇಂತಹ ನಿರ್ಣಯ ತೆಗೆದುಕೊಳ್ಳಲು ಸಭೆ ಸೇರುವ ಹಿಂದಿನ ರಾತ್ರಿ ರಾಜನು ಗುಡಿಯಲ್ಲಿ ಮಲಗಿ ಕನಸಿನಲ್ಲಿ ದೇವರಿಂದ ಮಾರ್ಗದರ್ಶನ ಪಡೆಯುತ್ತಿದ್ದನೆಂದು ತಿಳಿದು ಬರುತ್ತದೆ.

ಪ್ರಾಚೀನ ಭಾರತದಲ್ಲಿಯೂ ದೇವದಾಸಿ ಪದ್ಧತಿ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ರೀತಿಯಲ್ಲಿ ಇದ್ದದ್ದು ಕಂಡುಬರುತ್ತದೆ. ಶಿಲಾಶಾಸನಗಳಿಂದ ತಿಳಿದು ಬರುವಂತೆ ದಕ್ಷಿಣ ಭಾರತದ ತಂಜೂರು, ಮಧುರೆ ಮುಂತಾದ ದೇವಾಲಯಗಳಿಗೂ ದೇವದಾಸಿಯರಿದ್ದು ಅವರು ನಿರ್ದಿಷ್ಟವಾದ ಸೇವೆ ಮಾಡುತ್ತಿದ್ದರು. ಇವರನ್ನು ಅಂಗ ಸೇವೆಯವರು ಮತ್ತು ರಂಗ ಸೇವೆಯವರು ಎಂದು ಎರಡು ಭಾಗಮಾಡುತ್ತಿದ್ದರು. ಅಂದರೆ ದೇವರನ್ನು ಮಾನವನಂತೆ ಮಾಡಿ ಅವನಿಗೂ ತಮ್ಮಂತೆ ಅಂಗ ಮತ್ತು ರಂಗ ಸೇವೆಗಳನ್ನು ನೀಡಲು ಪ್ರಾರಂಭಿಸಿದರು. ಅಂಗಸುಖಗಳೆಂದರೆ ಗಂಧ, ಹೂ, ಪತ್ರಿ

ಸ್ನಾನ, ವಸ್ತ್ರ, ಧೂಪ ಮುಂತಾದವು. ದಿನನಿತ್ಯದ ಪೂಜೆಯಲ್ಲಿ ದೇವರಿಗೆ ಇವೆಲ್ಲವನ್ನು ಎಡೆ ನೀಡಿ ದೇವರನ್ನು ಒಲಿಸಿಕೊಳ್ಳುವುದು. ರಂಗ ಸೇವೆಯಲ್ಲಿ ನೃತ್ಯ ಹಾಗೂ ಹಾಡುಗಾರಿಕೆ ಬರುತ್ತವೆ. ಇದಕ್ಕೆಂದೇ ಅನೇಕ ದಕ್ಷಿಣ ಭಾರತದ ದೇವಾಲಯಗಳಲ್ಲಿ ರಂಗ ಮಂಟಪ ಇರುವುದು ಕಂಡುಬರುತ್ತದೆ. ದೇವರಿಗೆ ಮೀಡಿಪಾದ ಸ್ತ್ರೀ ಇಲ್ಲಿ ನೃತ್ಯಮಾಡುತ್ತಿದ್ದಳು. ಈ ಎರಡೂ ಗುಂಪುಗಳಲ್ಲದೆ ಇನ್ನೂ ಅನೇಕ ಸುಂದರಿಯರು ದೇವರ ಸೇವೆಯಲ್ಲಿದ್ದುದು ಕಂಡುಬರುತ್ತದೆ. ಈ ಪದ್ಧತಿಯಂತೆ ಒಂದು ಹೊಸ ಗುಡಿ ಕಟ್ಟಿದಾಗ ಅಥವಾ ಹಳೆಯದನ್ನು ಜೀರ್ಣೋದ್ಧಾರ ಮಾಡಿದಾಗಲೂ ಅದಕ್ಕೆ ಆ ನಾಡಿನ ಅಥವಾ ನಗರದಲ್ಲಿಯ ಅತೀವ ಸುಂದರ ಸ್ತ್ರೀಯನ್ನು ಸೇವೆಗೆ ದತ್ತಿಯಾಗಿ ನೀಡುವ ಪದ್ಧತಿ ಇದ್ದುದು ತಿಳಿದು ಬರುತ್ತದೆ. ಮುಂದೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅನೇಕ ಸಾರಿ ಕಂಬಕ್ಕೆ ಅಥವಾ ಬಾಗಿಲಿಗೆ ಒಬ್ಬರಂತೆ, ಸುಂದರಿಯರನ್ನು ಗುಡಿಗೆ ನೀಡುವುದು ಆ ನಾಡಿನ ರಾಜರ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಆದ್ದರಿಂದ ಅನೇಕರಿಂದ ಅನೇಕ ನೂರು, ಸಾವಿರ ಜನ ಸುಂದರಿಯರನ್ನು ನೀಡಿರುವ ಉಲ್ಲೇಖನ ಶಾಸನಗಳಿಂದ ತಿಳಿದು ಬರುತ್ತದೆ. ದೇವಸ್ಥಾನಕ್ಕೆ ಹೀಗೆ ಸುಂದರಿಯರನ್ನು ನೀಡುವುದು ಕೇವಲ ಹಿಂದೂ ದೇವಾಲಯಗಳಲ್ಲಿ ಮಾತ್ರ ಸೀಮಿತವಾಗಿರದೆ, ಜೈನ ಹಾಗೂ ಬೌದ್ಧ ದೇವಾಲಯಗಳಲ್ಲಿಯೂ ಕಂಡುಬರುತ್ತದೆ ಎಂದು ಡಾ॥ ಎಂ. ಚಿದಾನಂದ ಮೂರ್ತಿಯವರು ತಮ್ಮ ಶಾಸನಗಳ ಅಭ್ಯಾಸಗಳಿಂದ ತಿಳಿಸಿದ್ದಾರೆ.[೨]

ಮೊದಲಿಗೆ ದತ್ತಿಯಾಗಿ ಬಂದ ಸ್ತ್ರೀಯರು ಗುಡಿಯಲ್ಲಿಯೇ ವಾಸವಾಗಿದ್ದು ಕೊಂಡು, ಕೇವಲ ದೇವರ ಪೂಜೆಯಲ್ಲಿ ಪೂಜಾರಿಗೆ ನೆರವಾಗುತ್ತಿದ್ದರು. ಉಳಿದವರು ಗಂಟೆ ಬಾರಿಸುವುದು, ಚೌರಿ ಬೀಸುವುದು, ನೃತ್ಯ ಮಾಡುವುದು, ಹಾಡುವುದು ಮುಂತಾದ ಸೇವೆ ಮಾಡುತ್ತಿದ್ದರು. ಇನ್ನೂ ಕೆಲವರು ಗುಡಿಯ ಸ್ವಚ್ಛತೆ ಮುಂತಾದ ಕೆಲಸದಲ್ಲಿ ನೆರವಾಗುತ್ತಿದ್ದರು. ದೇವರ ಹೆಂಡತಿಯರಾಗಿ, ದಾಸಿಯರಾಗಿ, ಗುಡಿಯ ಆಸ್ತಿಯಾಗಿ ಬಂದ ಈ ಸುಂದರಿಯರು ತಮ್ಮ ಜೀವನಕ್ಕೆ ಗುಡಿಯ ಆದಾಯವನ್ನೇ ಅವಲಂಬಿಸಿರು ತ್ತಿದ್ದರು. ಆದಾಯ ಕಡಿಮೆಯಾದಾಗ ಅದನ್ನು ಹೆಚ್ಚಿಸಲು ಅವರು ಬಟ್ಟೆ, ಬುಟ್ಟಿ ಹೆಣೆಯುವುದು, ಹಣ್ಣು, ಕಾಯಿ, ಹೂ, ತಾಯತ, ವಿಗ್ರಹ ಮುಂತಾದವನ್ನು ಮಾರು ವುದು ಹೀಗೆ ಅನೇಕ ವೃತ್ತಿಗಳಲ್ಲಿ ತೊಡಗಿರುತ್ತಿದ್ದರು. ಹೀಗೆ ದೇವಸ್ಥಾನಕ್ಕೆ ಹಣ ಗಳಿಸಲು ದುಡಿಯುವುದು ಮುಂದೆ ದೇವರಿಗೆ ಸಲ್ಲಿಸುವ ಸೇವೆಗಾಗಿ ಪರಿಣಮಿಸಿದವು. ಇವುಗಳಲ್ಲಿ ದೇವರ ಹೆಸರಿನಲ್ಲಿ ಮೈ ಮಾರಿಕೊಂಡು ಹಣಗಳಿಸುವುದೂ ಒಂದು ಬಗೆಯ ಸೇವೆಯಾಗಿ ಪರಿಣಮಿಸಿತು. ಇವರೇ ಮುಂದೆ ದೇವದಾಸಿಯರ ಹೆಸರಿನಲ್ಲಿ ಸೂಳೆಯ ರಾದರು. ಪುಣ್ಯ ಕ್ಷೇತ್ರದಲ್ಲಿ ಇಂತಹ ಅಪವಿತ್ರ ಕೆಲಸ ನಡೆಯುವದು ವೈದಿಕ ಮನೋ ಭಾವನೆಯ ಜನರಿಗೆ ಸೇರದಾದಾಗ ಅವರನ್ನು ದೇವಸ್ಥಾನದಿಂದ ದೂರವಿಟ್ಟು, ಅವರಿಂದ ಬರುವ ಹಣವನ್ನು ಮಾತ್ರ ದೇವಸ್ಥಾನ ಪಡೆಯುತ್ತಿತ್ತು. ಆದರೂ ದೇವರ ಸೇವೆಗೆ ಮೀಸಲಾದ ಈ ಎಲ್ಲರನ್ನು ದೇವದಾಸಿ ಎಂದು ಕರೆಯಲಾಗಿದೆ.

ದೇವದಾಸಿಯರು ಮಾಡುತ್ತಿದ್ದ ಕರ್ತವ್ಯಗಳ ಆಧಾರದಿಂದ ಅವರನ್ನು ಅನೇಕ ಬಗೆಯಾಗಿ ಮಾಡಲಾಗಿದೆ. ಇವರೆಲ್ಲರೂ ದೇವರಿಗೆ ಅರ್ಪಿಸಿದ ಕಾಣಿಕೆಗಳಾದ್ದರಿಂದ ಅವರೆಲ್ಲರ ಒಡೆಯ ಅಥವಾ ಗಂಡ ದೇವರೇ ಆಗಿರುತ್ತಿದ್ದ. ಆದರೆ ಮೊದಲಿಗೆ ನಾಡಿನ ದೊರೆ, ಅಥವಾ ಊರ ಯಜಮಾನನಷ್ಟೇ ತನ್ನ ತಂಗಿ ಅಥವಾ ಮಗಳನ್ನು ದೇವದಾಸಿಯಾಗಿ ನೀಡುವ ಅಧಿಕಾರ ಅಥವಾ ಪದ್ಧತಿ ಇತ್ತು. ಆಗ ಆಕೆಯೊಬ್ಬಳೇ ದೇವದಾಸಿ ಇರುತ್ತಿದ್ದಳು. ಮುಂದೆ ಉಳಿದವರೂ ಅನೇಕ ಕಾರಣಕ್ಕೆ ತಮ್ಮ ಮಕ್ಕಳನ್ನು ದೇವರಿಗೆ ಅರ್ಪಿಸಿದ್ದರಿಂದ ಅನೇಕರು ದೇವದಾಸಿಯರಾದರು. ಆದರೆ ಪೂರ್ವ ಪದ್ಧತಿಯಂತೆ, ಪೂರ್ವದ ಆಳ್ವಿಕೆಯ ಮನೆತನದಿಂದ ಬಂದ ದೇವದಾಸಿ ಪ್ರಧಾನ ಅಥವಾ ಹಿರಿಯ ಹೆಂಡತಿಯಾದಳು, ಉಳಿದವರು ತಮ್ಮ ಜಾತಿ, ಕಸಬು, ಮನೆತನಕ್ಕೆ ತಕ್ಕಂತೆ ವಿವಿಧ ರೀತಿಯ, ತರಹದ ಹೆಂಡತಿಯರಾದರು. ಇಂದಿಗೂ ಹಳೆಯ ಸಂಪ್ರದಾಯವನ್ನು ಪರೋಕ್ಷವಾಗಿ ಮುಂದುವರೆಸಿಕೊಂಡು ಬಂದಿರುವ ದೇವಸ್ಥಾನಗಳಲ್ಲಿ ಗುಡಿ ದೇವದಾಸಿ ಎಂಬ ಸ್ಥಾನ ಹೊಂದಿದ ದೇವದಾಸಿ ದೇವರ ಪ್ರಧಾನ ಹೆಂಡತಿ. ಆದ್ದರಿಂದ ಯಾವುದೇ ಕುಟುಂಬದಲ್ಲಿಯಂತೆ ದೇವರ ತೇರು ಹಬ್ಬದಲ್ಲಿ ದೇವರಿಗೆ ಒಡವೆ, ಬಟ್ಟೆ ಏರಿಸಿದಂತೆ ಅದರಲ್ಲಿ ಈಕೆಗೂ ಕೆಲವಾರು ಒಡವೆಗಳನ್ನು ಕೊಡುವುದು, ಊರ ಖರ್ಚಿನಲ್ಲಿ ಹಬ್ಬಕ್ಕೆ ಆಕೆಗೂ ಹೊಸ ಬಟ್ಟೆ ನೀಡುವುದು ಪದ್ಧತಿಯಾಗಿ ಉಳಿದಿದೆ. ಉಳಿದ ದೇವದಾಸಿಯರಿಗೆ ಈ ಯಾವ ಹಕ್ಕುಗಳೂ ಇಲ್ಲ. ಹೀಗೆ ತನ್ನ ಹಕ್ಕು ಪಡೆದ ಪ್ರಮುಖ ದೇವದಾಸಿಗೆ ಕೆಲವೊಂದು ಕರ್ತವ್ಯಗಳೂ ಇದ್ದವು. ಮೊದಲನೆಯದಾಗಿ, ಈಕೆ ದೇವರ ಸೇವೆ ಬಿಟ್ಟು ಜೀವನಕ್ಕೆ ಬೇರಾವ ವೃತ್ತಿಯನ್ನೂ ಮಾಡುವಂತಿರಲಿಲ್ಲ. ಸದಾ ಮಡಿ ಮೈಲಿಗೆ ನಿಯಮಗಳನ್ನು ಆಚರಿಸಿ, ಕಾಲ ಕಾಲಕ್ಕೆ ದೇವರಿಗೆ ಸಲ್ಲುವ ಪೂಜೆಯ ಕಾಲದಲ್ಲಿ ಗರ್ಭಗುಡಿಯಲ್ಲಿ ಅಥವಾ ಅದರ ಬಾಗಿಲಲ್ಲಿ ನಿಂತಿರುತ್ತಿದ್ದಳು. ತನ್ನ ದೇವರಿರುವ ಊರುಬಿಟ್ಟು ಬೇರೆ ಊರಿಗೆ ವಲಸೆ ಹೋಗುವಂತೆಯೂ ಇರಲಿಲ್ಲ. ಆಕೆ ದೇವರ ಹೆಂಡತಿಯಾದ್ದರಿಂದ ಯಾರೊಡನೆಯೂ ದೈಹಿಕ ಸಂಬಂಧ ಹೊಂದುವಂತಿರಲಿಲ್ಲ. ಹೊಂದಿದರೆ, ಬಸಿರಾದರೆ, ಆಕೆ ದೇವರಿಗೇ ದ್ರೋಹ ಮಾಡಿದಳೆಂದು ಸೂಕ್ತ ನಿಂದನೆಗೆ, ಶಿಕ್ಷೆಗೆ ಗುರಿಯಾಗುತ್ತಿದ್ದಳು. ಕೆಲವು ಕಡೆ ಇಂತಹ ದ್ರೋಹಿಯನ್ನು ಬೆತ್ತಲೆಗೊಳಿಸಿ, ಮೂಗು, ಕಿವಿ, ಮೊಲೆಗಳನ್ನು ಕತ್ತರಿಸಿ, ತಲೆ ಬೋಳಿಸಿ, ಅರ್ಧ ಮುಖ ಮೈಗೆ ಸುಣ್ಣ, ಉಳಿದರ್ಧಕ್ಕೆ ಕೆಮ್ಮಣ್ಣು ಹಚ್ಚಿ, ಹಿಮ್ಮುಖವಾಗಿ ಕತ್ತೆಯ ಮೇಲೆ ಕೂಡಿಸಿ, ಮೆರವಣಿಗೆ ಮಾಡಿ, ಊರ ಗಡಿಯಿಂದ ಹೊರಗೆ ಬಿಟ್ಟು ಬರುತ್ತಿದ್ದರಂತೆ. ಕೊನೆಯದಾಗಿ, ತನಗೆ ವಯಸ್ಸಾದಂತೆ ತನ್ನ ತಂಗಿಯರಲ್ಲಿ ಅಥವಾ ಅಣ್ಣ ತಮ್ಮಗಳ ಮಕ್ಕಳಲ್ಲಿ ಒಬ್ಬಾಕೆಯನ್ನು ತಂದು ದೇವರಿಗೆ ದಾಸಿಯನ್ನಾಗಿ ಮಾಡುವ ಹಕ್ಕೂ ಅಥವಾ ಕರ್ತವ್ಯ ಆಕೆಗೆ ಇದ್ದಿತು. ಆದ್ದರಿಂದ ಆಕೆಗೆ ಅನ್ನ ವಸ್ತ್ರಗಳ ಸಮಸ್ಯೆಗಳಿರಲಿಲ್ಲ.[೩]

ಉತ್ತಮ ಆರೋಗ್ಯ, ಸಂಪತ್ತು ಮುಂತಾದವನ್ನು ಬೇಡಿ, ಮನೆತನದ ಸಮಸ್ಯೆಗಳನ್ನು ನಿವಾರಿಸಲು ಕಾಣಿಕೆಯಾಗಿ ನೀಡಲ್ಪಟ್ಟ ಸ್ತ್ರೀಯರೇ ಉಳಿದ ವರ್ಗದ ದೇವದಾಸಿಯರು. ತಮ್ಮ ದಿನನಿತ್ಯದ ಸಮಸ್ಯೆಗಳಿಗೆ ಬೆದರಿದ ಜನಸಾಮಾನ್ಯರಲ್ಲಿನ ಅಜ್ಞಾನವನ್ನು, ಮೂಢ ನಂಬಿಕೆಯನ್ನು, ಸಮಾಜ ಮುಖ್ಯವಾಗಿ ಸ್ವಾರ್ಥಿಗಳಾದ ಪೂಜಾರಿಗಳು, ಗ್ರಾಮದ ಹಿರಿಯರು, ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು, ಸ್ತ್ರೀಯರನ್ನು ದೇವದಾಸಿಯಾಗಿ ಬಿಡುವುದನ್ನು ಒಂದು ಪದ್ಧತಿಯಾಗಿ ತಂದರು. ಈ ಪದ್ಧತಿ ಮುರಿದರೆ ದೇವರು ಮತ್ತೆ ಮುನಿದು ಇನ್ನೂ ಅನೇಕ ತೊಂದರೆಗಳನ್ನು ಕೊಡುವನೆಂಬ ಭಯವನ್ನು ಅವರಲ್ಲಿ ಮೂಡಿಸಿದರು. ಒಂದು ಆಶ್ಚರ್ಯಕರವಾದ ವಿಷಯವೆಂದರೆ ಆರ್ಥಿಕ ತೊಂದರೆಯ ನಿವಾರಣೆಗೆ ಬಡತನದಲ್ಲಿದ್ದ ಒಂದು ಕುಟುಂಬ ತಮ್ಮ ಒಬ್ಬ ಮಗಳನ್ನು ದೇವದಾಸಿ ಮಾಡಿದುದರಿಂದ ಅವರ ಆರ್ಥಿಕ ಸಮಸ್ಯೆಗಳು ತೀರುತ್ತಿದ್ದವು. ಆದರೆ ಇದು ಸಾಮಾಜಿಕವಾದದ್ದು, ದೈವಿಕವಾದುದಲ್ಲವೆಂದು, ತಿಳಿಯದಷ್ಟು ಮುಗ್ಧರಿದ್ದರು ಜನ. ಒಂದು ಕುಟುಂಬದಲ್ಲಿ ಹರೆಯದ ಒಬ್ಬ ಹುಡುಗಿ ದೇವದಾಸಿಯಾದರೆ ಆಕೆಯನ್ನು ಒಲಿಸಿಕೊಳ್ಳಲು ಊರಲ್ಲಿಯ ರಸಿಕರು, ಶ್ರೀಮಂತರು ಆಕೆಯ ಮನೆಯವರಿಗೆ ಅನೇಕ ಸವಲತ್ತುಗಳನ್ನು ನೀಡಲು ಮುಂದೆಬರುತ್ತಿದ್ದರು. ಇದರಿಂದ ಅವರ ಆರ್ಥಿಕ ತೊಂದರೆಗಳು ನೀಗುತ್ತಿದ್ದವು. ಅಲ್ಲದೆ ಅನೇಕ ಸಂಪ್ರದಾಯಗಳಿಂದಾಗಿ, ಮೂಢ ನಂಬಿಕೆ, ರೋಗಗಳು, ತಮ್ಮ ತಮ್ಮಲ್ಲೇ ಮದುವೆಯಾಗುವುದು, ಮುಂತಾದವುಗಳಿಂದಾಗಿ ಅನೇಕ ದಂಪತಿಗಳಿಗೆ ಮಕ್ಕಳಾಗದಿದ್ದಾಗಲೂ ಅಥವಾ ಹುಟ್ಟಿದ ಮಕ್ಕಳು ಶೈಶವಾವಸ್ಥೆಯಲ್ಲಿಯೇ ಸತ್ತಾಗಲೂ ಇದು ದೇವರು ಮುನಿದುದರಿಂದ ಅಥವಾ ತಮ್ಮ ಕರ್ಮದಿಂದ ಬಂದುದು ಎಂದು ತಿಳಿದರು. ಇದಕ್ಕೆ ಪರಿಹಾರವಾಗಿ ಒಬ್ಬಾಕೆಯನ್ನು ದೇವದಾಸಿ ಮಾಡಿದರೆ ತಮ್ಮ ಸಮಸ್ಯೆಗಳು ನೀಗುತ್ತವೆಂದು ನಂಬಿದ್ದರು. ಆದರೆ ಹೀಗೆ ದೇವದಾಸಿ ಮಾಡುವುದರಿಂದ ಮನೆತನಕ್ಕೆ ಹೊರಗಿನ ರಕ್ತ ಸೇರಿದುದೇ ಕಾರಣವೆನ್ನುವುದನ್ನು ತಿಳಿಯದೆ ಜನರು ದೇವರ ಮಹಿಮೆಯನ್ನು ಕೊಂಡಾಡಿದರು. ಹೀಗೆ ಸಾಮಾಜಿಕ ಅವಶ್ಯಕತೆಗಾಗಿ ಹುಟ್ಟಿಕೊಂಡ ಈ ಪದ್ಧತಿ ಹೆಚ್ಚಿನ ಆರ್ಥಿಕ ಉಪಯುಕ್ತತೆ ಪಡೆದಂತೆ ಹಣಕ್ಕಾಗಿಯೇ ತಮ್ಮ ಮಕ್ಕಳನ್ನು ದೇವದಾಸಿ ಮಾಡುವವರು ಹೆಚ್ಚಾದರು.

ಒಂದೆ ತಮ್ಮ ಮಕ್ಕಳನ್ನು ದೇವದಾಸಿ ಮಾಡಲು ಕೆಲವರಿಗಷ್ಟೇ ಹಕ್ಕಿದ್ದಿತು. ಆಗ ಅವರು ತಮ್ಮ ಮಗಳನ್ನು ಶಾಸ್ತ್ರೋಕ್ತವಾಗಿ ದೇವಸ್ಥಾನದಲ್ಲಿ ಸಕಲ ವಿಧಿ ಕ್ರಿಯೆಗಳ ನಂತರ ದೇವರಿಗೆ ವಿವಾಹ ಮಾಡುತ್ತಿದ್ದರು. ಇದಕ್ಕೆ ಪುರೋಹಿತರು, ಮಂಗಳವಾದ್ಯದವರು, ಮುತ್ತೈದೆಯರು ಸೇರುತ್ತಿದ್ದರು. ಆದರೆ ಹೆಚ್ಚು ಹೆಚ್ಚು ಜನ ಈ ಪದ್ಧತಿಯನ್ನು ಕೇವಲ ಆರ್ಥಿಕ ಆದಾಯಕ್ಕೆ ಬಳಸಿದ್ದರಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಂಡವು. ಮುಂದೆ ಇದು ಕಾನೂನು ವಿರುದ್ಧದ ಪದ್ಧತಿಯಾದಂತೆ ಈ ಆಡಂಬರ ಕಡಿಮೆಯಾಯಿತು. ಪೂಜಾರಿಗಳು ಹಣಕ್ಕೆ ಕಳ್ಳತನದಲ್ಲಿ ಹುಡುಗಿಯರನ್ನು ದೇವ

ದಾಸಿಯರನ್ನಾಗಿ ಮಾಡಲು ಪ್ರಾರಂಭಿಸಿದರು. ಅಥವಾ ಗುಪ್ತವಾಗಿ ಹುಡುಗಿಯರನ್ನು ಗುಡಿಗೆ ಕರೆತಂದು ಸಂಕ್ಷಿಪ್ತವಾಗಿ ಈ ಕಾರ್ಯವನ್ನು ಮುಗಿಸುತ್ತಿದ್ದರು. ಅನೇಕ ಕುಟುಂಬಗಳು ತಾವಿರುವಲ್ಲಿಂದಲೇ ದೇವರಿಗೆ ಅನ್ನ ಎಡೆಮಾಡುವಂತೆ ಹುಡುಗಿಯರನ್ನು "ಎಡೆ" ಮಾಡಿ ಅವರು ದೇವದಾಸಿಯರಾದರೆಂದುಕೊಂಡದ್ದನ್ನು ಇವರು ಅನುಮೋದಿಸಿದರು. ಹೀಗೆ ದೇವರ ಹೆಸರಿನಲ್ಲಿ ಸೂಳೆಗಾರಿಕೆ ಪ್ರಾರಂಭವಾಯಿತೆನ್ನಬಹುದು.

ಸಾಮಾಜಿಕ ಸಮಸ್ಯೆಯೊಂದು ಹುಟ್ಟಿಕೊಂಡಾಗ ಸಮಾಜವೇ ಇದನ್ನು ಹತ್ತಿಕ್ಕಲು ಪ್ರಯತ್ನಿಸುತ್ತದೆ. ಇದಕ್ಕೆ ಕಾನೂನು, ಸರಕಾರ, ಮುಂತಾದವುಗಳ ನೆರವನ್ನು ತೆಗೆದುಕೊಳ್ಳುತ್ತದೆ. ಈ ರೀತಿಯಲ್ಲಿ ಹಿಂದೆ ಭಾರತವನ್ನು ಆಳುತ್ತಿದ್ದ ಆಂಗ್ಲ ಸರಕಾರ ದೇವದಾಸಿ ಪದ್ಧತಿಯನ್ನು ನಿಯಂತ್ರಿಸಲು ಸರ್ವ ಪ್ರಯತ್ನಮಾಡಿತು. ೧೯೨೫ ರಷ್ಟು ಹಿಂದೆಯೇ ದೇವದಾಸಿ ಪದ್ಧತಿಯನ್ನು ಕಾನೂನು ರೀತಿಯಲ್ಲಿ ತಡೆಗಟ್ಟಲು ಆಂಗ್ಲ ಸರಕಾರ ಕ್ರಮ ಕೈಗೊಂಡಿತ್ತು. ಆದರೆ ಧರ್ಮದ ಹೆಸರಿನಲ್ಲಿ ನಡೆದಿದ್ದ ಈ ಪದ್ಧತಿಯನ್ನು ಹೆಚ್ಚಿನ ಬಿಗುವಿನಿಂದ ತಡೆದು ಜನರ ವಿರೋಧ ಕಟ್ಟಿಕೊಳ್ಳಲು ಈ ಹೊರಗಿನ ಸರಕಾರ ಸಿದ್ಧವಿರಲಿಲ್ಲ. ಮುಂದೆ ಭಾರತ ಸ್ವತಂತ್ರವಾದ ಮೇಲೆ ಹೆಣ್ಣು ಮಕ್ಕಳ ಮೇಲೆ ನಡೆಯುವ ಎಲ್ಲಾ ರೀತಿಯ ಶೋಷಣೆಯನ್ನು ತಡೆಯಲು, ಅದರಲ್ಲೂ ಸೂಳೆಗಾರಿಕೆಯನ್ನು ತಡೆಯಲು, ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಒಪ್ಪಿ ವಿಶ್ವಸಂಸ್ಥೆಯ ನಿಬಂಧನೆಗೆ ೧೯೫೦ರಲ್ಲಿ ಸಹಿ ಹಾಕಿತು. ಈ ಒಡಂಬಡಿಕೆಯಂತೆ ಸೂಳೆಗಾರಿಕೆಗೆ ಪೂರಕವಾದ ಎಲ್ಲಾ ವಿಧಿ, ನಿಯಮ ಕ್ರಿಯೆಗಳನ್ನು ಕಾನೂನು ಬಾಹಿರವೆಂದು ಸಾರಿದ್ದರಿಂದ ದೇವದಾಸಿ ಪದ್ಧತಿಯೂ ಕಾನೂನು ಬಾಹಿರವಾಯಿತು. ಆದರೆ ದೇವದಾಸಿ ಹೆಸರಿನಲ್ಲಿ ಸೂಳೆಗಾರಿಕೆ ಮಾಡುತ್ತಿದ್ದ ಹೆಂಗಸರಿಗೆ, ಮನೆತನಗಳಿಗೆ ಇದರಿಂದ ಅನೇಕ ಅಡೆತಡೆಗಳಾದವು. ಆದರೂ ಅವರು ಕಾನೂನಿನ ಅಸಹಾಯಕತೆ, ಸಮಾಜದಲ್ಲಿನ ಲಂಚಗುಳಿತನ, ಅಧರ್ಮ ಮುಂತಾದ ಅನೇಕ ಅನುಕೂಲತೆಗಳನ್ನು ಉಪಯೋಗಿಸಿಕೊಂಡು ಇನ್ನೂ ಮುಂದುವರೆದುಕೊಂಡು ಬರುತ್ತಿದ್ದಾರೆ. ಇಂದಿಗೂ ಅನೇಕ ದೇವಾಲಯಗಳು ಮುಚ್ಚು ಮರೆಯಲ್ಲಿ ದೇವದಾಸಿ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿವೆ. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಬಡತನ. ಎರಡನೆಯದಾಗಿ ಧರ್ಮದ ಹೆಸರಿನಲ್ಲಿ ಮೂಢ ನಂಬಿಕೆ ಮತ್ತು ಮೋಸಗಾರಿಕೆ. ಮೂರನೆಯದಾಗಿ ಅಜ್ಞಾನ, ಕೊನೆಯದಾಗಿ ಸರಕಾರದ ದುರಾಡಳಿತ. ಜೀವನಕ್ಕೆ ಅನ್ಯ ಮಾರ್ಗವಿಲ್ಲದೆ, ಅನೇಕ ಕುಟುಂಬಗಳು ಬಡತನದಿಂದ ಸ್ವಲ್ಪವಾದರೂ ಬಿಡುಗಡೆ ಹೊಂದಲು ತಾವು ಅಥವಾ ತಮ್ಮ ಮಕ್ಕಳಲ್ಲಿ ಒಬ್ಬಾಕೆಯನ್ನು ಸೂಳೆಮಾಡುತ್ತಾರೆ. ಆದ್ದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳದೆ ಈ ಪದ್ಧತಿ ಹೋಗುವುದಿಲ್ಲ. ಎರಡನೆಯದಾಗಿ ಇಂದಿಗೂ ಅನೇಕ ಸಮಸ್ಯೆಗಳಿಗೆ ತಮ್ಮ ಕರ್ಮ, ದೇವರ ಮುನಿಸು ಮುಂತಾದವು

ಕಾರಣವೆಂದು ತಿಳಿದು ಇವುಗಳ ಪರಿಹಾರಕ್ಕೆ ಹೊಸ ವಿಚಾರ ಮತ್ತು ಮಾರ್ಗ ಅನುಸರಿಸದೆ ಸಾಂಪ್ರದಾಯಿಕ ಮಾರ್ಗವಾದ ದೇವದಾಸಿ ಮಾಡುವ ಪದ್ಧತಿಯನ್ನು ಅನುಸರಿಸಿದರು. ಇದಕ್ಕೆ ಪರಿಹಾರವೆಂದರೆ ಸಮಾಜದಲ್ಲಿ ವಿದ್ಯಾಮಟ್ಟ ಹೆಚ್ಚಬೇಕು. ಸಾಮಾಜಿಕ, ಧಾರ್ಮಿಕ ಸಂಸ್ಥೆಗಳು ಜನರಲ್ಲಿ ಇಂತಹ ಅಜ್ಞಾನವನ್ನು ತೊಡೆದು ಹಾಕಲು ಮನಃಪೂರ್ವಕವಾಗಿ ಶ್ರಮಿಸಬೇಕು. ಗುಡಿಗಳಲ್ಲಿ ಇಂತಹ ಸಂಪ್ರದಾಯ ನಡೆಯದಂತೆ ತಡೆಯಬೇಕು. ಕೊನೆಯದಾಗಿ ಸೂಳೆಗಾರಿಕೆಯಂತಹ ಸಾಮಾಜಿಕ ಅನಿಷ್ಟವನ್ನು ತೊಡೆದು ಹಾಕಲು ಇರುವ ಪೋಲೀಸು ಮತ್ತು ಕೋರ್ಟ್‌ಗಳಿಗೆ, ಗುಡಿ, ಮಠ, ಜಾತಿ, ಸಮಾಜ ಮುಂತಾದ ಸಂಸ್ಥೆಗಳು ಸೂಕ್ತ ರೀತಿಯಿಂದ ಸಹಕರಿಸಬೇಕು. ಇದು ಕಾನೂನು ಬಾಹಿರವೆಂದು ಸಾರಿದ ಮೇಲೂ ಈ ಪದ್ಧತಿ ಮುಂದುವರೆದುಕೊಂಡು ಬರುತ್ತಿರುವುದಕ್ಕೆ ಈ ಮೇಲಿನ ಒಂದಲ್ಲ ಒಂದು ಸಂಸ್ಥೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಹಾಯಕವಾಗಿರಲೇಬೇಕು. ಆದ್ದರಿಂದ ಎಲ್ಲರೂ ಒಟ್ಟಿಗೆ ಶ್ರಮಿಸಿದರೆ ಈ ಪದ್ಧತಿಯನ್ನು ತೊಡೆದು ಹಾಕಲು ಸಾಧ್ಯ.

ಸದ್ಯದ ಪರಿಸ್ಥಿತಿಯಲ್ಲಿ ದೇವದಾಸಿ ಪದ್ಧತಿಯ ಸ್ಥಿತಿಯೇನು, ಇದು ಸೂಳೆಗಾರಿಕೆಗೆ ಪೂರಕವಾಗಿದೆಯೇ ಎಂಬುದನ್ನು ತಿಳಿಯೋಣ. ಸೂಳೆಗಾರಿಕೆಯಂತಹ ಕಾನೂನು ಬಾಹಿರ ಚಟುವಟಿಕೆಯನ್ನು ಅಭ್ಯಾಸ ಮಾಡಲು ಸಂಶೋಧಕನಿಗೆ ಅನೇಕ ಅಡತಡೆಗಳಿವೆಯಾದ್ದರಿಂದ ನೇರವಾಗಿ ದೇವದಾಸಿ ಪದ್ಧತಿಯನ್ನಾಗಲೀ ಅಥವಾ ಸೂಳೆಗಾರಿಕೆ ಮತ್ತು ದೇವದಾಸಿ ಪದ್ಧತಿಗಳಲ್ಲಿರುವ ಸಂಬಂಧವನ್ನಾಗಲೀ ಅಭ್ಯಾಸ ಮಾಡುವುದು ಕಷ್ಟ. ಆದ್ದರಿಂದ ನೇರವಾದ ಸಂಶೋಧನೆಯಿಂದ ದೇವದಾಸಿ ಪದ್ಧತಿ ಯಾವ ರೀತಿಯಲ್ಲಿ, ಎಷ್ಟರ ಮಟ್ಟಿಗೆ ಪೂರಕವಾಗಿದೆ ಎಂಬುದು ತಿಳಿಯದು. ಆದರೆ ಪರೋಕ್ಷವಾಗಿ, ಸಾಪೇಕ್ಷಕವಾಗಿ ದೇವದಾಸಿ ಪದ್ಧತಿ ಸೂಳೆಗಾರಿಕೆಗೆ ಪೂರಕವಾಗಿದೆ ಎಂದು ಕಂಡುಕೊಂಡವರೂ ಇದ್ದಾರೆ.

ಇತ್ತೀಚಿಗೆ ಪೂನಾದ ಬ್ಯಾರಿಸ್ಟರ್ ಮತ್ತು ಸಾಮಾಜಿಕ ಕಾರ್ಯಕರ್ತೆ ಸುನೀತ ಪುಂಗುಲಿಯಾ ಅವರು ತಮಗೆ ಸಿಕ್ಕ ಆಧಾರದ ಮೇಲಿಂದ ತಿಳಿದು ಬಂದಂತೆ ಸೌಂದತ್ತಿ ಮುಂತಾದ ದೇವ ಶ್ರೇಣಿಗಳು ವರ್ಷಕ್ಕೆ ಆರು ಸಾವಿರ ಸೂಳೆಯರನ್ನು ದೇವದಾಸಿಯರ ಹೆಸರಿನಲ್ಲಿ ನೀಡುತ್ತವೆ. ಇವರಲ್ಲಿ ಬಹುಪಾಲು ಜನ ಕರ್ನಾಟಕದ ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಯವರು. ಇವರು ಮುಂದೆ ತಮ್ಮ ವೃತ್ತಿಗೆ ಅನುಕೂಲವಾದ ಪುಣೆ ಮತ್ತು ಮುಂಬಯಿಗಳ ಸೂಳೆಗೇರಿ ಸೇರುತ್ತಾರೆ ಎಂದು ತಿಳಿಸಿದರು.

ತಮ್ಮ ಅಭಿಪ್ರಾಯಕ್ಕೆ ಈ ಸಮಾಜ ಕಾರ್ಯಕರ್ತೆಯು ಪಡೆದ ವಿಷಯದ ಆಧಾರ ತಿಳಿದಿಲ್ಲವಾದರೂ ಪರಿಸ್ಥಿತಿಯನ್ನು ಅವರು ವಿವರಿಸಿಲ್ಲ. ನಮಗೆ ಹತ್ತಿರದ ಸೌಂದತ್ತಿಯನ್ನೇ ಹೆಚ್ಚಿನ ವಿವರಗಳಿಗೆ ತೆಗೆದುಕೊಳ್ಳೋಣ. ಸೌಂದತ್ತಿಯಲ್ಲಿ ಎಲ್ಲಮ್ಮನಿಗೆ

ದೇವದಾಸಿಯಾಗುವ ಪದ್ಧತಿ ಸಾಂಪ್ರದಾಯಿಕವಾಗಿ ಬಹು ಹಿಂದಿನಿಂದಲೂ ಬಂದಿದ್ದು. ಆದರೆ ಎಲ್ಲಮ್ಮನ ಎಲ್ಲಾ ಭಕ್ತೆಯರೂ ದೇವದಾಸಿಯರಲ್ಲ. ಎಲ್ಲಮ್ಮನ ಸಂಪ್ರದಾಯದಂತೆ ಆಕೆಯ ಭಕ್ತೆಯರು ಗರತಿ ಮುತ್ತು, ಸೂಳೆ ಮುತ್ತು ಮತ್ತು ಜೋಗತಿ ಮುತ್ತು ಎಂಬ ಮೂರು ಬಗೆಯ ಮುತ್ತಿನ ಸರವನ್ನು ತಮ್ಮ ಕೊರಳಲ್ಲಿ ಧರಿಸುತ್ತಾರೆ. ಈ ಮೂರು ಸಂಪ್ರದಾಯಗಳೂ ರೇಣುಕಾ ದೇವಿಯ ಜೀವನದಲ್ಲಿ ಸಂಭವಿಸಿದ ಮೂರು ಹಂತ ಅಥವಾ ಘಟನೆಗಳಿಗೆ ಸಂಬಂಧಿಸಿದ ಸಂಪ್ರದಾಯಗಳು. ರಾಜಕುಮಾರಿಯಾದರೂ, ತಂದೆಯ ಆಜ್ಞೆಯಂತೆ ಸನ್ಯಾಸಿ ಜಮದಗ್ನಿಯನ್ನು ಮದುವೆಯಾಗಿ, ಅವನನ್ನು ಭಕ್ತಿಯಿಂದ ಸೇವೆ ಮಾಡುವ ವ್ರತ ನಿಷ್ಠಳಾಗಿ ನಿಂತ ರೇಣುಕಾ ದೇವಿಯ ಆ ಮನೋ ನಿಶ್ಚಯವನ್ನೇ ಅನುಸರಿಸಿ ಅನೇಕ ಸಂಸ್ಕಾರಸ್ಥ ಮಹಿಳೆಯರು ವ್ರತಸ್ಥರಾಗಿ, ತಮ್ಮ ಪತಿಗೆ ನಿಷ್ಠೆಯಿಂದ ನಡೆದುಕೊಳ್ಳುವಂತಹ ರೀತಿಯೇ ಮುಂದೆ ಒಂದು ಸಂಪ್ರದಾಯವಾಯಿತು. ಇವರು ಗರತಿಯರು ಇದಕ್ಕೆ ಕುರುಹು ಎಂದು ತಮ್ಮ ಕೊರಳಲ್ಲಿ ಗರತಿ ಮುತ್ತನ್ನು ಧರಿಸುತ್ತಾರೆ.

ಇನ್ನು ಜಲಕ್ರೀಡೆಯಲ್ಲಿ ನಿರತರಾದ ಗಾಂಧರ್ವ ದಂಪತಿಗಳನ್ನು ನೋಡಿ ತನ್ನ ಮನೋವಿಕಲತೆ ಹೊಂದಿದ ರೇಣುಕಾ ದೇವಿಯ ಅವಸ್ಥೆಯ ಕುರುಹಾಗಿ ಸೂಳೆ ಸಂಪ್ರದಾಯ ಬಂದಿತು. ಆದರೆ ರೇಣುಕಾ ದೇವಿಗೆ ಆಗಿದ್ದು ಕೇವಲ ಮನೋವಿಕಾರತೆ. ಆದರೆ ಇದನ್ನೇ ಒಂದು ಸಂಪ್ರದಾಯ ಮಾಡಿಕೊಂಡು ಸಮಾಜ, ತನ್ನ ಅನುಕೂಲಕ್ಕೆ ಬಳಸಿಕೊಂಡಿದ್ದರಿಂದ ದೇವರ ಹೆಸರಿನಲ್ಲಿ ಸೂಳೆ ಪದ್ಧತಿ ಅಥವಾ ಸಂಪ್ರದಾಯ ಹುಟ್ಟಿಕೊಂಡಿತು. ಇದರ ಗುರುತಾಗಿ ಇವರು ಕೊರಳಲ್ಲಿ ಸೂಳೆ ಮುತ್ತು ಧರಿಸುತ್ತಾರೆ. ಸೂಳೆಯರೆಂದರೆ ಹಣಕ್ಕೆ ಸೂಳೆಗಾರಿಕೆ ಮಾಡುವವರೆಂದಲ್ಲ. ಮುಂದೆ ಸಮಾಜ ಅಥವಾ ಪರಿಸ್ಥಿತಿ ಅವರನ್ನು ಈ ಮಟ್ಟಕ್ಕೆ ತಂದಿತು. ಆದರೆ ಇಂದು ಸಮಾಜ ಪೇಟೆಯ ಸೂಳೆಯರ ಸಮಸ್ಯೆಗಳ ಪರಿಹಾರಕ್ಕಾಗಿ ಈ ಸಂಪ್ರದಾಯವನ್ನೇ ಬಳಸಿಕೊಂಡಿದೆ.

ಮೂರನೆಯ ಸಂಪ್ರದಾಯ ಜೋಗತಿಯರದು. ತನ್ನ ಗಂಡನಿಂದ ಶಪಿಸಲ್ಪಟ್ಟ ರೇಣುಕಾದೇವಿ ವಿರೂಪಿಯಾಗಿ, ತನ್ನ ಅನ್ನಕ್ಕೆ ರಕ್ಷಣೆಗೆ, ಶಾಪ ಪರಿಹಾರಕ್ಕೆ ಬುಟ್ಟಿ, ಕೆಂಡ ಮತ್ತು ಚೌರಿ ಹೊತ್ತು ಅಲ್ಲಲ್ಲಿ ತಿರುಗಾಡಲು, ರಕ್ಷಣೆಗೆ ಅನೇಕ ವೇಷ ಧರಿಸಿದರು. ಈ ಸಂಪ್ರದಾಯಕ್ಕೆ ಸೇರಿದವರು ಜೋಗತಿಯರಾದರೂ (ಜಗ ಹೊತ್ತವರು ಅಥವಾ ಜೋಗತಿ, ಅಂದರೆ ಸನ್ಯಾಸಿನಿಯಾದವರು.) ಈ ವರ್ಗಕ್ಕೆ ವಿಧವೆಯರಾದ ಗರತಿಯರೂ ಮುಪ್ಪಾದ ಸೂಳೆಯರೂ, ಸೇರಿ ತಮ್ಮ ಜೀವನಕ್ಕೆ ಒಂದು ಮಾರ್ಗ ಮಾಡಿಕೊಂಡರು. ಇದೇ ಮುಂದೆ ಜೋಗತಿ ಸಂಪ್ರದಾಯವಾಯಿತು. ಇವರ ಜೊತೆಗೆ ಜೋಗಪ್ಪಗಳ ಸಂಪ್ರದಾಯವೂ ಇದೆ. ಇವರು ಎಲ್ಲಮ್ಮನ ಹಿರಿಯ ನಾಲ್ಕು ಮಕ್ಕಳು. ತನ್ನ ಹೆಂಡತಿಯ ಮೇಲೆ ಕುಪಿತನಾದ ಜಮದಗ್ನಿ ತನ್ನ ಹಿರಿಯ ನಾಲ್ಕು ಮಕ್ಕಳನ್ನು ಕರೆದು

ಆಕೆಯ ಶಿರ ಕತ್ತರಿಸಲು ಆಜ್ಞಾಪಿಸುತ್ತಾನೆ. ಈ ಮಕ್ಕಳು ತಾಯಿ ಎಂದು ಹೆದರಿ, ಮರುಗಿ ತಂದೆಯ ಕೋಪಕ್ಕೆ ಗುರಿಯಾಗಿ ಅವನಿಂದ "ಷಂಡ"ರಾಗಿರೆಂದು ಶಪಿಸಲ್ಪಡುತ್ತಾರೆ. ಮುಂದೆ ತಮ್ಮ ತಾಯಿಯ ಶಿರಚ್ಛೇದನವಾದಾಗ ಅನಾಥರಾಗುತ್ತಾರೆ. ಅವರೆಲ್ಲ ಜೋಗಪ್ಪಗಳು. ಈ ಪಂಥಕ್ಕೆ ಎಲ್ಲಮ್ಮನ ಪುರುಷ ಭಕ್ತರೂ ಸೇರುತ್ತಾರೆ. ಇವರೂ ಜೋಗತಿಯರಂತೆ ದೇವರ ಮಹಿಮೆಯನ್ನು ಸಾರುತ್ತಾ, ಸಮಾಜದಲ್ಲಿ ಸಂಚಾರ ಮಾಡಿ ತಮ್ಮ ಜೀವನ ಸಾಗಿಸುವವರು ಮತ್ತು ಕಾಲಕಾಲಕ್ಕೆ ಎಲ್ಲಮ್ಮನ ಎಲ್ಲಾ ಭಕ್ತರಂತೆ ಗುಡಿಗೂ ಒಂದು ಪದ್ಧತಿಯಂತೆ ತಮ್ಮ ಭಕ್ತಿಯನ್ನು ಅರ್ಪಿಸುವರು. ಇವರು ತಮ್ಮ ಕೊರಳಲ್ಲಿ ಜೋಗತಿ ಮುತ್ತು ಧರಿಸುವರು. ಇಂದಿಗೂ ಈ ಮೂಲ ಸಂಪ್ರದಾಯಗಳು ಮುಂದುವರೆದುಕೊಂಡು ಬಂದಿದೆ.

ಇಲ್ಲಿ ನಮ್ಮ ಚರ್ಚೆಯ ಪ್ರಸ್ತುತವಾದ ಸೂಳೆಯರನ್ನೇ ತೆಗೆದುಕೊಳ್ಳೋಣ. ಹಿಂದೆ ಎಲ್ಲಮ್ಮನಿಗೆ ಹರಕೆ ಹೊತ್ತು ಸೂಳೆಯರಾಗಲು ಬರುತ್ತಿದ್ದವರನ್ನು ಈ ಸಂಪ್ರದಾಯಕ್ಕೆ ಸೇರಿಸಲು ದೇವಸ್ಥಾನದಲ್ಲಿ ಸೂಕ್ತ ವ್ಯವಸ್ಥೆ ಇರುತ್ತಿತ್ತು. ಇಂದಿಗೂ ಸೌಂದತ್ತಿಯಲ್ಲಿ ಕಂಡುಬರುವ ಪೂಜಾರಿ ಮನೆತನದವರು ಹಿಂದೆಯೂ ಯಾವುದೇ ಹರಿಕೆಯಂತೆ ಸೂಳೆಯಾಗುವ ಹರಿಕೆಯನ್ನೂ ತೀರಿಸಲು ಬರುವವರಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡುತ್ತಿದ್ದರು. ಇಂದು ಈ ಪೂಜಾರಿ ಮನೆತನಗಳು ಅನೇಕವಿವೆ. ಆದ್ದರಿಂದ ಪೂಜಾರಿ ವೃತ್ತಿಯಿಂದ ಬರುವ ವರಮಾನಕ್ಕೆ ತಮ್ಮ ತಮ್ಮಲ್ಲೇ ಒಂದು ಒಡಂಬಡಿಕೆ ಮಾಡಿಕೊಂಡು, ಪಾಳಿಯ ಮೇಲೆ ಎಲ್ಲಾ ಕುಟುಂಬಗಳೂ ಪೂಜೆ ಮಾಡಲು ಅವಕಾಶ ಮಾಡಿಕೊಂಡಿವೆ. ಹೀಗೆ ಗುಡಿ ಪೂಜೆಗೆ ಅವಕಾಶ ಸಿಕ್ಕ ಕುಟುಂಬವನ್ನು ಬಿಟ್ಟು ಉಳಿದ ಕುಟುಂಬಗಳೂ ಅಲ್ಲೇ ತಮ್ಮ ಮನೆ ಮಾಡಿಕೊಂಡಿದ್ದು ತಮ್ಮ ಪಾಲಿಗೆ ಬಂದ ಭಕ್ತ ಕುಟುಂಬಗಳು ದೇವತಾ ಕಾರ್ಯಕ್ಕೆ ಬಂದಾಗ ಅವರಿಗೆ ಇರಲು ಜಾಗ ಕೊಡುವುದು, ಪೂಜೆಗೆ ವ್ಯವಸ್ಥೆ ಮಾಡುವುದು, ಹರಿಕೆ ತೀರಿಸಲು ಬರುವವರಿಗೆ ಅವರ ಹರಿಕೆಯನ್ನು ಪೂರೈಸುವಲ್ಲಿ ಸಲಹೆ ನೀಡಿ ನೆರವಾಗುತ್ತಾರೆ.

ಹಿಂದಿನ ಕಾಲದಲ್ಲಿ ಸೂಳೆಯಾಗಲು ಹರಿಕೆ ಹೊತ್ತ ಹುಡುಗಿಯರನ್ನು ಸಂಪ್ರದಾಯದಂತೆ ಸೂಳೆಮಾಡಲು ಅನೇಕ ವಿಧಿ ಕಾರ್ಯಗಳನ್ನು ಮಾಡಲಾಗುತ್ತಿತ್ತು. ಜೊತೆಗೆ ಆಕೆಯ ಮನೆಯವರು, ಗೆಳತಿಯರು ಮತ್ತು ಬೀಗರು ನೆಂಟರು ಬರುತ್ತಿದ್ದರು. ಆಕೆಯನ್ನು ಮದವಣಗಿತ್ತಿಯಂತೆ ಹೊಸಬಟ್ಟೆ, ಒಡವೆಗಳಿಂದ ಸಿಂಗರಿಸಿ, ಮುತ್ತೈದೆಯರು ಮಂಗಳವಾದ್ಯದ ಜೊತೆಗೆ ಕೊಳ್ಳದಿಂದ ನೀರು ಹೊರಿಸಿಕೊಂಡು ದೇವ ಸನ್ನಿಧಿಗೆ ಕರೆತರುತ್ತಿದ್ದರು. ತಮ್ಮ ಮನೆತನದ ಹರಿಕೆಯಾದ್ದರಿಂದ ಇಲ್ಲಿಯ ಎಲ್ಲ ಖರ್ಚುಗಳನ್ನು ಹುಡುಗಿಯ ಮನೆತನದವರೇ ವಹಿಸುತ್ತಿದ್ದರು. ಮುಂದೆ ಆಕೆಯನ್ನು ತಮ್ಮ ಉಪಭೋಗಕ್ಕೆ ಬಯಸುವ ವ್ಯಕ್ತಿ ಈ ಎಲ್ಲಾ ಖರ್ಚನ್ನು ಮತ್ತು ಮುಂದೆ

ಆಕೆಯನ್ನು "ಹೆಣ್ಣು ಮಾಡಲು ಆಗುವ ಖರ್ಚನ್ನೂ ವಹಿಸಿಕೊಳ್ಳತೊಡಗಿದನು. ಅನೇಕ ಸಂದರ್ಭಗಳಲ್ಲಿ ಕಾಣದ ದೇವರು ಇವರ ನೆರವಿಗೆ ಬರದಾದಾಗ ತಮ್ಮ ಮಧ್ಯದಲ್ಲಿಯ ಯಾರಾದರೊಬ್ಬ ಪ್ರಭಾವಿ ವ್ಯಕ್ತಿಗೇ ತಮ್ಮ ಮಗಳನ್ನು ಸೂಳೆಯಾಗಿ ನೀಡಿ ತಮ್ಮ ಕಷ್ಟಗಳನ್ನು ನಿವಾರಿಸಿಕೊಳ್ಳುವಂತಾಯಿತು. ಹುಡುಗಿಯ ರೂಪ, ಜಾತಿ ಮುಂತಾದವಕ್ಕೆ ಅನುಗುಣವಾಗಿ ಸಮಾಜದಲ್ಲಿನ ಪ್ರತಿಷ್ಠಿತ ವ್ಯಕ್ತಿಗಳೂ ಕೂಡ ಇಂತಹ ಕಾರ್ಯಕ್ಕೆ ಹಣ ನೀಡಿ ಆಕೆಯನ್ನು ತಮ್ಮ ಉಪಭೋಗಕ್ಕೆ ಇಟ್ಟುಕೊಳ್ಳುತ್ತಿದ್ದರು. ಆಕೆಯೊಡನೆ ಇವರ ಸಂಬಂಧ ಕೇವಲ ಕೆಲವೇ ದಿನಗಳಾಗಬಹುದು. ಅಥವಾ ಕಿವಸೆಯವರೆಗೂ ಉಳಿಯಬಹುದು. ಈ ವ್ಯಕ್ತಿ ಆಕೆಯಲ್ಲಿ ಆಸಕ್ತಿ ಕಳೆದುಕೊಂಡ ನಂತರ ಆಕೆ ಮತ್ತೊಬ್ಬಾತನ ಆಶ್ರಯಕ್ಕೆ ಹೋಗುತ್ತಿದ್ದಳು. ಕೊನೆಗೆ ಆಶ್ರಯದಾತರು ತಪ್ಪಿದಾಗ ಸೂಳೆಗೇರಿ ಸೇರುತ್ತಿದ್ದರು. ನಂತರ ಯೌವ್ವನ ಕಳೆದುಕೊಂಡು ಅಥವಾ ರೋಗಿಷ್ಟೆಯಾದರೆ ಜೋಗತಿಯಾಗಿ ತನ್ನ ಜೀವನಕ್ಕೆ ಬುಟ್ಟಿ ಹೊತ್ತು ಧಾರ್ಮಿಕ ರೀತಿಯಲ್ಲಿ ಭಿಕ್ಷೆ ಬೇಡಿ ಜೀವನ ಮಾಡುವ ಅವಕಾಶವನ್ನು ದೇವದಾಸಿ ಪದ್ಧತಿ ನೀಡಿದ್ದಿತು.

ಹಿಂದಿನ ಕಾಲ್ಲದಲ್ಲಿ, ಸಂಪ್ರದಾಯದಂತೆ. ಕೆಲವೊಂದು ಮನೆತನಗಳು ಮಾತ್ರ ತಮ್ಮ ಮಕ್ಕಳನ್ನು ದೇವದಾಸಿ ಮಾಡುತ್ತಿದ್ದರು. ದೇವದಾಸಿಯರನ್ನಾಗಿ ಮಾಡುವುದು ಮನೆತನದ ಸಂಪ್ರದಾಯವಾಗಿದ್ದಾಗ ಅವರಿಗೆ ಅವರ ಸ್ಥಾನ ಮಾನ. ಹಕ್ಕು ಕರ್ತವ್ಯಗಳ ಕೆಲವೊಂದು ನಿಬಂಧನೆಗಳಿದ್ದವು. ಉದಾಹರಣೆಗೆ ದೇವದಾಸಿಯಾಗುವ ಹುಡುಗಿಯರು ಕನ್ಯೆಯರಾಗಿರಬೇಕಿತ್ತು. ದೇವದಾಸಿ ಮಾಡಲು ಹರಿಕೆ ಇರಬೇಕಿತ್ತು. ಆಗ ಅವರನ್ನು ನಿರ್ದಿಷ್ಟ ಪಡಿಸಿದ ದಿನ ಗುಡಿಯಲ್ಲಿ ನಿರ್ದಿಷ್ಟಪಡಿಸಿದ ಪುರೋಹಿತರು ಶಾಸ್ತ್ರೋಕ್ತವಾಗಿ ದೇವದಾಸಿಯನ್ನಾಗಿ ಮಾಡುತ್ತಿದ್ದರು. ಇದೂ ವಿವಾಹದಂತೆ ಒಂದು ಧಾರ್ಮಿಕ ವಿಧಿಯಾದ್ದರಿಂದ ಕಾರ್ಯದ ಎಲ್ಲಾ ವಿಧಿಗಳನ್ನು ಎಲ್ಲೂ ತಪ್ಪದೆ, ಪದ್ಧತಿ ಪ್ರಕಾರ ಮಾಡುತ್ತಿದ್ದರು. ಹೊಸಬಟ್ಟೆ ಒಡವೆ ಧರಿಸಿ ವಧುವಿನಂತೆ ಸಿಂಗರಿಸಿಕೊಂಡು, ಆಕೆ ಕೊಳ್ಳದಿಂದ ಮೆರವಣಿಗೆಯಲ್ಲಿ ನೀರು ತರುತ್ತಿದ್ದಳು. ಆಕೆಯನ್ನು ದೇವರ ಎದುರಿಗೆ ಶಾಸ್ತ್ರೋಕ್ತವಾಗಿ ಕೂಡಿಸುವುದು, ತಾಳಿ ಕಟ್ಟುವುದು, ಪೂಜಾರಿಗೆ ಪುರೋಹಿತರಿಗೆ ದಕ್ಷಿಣೆ ನೀಡುವುದು ಮುಂತಾದವು ಸಾಂಗೋಪಸಾಂಗವಾಗಿ ನೆಡೆಯುತ್ತಿದ್ದವು. ಹಿಂದೆ ದೇವದಾಸಿಯಾಗುವುದು ಕಾನೂನು ಬಾಹಿರವಾಗಿಲ್ಲದಿದ್ದಾಗ ಕಾನೂನಿನಿಂದ ಯಾವ ಹೆದರಿಕೆಯೂ ಇಲ್ಲದಾಗ ಈ ವಿಧಿಕಾರ್ಯ ಹೆಚ್ಚಿನ ವಿಜೃಂಭಣೆಯಿಂದ, ಸದ್ದು ಗದ್ದಲದೊಂದಿಗೆ ನಡೆಯುತ್ತಿತ್ತು. ಇಂದು ದೇವದಾಸಿ ಪದ್ಧತಿ ಕಾನೂನು ಬಾಹಿರವಾದ್ದರಿಂದ ಈ ಎಲ್ಲಾ ಪೂರ್ವ ಪದ್ಧತಿಗಳು ಅಳಿದು ಹೋಗಿವೆ ಅಥವಾ ಸಾಂಕೇತಿಕವಾಗಿವೆ. ಅಂದರೆ ಹಿಂದೆ ಪೂಜಾರಿಯು ದೇವರ ಎದುರಿಗೆ ಆಕೆಗೆ ತಾಳಿ ಕಟ್ಟುತ್ತಿದ್ದ. ಇಂದು ದೇವರಿಗೆ ತೋರಿಸಿ ಹುಡುಗಿಯರು ತಾವೇ ತಾಳಿ ಕಟ್ಟಿಕೊಳ್ಳುತ್ತಾರೆ. ಹಿಂದೆ ಕೊಳ್ಳದಿಂದ ಈಚೆಗೆ ನೀರನ್ನು ತಲೆಯ ಮೇಲೆ ಕೊಡದಲ್ಲಿ ಹೊತ್ತು

ಮೆರವಣಿಗೆಯಲ್ಲಿ ತರುತ್ತಿದ್ದರೆ ಇಂದು ಯಾರಿಗೂ ಕಾಣದಂತೆ ಬಗಲಲ್ಲಿ, ಅದರಲ್ಲೂ ಒಂದು ಕಂಪಿನಲ್ಲಿ, ನೀರು ತರುತ್ತಾರೆ. ಹೀಗೆ ಯಾವ ಸದ್ದು ಗದ್ದಲವಿಲ್ಲದೆ ನಡೆಯುವು ದರಿಂದ, ಉಳಿದ ಭಕ್ತರೊಂದಿಗೆ ಇವರೂ ಬಂದು ಹೋಗುವುದರಿಂದ ದೇವದಾಸಿ ಹರಿಕೆ ತೀರಿಸಲು ಬರುವವರನ್ನು ಪತ್ತೆ ಹಚ್ಚುವುದು ಸಾಧ್ಯವಿಲ್ಲ.

ಇಂದು ನೀತಿಗೆಟ್ಟ, ಅವಿವಾಹಿತ ಮಾತೆಯರಾದ, ಬಡತನದಲ್ಲಿರುವ ಅನೇಕ ಸ್ತ್ರೀಯರು ಸಾಮಾಜಿಕ ಬೆಂಬಲಕ್ಕೆ, ತಮ್ಮ ಮಕ್ಕಳಿಗೆ ಸೂಕ್ತ ಪಿತೃತ್ವ ಪಡೆಯಲು ದೇವದಾಸಿ ಪದ್ಧತಿಯ ನೆರವು ತೆಗೆದುಕೊಂಡಿದ್ದಾರೆ. ಇದು ದೇವದಾಸಿ ಪದ್ಧತಿಯ ತಪ್ಪಲ್ಲ. ಆದರೆ ಇಂತಹ ಪರಿಸ್ಥಿತಿಗೆ ಸಹಾಯವಾದದ್ದು ತಪ್ಪು. ಇಂದು ಸೂಳೆಗಾರಿಕೆಗೆ ಹಚ್ಚುವ ಮುನ್ನ ಹುಡುಗಿಯರನ್ನು ಯಾವುದಾದರೂ ಇಂತಹ ಕ್ಷೇತ್ರಕ್ಕೆ ಕರೆತಂದು ಕಳ್ಳತನದಲ್ಲಿ ದೇವದಾಸಿ ಮಾಡುವದಂತೂ ನಿಜ. ಈ ಕೆಲಸನನ್ನು ಮುಪ್ಪಿನ ಸೂಳೆ ಯರು, ಹುಡುಗಿಯರ ಬಡಪಾಲಕರು, ಗುಡಿ ಪೂಜಾರಿಗಳು, ಪೋಲಿಸರು ಮತ್ತು ಸೂಳೆಗಾರಿಕೆ ಮನೆ ಮಾಲಿಕರೂ, ಹೀಗೆ ಎಲ್ಲರೂ ಅಪ್ರತ್ಯಕ್ಷವಾಗಿ ಸಹಾಯಕರು. ಹೀಗೆ ಕಳ್ಳತನದಲ್ಲಿಯಾದರೂ ಹುಡುಗಿಯರನ್ನು ದೇವದಾಸಿ ಮಾಡುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಸೂಳೆಯಾಗಿ ಹಣಗಳಿಸಲು ಹೋಗುವ ಈ ಹುಡುಗಿಯ ಮನೆತನದ ಮತ್ತು ಆಕೆಗೆ ಹುಟ್ಟುವ ಮಕ್ಕಳ ಸ್ಥಾನಮಾನ ಕಾಪಾಡಲು ಆಕೆಗೆ ದೇವ ದಾಸಿ ಪದ್ಧತಿಯು ರಕ್ಷಿಬೇಕು. ಅಲ್ಲದೆ ಆಕೆ ಸೂಳೆಗಾರಿಕೆಯಿಂದ ಪಡೆದ ಹಣ ಅನೈತಿಕ ವಾದರೂ ಅದಕ್ಕೆ ನೈತಿಕ ಸ್ಥಾನ ನೀಡಲು ಆಕೆ ದೇವದಾಸಿಯಾಗಬೇಕು. ಕೊನೆಗೆ ಮನೆತನಕ್ಕೆ ಹಣ ದುಡಿದ ಈಕೆಗೆ ಪೇಟೆಯ ಸೂಳೆ ಎಂಬ ಕೆಟ್ಟ ಹೆಸರಿಂದ ಪಾರು ಮಾಡಲು ದೇವದಾಸಿ ಪದ್ಧತಿ ನೆರವಾಗುತ್ತದೆ. ಆದ್ದರಿಂದ ಇಂತಹ ಸಂಪ್ರದಾಯ ವನ್ನು ನಿಲ್ಲಿಸುವುದು ಕೇವಲ ಪೋಲೀಸರಿಂದ, ದೇವಸ್ಥಾನದ ಆಡಳಿತದವರಿಂದ, ಕಾನೂನಿ ನಿಂದ ಮಾತ್ರ ಸಾಧ್ಯವಿಲ್ಲ. ಇಡೀ ಸಮಾಜವೇ ಈ ಬಗ್ಗೆ ಒಂದು ಯತ್ನ ಮಾಡಿದರೆ ಮಾತ್ರ ದೇವದಾಸಿ ಪದ್ಧತಿಯನ್ನು ಕೊನೆಗೊಳಿಸಬಹುದು.

References

1. Linton, Ralph. Tree of Culture. New York. 1955

2. Chidanandamurthy, M. A Cultural Study of Kannada Inscriptions (From 450 A.D. to 1150 A.D.)
   Mysore University Press. 1966

3. Gurumurthy, K. G. Devadasi Custom in Peasant Context. In Essays on Peasantry. D.K. Books, New Delhi. 1981

ಮಕ್ಕಳ ಲಾಲನೆ ಪಾಲನೆಯ ರೀತಿ ನೀತಿಗಳು*(ಒಂದು ವಿವೇಚನೆ)

● ಎ. ಎಸ್. ಧರಣೇಂದ್ರಯ್ಯ

'ಬೆಳೆಯ ಸಿರಿಯನ್ನು ಮೊಳಕೆಯಲ್ಲಿ ಕಾಣು' ಎಂಬ ನಾಣ್ನುಡಿ ನಮ್ಮೆಲ್ಲರಿಗೂ ಚಿರಪರಿಚಿತ, ಅರ್ಥಪೂರ್ಣ. ಆದರೆ ಆ ಮೊಳಕೆಯು ಸಮೃದ್ಧ ಬೆಳೆಯಾಗಿ ರೂಪುಗೊಳ್ಳಲು ಅದರ ಪಾಲನೆ, ಪೋಷಣೆ ಅತ್ಯಗತ್ಯ. ಮೊಳಕೆಯ ಸತ್ತ್ವವನ್ನು ಗುರುತಿಸಿ, ಅಪಾಯಗಳಿಂದ ಸಂರಕ್ಷಿಸಿ, ಸಮೃದ್ಧ ನೀರು, ಫಲವತ್ತಾದ ಗೊಬ್ಬರಗಳನ್ನು ಹಾಕಿ, ಗಾಳಿ ಬೆಳಕುಗಳ ಸೂಕ್ತ ಪ್ರಭಾವಕ್ಕೆ ಎಡೆಮಾಡಿ ಕೊಟ್ಟಾಗ, ಆ ಮೊಳಕೆ ತಾನೇ ತಾನಾಗಿ ವಿಕಾಸ ಹೊಂದಿ, ತನ್ನ ಅಂತಸ್ಸತ್ತ್ವಗಳನ್ನು ಹೊರ ಹೊಮ್ಮಿಸಿ ಶ್ರೀಮಂತ ಬೆಳೆಯಾಗಿ ಲೋಕ ಕಲ್ಯಾಣಕಾರಿಯಾಗುತ್ತದೆ. ಮಾನವ ಶಿಶುವಿನ ವಿಕಾಸ ಹಾಗೂ ಪರಿಪಕ್ವತೆಗಳೂ ಕೂಡ ಮೂಲತಃ ಇದೇ ತಾತ್ತ್ವಿಕ ಹಿನ್ನೆಲೆಯನ್ನು ಅವಲಂಬಿಸಿರಬಹುದಲ್ಲದೇ? ಮೊಳಕೆಯನ್ನು ಪಾಲಿಸಿ ಪೋಷಿಸಿ ಗಿಡವಾಗಿಸುವಲ್ಲಿ ಮಾನವನ ಕೈವಾಡವೆಷ್ಟು? ಅಂತೆಯೇ ನವಶಿಶುವನ್ನು ಲಾಲಿಸಿ ಪಾಲಿಸಿ ದೊಡ್ಡವನನ್ನಾಗಿಸುವಲ್ಲಿ ಮಾನವನ ಕೈವಾಡ ವೆಷ್ಟಿರಬೇಕು? ಎಷ್ಟಿದ್ದರೆ ಒಳಿತು, ಎಷ್ಟಿದ್ದರೆ ಕೆಡುಕು? ಒಳಿತು ಕೆಡುಕುಗಳನ್ನು ಅಳೆಯುವ ಮಾನದಂಡಗಳಾವುವು? ಅಂತಹ ಮಾನದಂಡಗಳು ಸಾರ್ವಕಾಲಿಕವೇ, ಸಾರ್ವದೇಶಿಕವೇ? ಇವೇ ಮುಂತಾದ ಒಂದಲ್ಲ, ಎರಡಲ್ಲ ಹಲವು ಪ್ರಶ್ನೆಗಳಿಗೆ ಸಮಂಜಸ ಉತ್ತರಗಳನ್ನು ಪಡೆಯುವ ಮಾನವನ ಪ್ರಯತ್ನ ಅವ್ಯಾಹತವಾಗಿ ಸಾಗಿದೆ ಎಂದರೆ ಬಹುಶಃ ತಪ್ಪಾಗದು. ಕಾಲದೇಶಗಳ, ಆರ್ಥಿಕ ಸಮಾಜಿಕ ಸ್ಥಿತಿಗತಿಗಳ, ನಂಬಿಕೆ ಜ್ಞಾನ

---

* ೧೯೮೮ನೇ ಫೆಬ್ರುವರಿ ಮೊದಲ ವಾರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ವಿದ್ಯಾ ವಿಭಾಗದ ಆಶ್ರಯದಲ್ಲಿ ನೆರವೇರಿದ ಅಖಿಲ ಕರ್ನಾಟಕ 'ಪೂರ್ವ ಪ್ರಾಥಮಿಕ ಶಿಕ್ಷಣ' ಸಮ್ಮೇಳನದಲ್ಲಿ ಸಾದರಪಡಿಸಿದ ಪ್ರಬಂಧ.

ಗಳ, ಆಸೆ ಆಕಾಂಕ್ಷೆಗಳ, ನಾನಾ ರೀತಿಯ ಜೀವನ ಮೌಲ್ಯಗಳ ಹಾಗೂ ಜೀವನಾನುಭವಗಳ ಪ್ರಭಾವದಿಂದಾಗಿ ಮಾನವನು ಮಕ್ಕಳ ಲಾಲನೆ ಪಾಲನೆಗೆ ಸಂಬಂಧಿಸಿದಂತೆ ನಾನಾ ರೀತಿನೀತಿಗಳನ್ನು ಅನುಸರಿಸುತ್ತಾ ಬಂದಿರುವುದು, ಅನುಸರಿಸುತ್ತಿರುವುದು ಅನುಸರಿಸಬೇಕೆಂದಿರುವುದು ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಿಕ ಸತ್ಯ. ಇತಿಹಾಸವೆನಿಸಿದ ಸುದೀರ್ಘ ಭೂತಕಾಲದಾದ್ಯಂತ ತಮ್ಮ ಮಕ್ಕಳ ಲಾಲನೆ ಪಾಲನೆಗಾಗಿ, ವಿವಿಧ ದೇಶಗಳ, ಸಂಸ್ಕೃತಿಗಳ, ಜನಾಂಗಗಳ ಮಾನವರು ಅನುಸರಿಸಿದ ರೀತಿನೀತಿಗಳಲ್ಲಿ ಸಂಪ್ರದಾಯ ಬದ್ಧತೆಯೇ ಪ್ರಧಾನ ಅಂಶವಾಗಿದ್ದುದನ್ನು ಗ್ರಹಿಸಬಹುದು. ಪ್ರಪಂಚದ ನಾನಾ ಕಡೆಗಳಲ್ಲಿ ಇಂದೂ ಕೂಡ ನವನಾಗರಿಕತೆಯ ಸೋಂಕಿಂದ ಬಹುಮಟ್ಟಿಗೆ ಪ್ರತ್ಯೇಕವಾಗಿರುವ ಆದಿವಾಸಿ ಜನಾಂಗಗಳಲ್ಲಿ ಮಕ್ಕಳ ಲಾಲನೆ ಪಾಲನೆಗಳು ಹೆಚ್ಚು ಹೆಚ್ಚು ಸಂಪ್ರದಾಯಬದ್ಧವಾಗಿರುವುದನ್ನು ಮಾನವ ಶಾಸ್ತ್ರಜ್ಞರು ಬೆಳಕಿಗೆ ತಂದಿದ್ದಾರೆ. ನಮ್ಮ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಇಂದೂ ಕೂಡ ಅಂತಹ ಸಂಪ್ರದಾಯ ಬದ್ಧತೆಯನ್ನು ಕಾಣುವುದು ಕಷ್ಟವಲ್ಲ. ಸಾಪೇಕ್ಷವಾಗಿ ಸರಳವೆನಿಸುವ ಸಾಮಾಜಿಕ ವ್ಯವಸ್ಥೆಗಳಲ್ಲಿ ಕಂಡುಬರುವ ಜೀವನ ವ್ಯಾಪಾರಗಳಲ್ಲಿ ಸಂಪ್ರದಾಯ ಬದ್ಧತೆಯು ಹಾಸು ಹೊಕ್ಕಾಗಿರುವುದು ಅಪರೂಪವಲ್ಲ. ಅಂತಹ ಸಂಪ್ರದಾಯ ಬದ್ಧತೆಗೆ ಭದ್ರ ಬುನಾದಿ ಅಲೌಕಿಕ ವಸ್ತು ವ್ಯವಹಾರಗಳಲ್ಲಿರುವ ನಂಬಿಕೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಉಗಮ, ವಿಕಾಸ ಹಾಗೂ ಸ್ಫೋಟಗಳಿಂದಾಗಿ, ಸಾಂಪ್ರದಾಯಿಕ ನಂಬಿಕೆಗಳು ಸಡಿಲುಗೊಂಡಾಗ, ಮೂಲೋತ್ಪಾಟನವಾದಾಗ, ಹೆಚ್ಚು ಹೆಚ್ಚು ವಸ್ತುನಿಷ್ಠವೆನಿಸುವಂತಹ ರೀತಿ ನೀತಿಗಳು ರೂಪಗೊಂಡು ವ್ಯವಹಾರ ಸಾಧ್ಯವಾಗುವುದು ಅನಿವಾರ್ಯವಾಗುತ್ತದೆ. ಆದರೂ ಸಂಪ್ರದಾಯ ಬದ್ಧತೆಯ ಭದ್ರಕೋಟೆಯಲ್ಲಿ ಸುರಕ್ಷಿತವೆನಿಸಿದ್ದ ಮನಸ್ಸು, ವಿಚಾರ, ವಿವೇಕಗಳ ಪ್ರಭಾವ ವಲಯದಲ್ಲಿ ಸಿಲುಕಿ, ಸಮಯವರಿತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಆತಂಕಕ್ಕೊಳಗಾಗುವುದು ಆಭಾಸವೆನಿಸಿದರೂ ಸತ್ಯ.

ಈ ದೃಷ್ಟಿಯಿಂದ ನೋಡಿದಾಗ, ಮಕ್ಕಳ ಲಾಲನೆ ಪಾಲನೆಯ ಬಗ್ಗೆ ಆಧುನಿಕ ನಾಗರೀಕ ಜನಾಂಗಗಳಲ್ಲಿ ಕಂಡುಬರುತ್ತಿರುವ ಕಾತರ ಹಾಗು ಕಳವಳಗಳಿಗೆ ಕಾರಣ ತಾನೇ ಕಾಣಬಲ್ಲದು. ಹೀಗಾಗಿ ಇಂದು ಮಕ್ಕಳ ಲಾಲನೆ ಪಾಲನೆಯ ರೀತಿನೀತಿಗಳ ಸಮಸ್ಯೆ ಕೇವಲ ಪಾಲಕರು ಶಿಕ್ಷಕರಿಗೆ ಮೀಸಲಾಗಿರದೆ, ವಿವಿಧ ವಿದ್ಯಾ ಪರಿಣತರನ್ನೂ ಆವರಿಸಿಬಿಟ್ಟಿದೆ. ಈ ಸಮಸ್ಯೆಯ ಗಹನತೆಯನ್ನು ಪ್ರಕಟಗೊಳಿಸಲೆಂದೇ ನಾವು ಅಂತರಾಷ್ಟ್ರೀಯ ಮಕ್ಕಳ ವರ್ಷವನ್ನು ಆಚರಿಸಿದ್ದು. ಸಾಂಪ್ರದಾಯಿಕ ರೀತಿನೀತಿಗಳನ್ನು ಬಹುಮಟ್ಟಿಗೆ ನಿರಾಕರಿಸಿ, ವಿಜ್ಞಾನ ತಂತ್ರಜ್ಞಾನಗಳ ಪ್ರಭಾವದಲ್ಲಿ ವ್ಯವಹರಿಸುತ್ತಿರುವ, ಮುಂದುವರಿದ ದೇಶಗಳಲ್ಲಿ, ಅದರಲ್ಲಿಯೂ ಪಾಶ್ಚಿಮಾತ್ಯ ದೇಶಗಳಲ್ಲಿ ಮಕ್ಕಳ ಲಾಲನೆಯ ರೀತಿನೀತಿಗಳ ಬಗ್ಗೆ ಅಸ್ಪಷ್ಟ ಆತಂಕದಾಯಕ ಸ್ಥಿತಿಗತಿಗಳು ಕಂಡುಬರುತ್ತಿದ್ದರೆ, ಭಾರತ

ದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ, ಸಂದಿಗ್ಧ ಸ್ಥಿತಿ ಕಂಡುಬರುವುದು ಆಶ್ಚರ್ಯವೇನಲ್ಲ. ಈ ಸಂದಿಗ್ಧ ಸ್ಥಿತಿಗೆ ಗ್ರಾಮಾಂತರ ಸಮಾಜಗಳಲ್ಲಿಯೂ, ಮತ ಧರ್ಮಬದ್ಧ ಸಮಾಜ ಗಳಲ್ಲಿಯೂ, ಮಕ್ಕಳ ಲಾಲನೆ ಪಾಲನೆಯ ಬಗ್ಗೆ ಇಂದೂ ಪ್ರಚಲಿತವಿರುವ ಪೋಷಣ ಕ್ರಿಯೆ*ಗಳಂತಹ ಆಚರಣೆಗಳಿಗೂ, ಆಧುನಿಕ ವಿಜ್ಞಾನ ಪ್ರೇರಿತ ಆಚರಣೆಗಳಿಗೂ ಇರುವ ತಿಕ್ಕಾಟ ಕಾರಣ. ಸಂದಿಗ್ಧತೆಯು ಅಂತರ್ಯದಲ್ಲಿ ಕಳಕವಳವು ಮನೆಮಾಡಿಕೊಂಡಿರುವು ದನ್ನು ಕಾಣಬಹುದು. ಅಂತಹ ಕಳವಳಕ್ಕೆ ಪ್ರಮುಖ ಕಾರಣ, ಈವರೆಗೆ ದೊರೆತಿರುವ ವೈಜ್ಞಾನಿಕ ಸತ್ಯಾಂಶಗಳಲ್ಲಿ ಕಂಡುಬರುತ್ತಿರುವ ಗೊಂದಲ ಮತ್ತು ಅಸ್ಥಿರತೆ. ಮಕ್ಕಳ ಲಾಲನೆ ಪಾಲನೆಯ ಬಗ್ಗೆ ಇಲ್ಲಿಯವರೆಗೆ ಪ್ರಪಂಚದ ನಾನಾ ಭಾಗಗಳಲ್ಲಿ ನಡೆಸಲಾಗಿ ರುವ ಅಧ್ಯಯನಗಳ ಪ್ರಾಪ್ತಾಂಶಗಳನ್ನು ಸ್ಥೂಲವಾಗಿ ಪರಿಶೀಲಿಸಿದಾಗ ಗೊಂದಲ ಮತ್ತು ಅಸ್ಥಿರತೆಗಳ ಸ್ಪಷ್ಟ ಚಿತ್ರ ಕಂಡುಬರದಿರದು.

ಮಕ್ಕಳ ಲಾಲನೆ ಪಾಲನೆಯ ರೀತಿ ನೀತಿಗಳನ್ನು ರೂಪಿಸಲು ಪ್ರಮುಖವಾಗಿ ಬೇಕಾದ ಅರಿವು ವ್ಯಕ್ತಿ ವಿಕಾಸ ಕ್ರಿಯೆ (developmental tasks)ಗಳಿಗೆ ಸಂಬಂಧಿಸಿದ್ದು. ಈ ದಿಸೆಯಲ್ಲಿ ಕೆಲವು ವಿಕಾಸ ಮನೋವಿಜ್ಞಾನಿಗಳು ಉಪಯುಕ್ತವೆನಿಸುವ ಸಂಶೋಧನೆ ಗಳನ್ನು ನಡೆಸಿ, ವಯೋಮಾನಕ್ಕನುಗುಣವಾದ ವಿಕಾಸ ಕ್ರಿಯೆಗಳ ಪಟ್ಟಿಗಳನ್ನು (ಉದಾ: ಹ್ಯಾವಿಗ್ ಹರ್ಸ್ಟ್‌ನ ಪಟ್ಟಿ) ರೂಪಿಸಿದ್ದರೂ, ವ್ಯಕ್ತಿ ವ್ಯತ್ಯಾಸ, ಸಾಂಸ್ಕೃತಿಕ ಭೇದ, ಕಾಲ ದೇಶಗಳ ಪ್ರಭಾವ, ಸಾಮಾಜಿಕ ಆರ್ಥಿಕ ಸ್ಥಿತಿಗಳ ಕ್ರಿಯೆ ಮುಂತಾದವು, ವಿಕಾಸಕ್ರಿಯೆ ಗಳ ಮೇಲೆ ಪ್ರಭಾವ ಬೀರುವುದರಿಂದ. ಈ ಬಗ್ಗೆ ನಿಶ್ಚಿತವೆನಿಸುವ ನಿರ್ಧಾರಗಳನ್ನು ಕೈಕೊಳ್ಳುವುದು ಕಷ್ಟ. ವಿವಿಧ. ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ಸಮೂಹಗಳ ಜಟಿಲ ಕುಟಿಲ ಸಂಗಮವೆನಿಸಿರುವ ಭಾರತದಲ್ಲಿ. ವ್ಯಕ್ತಿ ವಿಕಾಸ ಕ್ರಿಯೆಗಳ ಸುಧಾರಣೀಕರಣ ಅತಿ ಕಷ್ಟ ಸಾಧ್ಯ ಕಾರ್ಯ.

ಮಕ್ಕಳ ಲಾಲನೆ ಪಾಲನೆಯ ಮೇಲೆ ಪ್ರಭಾವ ಬೀರುವ ಕಾರಕಾಂಶಗಳಲ್ಲಿ ಪ್ರಮುಖವಾಗಿ, ಕುಟುಂಬ ವ್ಯವಸ್ಥೆ, ಹೆತ್ತವರು ಮತ್ತು ಒಡಹುಟ್ಟಿದವರು, ಸ್ತ್ರೀಪುರುಷ ಪಾತ್ರ ಘರ್ಷಣೆ, ಮುಂತಾದವುಗಳ ಮೇಲೆ ವ್ಯಾಪಕ ರೀತಿಯ ಅಧ್ಯಯಗಳು ನಡೆದಿವೆ. ಉದಾಹರಣೆಗೆ, ಆದಿವಾಸಿ ಮತ್ತು ನಾಗರಿಕ ಕುಟುಂಬ ವ್ಯವಸ್ಥೆಗಳಲ್ಲಿ ಕಂಡುಬರುವ ಮಕ್ಕಳ ಪಾಲನೆ ಪೋಷಣೆಗಳ ಬಗ್ಗೆ ಮಾರ್ಗರೇಟ್ ಮೀಡ್, ಮೆಲಿನವೊಸ್ಕಿ ಇವರಂತಹ ಮಾನವ ಶಾಸ್ತ್ರಜ್ಞರೂ, ಮನೋವಿಜ್ಞಾನಿಗಳು ಅಧ್ಯಯನಗಳನ್ನು ನಡೆಸಿದ್ದಾರೆ.

---

* ೧ ಗರ್ಭದಾನ ೨ ಪ್ರಮೋದ ೩ ಪುಂಸವನ ೪ ಸೀಮಂತೋನ್ನಯನ ೫ ಜಾಜಕರ್ಮ ೬ ನಾಮಕರಣ ೭ ಬಹಿರ್ಯಾನ ೮ ಉಪವೇಶನ ೯ ಅನ್ನಪ್ರಾಶನ ೧೦ ಗಮನ ೧೧ ಚೌಲ ೧೨ ಅಕ್ಷರಾಭ್ಯಾಸ ೧೩ ಪುಸ್ತಕ ಗ್ರಹಣ ೧೪ ಉಪನಯನ ೧೫ ಸಮಾ ವರ್ತನ ೧೬ ವಿವಾಹ.

ಮಾತೃ ಪ್ರಧಾನ ಮತ್ತು ಪಿತೃ ಪ್ರಧಾನ ಕುಟುಂಬದಲ್ಲಿ ಮಕ್ಕಳ ಲಾಲನೆ ಪಾಲನೆಯ ರೀತಿ ನೀತಿಗಳಲ್ಲಿ ಗಣನೀಯ ವ್ಯತ್ಯಾಸ ಕಂಡುಬರುತ್ತದೆ. ಅಲ್ಲಿ ಹೆತ್ತವರು ಮತ್ತು ಮಕ್ಕಳ ಸಾಹಚರ್ಯದಲ್ಲೂ ಭಿನ್ನತೆಯನ್ನು ಕಾಣಬಹುದು. ಇದರಂತೆಯೇ, ಅವಿಭಕ್ತ ಕುಟುಂಬ ಮತ್ತು ವಿಭಕ್ತ ಕುಟುಂಬಗಳ ನಡುವೆಯೂ ಗ್ರಾಮೀಣ ಮತ್ತು ನಗರವಾಸಿ ಕುಟುಂಬಗಳ ನಡುವೆಯೂ ಪಾಲನೆ ಪೋಷಣೆಯ ರೀತಿನೀತಿಗಳಲ್ಲಿ ಗಣನೀಯ ವ್ಯತ್ಯಾಸ ವಿರುತ್ತದೆ. ತತ್ಫಲವಾಗಿ ವಿವಿಧ ಕುಟುಂಬ ವ್ಯವಸ್ಥೆಗಳಲ್ಲಿ ಬೆಳೆಯುವ ಮಕ್ಕಳ ವ್ಯಕ್ತಿತ್ವ ದಲ್ಲಿ ವ್ಯತ್ಯಾಸ ಕಂಡುಬರುವುದು ಸಹಜ. ಉದಾಹರಣೆಗೆ, ಅವಿಭಕ್ತ ಕುಟುಂಬಗಳಲ್ಲಿ ಬೆಳೆಯುವ ಮಕ್ಕಳು. ಆರ್ಥಿಕ ಸಾಮಾಜಿಕ ರಕ್ಷಿತಭಾವದಿಂದ ಕೂಡಿದ್ದರೆ, ವಿಭಕ್ತ ಕುಟುಂಬದ ಮಕ್ಕಳು ಈ ದಿಸೆಯಲ್ಲಿ ಸಾಮಾಜಿಕ ಅರಕ್ಷಿತ ಭಾವದಿಂದ ಕೂಡಿರುತ್ತಾ ರೆಂಬುದು ಕೆಲವರ ಮತ. ಆದರೆ ತದ್ವಿರುದ್ಧ ಮಾನಸಿಕ ಸ್ಥಿತಿಯನ್ನು ಪಡೆದಿರುವವರೂ ಕಾಣಲು ಸಿಗುತ್ತಾರೆಂಬುದನ್ನು ಗಮನಿಸಿದಾಗ, ಇಲ್ಲಿಯವರೆಗೆ ದೊರೆತ ಮಾಹಿತಿಗಳು ನಿರ್ಣಾಯಕವಾಗಲಾರವು.

ಮಕ್ಕಳ ಲಾಲನೆ ಪಾಲನೆಯಲ್ಲಿ ಹೆತ್ತವರ ಪಾತ್ರದ ಬಗ್ಗೆ ನಡೆದಿರುವ ಅಧ್ಯಯನ ಗಳು ಹಲವು. ಅದರಲ್ಲಿಯೂ ಅವು ವಿಶೇಷವಾಗಿ ತಾಯಿಯ ಪಾತ್ರ ಮಹತ್ವಪೂರ್ಣ ವಾದುದೆಂಬುದು ಹೆಚ್ಚು ಸ್ಪಷ್ಟಗೊಳಿಸುತ್ತವೆ. ವಾತ್ಸಲ್ಯಮಯಿ ತಾಯಿ-ತಾತ್ಸಾರ ಗಾರ್ತಿ ತಾಯಿ, ಉದ್ಯೋಗ ನಿರತ ತಾಯಿ, ಮನೆಗೆಲಸ ನಿರತ ತಾಯಿ, ಶಿಸ್ತುಶೀಲ ತಾಯಿ-ದಾಕ್ಷಿಣ್ಯಶೀಲ ತಾಯಿ, ಹೀಗೆ ಪರಸ್ಪರ ವಿಭಿನ್ನಕ್ರಿಯೆಯ, ಪ್ರವೃತ್ತಿಯ ತಾಯಂದಿರ ಲಾಲನೆ ಪಾಲನೆಯಿಂದ ಬೆಳೆಯುವ ಮಕ್ಕಳ ವ್ಯಕ್ತಿತ್ವಗಳಲ್ಲಿ ಗಣನೀಯ ವ್ಯತ್ಯಾಸಗಳು ಕಂಡುಬರುವುದು ನಿಜ. ಆದರೂ, 'ಇದು ಹೀಗೇ' ಎಂದು ನಿಶ್ಚಿತವಾಗಿ ಹೇಳಬಹು ದಾದಂತಹ ತಥ್ಯಾಂಶಗಳು ಅಪರೂಪ ಮಾತ್ರವಲ್ಲ; ಒಂದೇ ವಿಷಯನ್ನು ಕುರಿತ ಎರಡು ಅಧ್ಯಯನಗಳು ಪರಸ್ಪರ ವಿರುದ್ಧ ಚಿತ್ರವನ್ನು ಕೊಡುವ ಪ್ರಸಂಗಗಳೂ ಉಂಟು.

ಮಕ್ಕಳ ಲಾಲನೆ ಪಾಲನೆಯ ರೀತಿ ನೀತಿಗಳು, ಹಾಗೂ ಸಂಬಂಧಪಟ್ಟ ಇತರ ವಿಷಯಗಳ ಮೇಲೆ ನಡೆಸಲಾಗಿರುವ ಅಧ್ಯಯನಗಳಿಂದ ನಿಶ್ಚಿತವೆನಿಸುವ ಫಲಿತಾಂಶಗಳು ದೊರೆಯದಿರುವುದಕ್ಕೆ ಕಾರಣಗಳು ಒಂದಲ್ಲ, ಎರಡಲ್ಲ, ಹಲವು. ಅವುಗಳಲ್ಲಿ ಮುಖ್ಯ ವಾದವು ವ್ಯಕ್ತಿಯ ಜೀವ-ಮಾನಸಿಕ ರಚನೆ ಮತ್ತು ಕ್ರಿಯೆಗಳ ಅಸ್ಪಷ್ಟ ಅರಿವು, ಅಧ್ಯಯನಗಳಲ್ಲಿ. ಪ್ರಭಾವಕಗಳ ಅಸಮರ್ಪಕ ನಿಯಂತ್ರಣ, ಅಸಮಂಜಸ ವಿಧಾನಗಳು ಮತ್ತು ತಂತ್ರಗಳ ಬಳಕೆ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ, ನ್ಯೂನ ಸೈದ್ಧಾಂತಿಕ ಹಿನ್ನೆಲೆ.

ಮಕ್ಕಳ ಲಾಲನೆ ಪಾಲನೆಯ ಪ್ರಾಮುಖ್ಯತೆಯನ್ನು ಎಲ್ಲಾ ಸೈದ್ಧಾಂತಿಕರೂ ಒಪ್ಪುವದಾದರೂ, ಅದರ ಇತಿ ಮಿತಿ ರೀತಿ ನೀತಿ, ಪರರ ಕೈವಾಡ ಮುಂತಾದವುಗಳ ಬಗ್ಗೆ ವ್ಯಾಪಕ ಭಿನ್ನಾಭಿಪ್ರಾಯ ಕಂಡುಬರುತ್ತದೆ. ಕೆಲವು ಸೈದ್ಧಾಂತಿಕರ ಅಭಿಪ್ರಾಯ ಗಳು ಈ ಅಂಶವನ್ನು ಸ್ಪಷ್ಟಪಡಿಸಬಲ್ಲವು. ಹೆಸರಾಂತ ವರ್ತನ ಮನೋವಿಜ್ಞಾನಿ

ಸ್ಕಿನ್ನರನ ಅಭಿಪ್ರಾಯದಲ್ಲಿ, ಸಮಾಜದ ರಚನಾತ್ಮಕ ವ್ಯಕ್ತಿಯಾಗಲು ಮಗುವಿಗೆ ಲಾಲನೆ ಪಾಲನೆ ಅಗತ್ಯ. ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳಲು ಮಕ್ಕಳಿಗೆ ನೆರವಾಗಬೇಕು. ಬೇಕಾದ ವರ್ತನೆಗಳನ್ನು ಪುನರ್ಬಲನಗೊಳಿಸಿ, ಬೇಡವಾದವನ್ನು ದುರ್ಬಲಗೊಳಿಸಬೇಕು. ಒಂದು ವೇಳೆ ಹೆತ್ತವರು ಸಮಾಜ ಪತಿತರಾಗಿದ್ದರೆ, ತಮ್ಮ ಮಕ್ಕಳನ್ನು ಪತಿತರನ್ನಾಗಿಸಲು ಅವರಿಗೆ ಅವಕಾಶ ಕೊಡಲಾಗದು; ರೂಸ್ಸೋನ ಪ್ರಕಾರ, ಬೆಳೆಯಲು ಮಗುವನ್ನು ಬಿಡಬೇಕು, ನೆರವು ನೀಡಬೇಕು, ತನ್ನ ಆಯ್ಕೆಗಳನ್ನು ತಾನೇ ಮಾಡಿಕೊಳ್ಳಲು ಹಾಗೂ ಅದರಿಂದ ಸುಖ, ಸಂತೋಷ, ಪ್ರೀತಿ ಮತ್ತು ಅಭಿಮಾನಗಳನ್ನು ಪಡೆಯಲು ಪ್ರೋತ್ಸಾಹಿಸಬೇಕು. ಬೇಕಾದ ಆಯ್ಕೆಗಳನ್ನು ಮಾಡಲು ಹಾಗೂ ಬೇಡವಾದುವನ್ನು ಬಿಡಲು ಅನುಕೂಲವಾಗುವಂತಹ ಸನ್ನಿವೇಶವನ್ನು ಕಲ್ಪಿಸಿಕೊಡಬೇಕು; ರೂಸೋನ ಪ್ರಕಾರ, ಮಕ್ಕಳು ಮೂಲತಃ ಒಳ್ಳೆಯವರೆಂದು ಭಾವಿಸಿ, ಅವರ ಬೆಳವಣಿಗೆಗೆ ಅನುಕೂಲ ಮಾಡಿಕೊಡಬೇಕು, ಅಂತಹ ಬೆಳವಣಿಗೆ ಸಾಧ್ಯವಾದಷ್ಟು ಸಹಜವಾಗಿರಲು ಬಿಡಬೇಕು, ಆದರೂ ಜಟಿಲ ಸಮಾಜದಲ್ಲಿ ಶಿಕ್ಷಣದ ಅಗತ್ಯವಿರುವುದನ್ನು ಗಮನಿಸಬೇಕು, ಆದರೆ ಓದಲು ಮಗುವನ್ನು ಬಲಾತ್ಕರಿಸದೆ ಓದುವ ಇಚ್ಛೆಯನ್ನು ಅದರಲ್ಲಿ ಉಂಟು ಮಾಡಬೇಕು; ಹಕ್ಸ್ಲೆಯ ಪ್ರಕಾರ, ವರ್ತನೆಯ ನಿಯಂತ್ರಣದಲ್ಲಿ ಅಂತರ್ಗತವಾಗಿರುವ ಅಪಾಯಗಳನ್ನು ಮನಗಾಣಬೇಕು. ತಮಗೆ ಅನುಕೂಲಕರವಾದ ವರ್ತನೆಯನ್ನು ಮಕ್ಕಳಲ್ಲಿ ರೂಪಿಸಲು ಹೆತ್ತವರು ಪ್ರಯತ್ನಿಸಬಾರದು. ನಿಯಂತ್ರಣದ ಹೆಸರಿನಲ್ಲಿ ಮಕ್ಕಳ ವೈಯಕ್ತಿಕತೆ ಮತ್ತು ಸ್ವಾತಂತ್ರ್ಯ ಪ್ರಿಯತೆಯನ್ನು ನಾಶಮಾಡಲಾಗದು ಇಂತಹ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ಅಲ್ಲಲ್ಲಿ ವಿರೋಧಾಭಾಸಗಳಿರುವುದನ್ನು ಯಾರಾದರೂ ಗುರುತಿಸಬಹುದು. ಉದಾಹರಣೆಗೆ 'ಬೇಕಾದ ವರ್ತನೆಗಳನ್ನು ಪುನರ್ಬಲನಗೊಳಿಸಿ, ಬೇಡವಾದುದನ್ನು ದುರ್ಬಲಗೊಳಿಸಬೇಕು' ಎಂಬ ಸ್ಕಿನ್ನರನ ಅಭಿಪ್ರಾಯವನ್ನೇ ಪರಿಶೀಲಿಸಿದಾಗ ಅಂತರ್ಗತ ಗೊಂದಲ ಸೂಕ್ಷ್ಮವಾಗಿ ಕಾಣಿಸದಿರದು 'ಸಹಕಾರ' ಸ್ಪರ್ಧೆಗಳಲ್ಲಿ ಯಾವುದನ್ನು ಪುನರ್ಬಲನಗೊಳಿಸಬೇಕು, ಯಾವುದನ್ನು ದುರ್ಬಲಗೊಳಿಸಬೇಕು? ಸುಖದಾಯಕ ದುಃಖದಾಯಕ ನೆನಪುಗಳಲ್ಲಿ ಯಾವುದನ್ನು ಪುನರ್ಬಲನ ಯಾವುದನ್ನು ದುರ್ಬಲಗೊಳಿಸಬೇಕು? ಇದರಂತೆಯೇ ರೂಸೋನ ಅಭಿಪ್ರಾಯದಂತೆ ಜಟಿಲ ಸಮಾಜದಲ್ಲಿ, ಸಹಜ ಬೆಳವಣಿಗೆಗೆ ನೆರವಾಗುವ ಶಿಕ್ಷಣ ಅಸಂಭವವೆನಿಸುತ್ತದೆ. ಹೀಗೆ ಮಕ್ಕಳ ಲಾಲನೆ ಪಾಲನೆಗಳ ಬಗ್ಗೆ ರೂಪಗೊಂಡಿರುವ ಅಭಿಪ್ರಾಯಗಳಲ್ಲಿ ಅಸಂಗತಿಯೇ ಹೆಚ್ಚಾಗಿ ಕಂಡುಬರುತ್ತಿರುವುದರಿಂದ ಹೆಚ್ಚು ಸುಸಂಗತ ಸಿದ್ಧಾಂತಗಳ ರೂಪಣೆ ಅತ್ಯಗತ್ಯ. ಅಂತಹ ಸಿಂದ್ಧಾಂತಗಳು ವ್ಯಕ್ತಿ ಸಮಾಜಗಳ ಸಮಂಜಸ ಏಹತೆಯನ್ನು ಪ್ರತಿಪಾದಿಸುವಂತಿರಬೇಕು.

ಸಿದ್ಧಾಂತಗಳು ವ್ಯಕ್ತಿಗೆ ಪ್ರಾಮುಖ್ಯತೆ ಕೊಟ್ಟಾಗ, ಸಾಮಾಜಿಕ ನ್ಯಾಯ ನೀತಿಗಳನ್ನು ಬಲಿಕೊಡಬೇಕಾಗುತ್ತದೆ; ಹಾಗೆಯೇ ಸಮಾಜಕ್ಕೆ ಪ್ರಾಮುಖ್ಯತೆ ಕೊಟ್ಟಾಗ ವ್ಯಕ್ತಿಯ ಬಹುಮುಖ ವಿಕಾಸಕ್ಕೆ ಎರವಾಗಬೇಕಾಗುತ್ತದೆ. ವ್ಯಕ್ತಿಸುಖಹಾಗೂ ಸಾಮಾಜಿಕ ಒಳಿತುಗಳನ್ನು ಸಾಧ್ಯವಾಗಿಸುವಂತಹ ಸಿದ್ಧಾಂತಗಳ ರೂಪಣೆ ಆಗಬೇಕಾಗಿದೆ. ಆಗ ಮಗುವಿನ ಲಾಲನೆ ಪಾಲನೆ ತನ್ನ ನಿರ್ದಿಷ್ಟ ಗುರಿಯನ್ನು ಮುಟ್ಟಬಲ್ಲದು.

ಸ್ವಪರಹಿತ ಸಾಧಿಸಬಲ್ಲಂತಹ ವ್ಯಕ್ತಿತ್ವ ರೂಪಣೆಗೆ ಅನುಕೂಲವಾಗುವಂತಹ ಲಾಲನೆ ಪಾಲನೆಯ ಅಗತ್ಯವಿದೆ. ಅದರ ರೀತಿ ನೀತಿಗಳು ಮಾನವೀಯವಾಗಿರಬೇಕಾಗುತ್ತದೆ. ಅದಕ್ಕೆ ಬದಲು ಅವು ಯಾಂತ್ರಿಕವೆನಿಸಿದರೆ, ತಾಂತ್ರಿಕವೆನಿಸಿದರೆ, ಅದರಿಂದ ಆಗುವ ಅಪಾಯ ತೀವ್ರವಾದುದು. ಆದ್ದರಿಂದ ಮಕ್ಕಳ ಲಾಲನೆ ಪಾಲನೆಯ ಬಗ್ಗೆ ವ್ಯವಹರಿಸುವ ಯಾರೇ ಆದರೂ ಹೆತ್ತವರಾಗಲೀ, ಶಿಕ್ಷಕರಾಗಲೀ ಅಥವಾ ಸಂಬಂಧಪಟ್ಟ ವಿದ್ಯಾಪರಿಣತರಾಗಲೀ ಬಹು ಹೊಣೆಗಾರಿಕೆಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಏಕೆಂದರೆ. ವ್ಯಕ್ತಿ ವಿಕಾಸದ ಈ ಅವಧಿ ಅಂದರೆ ಹುಟ್ಟಿನಿಂದ ಐದು ವರ್ಷಗಳವರೆಗಿನ ಕಾಲ ಬಹು ಅಮೂಲ್ಯವಾದುದೆಂಬ ಬಗ್ಗೆ ಸೈದ್ಧಾಂತಿಕರಲ್ಲಿ ಭಿನ್ನಮತವಿಲ್ಲ. ಫ್ರಾಯ್ಡ್ ಮತ್ತು ಇತರ ಮನೋವಿಶ್ಲೇಷಣಜ್ಞರೂ, ವಾಟ್ಸನ್ ಮತ್ತು ಇತರ ವರ್ತನ ವಿಜ್ಞಾನಿಗಳೂ. ಶಿಕ್ಷಣತಜ್ಞರು, ಹಾಗೂ ಶಿಕ್ಷಕರೂ. ಮೊದಲ ಐದು ವರ್ಷಗಳ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತಾರೆ. ಹೀಗಿರುವಲ್ಲಿ, ಈ ಅವಧಿಯಲ್ಲಿ, ಮಗುವಿನ ಮಾನವ ಸಹಜ ಗುಣಗಳು ವಿಕಾಸ ಹೊಂದಲು ಬೇಕಾದ ಅನುಕೂಲಕರ ವಾತಾವರಣ ಕಲ್ಪಿಸಿ ಮಾರ್ಗದರ್ಶನ ನೀಡಬೇಕಾಗುತ್ತದೆ. 'ಮೆಚ್ಚು' 'ದಂಡ'ಗಳಂತಹ ಸಾಮಾಜಿಕ ನಿಯಂತ್ರಗಳನ್ನು ಹದವರಿತು ಬಳಸಬೇಕಾಗುತ್ತದೆ. ಅವುಗಳ ಬಳಕೆ ಎಂದೂ ಯಾಂತ್ರಿಕವಾಗಬಾರದು, ತಾಂತ್ರಿಕವಾಗಬಾರದು.

ಉಪಯುಕ್ತತೆಯ ನೆಪದಲ್ಲಿ ಇಂದು ಪ್ರಚಲಿತವಾಗುತ್ತಿರುವ ಕೆಲವು 'ವರ್ತನೆ ಸುಧಾರಣೆ' (behaviour modification) ತಂತ್ರಗಳು ಭೀಕರ ರೂಪ ತಾಳುವ ಸಾಧ್ಯತೆ ಇದೆ. ಒಬ್ಬ ಮನೋವಿಜ್ಞಾನಿಯ ಅಭಿಪ್ರಾಯದಲ್ಲಿ ಅಂತಹ ತಂತ್ರಗಳು ಪರಿಣಾಮದಲ್ಲಿ ಅಣುಬಾಂಬಿಗಿಂತ ಭೀಕರವಾಗಬಲ್ಲವು. ವರ್ತನೆ ಸುಧಾರಣೆಗೆಂದು ರೂಪಿಸಲಾದ ತಂತ್ರಗಳನ್ನು ಹೊಸ ಹೊಸ ವರ್ತನೆಗಳ ರೂಪಣೆಗೂ, ಇರುವ ವರ್ತನೆಯ ನಿರ್ಮೂಲನಕ್ಕೂ ಬಳಸುವುದು ಸುಲಭ ಸಾಧ್ಯವಾದೀತು. ಹೀಗಾಗಿ ಸ್ವಾರ್ಥಪರರು ತಮಗೆ ಅನುಕೂಲವಾಗುವಂತಹ ವರ್ತನೆಯನ್ನು ಮತ್ತೊಬ್ಬರಲ್ಲಿ ರೂಪಿಸಲು, ಮಾರ್ಪಡಿಸಲು ಈ ತಂತ್ರಗಳನ್ನು ಬಳಸಿದಾಗ ತಡೆಗಟ್ಟುವುದು ಅಸಾಧ್ಯವಾದೀತು. ಸುಲಭ ಬೆಲೆಗೆ ದೊರೆಯಬಹುದಾದಂತಹ 'ವರ್ತನೆ ಸುಧಾರಣೆ' ಸಾಮಗ್ರಿಗಳನ್ನು ಪಡೆದುಕೊಂಡು, ವಶೀಕರಣಕ್ಕಾಗಿ, ಸೇಡುತೀರಿಸಿಕೊಳ್ಳಲು, ವಿನೋದಕ್ಕಾಗಿ

ಬುದ್ಧಿಹೀನನನ್ನಾಗಿಸಲು ಇತ್ಯಾದಿ ನಾನಾ ಕಾರಣಗಳಿಗೆ ಬಳಸುವಂತಾದರೆ ಮಾನವ ಜೀವನ ಅಸಹನೀಯವಾದೀತು.

ಒಂದು ವೇಳೆ ಈ ತಂತ್ರಗಳು ಅಹಿತಕರ ವರ್ತನೆಗಳ ಸುಧಾರಣೆಗಾಗಿಯೇ ರೂಪಗೊಳ್ಳುವವುವೆಂದರೂ, ಬೇರೆ ಉದ್ದೇಶಗಳಿಗೆ ಅವುಗಳನ್ನು ಬಳಸದಂತೆ ತಡೆಯುವ ಶಕ್ತಿಯಾವುದು? ವರ್ತನೆಯ ಮೇಲೆ ಪ್ರಭಾವ ಬೀರುವಂತಹ ಹಲವು ರೀತಿಯ ಮದ್ದುಗಳು, ಅತೀಂದ್ರಿಯ ಧ್ಯಾನದಂತಹ (T. M.) ಕ್ರಿಯೆಗಳು ಈಗಾಗಲೇ ವ್ಯಕ್ತಿಗಳ ಮನೋ ಸಾಮಾಜಿಕ ಜೀವನವನ್ನು ಅಸ್ತವ್ಯಸ್ತಗೊಳಿಸುತ್ತಿವೆ. ಪರಮ ಲೋಭಿಗಳಾದ ವ್ಯಾಪಾರಿಗಳ ಕೈಗೆ ಸಿಕ್ಕಿರುವ ಈ ವಸ್ತುಗಳಂತೆಯೇ 'ವರ್ತನೆ ಸುದಾರಣೆ' ತಂತ್ರಗಳೂ ಕೂಡ ಸಿಗಲಾರವೆಂದು ಭರವಸೆ ಕೊಡಬಲ್ಲವರಾರು? ಅಂಗಡಿಗಳಲ್ಲಿ ಸುಲಭ ಬೆಲೆಗೆ ಸಿಗಬಹುದಾದ ತಾಂತ್ರಿಕ ವಸ್ತುಗಳನ್ನು ತಮ್ಮ ಮಕ್ಕಳ ಲಾಲನೆ ಪಾಲನೆಯಲ್ಲಿ ವಿವೇಚನೆ ಹೀನರಾಗಿ ತಂದೆತಾಯಿಗಳು ಬಳಸಿದಾಗ ಅವರಿಗೆ ಮತ್ತು ಅವರ ಮಕ್ಕಳಿಗೆ ಯಾರು ಗತಿ? ಅಂತಹ ಅಪಚಾರಕ್ಕೆ ಯಾರು ಹೊಣೆ? ಮಿದುಳಿನಲ್ಲಿ ಎಲೆಕ್ಟ್ರೋಡುಗಳನ್ನು ಸೇರಿಸಿ ವರ್ತನೆಯನ್ನು ನಿಯಂತ್ರಿಸುವಂತಾದಾಗ, ಲಾಭಕೋರರು, ಆ ವರ್ತನೆಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವಂತಾದಾಗ ತಡೆಯುವ ಉಪಾಯವಾವುದು? ಈ ಪ್ರಶ್ನೆಗಳಿಗೆ ಸುಲಭವಾದ ಉತ್ತರ ಸಿಗುವುದು ಕಷ್ಟ. "ನಾವು ಅಣುಶಕ್ತಿ ತಯಾರಿಕೆಯನ್ನು ನಿಲ್ಲಿಸಲು ಅಸಕ್ತರಾಗಿರುವಂತೆಯೇ 'ವರ್ತನೆ ಸುಧಾರಣೆ' ಸಲಕರಣೆಗಳ ತಯಾರಿಕೆಯನ್ನು ತಡೆಯುವುದರಲ್ಲಿಯೂ ಅಶಕ್ತರಾಗುತ್ತೇವೆ" (J. V. McConnell) ಎಂಬ ಮಾತು ಸತ್ಯವಾಗುವ ಸಾಧ್ಯತೆಯೇ ಹೆಚ್ಚು. `ಹೀಗೆ, ಒಂದು ತಂತ್ರದಿಂದ ಆಗುವ ಹಿತಕ್ಕಿಂತ ಅನಾಹುತವೇ ಹೆಚ್ಚಾಗುವುದಾದರೆ, ಅದನ್ನು ರೂಪಿಸುವುದೇಸಲ್ಲ ಎಂಬುದು ನನ್ನ ಖಚಿತ ಅಭಿಮತ. ಒಂದು ವೇಳೆ ರೂಪಿಸಿದರೂ. ಮಕ್ಕಳ ಲಾಲನೆ ಪಾಲನೆಯಂತಹ ಮಾನವೀಯ ವ್ಯವಹಾರಗಳಲ್ಲಿ ಅವುಗಳನ್ನು ಬಳಸದಿರುವುದೇ ಉತ್ತಮ.

ಮಕ್ಕಳ ಲಾಲನೆ ಪಾಲನೆ ಪವಿತ್ರ ಕಾರ್ಯ. ಈ ಕಾರ್ಯವು ಉತ್ತಮ ವ್ಯಕ್ತಿತ್ವದ ರೂಪಣೆಗೆ ಭದ್ರ ಬುನಾದಿ ಹಾಕಬೇಕು. ಈ ಕಾರ್ಯವು ಸಮರ್ಪಕವಾಗ ಬೇಕಾದರೆ ವ್ಯಕ್ತಿ ವಿಕಾಸದ ಅಂತರ್ಯದ ಅರಿವು ಸಂಬಂಧಪಟ್ಟವರಿಗೆ ಇರಬೇಕಾಗುತ್ತದೆ. ವರ್ತನೆಯು ಜಟಿಲವಾದ ಸಂಗತಿಯೆಂದೂ, ಅದು ವಯೋಮಾನಕ್ಕೆ ಅನುಗುಣವಾಗಿ ಬದಲಾಗುತ್ತದೆ ಎಂದು ಅವರು ಅರಿತಿರಬೇಕಾಗುತ್ತದೆ. ಮೇಲಾಗಿ ಸ್ವಪರಹಿತ ಸಾಧ್ಯವಾಗುವಂತಹ ವರ್ತನೆಗೆ ಪ್ರೋತ್ಸಾಹಕೊಟ್ಟ ಅವರು ಸ್ಥಾಪಿಸಬೇಕಾಗುತ್ತದೆ. ಇದಕ್ಕೆ ಅತ್ಯಾವಶ್ಯಕವಾದ ರೀತಿ ನೀತಿಗಳ ಪರಿಜ್ಞಾನವೂ ಅವರಿಗಿರಬೇಕಾಗುತ್ತದೆ. ಅಂದಮೇಲೆ ಮಕ್ಕಳ ಲಾಲನೆ ಪಾಲನೆಯಲ್ಲಿ ನೇರ ಹಾಗೂ ಪ್ರಮುಖ ಪಾತ್ರವಹಿಸುವ ತಂದೆತಾಯಿಗಳಿಗೆ ಸೂಕ್ತ ಶಿಕ್ಷಣದ ಆಗತ್ಯವನ್ನು ಒತ್ತಿ ಹೇಳಬೇಕಾಗಿಲ್ಲ.

ಮಕ್ಕಳಲ್ಲಿರಬಹುದಾದ ಅಂತಸ್ಸತ್ತ್ವ ಮತ್ತು ಅವುಗಳಿಗೆ ದೊರೆಯಬೇಕಾದ ಶಿಕ್ಷಣ ವನ್ನು ಪ್ರಸ್ತಾಪಿಸುವಾಗ ಮಾರ್ಗರೇಟ ಮೀಡ್ ಹೇಳಿರುವ ಮಾತುಗಳು ಗಮನಾರ್ಹ: "…. ತಮ್ಮ ತಲೆಗಳಲ್ಲಿ ಆರರಿಂದ ಎಂಟು ಆಯಾಮಗಳಲ್ಲಿ ವ್ಯವಹರಿಸಬಲ್ಲಂತಹ ಮಕ್ಕಳು ಈಗ ಕಂಡುಬರುತ್ತಿದ್ದಾರೆ. ಅವರಲ್ಲಿ ಇರಬಹುದಾದ ಈ ಪ್ರತಿಭೆಯನ್ನು ಬಳಸಲು ಅನುಕೂಲಕರವಾದಂತಹ ತಂತ್ರಜ್ಞಾನವನ್ನು ನಾವು ಬೆಳೆಸಿದ್ದೇವೆ. ಆದರೆ ಅವರಲ್ಲಿರುವ ಪ್ರತಿಭೆಯನ್ನು ಬಹಳ ಮುಂಚಿತವಾಗಿ ಗುರುತಿಸಿ, ಶಿಕ್ಷಣಕೊಡಲು ಸಾಧ್ಯವಾಗುವಂತಹ ವಿದ್ಯಾವ್ಯವಸ್ಥೆಯನ್ನು ನಾವಿನ್ನೂ ಬೆಳೆಸಿಲ್ಲ." ಈ ಮಾತುಗಳನ್ನು ನಾವು ಮಕ್ಕಳ ಲಾಲನೆ ಪಾಲನೆಗೂ ಅನ್ವಯಿಸಬಹುದು. ಆಯಾಯ ಮಗುವಿನ ಸ್ವಭಾವಗುಣಗಳನ್ನು ಅರಿತು ಅವುಗಳ ಹಿತಕರ ವಿಕಸನಕ್ಕೆ ಅನುಕೂಲವಾಗುವಂತಹ ಪಾಲನೆಪೋಷಣೆ ನೀಡಬೇಕಾಗುತ್ತದೆ. ಅಂತಹ ಪಾಲನೆಪೋಷಣೆಯಲ್ಲಿ ತಂದೆತಾಯಂದಿರ ವಾತ್ಸಲ್ಯದ ಅಭಿವ್ಯಕ್ತಿ ಅತ್ಯಗತ್ಯವೆಂಬುದು ನನ್ನ ಅಭಿಮತ.

"ಉದ್ದಿನಾ ಒಡಲೇಸು ಬುದ್ಧಿಯಾ ನುಡಿಲೇಸು
ಬಿದ್ದೊಡವೆ ಕೈಗೆ ಬರಲೇಸು ಶಿಶುವಿಗೆ
ಮುದ್ದಾಟ ಲೇಸು ! ಸರ್ವಜ್ಞ"

ಎಂಬನುಡಿಗಳಲ್ಲಿ ವಾತ್ಸಲ್ಯಪೂರ್ಣ ಲಾಲನೆಪಾಲನೆಯ ಅವಶ್ಯಕತೆಯನ್ನು ಗುರುತಿಸಲಾಗಿದೆ. ಈಗ ಅಲ್ಲಲ್ಲಿ ಕಂಡುಬರುತ್ತಿರುವ ಅನುರಾಗ ಪ್ರೀತಿವಾತ್ಸಲ್ಯಗಳ ಪ್ರಭಾವವನ್ನು, ತಂತ್ರಜ್ಞಾನದ ಪ್ರಯೋಗವು ತಡೆಯದಿರುವುದೇ ಹಿತಕರ. ಮುದ್ದಾಟದ ಸೋಂಕಿಲ್ಲದ, ತಾಂತ್ರಿಕಯಾಂತ್ರಿಕ ಲಾಲನೆ–ಪಾಲನೆ ನಿರರ್ಥಕ. ಬುದ್ಧಿ ಭಾವನೆಗಳ ವಿದ್ಯುದಾಲಿಂಗನದಿಂದ ಪ್ರೇರಿತ ಲಾಲನೆ–ಪಾಲನೆ ಉತ್ತಮ ವ್ಯಕ್ತಿತ್ವರೂಪಣೆಗೆ ಭದ್ರ ಬುನಾದಿ ಹಾಕಬಲ್ಲದು.

ಆಧಾರ ಗ್ರಂಥಗಳು

ಡಾ. ಬಿ. ಕುಪ್ಪುಸ್ವಾಮಿ, ಮಕ್ಕಳ ಬೆಳವಣಿಗೆ ಮತ್ತು ಪೋಷಣೆ. ಪ್ರಸಾರಾಂಗ, ಮೈ. ವಿ.ವಿ. ೧೯೪೪

ಧರಣೇಂದ್ರಯ್ಯ, ಎ. ಎಸ್. ವಿಕಾಸ ಮನೋವಿಜ್ಞಾನ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ, ಗಂಗೋತ್ರಿ ಮೈಸೂರು ೧೯೭೧

Biehler, R. F. Child Development Houghton 1976.

Davis A. & R. T. Havighurst, "Social class and colour differences in child rearp" (in Wayning Dennis (ed) Readings in Child Psychology, Prenticc, 1955

Kuppusmay B. A Text Book of Child Bahavior and Development. Vikas Publishing Home Delhi 1974

Malinowski, B. The Form of the Family and Child behavior. (in Wayn Dennis (ed) Readings in Child Psychology, Practice. 1955

Martha C. E. Child rearing and Social status Arner, Jl. Sociol 1946-47,52

Mead, M. Child care in Samoa, in Wayne Denniss (ed) Reading in Child Psychology, Prentice, 1955.

Muste M. T. & D. F. Sharpe. Some influencial factors in the determination of aggressive behavior in Preschool Children. Child Development Vol. 18. Nos. 1 and 2.

Stendler C. B. "Critical Poriods in Socialization and over dependency. Child Development Vol. 23. 1952 No. 1

———

ಮಾನವಿಕ ಭಾರತಿ

ಪ್ರಥಮ ಸಂಚಿಕೆ : ಜನವರಿ

ದ್ವಿತೀಯ ಸಂಚಿಕೆ : ಜುಲೈ

ವಾರ್ಷಿಕ ಚಂದಾ : ರೂ. ೬-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಯ ಬೆಲೆ : ರೂ. ೩-೫೦ (,, ,, ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦

ಹಣವನ್ನು, ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-**೫೮೦ ೦೦೩**

ಇವರಿಗೆ ಕಳುಹಿಸಬೇಕು.

ಈ ಕುರಿತು ಯಾವದೇ ಪತ್ರವ್ಯವಹಾರ ಕೆಳಗಿನ ವಿಳಾಸಕ್ಕೆ ಮಾಡಿರಿ :

ನಿರ್ದೇಶಕರು,
ಪ್ರಸಾರಾಂಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩